ಮಂಗಳವಾರ, ಆಗಸ್ಟ್ 12, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 223 | ಪುಟ 14

prajavani.net prajavani • www.prajavani.net

**3,685 ಸ್ಮಾರಕಗಳು**

ದೇಶದಾದ್ಯಂತ 3,685 ಸ್ಮಾರಕಗಳು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್ಐ) ವ್ಯಾಪ್ತಿಯಲ್ಲಿವೆ ಎಂದು ಕೇಂದ್ರ ಸಾಂಸ್ಕೃತಿಕ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರು ಲೋಕಸಭೆಯಲ್ಲಿ ತಿಳಿಸಿದ್ದಾರೆ





# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ





**ಕಪಿಲ್ ಶರ್ಮಾಗೆ ಭದ್ರತೆ**

ಕೆನಡಾದಲ್ಲಿರುವ 'ಕ್ಯಾಪ್ಸ್ ಕೆಫೆ ರೆಸ್ಟೋರೆಂಟ್'ನಲ್ಲಿ ಇತ್ತೀಚೆಗೆ ಎರಡನೇ ಬಾರಿಗೆ ಗುಂಡಿನ ದಾಳಿ ನಡೆದಿದ್ದು, ಅದರ ಮಾಲೀಕ, ಕಾಮಿಡಿಯನ್ ಕಪಿಲ್ ಶರ್ಮಾ ಅವರಿಗೆ ಮುಂಬೈ ಪೊಲೀಸರು ಭದ್ರತೆ ಒದಗಿಸಿದ್ದಾರೆ

ಸೆನ್ಸೆಕ್ಸ್ 80,604 | ನಿಫ್ಟಿ 24,585 | $/₹ 87.75 | ಚಿನ್ನ (Std. 10g) ₹1,05,700 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,21,600 (ಬೆಂಗಳೂರು)



# ಸಂಪುಟದಿಂದ ರಾಜಣ್ಣ ವಜಾ

## ವಿಧಾನಮಂಡಲ ಕಲಾಪದ ಮೊದಲ ದಿನವೇ ಸರ್ಕಾರಕ್ಕೆ ಆಘಾತ • ಸಚಿವ ಸ್ಥಾನಕ್ಕೆ ಮುಳುವಾಯ್ತೆ ಮತ ಕಳವಿನ ಟೀಕೆ?



ರಾಹುಲ್ ಅವರ 'ಮತ ಕಳ್ಳತನ'ದ ಸುಳ್ಳಿಗೆ ಕನ್ನಡಿ ಹಿಡಿದಿದ್ದೇ ರಾಜಣ್ಣ ಅವರ ತಪ್ಪಾ? ಸತ್ಯ ಹೇಳಿದ್ದಕ್ಕೆ ರಾಜೀನಾಮೆ ಶಿಕ್ಷೆನಾ? ಸಿದ್ದರಾಮಯ್ಯಗೆ ಸತ್ಯಕ್ಕಿಂತ ಹೈಕಮಾಂಡ್ ಗುಲಾಮಗಿರಿಯೇ ಹೆಚ್ಚಾಗಿದ್ದು ದುರಂತ

**ಆರ್.ಅಶೋಕ,** ವಿರೋಧಪಕ್ಷದ ನಾಯಕ

ಪ್ರಜಾವಾಣಿ ವಾರ್ತೆ


**ಬೆಂಗಳೂರು:** ವಿವಾದಾಸ್ಪದ ಮಾತುಗಳಿಂದ ಸದಾ ಸದ್ದು ಮಾಡುತ್ತಿದ್ದ ಸಹಕಾರ ಸಚಿವ ಕೆ.ಎನ್. ರಾಜಣ್ಣ, ತಮ್ಮ ಪಕ್ಷದ ನಡೆಯ ವಿರುದ್ಧವೇ ಟೀಕೆ ಮಾಡಲು ಹೋಗಿ ಸಚಿವ ಸ್ಥಾನದಿಂದ ವಜಾಗೊಂಡಿದ್ದಾರೆ.

ಸಚಿವರಾಗಿದ್ದವರ ಹೆಸರು ಹಗರಣದಲ್ಲಿ ಪ್ರಸ್ತಾವಗೊಂಡಾಗ, ಸರ್ಕಾರ ಮುಜುಗರಕ್ಕೆ ಸಿಲುಕುವಂತಹ ಲೈಂಗಿಕ ಹಗರಣದಲ್ಲಿ ಸಿಕ್ಕಿಬಿದ್ದಾಗ ಸಚಿವರಿಂದ 'ಬಲವಂತ'ವಾಗಿ ರಾಜೀನಾಮೆ ಪಡೆದು, ಅವರ ಗೌರವಕ್ಕೆ ಧಕ್ಕೆ ತರದಂತಹ ನಡೆಯನ್ನು ಆಡಳಿತಾರೂಢ ಪಕ್ಷಗಳು ಅನುಸರಿಸಿಕೊಂಡು ಬಂದಿದ್ದವು. ಸಚಿವ ಸ್ಥಾನದಿಂದ ಕಿತ್ತೊಗೆಯುವ ಸನ್ನಿವೇಶಗಳು ಇತ್ತೀಚಿನ ವರ್ಷಗಳಲ್ಲಿ ಸೃಷ್ಟಿಯಾಗಿರಲಿಲ್ಲ.

'ನರೇಂದ್ರ ಮೋದಿಯವರು ಚುನಾವಣಾ ಆಯೋಗದ ಸಹಕಾರದಲ್ಲಿ ಮತ ಕಳವು ಮಾಡಿ ಪ್ರಧಾನಿ ಹುದ್ದೆಗೇರಿದ್ದಾರೆ' ಎಂಬ ಗಂಭೀರ ಆಪಾದನೆ ಮಾಡಿರುವ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ದೇಶವ್ಯಾಪಿ ಆಂದೋಲನಕ್ಕೆ ಚಾಲನೆ ನೀಡಿದ್ದಾರೆ. ಎಐಸಿಸಿಯು ಬೆಂಗಳೂರಿನಲ್ಲಿ ಆಯೋಜಿಸಿದ್ದ ಪ್ರತಿಭಟನಾ ಸಭೆಯಲ್ಲಿ ಇದನ್ನು ಪ್ರಸ್ತಾಪಿಸಿದ ರಾಹುಲ್ ಹಾಗೂ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮೋದಿ ರಾಜೀನಾಮೆಗೆ ಆಗ್ರಹಿಸಿದ್ದರು.

ಅದರ ಮಾರನೇ ದಿನವೇ (ಆ.9) ಪ್ರತಿಕ್ರಿಯಿಸಿದ್ದ ರಾಜಣ್ಣ, 'ಲೋಕಸಭೆ ಚುನಾವಣೆ ನಡೆದದ್ದು, ಮತಪಟ್ಟಿ ಸಿದ್ಧಪಡಿಸಿದ್ದು, ನಮ್ಮ ಸರ್ಕಾರದ ಅವಧಿಯಲ್ಲೇ. ಎಲ್ಲರೂ ಆಗ ಕಣ್ಣು ಮುಚ್ಚಿಕೊಂಡು ಕುಳಿತಿದ್ದರು' ಎಂದು ಹೇಳಿದ್ದರು. ಮತ ಕಳವಿನ ವಿರುದ್ಧ ತೊಡೆ ತಟ್ಟಿದ್ದ ರಾಹುಲ್ ಗಾಂಧಿ ಅವರನ್ನು ಟೀಕಿಸಲು ಇದು, ಬಿಜೆಪಿಗೆ ನೆರವಾಗಿತ್ತು. ಇದರಿಂದ ಕಾಂಗ್ರೆಸ್ ಹೈಕಮಾಂಡ್ ಮುಜುಗರಕ್ಕೆ ಈಡಾಗಿತ್ತು. 4

### ವಿವಾದದ ದಾರಿಗುಂಟ ರಾಜಣ್ಣ



- ಐದು ವರ್ಷ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ
- ಅಧಿಕಾರ ಹಂಚಿಕೆ ಚರ್ಚೆ ನಡೆದಿಲ್ಲ, ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ
- ಸಾಮಾಜಿಕ ನ್ಯಾಯಕ್ಕಾಗಿ ಮೂವರಿಗೆ ಉಪ ಮುಖ್ಯಮಂತ್ರಿ ಹುದ್ದೆ ನೀಡಬೇಕು
- ಲೋಕಸಭೆ ಚುನಾವಣೆ ಮುಗಿದರೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಏಕಿಲ್ಲ?
- ನಾನೂ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಆಕಾಂಕ್ಷಿ. ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲು ಸಿದ್ಧ
- ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ಸುರ್ಜೇವಾಲಾ ನನಗೇನು ತಾಕೀತು ಮಾಡುತ್ತಾರೆ?
- ಕೆಲವರು ನನ್ನನ್ನು ಹನಿಟ್ರ್ಯಾಪ್‌ನ ಖೆಡ್ಡಾಕ್ಕೆ ಬೀಳಿಸಲು ಯತ್ನಿಸಿದ್ದರು. ಈ ಬಗ್ಗೆ ದಾಖಲೆಗಳಿವೆ
- ರಾಜ್ಯ ರಾಜಕೀಯದಲ್ಲಿ ಸೆಪ್ಟೆಂಬರ್-2025ರ ನಂತರ ಕ್ರಾಂತಿ ಆಗಲಿದೆ

### 2 ವರ್ಷದಲ್ಲಿ ಎರಡನೇ ವಿಕೆಟ್ ಪತನ

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದು ಎರಡು ವರ್ಷ ಕಳೆಯುವಷ್ಟರಲ್ಲಿ ಎರಡನೇ ಸಚಿವರು ತಮ್ಮ ಸ್ಥಾನಕ್ಕೆ ಕುತ್ತು ತಂದುಕೊಂಡಿದ್ದಾರೆ.

ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರಾಗಿದ್ದ ಬಿ. ನಾಗೇಂದ್ರ ಅವರು ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಆರೋಪದ ಕಾರಣಕ್ಕೆ ರಾಜೀನಾಮೆ ನೀಡಿದ್ದರು. ಮತ ಕಳವು ಹೇಳಿಕೆಗೆ ಸಂಬಂಧಿಸಿದಂತೆ ರಾಜಣ್ಣ ಅವರ ವಜಾಕ್ಕೆ ಸಿದ್ದರಾಮಯ್ಯ ಅವರೇ ಶಿಫಾರಸು ಮಾಡಿದ್ದು, ಸಂಪುಟದ ಎರಡನೇ ವಿಕೆಟ್ ಪತನವಾಗಿದೆ.

### ರಾಜಣ್ಣ ಹೇಳಿದ್ದೇನು?

ಲೋಕಸಭೆ ಚುನಾವಣೆಯಲ್ಲಿ ಮತ ಕಳವು ನಡೆದಿದೆ. ಆದರೆ, ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿ ಇದ್ದಾಗಲೇ ಮತದಾರರ ಪಟ್ಟಿ ಸಿದ್ಧಪಡಿಸಲಾಗಿದೆ. ಆಗ ಎಲ್ಲರೂ ಕಣ್ಣುಮುಚ್ಚಿ ಕುಳಿತಿದ್ದರೇ? ಮತ ಕಳವಿನ ವಿಚಾರ ಮಾತನಾಡಲು ಹೋದರೆ ಮಾತನಾಡಬೇಕಾಗುತ್ತದೆ. ಅದು ಬೇರೆ-ಬೇರೆ ಆಗುತ್ತದೆ. ಇಷ್ಟೆಲ್ಲ ಅಕ್ರಮಗಳು ನಡೆಯುತ್ತಿದ್ದರೂ ನೋಡಿಕೊಂಡು ಸುಮ್ಮನೆ ಇದ್ದೇವಲ್ಲ ಎಂಬ ಬಗ್ಗೆ ನಾಚಿಕೆ ಆಗಬೇಕು. ನಮ್ಮ ಕಣ್ಣು ಮುಂದೆ ಅಕ್ರಮಗಳು ನಡೆದಿರುವುದನ್ನು ನೋಡಿದರೆ ನಮಗೆ ಅವಮಾನ ಆಗಬೇಕು. ಆಗ ಸುಮ್ಮನೆ ಇದ್ದು, ಈಗ ಹೇಳುತ್ತಿದ್ದೇವೆ. ಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಮುಂದೆ ಎಚ್ಚರಿಕೆಯಿಂದ ಇರುತ್ತೇವೆ.

(ಆಗಸ್ಟ್ 9ರಂದು ತುಮಕೂರಿನಲ್ಲಿ ಹೇಳಿದ್ದು)

### 'ಷಡ್ಯಂತ್ರ: ಕಾಲ ಬಂದಾಗ ಹೇಳುವೆ'

'ನನ್ನ ವಿರುದ್ಧ ಪಿತೂರಿ, ಷಡ್ಯಂತ್ರ ನಡೆದಿದೆ. ಎಲ್ಲವನ್ನೂ ಕಾಲ ಬಂದಾಗ ತಿಳಿಸುತ್ತೇನೆ' ಎಂದು ಕೆ.ಎನ್. ರಾಜಣ್ಣ ಹೇಳಿದರು.

ಸಿದ್ದರಾಮಯ್ಯ ಅವರನ್ನು 'ಕಾವೇರಿ' ನಿವಾಸದಲ್ಲಿ ಭೇಟಿ ಮಾಡಿದ ಬಳಿಕ ಸಚಿವರಾದ ಸತೀಶ ಜಾರಕಿಹೊಳಿ, ಎಂ.ಸಿ. ಸುಧಾಕರ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಜೀರ್ ಅಹಮದ್ ಜತೆಯಲ್ಲಿ ಸುದ್ದಿಗಾರರೊಂದಿಗೆ ರಾಜಣ್ಣ ಮಾತನಾಡಿದರು. 4

### ಪಕ್ಷದ ತೀರ್ಮಾನ: ಡಿಕೆಶಿ

'ಸಚಿವ ಸಂಪುಟದಿಂದ ರಾಜಣ್ಣ ಅವರ ವಜಾ ಪಕ್ಷದ ತೀರ್ಮಾನ. ಇದರ ಹೊರತಾಗಿ ಬೇರೆ ವಿಚಾರ ನನಗೆ ತಿಳಿದಿಲ್ಲ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

'ಇದರಿಂದ ನನಗೂ ನೋವಾಗಿದೆ. ರಾಜಣ್ಣ ಅವರು ನನ್ನ ಒಳ್ಳೆಯ ಸ್ನೇಹಿತರು, ಆಪ್ತರು. 25 ವರ್ಷಗಳಿಂದ ಜೊತೆಯಲ್ಲಿ ರಾಜಕಾರಣ ಮಾಡಿಕೊಂಡು ಬಂದಿದ್ದೇವೆ' ಎಂದರು. 4

## ಅರ್ಧ ಜಗತ್ತನ್ನೇ ನಾವು ನಾಶ ಮಾಡುತ್ತೇವೆ: ಪಾಕ್ ಸೇನಾ ಮುಖ್ಯಸ್ಥ ಮುನೀರ್

# ಅಣ್ವಸ್ತ್ರ ಬೆದರಿಕೆಗೆ ಭಾರತ ಎದಿರೇಟು

**ನವದೆಹಲಿ/ ನ್ಯೂಯಾರ್ಕ್ (ಪಿಟಿಐ/ ರಾಯಿಟರ್ಸ್):** ಪಾಕಿಸ್ತಾನ ಸೇನೆಯ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಆಸಿಮ್ ಮುನೀರ್ ಅವರು ಅಮೆರಿಕದ ನೆಲದಲ್ಲಿ ನಿಂತು, ಭಾರತದ ವಿರುದ್ಧ ಅಣ್ವಸ್ತ್ರ ಬಳಕೆಯ ಬೆದರಿಕೆಯೊಡ್ಡಿದ್ದಾರೆ. 'ಅಣ್ವಸ್ತ್ರ ಬ್ಲ್ಯಾಕ್‌ಮೇಲ್‌ಗೆ ಮಣಿಯುವುದಿಲ್ಲ' ಎನ್ನುವ ಮೂಲಕ ಭಾರತ ಅದೇ ಧಾಟಿಯಲ್ಲಿ ತಿರುಗೇಟು ನೀಡಿದೆ.

ಫ್ಲಾರಿಡಾದ ಟ್ಯಾಂಪಾದಲ್ಲಿ ಪಾಕಿಸ್ತಾನಿ ಸಮುದಾಯದವರನ್ನು ಉದ್ದೇಶಿಸಿ ಮಾತನಾಡಿದ ಮುನೀರ್, ಭಾರತದೊಂದಿಗಿನ ಭವಿಷ್ಯದ ಯುದ್ಧದಲ್ಲಿ ಪಾಕಿಸ್ತಾನಕ್ಕೆ ಅಸ್ತಿತ್ವದ ಆತಂಕ ಎದುರಾದರೆ ಅಣ್ವಸ್ತ್ರ ಬಳಕೆಗೆ ಹಿಂಜರಿಯುವುದಿಲ್ಲ ಎಂದು ಹೇಳಿದ್ದಾಗಿ ವರದಿಯಾಗಿದೆ.


'ಪಾಕಿಸ್ತಾನದಲ್ಲಿರುವ ಅಣ್ವಸ್ತ್ರಗಳು ಅಲ್ಲಿನ ಸರ್ಕಾರದ ನಿಯಂತ್ರಣದಲ್ಲಿಲ್ಲ ಎಂಬ ಅನುಮಾನಗಳನ್ನು ಮುನೀರ್ ಹೇಳಿಕೆ ಇನ್ನಷ್ಟು ಬಲಪಡಿಸಿದೆ. ಅಲ್ಲಿನ ಸೇನೆಯು ಭಯೋತ್ಪಾದಕ ಸಂಘಟನೆಗಳ ಜತೆ ಕೈಜೋಡಿಸಿದೆ' ಎಂದು ಭಾರತ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದೆ.

ನೆರೆಯ ದೇಶವು 'ಬೇಜವಾಬ್ದಾರಿತನದ ಅಣ್ವಸ್ತ್ರ ರಾಷ್ಟ್ರ'ವಾಗಿದೆ ಮತ್ತು ಶಸ್ತ್ರಾಸ್ತ್ರಗಳು ಉಗ್ರರ ಕೈಗೆ ಸೇರುವ ಅಪಾಯವಿದೆ ಎಂಬುದನ್ನು ಈ ಬೆದರಿಕೆಯು ತೋರಿಸಿದೆ ಎಂದು ಹೇಳಿದೆ. 10



ಅಣ್ವಸ್ತ್ರ ಬಲ ತೋರಿಸಿ ಬೆದರಿಕೆಯೊಡ್ಡುವುದನ್ನೇ ಪಾಕಿಸ್ತಾನ ತನ್ನ ಕಾಯಕವನ್ನಾಗಿಸಿಕೊಂಡಿದೆ. ಇದು ಆ ದೇಶದ ಬೇಜವಾಬ್ದಾರಿತವನ್ನು ತೋರಿಸುತ್ತದೆ

**ರಣಧೀರ್ ಜೈಸ್ವಾಲ್,** ಎಂಇಎ ವಕ್ತಾರ



ಮುನೀರ್ ಹೇಳಿಕೆಯನ್ನು ಕಾಂಗ್ರೆಸ್ ಖಂಡಿಸುತ್ತದೆ. ಅಮೆರಿಕವು ಅಂತಹ ವ್ಯಕ್ತಿಗೆ ವಿಶೇಷ ಆದರಾತಿಥ್ಯ ನೀಡುತ್ತಿರುವುದು ವಿಚಿತ್ರ ಎನಿಸುತ್ತದೆ

**ಜೈರಾಮ್ ರಮೇಶ್,** ಕಾಂಗ್ರೆಸ್ ಮುಖಂಡ

### ಮುನೀರ್ ಹೇಳಿದ್ದೇನು?

- ನಮ್ಮದು ಅಣ್ವಸ್ತ್ರ ಹೊಂದಿರುವ ರಾಷ್ಟ್ರ. ಒಂದು ವೇಳೆ ಯುದ್ಧ ನಡೆದು ನಾವು ನಾಶವಾಗುವುದು ಖಚಿತವಾದರೆ, ನಮ್ಮೊಂದಿಗೆ ಅರ್ಧ ಜಗತ್ತನ್ನು ನಾಶಪಡಿಸುತ್ತೇವೆ
- ಭಾರತವು ಅಣೆಕಟ್ಟು ನಿರ್ಮಿಸಿ ಪಾಕಿಸ್ತಾನಕ್ಕೆ ನೀರು ಹರಿಯುವುದನ್ನು ತಡೆದರೆ ಆ ಅಣೆಕಟ್ಟನ್ನು ಧ್ವಂಸಗೊಳಿಸುತ್ತೇವೆ
- ಸಿಂಧೂ ನದಿ ಭಾರತದ ಸ್ವತ್ತಲ್ಲ. ನದಿ ನೀರು ಹರಿಯುವುದನ್ನು ನಿಲ್ಲಿಸುವ ಭಾರತೀಯ ಯೋಜನೆಗಳನ್ನು ವಿಫಲಗೊಳಿಸಲು ಬೇಕಾದಷ್ಟು ಸಂಪನ್ಮೂಲ ನಮ್ಮಲ್ಲಿದೆ



ಆಸಿಮ್ ಮುನೀರ್

### 'ಕಾಶ್ಮೀರವು ಪಾಕ್‌ನ ಕಂಠನಾಳ'

'ಪಾಕಿಸ್ತಾನದ ಪಾಲಿಗೆ ಕಾಶ್ಮೀರವು ಕಂಠನಾಳವಿದ್ದಂತೆ (ತಲೆಯಿಂದ ಹೃದಯಕ್ಕೆ ರಕ್ತ ಒಯ್ಯುವ ನಾಳ). ಕಾಶ್ಮೀರ ಪಾಕಿಸ್ತಾನಕ್ಕೇ ಸೇರಿದ್ದು' ಎಂಬ ಹೇಳಿಕೆಯನ್ನು ಆಸಿಮ್ ಮುನೀರ್ ಪುನರುಚ್ಚರಿಸಿದ್ದಾರೆ. 'ಕಾಶ್ಮೀರವು ಭಾರತದ ಆಂತರಿಕ ವಿಚಾರ ಅಲ್ಲ. ಅದು ಅಂತರರಾಷ್ಟ್ರೀಯ ಮಟ್ಟದಲ್ಲಿ ಚರ್ಚಿಸುವ ವಿಷಯ' ಎಂದೂ ಹೇಳಿದ್ದಾರೆ.



ಪಹಲ್ಗಾಮ್ ದಾಳಿಗೆ ಕೆಲವು ವಾರಗಳ ಮುನ್ನ ಮುನೀರ್ ಅವರು, 'ಪಾಕಿಸ್ತಾನವು ಕಾಶ್ಮೀರ ವಿವಾದವನ್ನು ಮರೆಯಲು ಸಾಧ್ಯವಿಲ್ಲ. ಅದು ಪಾಕ್ ಪಾಲಿಗೆ ಕಂಠನಾಳವಿದ್ದಂತೆ' ಎಂದಿದ್ದರು. ಅವರ ಹೇಳಿಕೆಗೆ ಭಾರತ ತಿರುಗೇಟು ನೀಡಿತ್ತು.

# 'ಮತ ಕಳವು' ವಿರುದ್ಧ 'ಇಂಡಿಯಾ' ಕಿಚ್ಚು

ಪ್ರಜಾವಾಣಿ ವಾರ್ತೆ

**ನವದೆಹಲಿ:** ಮತ ಕಳವು ಹಾಗೂ ಬಿಹಾರದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ವಿರೋಧಿಸಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ 'ಇಂಡಿಯಾ' ಮೈತ್ರಿಕೂಟದ ಸಂಸದರು ಸಂಸತ್ ಭವನದಿಂದ ಚುನಾವಣಾ ಆಯೋಗದ ಕಚೇರಿವರೆಗೆ ಸೋಮವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು. ಪ್ರತಿಭಟನೆ ನಿರತ ಸಂಸದರನ್ನು ಪೊಲೀಸರು ಬಂಧಿಸಿದರು.

ಸಂಸದರು ಮುಂದೆ ಸಾಗುವುದನ್ನು ತಡೆಯಲು ಪೊಲೀಸರು ಪಿಟಿಐ ಕಟ್ಟಡದ ಹೊರಗೆ ಬ್ಯಾರಿಕೇಡ್‌ಗಳನ್ನು ಹಾಕಿದರು. ಪೊಲೀಸರು ತಡೆದಿದ್ದರಿಂದ ಆಕ್ರೋಶಗೊಂಡ ಅನೇಕ ಸಂಸದರು ರಸ್ತೆಯ ಮೇಲೆ ಕುಳಿತು ಘೋಷಣೆಗಳನ್ನು ಕೂಗಿದರು. ಟಿಎಂಸಿಯ ಮಹುವಾ ಮೊಯಿತ್ರಾ, ಕಾಂಗ್ರೆಸ್‌ನ ಸಂಜನಾ ಜಾಟವ್ ಮತ್ತು ಜ್ಯೋತಿಮಣಿ ಸೇರಿದಂತೆ ಕೆಲವು ಮಹಿಳಾ ಸಂಸದರು ಬ್ಯಾರಿಕೇಡ್ ಹತ್ತಿ ಚುನಾವಣಾ ಆಯೋಗದ ವಿರುದ್ಧ ಘೋಷಣೆಗಳನ್ನು ಕೂಗಿದರು. ಹಲವು ಸಂಸದರು ಕನ್ನಡದಲ್ಲಿಯೂ ಘೋಷಣೆಗಳನ್ನು ಕೂಗಿದರು. ಇದಕ್ಕೆ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಧ್ವನಿಗೂಡಿಸಿದರು. 11



ಟಿಎಂಸಿ ಸಂಸದರಾದ ಸುಶ್ಮಿತಾ ದೇವ್ (ಎಡ) ಮಹುವಾ ಮೊಯಿತ್ರಾ (ಮಧ್ಯ) ಬ್ಯಾರಿಕೇಡ್ ಮೇಲೆ ಹತ್ತಿ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ



# ಅಪಘಾತ: ಬೈಕ್‌ನಲ್ಲಿ ಪತ್ನಿ ಮೃತದೇಹ ಸಾಗಿಸಿದ ವ್ಯಕ್ತಿ

**ನಾಗ್ಪುರ (ಪಿಟಿಐ):** ರಸ್ತೆ ಅಪಘಾತದಲ್ಲಿ ಮೃತಪಟ್ಟ ಪತ್ನಿಯ ದೇಹವನ್ನು ಸಾಗಿಸಲು ಯಾರೂ ನೆರವಿಗೆ ಬಾರದ ಕಾರಣ ವ್ಯಕ್ತಿಯೊಬ್ಬರು ತಮ್ಮ ಬೈಕ್‌ನ ಹಿಂಬದಿ ಸೀಟಿಗೆ ಮೃತದೇಹ ಕಟ್ಟಿಕೊಂಡು ಸಾಗಿದ ಘಟನೆ ಮಹಾರಾಷ್ಟ್ರದ ನಾಗ್ಪುರದಲ್ಲಿ ನಡೆದಿದೆ.

ನಾಗ್ಪುರ-ಜಬಲ್ಪುರ ರಾಷ್ಟ್ರೀಯ ಹೆದ್ದಾರಿಯಲ್ಲಿ ಆಗಸ್ಟ್ 9ರಂದು ಘಟನೆ ನಡೆದಿದ್ದು, ಘಟನೆಯ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ.

ಮಧ್ಯಪ್ರದೇಶದ ಅಮಿತ್ ಯಾದವ್ ಅವರು ಪತ್ನಿ ಗ್ಯಾರ್ಸಿ ಅವರೊಂದಿಗೆ ನಾಗ್ಪುರದ ಲೊನಾರಾದಿಂದ ಕರಣ್‌ಪುರ ಗ್ರಾಮಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದರು. ಈ ಸಂದರ್ಭದಲ್ಲಿ ಟ್ರಕ್‌ವೊಂದು ಬೈಕ್‌ಗೆ ಡಿಕ್ಕಿ ಹೊಡೆಯಿತು. ಆಗ ರಸ್ತೆಗೆ ಬಿದ್ದ ಗ್ಯಾರ್ಸಿ ಅವರ ಮೇಲೆ ಅದೇ ಟ್ರಕ್ ಹರಿದು ಅವರು ಸ್ಥಳದಲ್ಲೇ ಮೃತಪಟ್ಟಿದ್ದರು ಎಂದು ಪೊಲೀಸರು ತಿಳಿಸಿದರು.

ಪತ್ನಿಯ ದೇಹ ಸಾಗಿಸಲು ಸಹಾಯ ಮಾಡುವಂತೆ ರಸ್ತೆಯಲ್ಲಿ ಸಾಗುತ್ತಿದ್ದ ವಾಹನ ಚಾಲಕರನ್ನು ಅಮಿತ್ ಕೇಳಿಕೊಂಡಿದ್ದರು. ಆದರೆ ಯಾರೊಬ್ಬರೂ ನೆರವಿಗೆ ಬಾರದ ಕಾರಣ ತಮ್ಮ ಬೈಕ್ ಹಿಂಬದಿ ಸೀಟಿಗೆ ಪತ್ನಿ ದೇಹವನ್ನು ಕಟ್ಟಿಕೊಂಡು ಮನೆಗೆ ಸಾಗುತ್ತಿದ್ದರು. ಈ ಸಂದರ್ಭದಲ್ಲಿ ಅದೇ ಮಾರ್ಗದಲ್ಲಿ ಸಾಗುತ್ತಿದ್ದ ಪೊಲೀಸ್ ವ್ಯಾನ್‌ನಲ್ಲಿ ಇದ್ದವರು ಯಾದವ್ ಅವರನ್ನು ತಡೆದರು. ಮೃತದೇಹವನ್ನು ಶವ ಪರೀಕ್ಷೆಗಾಗಿ ಇಂದಿರಾ ಗಾಂಧಿ ವೈದ್ಯಕೀಯ ಕಾಲೇಜಿಗೆ ಕಳುಹಿಸಿ ಕೊಟ್ಟರು ಎಂದು ಮಾಹಿತಿ ನೀಡಿದರು.

ಬೈಕ್‌ನಲ್ಲಿ ಮೃತದೇಹ ಕಟ್ಟಿಕೊಂಡು ಸಾಗುತ್ತಿದ್ದ ಅಮಿತ್ ಅವರನ್ನು ಪೊಲೀಸರು ತಡೆದ ಸಂದರ್ಭದಲ್ಲಿ ವಿಡಿಯೊ ಸೆರೆಹಿಡಿಯಲಾಗಿತ್ತು ಎಂದು ಹೇಳಲಾಗಿದೆ.



ಬೈಕ್‌ನ ಹಿಂಬದಿ ಸೀಟಿಗೆ ಮೃತದೇಹ ಕಟ್ಟಿಕೊಂಡು ಸಾಗಿದ ವ್ಯಕ್ತಿ

**ಚಿನಕುರುಳಿ** ಪ್ರಕಾಶ್ ಶೆಟ್ಟಿ




## ಧರ್ಮಸ್ಥಳಕ್ಕೆ ಭೇಟಿ ನೀಡಿದ ಎನ್‌ಎಚ್‌ಆರ್‌ಸಿ

**ಮಂಗಳೂರು:** ಧರ್ಮಸ್ಥಳ ಗ್ರಾಮದಲ್ಲಿ ಅಪರಾಧ ಕೃತ್ಯಗಳ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂಬ ಆರೋಪ ಕುರಿತು ವಿಶೇಷ ತನಿಖಾ ತಂಡ ತನಿಖೆ ನಡೆಸುತ್ತಿರುವಂತೆಯೇ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ (ಎನ್‌ಎಚ್‌ಆರ್‌ಸಿ) ತಂಡ ಧರ್ಮಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಕಲೆಹಾಕಿದೆ.

ಎನ್‌ಎಚ್‌ಆರ್‌ಸಿ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಯುವರಾಜ್, ಡಿವೈಎಸ್‌ಪಿ ರವಿ ಸಿಂಗ್ ಮತ್ತಿತರರನ್ನು ಒಳಗೊಂಡ ನಾಲ್ವರ ತಂಡವು ಭೇಟಿ ನೀಡಿದೆ. 5

**ಹವಾಮಾನ ಮುನ್ಸೂಚನೆ:** ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ.

# ವಿವಿಧ ಬೇಡಿಕೆ : ಸರಣಿ ಪ್ರತಿಭಟನೆ

## ಕೃಷಿ ತಿದ್ದುಪಡಿ ಕಾಯ್ದೆ ಹಿಂಪಡೆಯಲು ಒತ್ತಾಯ • ಸರ್ಕಾರಿ ಹುದ್ದೆಗಳ ಭರ್ತಿಗೆ ಆಗ್ರಹ • ಐಡಿಬಿಐ ಬ್ಯಾಂಕ್ ಮಾರಾಟ ಬೇಡ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಸರಣಿ ಪ್ರತಿಭಟನೆಗಳು ನಡೆದವು.

ಮೂರು ಕೃಷಿ ತಿದ್ದುಪಡಿ ಕಾಯ್ದೆಗಳನ್ನು ಹಿಂಪಡೆಯುವಂತೆ ಒತ್ತಾಯಿಸಿ ರೈತ ಸಂಘ, ಹಸಿರು ಸೇನೆ ಪ್ರತಿಭಟನೆ ನಡೆಸಿದರೆ, ಐಡಿಬಿಐ ಬ್ಯಾಂಕ್ ಅನ್ನು ಖಾಸಗಿಯವರಿಗೆ ಮಾರಾಟ ಮಾಡಬೇಕೆಂಬ ಪ್ರಸ್ತಾವ ಕೈ ಬಿಡಬೇಕು ಎಂದು ಒತ್ತಾಯಿಸಿ ಯುನೈಟೆಡ್ ಫೋರಂ ಆಫ್ ಐಡಿಬಿಐ ಆಫೀಸರ್ಸ್ ಆ್ಯಂಡ್ ಎಂಪ್ಲಾಯಿಸ್ ಪ್ರತಿಭಟಿಸಿತು.

ರಾಜ್ಯದಲ್ಲಿ ಖಾಲಿ ಇರುವ ಸರ್ಕಾರಿ ಹುದ್ದೆಗಳನ್ನು ಶೀಘ್ರ ಭರ್ತಿ ಮಾಡಬೇಕು ಎಂದು ಒತ್ತಾಯಿಸಿ ರಕ್ತದಲ್ಲಿ ಬರೆದ ಫಲಕಗಳನ್ನು ರಾಜ್ಯ ವಿದ್ಯಾರ್ಥಿಗಳ ಅಸೋಸಿಯೇಷನ್ ಪ್ರದರ್ಶಿಸಿತು.



ಖಾಲಿ ಹುದ್ದೆ ಭರ್ತಿ ಮಾಡುವಂತೆ ಆಗ್ರಹಿಸಿ ರಾಜ್ಯ ವಿದ್ಯಾರ್ಥಿಗಳ ಅಸೋಸಿಯೇಷನ್ ನಡೆಸಿದ ಪ್ರತಿಭಟನೆ ವೇಳೆ ಅಭ್ಯರ್ಥಿಯೊಬ್ಬರು ರಕ್ತದಲ್ಲಿ ಘೋಷಣೆ ಬರೆದರು —ಪ್ರಜಾವಾಣಿ ಚಿತ್ರ

**ಕೃಷಿ ತಿದ್ದುಪಡಿ ಕಾಯ್ದೆ:** ರೈತ ವಿರೋಧಿಯಾಗಿರುವ ಮೂರು ಕೃಷಿ ತಿದ್ದುಪಡಿ ಕಾಯ್ದೆಗಳನ್ನು ಹಿಂಪಡೆಯುವುದರ ಜೊತೆಗೆ ರೈತರ ಸಾಲಮನ್ನಾ ಹಾಗೂ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನಿಗದಿ ಮಾಡಬೇಕು ಎಂದು ಒತ್ತಾಯಿಸಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ರೈತರು ಪ್ರತಿಭಟನೆ ನಡೆಸಿದರು.

ಸಂಘದ ರಾಜ್ಯ ಘಟಕದ ಅಧ್ಯಕ್ಷ ವಾಸುದೇವ ಮೇಟಿ ಮಾತನಾಡಿ, ‘ದೇಶದಲ್ಲಿ ಶೇಕಡ 80ರಷ್ಟು ಜನತೆ ಕೃಷಿ ಅವಲಂಬಿಸಿ ಬದುಕುತ್ತಿದ್ದಾರೆ. ಆದರೆ, ಆಳುವ ಸರ್ಕಾರ ಮಾತ್ರ ರೈತರನ್ನು ಎರಡನೇ ದರ್ಜೆಯಂತೆ ಕಾಣುತ್ತಿವೆ. ರೈತ ವಿರೋಧಿ ಕಾನೂನುಗಳ ಮೂಲಕ ಬದುಕಿಗೆ ಕಂಟಕವಾಗುತ್ತಿವೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರೈತರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸುವುದರ ಜೊತೆಗೆ ರೈತರ ಆದಾಯ ದ್ವಿಗುಣಗೊಳಿಸಿ ಸುಸ್ಥಿರ ಕೃಷಿ ಅಭಿವೃದ್ಧಿಯನ್ನು ಉತ್ತೇಜಿಸುವ ಡಾ.ಎಂ.ಎಸ್. ಸ್ವಾಮಿನಾಥನ್ ವರದಿಯನ್ನು ಅನುಷ್ಠಾನಗೊಳಿಸಬೇಕು ಎಂದು ಆಗ್ರಹಿಸಿದರು.

ಬೆಳೆ ನಷ್ಟ, ಖಾಸಗಿ ಬ್ಯಾಂಕ್, ಕೈ ಸಾಲಗಳಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದನ್ನು ತಡೆಯುವ ನಿಟ್ಟಿನಲ್ಲಿ ಸರ್ಕಾರ ರೈತರ ಸಂಪೂರ್ಣ ಸಾಲ ಮನ್ನಾ ಮಾಡಲು ನಿರ್ಣಯಿಸಬೇಕು. ಮೈಸೂರು, ಚಾಮರಾಜನಗರದಲ್ಲಿ ಅಕ್ರಮ ಗಣಿಗಾರಿಕೆ ಮಿತಿ ಮೀರಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಸುಭಾಷ್ ನಾಯ್ಕ್, ಬಂಡೆಪ್ಪಗೌಡ ಪಾಟೀಲ್, ಫಕೀರಪ್ಪ ಪೂಜಾರಿ ಇದ್ದರು.

**ಖಾಲಿ ಹುದ್ದೆ ಭರ್ತಿ:** ರಾಜ್ಯದಲ್ಲಿ ಖಾಲಿ ಇರುವ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ಒತ್ತಾಯಿಸಿ ರಾಜ್ಯ ವಿದ್ಯಾರ್ಥಿಗಳ ಅಸೋಸಿಯೇಷನ್ ಪ್ರತಿಭಟನೆ ನಡೆಸಿತು.

‘ರಾಜ್ಯದಲ್ಲಿ 2,76,386 ಸರ್ಕಾರಿ ಹುದ್ದೆಗಳು ಖಾಲಿ ಇವೆ. ಹುದ್ದೆಗಳ ಭರ್ತಿಯಲ್ಲಿ ಉಂಟಾದ ವಿಳಂಬದಿಂದ ಆಡಳಿತ ಯಂತ್ರದ ಕಾರ್ಯಕ್ಷಮತೆ ಕುಸಿಯುತ್ತಿದೆ. ಜನಸಾಮಾನ್ಯರ ನಿತ್ಯದ ಜೀವನ, ಮಕ್ಕಳ ಶಿಕ್ಷಣ, ಸಾರ್ವಜನಿಕ ಆರೋಗ್ಯ ಸೇವೆ, ಗ್ರಾಮೀಣ ಅಭಿವೃದ್ಧಿ ಹಾಗೂ ಸಾಮಾಜಿಕ ನ್ಯಾಯದ ಅನುಷ್ಠಾನಕ್ಕೆ ತೊಂದರೆ ಉಂಟಾಗಿದೆ. ಹುದ್ದೆಗಳ ಭರ್ತಿಯನ್ನು ತುರ್ತು ಆಧಾರದ ಮೇಲೆ ಪ್ರಾರಂಭಿಸಬೇಕು’ ಎಂದು ಅಸೋಸಿಯೇಷನ್ ಅಧ್ಯಕ್ಷ ಕಾಂತ್‌ಕುಮಾರ್ ಆಗ್ರಹಿಸಿದರು.

‘ನೇಮಕಾತಿ ವೇಳಾಪಟ್ಟಿಯನ್ನು ಯುಪಿಎಸ್‌ಸಿ ಮಾದರಿಯಲ್ಲಿ ವರ್ಷಕ್ಕೊಮ್ಮೆ ಪ್ರಕಟಿಸಿ, ಅದರಲ್ಲಿ ಪರೀಕ್ಷೆ ದಿನಾಂಕ, ಅರ್ಜಿ ಆಹ್ವಾನ, ಫಲಿತಾಂಶ ಘೋಷಣೆ ನಿಗದಿಪಡಿಸಬೇಕು. ಎಲ್ಲಾ ಇಲಾಖೆಗಳ ಸರ್ಕಾರಿ ನೇಮಕಾತಿಗಳ ಗರಿಷ್ಠ ವಯೋಮಿತಿಯನ್ನು 35 ವರ್ಷ ಮಾಡಬೇಕು. ವಿಶ್ವವಿದ್ಯಾಲಯ ಅನುದಾನ ಆಯೋಗ ನಿಗದಿಪಡಿಸಿದ ಅರ್ಹತೆಗಳ ಪ್ರಕಾರ ಉಪನ್ಯಾಸಕರ ನೇಮಕಾತಿ ನಡೆಯಬೇಕು. ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಬೋಧನೆಗಾಗಿ ಕಡ್ಡಾಯವಾಗಿ ಯುಜಿಸಿ ಅರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರನ್ನಷ್ಟೇ ನೇಮಿಸಬೇಕು ಎಂದು ಉಪಾಧ್ಯಕ್ಷ ಎಂ.ಎಸ್.ಶ್ರೇಯಸ್, ಪ್ರಧಾನ ಕಾರ್ಯದರ್ಶಿ ಜೆ.ಸಂಜಯ್ ಕುಮಾರ್ ಒತ್ತಾಯಿಸಿದರು.

**ಪ್ರಸ್ತಾವ ಕೈ ಬಿಡಿ:** ಐಡಿಬಿಐ ಬ್ಯಾಂಕ್ ಅನ್ನು ಖಾಸಗಿಯವರಿಗೆ ಮಾರಾಟ ಮಾಡಬೇಕೆಂಬ ಪ್ರಸ್ತಾವ ಕೈ ಬಿಡಬೇಕು ಎಂದು ಒತ್ತಾಯಿಸಿ ಯುನೈಟೆಡ್ ಫೋರಂ ಆಫ್ ಐಡಿಬಿಐ ಆಫೀಸರ್ಸ್ ಆ್ಯಂಡ್ ಎಂಪ್ಲಾಯಿಸ್ (ಯುಎಫ್‌ಐಒಇ) ಪ್ರತಿಭಟನೆ ನಡೆಸಿತು.

ಬ್ಯಾಂಕ್‌ನಲ್ಲಿ ಖಾಲಿ ಇರುವ 5 ಸಾವಿರ ಗುಮಾಸ್ತ ಹುದ್ದೆ ಭರ್ತಿ ಮಾಡಬೇಕು. ಕೆಲಸದ ಒತ್ತಡ ಕಡಿಮೆ ಮಾಡಬೇಕು, ಸಿಬ್ಬಂದಿಗೆ ವೈದ್ಯಕೀಯ ನೆರವು ಯೋಜನೆ ಜಾರಿಗೊಳಿಸಬೇಕು ಹಾಗೂ ಅಧಿಕಾರಿಗಳಿಗೆ ದ್ವಿಪಕ್ಷೀಯ ವರ್ಗಾವಣೆ ನೀತಿ ಪರಿಚಯಿಸಬೇಕು ಎಂದು ಆಗ್ರಹಿಸಿದರು. ಯುಎಫ್‌ಐಒಇ ಸಂಚಾಲಕ ದೇವಿದಾಸ್ ತುಳಜಪುರಕರ್, ಜಂಟಿ ಸಂಚಾಲಕ ವಿಠಲ್ ಕೋಟೇಶ್ವರ ರಾವ್ ಹಾಜರಿದ್ದರು.



ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ರೈತರು ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ




ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಯುನೈಟೆಡ್ ಫೋರಂ ಆಫ್ ಐಡಿಬಿಐ ಆಫೀಸರ್ಸ್ ಆ್ಯಂಡ್ ಎಂಪ್ಲಾಯಿಸ್ (ಯುಎಫ್‌ಐಒಇ) ಪ್ರತಿಭಟನೆ ನಡೆಸಿತು — ಪ್ರಜಾವಾಣಿ ಚಿತ್ರ

## ವೈಯಾಲಿ ಕಾವಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

# ವಿದ್ಯಾರ್ಥಿನಿಗೆ ಇರಿದ ಮನೆ ಕೆಲಸದಾಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನರ್ಸಿಂಗ್ ಕಾಲೇಜು ವಿದ್ಯಾರ್ಥಿನಿಗೆ ಚಾಕುವಿನಿಂದ ಹಲ್ಲೆ ನಡೆಸಿದ್ದ ಆರೋಪದ ಅಡಿ ಮನೆಯ ಕೆಲಸದಾಕೆಯನ್ನು ವೈಯಾಲಿಕಾವಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜಿ. ಲಲಿತಾ(45) ಬಂಧಿತ ಆರೋಪಿ.ಹಲ್ಲೆಯಿಂದ ವಿದ್ಯಾರ್ಥಿನಿ ಪಿ.ಸುಶ್ಮಿತಾ (21) ಅವರು ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಶನಿವಾರ ತಡರಾತ್ರಿ ಘಟನೆ ನಡೆದಿದೆ. ಈ ಸಂಬಂಧ ಬಂದ ದೂರು ಆಧರಿಸಿ ಲಲಿತಾ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.



ಲಲಿತಾ

ಬಸಪ್ಪ ಗಾರ್ಡನ್‌ನ ವೇಣುಗೋಪಾಲ್ ಮತ್ತು ಸರೋಜಮ್ಮ ದಂಪತಿ ಮನೆಯಲ್ಲಿ ಆರೋಪಿ ಲಲಿತಾ ಅವರು ಕೆಲಸ ಮಾಡುತ್ತಿದ್ದರು. ಮಹದೇವಪುರದ ಕಾಲೇಜಿನ ವಿದ್ಯಾರ್ಥಿನಿ ಸುಶ್ಮಿತಾ. ಪೇಯಿಂಗ್ ಗೆಸ್ಟ್‌ನಲ್ಲಿ (ಪಿ.ಜಿ) ವಾಸಿಸುತ್ತಿದ್ದರು. ಸುಶ್ಮಿತಾ ಅವರ ಪೋಷಕರು ಹಾಗೂ ವೇಣುಗೋಪಾಲ್ ಪರಿಚಯವಿದ್ದರು. ಹೀಗಾಗಿ ವೇಣುಗೋಪಾಲ್ ಮನೆಗೆ ಸುಶ್ಮಿತಾ ಬಂದು ಹೋಗುತ್ತಿದ್ದರು.

ವರಮಹಾಲಕ್ಷ್ಮಿ ಹಬ್ಬಕ್ಕೆಂದು ಶುಕ್ರವಾರ ಬಂದಿದ್ದರು. ಲಲಿತಾ ಅವರ ಕೆಲಸದ ಬಗ್ಗೆ ಸುಶ್ಮಿತಾ ಅಸಮಾಧಾನ ವ್ಯಕ್ತಪಡಿಸಿ, ನಿಂದಿಸಿದ್ದರು ಎನ್ನಲಾಗಿದೆ. ಇದೇ ಕಾರಣದಿಂದ ಲಲಿತಾ ಅವರು ಸಿಟ್ಟಿಗೆದ್ದು ಕೂಗಾಟ ನಡೆಸಿದ್ದರು ಎಂದು ಮೂಲಗಳು ತಿಳಿಸಿವೆ. ‘ಚಿಕ್ಕ ಹುಡುಗಿಯಿಂದ ಕೆಲಸ ಕಲಿಯಬೇಕಾಗಿಲ್ಲ’ ಎಂದು ಆರೋಪಿ ಕೂಗಾಡಿದ್ದರು. ಸುಶ್ಮಿತಾ ಅವರು ಮಲಗಿದ್ದ ಮೂರನೆಯ ಮಹಡಿಯಲ್ಲಿದ್ದ ಕೋಣೆಗೆ ತೆರಳಿ ಮನೆಯಲ್ಲಿದ್ದ ಚಾಕು ವಿನಿಂದ ಹಲ್ಲೆ ನಡೆಸಿ ಪರಾರಿ ಆಗಿದ್ದಳು. ಹಲ್ಲೆಯಿಂದಾಗಿ ಸುಶ್ಮಿತಾ ಪ್ರಜ್ಞೆ ಕಳೆದುಕೊಂಡಿದ್ದರು’ ಎಂದು ಪೊಲೀಸರು ಹೇಳಿದರು.

‘ಮುಂಜಾನೆ ಮೂರು ಗಂಟೆಯ ಸುಮಾರಿಗೆ ಸುಶ್ಮಿತಾಗೆ ಪ್ರಜ್ಞೆ ಬಂದಿತ್ತು. ಸರೋಜಾ ಅವರ ಮೊಬೈಲ್‌ಗೆ ಕರೆ ಮಾಡಿ ‘ಆಂಟಿ ಬೇಗಬಂದು ಕಾಪಾಡಿ’ ಎಂದಿದ್ದರು. ವೇಣುಗೋಪಾಲ್ ಕೊಠಡಿಗೆ ತೆರಳಿ ನೋಡಿದಾಗ ವಿದ್ಯಾರ್ಥಿನಿ ರಕ್ತದಮಡುವಿನಲ್ಲಿ ಬಿದ್ದಿದ್ದರು’ ಎಂದು ಮೂಲಗಳು ತಿಳಿಸಿವೆ.

## ಲಾಭದ ಹೆಸರಿನಲ್ಲಿ ಯುವತಿಗೆ ವಂಚನೆ

ಅಪರಾಧ ಸುದ್ದಿ

**ಬೆಂಗಳೂರು:** ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ನೀಡಲಾಗುವುದು ಎಂದು ಯುವತಿಗೆ ನಂಬಿಸಿ ₹2.49 ಲಕ್ಷ ವಂಚಿಸಲಾಗಿದೆ. ಈ ಸಂಬಂಧ ಕೆಂಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಲಸಂದ್ರದ ಜಾಹ್ನವಿ(25) ವಂಚನೆಗೊಳಗಾದವರು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು. ಆ.8ರಂದು ಅಪರಿಚಿತ ದೂರವಾಣಿ ಸಂಖ್ಯೆಯಿಂದ ಜಾಹ್ನವಿ ಅವರ ವಾಟ್ಸ್‌ಆ್ಯಪ್‌ಗೆ ಸಂದೇಶ ಬಂದಿತ್ತು. ಸಂದೇಶ ಕಳುಹಿಸಿದ್ದ ವ್ಯಕ್ತಿ, ಕಾಲೇಜಿನ ಹಿರಿಯ ವಿದ್ಯಾರ್ಥಿಯೆಂದು ಪರಿಚಯಿಸಿ ಕೊಂಡಿದ್ದ. ‘ಅರೆಕಾಲಿಕ ಉದ್ಯೋಗವನ್ನು ಹುಡುಕುತ್ತಿದ್ದೀರಾ’ ಎಂದು ಕೇಳಿ ಸ್ನೇಹ ಸಂಪಾದಿಸಿದ್ದ. ಕೆಲವು ದಿನಗಳ ಬಳಿಕ, ಮತ್ತೊಂದು ಮೊಬೈಲ್ ಸಂಖ್ಯೆಯಿಂದ ಕರೆ ಮಾಡಿದ್ದ ಆರೋಪಿ, ‘ತಾನು ಯು.ಎಸ್ ಡಾಲರ್ ಅನ್ನು ಇಂಡಿಯಾ ರೂಪಾಯಿಗೆ ಬದಲಾಯಿಸುವ ಕೆಲಸ ಮಾಡುತ್ತಿದ್ದು, ನೀವೂ ಹಣವನ್ನು ತೊಡಗಿಸಿದರೆ ಲಾಭವನ್ನು ನೀಡುತ್ತೇನೆ ಎಂದು ನಂಬಿಸಿದ್ದ’ ಎಂದು ಪೊಲೀಸರು ಹೇಳಿದರು.

‘ಮೊದಲು ₹6 ಸಾವಿರ ಫೋನ್ ಪೇ ಮೂಲಕ ಪಡೆದಿದ್ದ. ಇನ್ನೂ ಹಣ ಕಳುಹಿಸಿದರೆ ಹೆಚ್ಚಿನ ಹಣವನ್ನು ಲಾಭವಾಗಿ ಕೊಡುವೆ ಎಂದಿದ್ದ. ಇದನ್ನು ನಂಬಿದ್ದ ದೂರುದಾರೆ, ವಂಚಕ ನೀಡಿದ್ದ ಖಾತೆಗಳಿಗೆ ₹2.49 ಲಕ್ಷ ವರ್ಗಾವಣೆ ಮಾಡಿದ್ದರು. ಲಾಭ ನೀಡದ ಕಾರಣ ವಂಚನೆಗೆ ಒಳಗಾಗಿರುವುದು ಗೊತ್ತಾಗಿದೆ.

## ಬಸವನಗುಡಿ: ಬರ್ಗರ್ ಶಾಪ್‌ಗೆ ನುಗ್ಗಿ ದಾಂದಲೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಸವನಗುಡಿಯ ಗಾಂಧಿ ಬಜಾರ್‌ನ ಜಂಬೊ ಕಿಂಗ್ ಬರ್ಗರ್ ಶಾಪ್‌ಗೆ ಹೆಲ್ಮೆಟ್ ಧರಿಸಿ ಬಂದಿದ್ದ ವ್ಯಕ್ತಿಯೊಬ್ಬ ಶಾಪ್ ಸಿಬ್ಬಂದಿಗೆ ಮಾರಕಾಸ್ತ್ರ ತೋರಿಸಿ ಬೆದರಿಕೆ ಹಾಕಿ ಪರಾರಿ ಆಗಿದ್ದಾನೆ. ಭಾನುವಾರ ರಾತ್ರಿ ಈ ಘಟನೆ ನಡೆದಿದೆ.

ಮಾರಕಾಸ್ತ್ರ ಹಿಡಿದುಕೊಂಡು ಬರ್ಗರ್ ಶಾಪ್‌ಗೆ ಬಂದಿದ್ದ ಕಿಡಿಗೇಡಿ ಸ್ಥಳದಲ್ಲಿದ್ದ ಗ್ರಾಹಕರನ್ನು ಬೆದರಿಸಿದ್ದಾನೆ. ಗ್ರಾಹಕರ ಎದುರೇ ಅಂಗಡಿಯ ಬಿಲ್ಲಿಂಗ್ ಯಂತ್ರ, ಗಾಜುಗಳನ್ನು ಒಡೆದು ಹಾಕಿ ಹಾನಿ ಮಾಡಿದ್ದಾನೆ. ಆತಂಕಗೊಂಡ ಗ್ರಾಹಕರು ಸ್ಥಳದಿಂದ ತೆರಳಿದ್ದರು. ಘಟನೆಯ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

‘ಇಬ್ಬರು ಅಪರಿಚಿತರು ದ್ವಿಚಕ್ರ ವಾಹನದಲ್ಲಿ ಬಂದಿದ್ದರು. ಒಬ್ಬ ಅಂಗಡಿಯ ಟೇಬಲ್‌ಗೆ ಆಯುಧದಿಂದ ಹೊಡೆದು ಪರಾರಿಯಾಗಿದ್ದಾನೆ. ಜನರ ಮೇಲೆ ಹಲ್ಲೆ ಮಾಡಿಲ್ಲ. ಆರೋಪಿಯ ಬಂಧನದ ಬಳಿಕವಷ್ಟೇ ಆತ ಯಾರು, ಯಾಕಾಗಿ ಕೃತ್ಯ ಎಸಗಿದ್ದಾನೆ ಎಂಬುದು ಗೊತ್ತಾಗಲಿದೆ. ಅಂಗಡಿಯ ಸಿಬ್ಬಂದಿ ನೀಡಿರುವ ದೂರಿನ ಅನ್ವಯ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿಗೆ ಶೋಧ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.



ಮಾರಕಾಸ್ತ್ರದಿಂದ ಹಲ್ಲೆಗೆ ಮುಂದಾಗಿದ್ದ ಕಿಡಿಗೇಡಿ

# ಹಲ್ಲೆ, ಜಾತಿ ನಿಂದನೆ ಆರೋಪ: ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪಬ್‌ವೊಂದರಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಮುಖಂಡರ ನಡುವೆ ಗಲಾಟೆ ನಡೆದಿದ್ದು, ಮಹದೇವಪುರ ಪೊಲೀಸ್ ಠಾಣೆಯಲ್ಲಿ ಮೂವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಕಾರ್ತಿಕ್ ರೆಡ್ಡಿ ಅವರು ನೀಡಿದ ದೂರು ಆಧರಿಸಿ ಶ್ರೀಧರ್ ರೆಡ್ಡಿ, ಮಧು, ರಾಜೇಶ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

‘ಕಾಂಗ್ರೆಸ್ ಮುಖಂಡ ಕಾರ್ತಿಕ್ ರೆಡ್ಡಿ ಹಾಗೂ ಬಿಜೆಪಿ ಮುಖಂಡ ಶ್ರೀಧರ್ ರೆಡ್ಡಿ ನಡುವೆ ಗಲಾಟೆ ನಡೆದಿದೆ. ಕಾರ್ತಿಕ್ ರೆಡ್ಡಿ ಅವರ ಮೇಲೆ ಶ್ರೀಧರ್ ರೆಡ್ಡಿ ಹಲ್ಲೆ ನಡೆಸಿದ್ದಾರೆ ಎಂಬುದಾಗಿ ಆರೋಪಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ. ‘ಕಾರ್ತಿಕ್ ರೆಡ್ಡಿ ಅವರು ತನ್ನ ಸ್ನೇಹಿತ ಸೋಮ ಅಲಿಯಾಸ್ ಜಿಮ್ ಸೋಮನ ಜತೆಗೆ ನಗರದ ಪಬ್‌ವೊಂದರಲ್ಲಿ ಪಾರ್ಟಿ ಮುಗಿಸಿಕೊಂಡು ವೈಟ್‌ಫೀಲ್ಡ್‌ನತ್ತ ತೆರಳುತ್ತಿದ್ದರು. ಅಷ್ಟರಲ್ಲಿ ಕರೆ ಮಾಡಿದ್ದ ಆರೋಪಿ ರಾಜೇಶ್, ಹೂಡಿಯಲ್ಲಿರುವ ಪಬ್‌ಗೆ ಬರುವಂತೆ ಕೋರಿದ್ದ. ಇಬ್ಬರೂ ಅಲ್ಲಿಗೆ ತೆರಳಿದ್ದರು’ ಎಂದು ಪೊಲೀಸರು ಹೇಳಿದರು.

‘ಪಬ್‌ನಲ್ಲಿದ್ದಾಗ ಶ್ರೀಧರ್ ರೆಡ್ಡಿ ಅವರು ರಾಜಕಾರಣ ಹಾಗೂ ಪಕ್ಷದ ವಿಚಾರವಾಗಿ ಮಾತನಾಡಲು ಆರಂಭಿಸಿದರು. ಅದಕ್ಕೆ ಆಕ್ಷೇಪಿಸಿ, ಪಕ್ಷದ ಬಗ್ಗೆ ಮಾತನಾಡುವುದಾದರೆ ಸ್ಥಳದಿಂದ ಹೋಗುವುದಾಗಿ ತಿಳಿಸಿದ್ದೆ. ಪಬ್‌ನಿಂದ ಹೊರಗಡೆ ಬಂದಾಗ ಬೆದರಿಕೆ ಹಾಕಿದ್ದರು. ನೀನು ಕಾರ್ಪೊರೇಟರ್ ಚುನಾವಣೆಗೆ ನಿಲ್ಲುತ್ತೀಯಾ. ನೀನು ನಿಂತರೆ ನಾನು ಒಂದು ನಾಯಿ ನಿಲ್ಲಿಸಿ ಚುನಾವಣೆ ಗೆಲ್ಲಿಸುತ್ತೇನೆ ಎಂದು ಶ್ರೀಧರ್ ಬೆದರಿಕೆ ಹಾಕಿದ್ದರು’ ‘ಚಾಲಕನಿಗೆ ಜಾತಿ ನಿಂದನೆ ಮಾಡಲಾಗಿದೆ. ಪಿಸ್ತೂಲ್‌ನಿಂದ ಶೂಟ್ ಮಾಡುವುದಾಗಿ ಬೆದರಿಕೆ ಹಾಕಲಾಗಿದೆ’ ಎಂದು ಕಾರ್ತಿಕ್ ರೆಡ್ಡಿ ಅವರು ಆಪಾದಿಸಿ ದೂರು ನೀಡಿದ್ದಾರೆ.

## ರಾಮಚಂದ್ರ ರಾವ್ ಮರು ನೇಮಕ

**ಬೆಂಗಳೂರು:** ಡಿಜಿಪಿ ಕೆ.ರಾಮಚಂದ್ರ ರಾವ್ ಅವರನ್ನು ಕಡ್ಡಾಯ ರಜೆಯ ಮೇಲೆ ಕಳುಹಿಸಿದ್ದ ಆದೇಶವನ್ನು ವಾಪಸ್ ಪಡೆದಿರುವ ರಾಜ್ಯ ಸರ್ಕಾರವು ಅವರಿಗೆ ಹುದ್ದೆ ನೀಡಿದೆ. ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯಕ್ಕೆ(-ಡಿಸಿಆರ್‌ಇ) ಮರು ನೇಮಕ ಮಾಡಲಾಗಿದೆ.



ಕೆ.ರಾಮಚಂದ್ರ ರಾವ್

ಚಿನ್ನ ಕಳ್ಳ ಸಾಗಣೆ ಪ್ರಕರಣದಲ್ಲಿ ನಟಿ ರನ್ಯಾ ರಾವ್ ಅವರನ್ನು ಬಂಧಿಸಲಾಗಿತ್ತು. ಅದಾದ ಮೇಲೆ ರಾಜ್ಯ ಸರ್ಕಾರವು ರಾಮಚಂದ್ರ ರಾವ್ ಅವರನ್ನು ದೀರ್ಘಕಾಲದ ರಜೆಯ ಮೇಲೆ ಕಳುಹಿಸಿತ್ತು. ಇದೀಗ ಅವರಿಗೆ ಜಾರಿ ನಿರ್ದೇಶನಾಲಯದ ಡಿಜಿಪಿ ಹುದ್ದೆ ನೀಡಿ ಆದೇಶಿಸಿದೆ.

ದುಬೈನಿಂದ ಚಿನ್ನವನ್ನು ಕಳ್ಳ ಸಾಗಣೆ ಮೂಲಕ ತರುತ್ತಿದ್ದ ರನ್ಯಾ ರಾವ್ ಅವರು ಮಲತಂದೆ ರಾಮಚಂದ್ರ ರಾವ್ ಅವರ ಹೆಸರು ಬಳಸಿಕೊಂಡು ವಿಮಾನ ನಿಲ್ದಾಣದಿಂದ ಹೊರಕ್ಕೆ ಬರುತ್ತಿದ್ದರು ಎಂಬ ಆರೋಪವಿದೆ.

ರಾಮಚಂದ್ರ ರಾವ್ ಪಾತ್ರದ ಕುರಿತು ತನಿಖೆ ನಡೆಸಿ, ವರದಿ ಸಲ್ಲಿಸುವಂತೆ ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಅವರಿಗೆ ಸರ್ಕಾರವು ಜವಾಬ್ದಾರಿ ವಹಿಸಿತ್ತು. ಅದಾದ ಮೇಲೆ ಕಡ್ಡಾಯ ರಜೆಯ ಮೇಲೆ ಕಳುಹಿಸಲಾಗಿತ್ತು. ಕಡ್ಡಾಯ ರಜೆಯ ಮೇಲೆ ಕಳುಹಿಸುವುದಕ್ಕೂ ಮುನ್ನ ರಾಜ್ಯ ಪೊಲೀಸ್ ಗೃಹ ನಿರ್ಮಾಣ ಮತ್ತು ಮೂಲಸೌಕರ್ಯ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿದ್ದರು.

## ₹47 ಕೋಟಿ ವರ್ಗಾವಣೆ: ಎಫ್‌ಐಆರ್

**ಬೆಂಗಳೂರು:** ಮಾರತ್‌ಹಳ್ಳಿಯ ಹೊರವರ್ತುಲ ರಸ್ತೆಯ ವಿಝಿಡ್‌ಎಂ ಫೈನಾನ್ಸ್ ಕಂಪನಿಯೊಂದರ ಖಾತೆಗೆ ಕನ್ನ ಹಾಕಿದ್ದ ವಂಚಕರು ₹47 ಕೋಟಿ ವರ್ಗಾವಣೆ ಮಾಡಿ ಕೊಂಡಿದ್ದಾರೆ. ಕಂಪನಿಯ ಹಿರಿಯ ವ್ಯವಸ್ಥಾಪಕ ಎಂ.ಪ್ರಕಾಶ್ ಅವರ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಕಂಪನಿಯ ಅನುಮತಿಯಿಲ್ಲದೇ ಕೆಲವು ಖಾತೆಗಳಿಗೆ ಆಗಸ್ಟ್ 6 ಮತ್ತು 7ರಂದು ಅನುಮಾನಾಸ್ಪದವಾಗಿ ಹಣ ವರ್ಗಾವಣೆ ಆಗಿದೆ. ಆಗಸ್ಟ್ 7ರಂದು ಸಂಜೆ ಇದು ಗಮನಕ್ಕೆ ಬಂದಿತ್ತು ಎಂದು ದೂರಿನಲ್ಲಿ ತಿಳಿಸಿದ್ದರು. ಸಿಸಿಬಿಯ ಸೈಬರ್ ಅಪರಾಧ ವಿಭಾಗಕ್ಕೆ ತನಿಖೆ ವರ್ಗಾವಣೆ ಮಾಡಲಾಗಿದೆ. ‘ಹಣವು ಅಕ್ರಮವಾಗಿ ಬೇರೆ ಬೇರೆ ಖಾತೆಗಳಿಗೆ ವರ್ಗಾವಣೆ ಆಗಿದ್ದು ಬ್ಯಾಂಕ್ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿತ್ತು. ಹಣ ಡ್ರಾ ಆಗದಂತೆ ಅವರು ಕ್ರಮ ಕೈಗೊಂಡಿದ್ದಾರೆ’ ಎಂದು ಮೂಲಗಳು ಹೇಳಿವೆ. ಸಿಬ್ಬಂದಿ ಹಣವನ್ನು ವರ್ಗಾವಣೆ ಮಾಡಿಲ್ಲ. ಐಪಿ ವಿಳಾಸವು ವಿದೇಶದ್ದು ಎಂಬುದು ಕಂಡುಬಂದಿದೆ.

## ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟದಿಂದ ಅಹೋರಾತ್ರಿ ಸತ್ಯಾಗ್ರಹ ಆರಂಭ

# ನಾಗಮೋಹನ್ ದಾಸ್ ವರದಿ ಜಾರಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪರಿಶಿಷ್ಟ ಜಾತಿಯವರಿಗೆ ಒಳ ಮೀಸಲಾತಿ ನೀಡುವ ಸಂಬಂಧ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ನೇತೃತ್ವದ ಆಯೋಗ ಸಲ್ಲಿಸಿದ ವರದಿಯನ್ನು ಅಧಿವೇಶನದಲ್ಲಿ ಅಂಗೀಕರಿಸಿ, ಒಳಮೀಸಲಾತಿ ಜಾರಿಗೊಳಿಸಬೇಕು ಎಂದು ಆಗ್ರಹಿಸಿ ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟವು ಸೋಮವಾರದಿಂದ ಅಹೋರಾತ್ರಿ ಸತ್ಯಾಗ್ರಹ ಆರಂಭಿಸಿದೆ.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿರುವ ಸತ್ಯಾಗ್ರಹದಲ್ಲಿ ನೂರಾರು ಜನರು ಭಾಗವಹಿಸಿದ್ದರು.

ನಾಗಮೋಹನ್ ದಾಸ್ ಅವರು ಸಲ್ಲಿಸಿರುವ ವರದಿ ಅವೈಜ್ಞಾನಿಕವಾಗಿದೆ ಎಂದು ಕೆಲವರು ವರದಿಯ ಪ್ರತಿಯನ್ನು ಸುಟ್ಟು ಹಾಕುವ ಮೂಲಕ ಸಂವಿಧಾನಕ್ಕೆ ಅಗೌರವ ಉಂಟು ಮಾಡಿದ್ದಾರೆ. ವರದಿಯಲ್ಲಿ ಸಣ್ಣಪುಟ್ಟ ಬದಲಾವಣೆ ಮಾಡಬೇಕಿದ್ದರೆ, ನಾಗಮೋಹನ್ ದಾಸ್ ಅವರ ಅಭಿಪ್ರಾಯ ಪಡೆದು, ಜಾರಿಗೊಳಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಒಕ್ಕೂಟದ ಪ್ರಧಾನ ಸಂಚಾಲಕ ಬಸವರಾಜ ಕೌತಾಳ್ ಮಾತನಾಡಿ, ‘ಒಳ ಮೀಸಲಾತಿ ಜಾರಿ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಅಧಿಕಾರಕ್ಕೆ ಬಂದ ಎಲ್ಲಾ ಸರ್ಕಾರಗಳು ನೊಂದ ಜನರಿಗೆ ಅನ್ಯಾಯವೆಸಗುತ್ತಾ ಬಂದಿವೆ. 35 ವರ್ಷಗಳಿಂದ ಹೋರಾಟ ನಡೆಯುತ್ತಿದೆ. ಸಮೀಕ್ಷಾ ವರದಿ ವೈಜ್ಞಾನಿಕವಾಗಿದ್ದು, ಸರ್ವ ದತ್ತಾಂಶಗಳನ್ನು ಒಳಗೊಂಡಿದೆ’ ಎಂದು ಹೇಳಿದರು.

‘ಅಧಿವೇಶನದಲ್ಲಿಯೇ ವರದಿಯನ್ನು ಅಂಗೀಕರಿಸಿ, ಜಾರಿಗೊಳಿಸಬೇಕು. ಬದಲಿಗೆ ಮತ್ತೊಂದು ಸಂಪುಟ ಉಪಸಮಿತಿ ರಚನೆ ಅಥವಾ ತಜ್ಞರ ಸಲಹೆ ನೆಪದಲ್ಲಿ ಮತ್ತಷ್ಟು ಕಾಲ ಮುಂದೂಡುವುದನ್ನು ಒಪ್ಪುವುದಿಲ್ಲ. ಆಗಸ್ಟ್ 16ರಂದು ಕರೆದಿರುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ತೀರ್ಮಾನ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು. ಒಳ ಮೀಸಲಾತಿ ಹೋರಾಟಗಾರರ ಮೇಲಿನ ಪ್ರಕರಣಗಳನ್ನು ಕೈ ಬಿಡಬೇಕು. ಮುಖ್ಯಮಂತ್ರಿ ಅವರು ಶಾಸನಬದ್ಧ ಅಧಿಕಾರ ಬಳಸಿ ಒಳ ಮೀಸಲಾತಿ ಜಾರಿಯಾಗುವಂತೆ ಮಾಡಬೇಕು ಎಂದು ಒತ್ತಾಯಿಸಿದರು.

ಧರಣಿಯಲ್ಲಿ ಮುಖಂಡರಾದ ಅಂಬಣ್ಣ ಅರೋಲಿಕರ್, ಕರಿಯಪ್ಪ ಗುಡಿಮನಿ, ಸಣ್ಣ ಮಾರೆಪ್ಪ ಭಾಗವಹಿಸಿದ್ದರು.



ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟದ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರದಿಂದ ಅಹೋರಾತ್ರಿ ಸತ್ಯಾಗ್ರಹ ಆರಂಭಿಸಿದರು —ಪ್ರಜಾವಾಣಿ ಚಿತ್ರ






















# ಯುರೋಪ್ ಅಮೆರಿಕಾ ಅಂಟಾರ್ಕ್ಟಿಕಾ ಆಸ್ಟ್ರೇಲಿಯಾ ಆಫ್ರಿಕಾ ಏಷ್ಯಾ

ಭಾರತ ಮತ್ತು ಇಡೀ ಜಗತ್ತು ಎಲ್ಲ ಏಳು ಖಂಡಗಳು ನಿಮನ್ನು ಕರೆಯುತ್ತಿವೆ...ನೀವು ಉತ್ತರಿಸಲು ಸಿದ್ಧರಾಗಿದ್ದೀರಾ? ಹಿಮಾಚ್ಛಾದಿತ ಪರ್ವತಗಳಿಂದ ತೊಡಗಿ ಬಂಗಾರದಂತೆ ಮಿರುಗುವ ಮರುಭೂಮಿಗಳವರೆಗೆ, ವನ್ಯ ಸಾರಿಗಳಿಂದ ತೊಡಗಿ ತೇಲುವ ಮಾರುಕಟ್ಟೆಗಳವರೆಗೆ, ಭವ್ಯ ದೇವಾಲಯಗಳಿಂದ ತೊಡಗಿ ಅದ್ಭುತ ನಗರಗಳವರೆಗೆ, ವೀಣಾ ವರ್ಲ್ಡ್‌ನ ಟೂರ್ಸ್ ಜಗತ್ತಿನಾದ್ಯಂತ ಎಲ್ಲೆಡೆ ಸುಗಮವಾಗಿ, ಸುರಕ್ಷಿತವಾಗಿ ಮತ್ತು ಆನಂದಮಯವಾಗಿ ನಡೆಯುತ್ತಿವೆ! ಕೇವಲ ಕಳೆದ 120 ದಿನಗಳಲ್ಲಿ 37,000 ಕ್ಕಿಂತಲೂ ಹೆಚ್ಚು ಸಂತುಷ್ಟ ಪ್ರವಾಸಿಗರು ನಮೊಂದಿಗೆ ತಮ ಕನಸಿನ ಪ್ರವಾಸಗಳನ್ನು ಪೂರೈಸಿದ್ದಾರೆ. ಈಗ ನಾವು ಎಲ್ಲ 7 ಖಂಡಗಳಾದ್ಯಂತ, ನಮ ಬ್ರ್ಯಾಂಡ್‌ನ್ಯೂ ಟೂರ್ಸ್ ಹಾಗೂ ಕಸ್ಟಮೈಜ್ಡ್ ಹಾಲಿಡೇಸ ಸಾದರಪಡಿಸುತ್ತಿದ್ದೇವೆ, ನಂಬಲಸಾಧ್ಯವೆನಿಸುವ ಬೆಲೆಗಳಲ್ಲಿಫ಼ಿ! ಹೌದು, ಎಂದಿನಂತೆ ವೀಣಾ ವರ್ಲ್ಡ್‌ನ ರೀತಿಯಲ್ಲಿ . ಆಲ್‌ಇನ್‌ಕ್ಲೂಜಿವ್. ಯಾವುದೇ ಸುಪ್ತ ವೆಚ್ಚಗಳಿಲ್ಲ . ಆಪ್ಷನಲ್ ಸೈಟ್‌ಸೀಯಿಂಗ್‌ಗೆ ಯಾವುದೇ ಹೆಚ್ಚುವರಿ ಶುಲ್ಕವಿರುವುದಿಲ್ಲ . ನಿಮಗೆ ಅವಶ್ಯವೆನಿಸುವ ಎಲ್ಲವನ್ನೂ ಆಗಲೇ ಸೇರ್ಪಡೆಗೊಳಿಸಲಾಗಿದೆ. ಆಯಿಲ್ ಬೆಲೆಗಳು ಏರುತ್ತಿದ್ದರೂ, ಫ್ಲೈಟ್‌ನಟ್‌ನ ದರಗಳು ಹೆಚ್ಚಾಗುತ್ತಿದ್ದರೂ, ಹೋಟೆಲ್ ದರಗಳು ದುಬಾರಿಯಾಗುತ್ತಿದ್ದರೂ, ವೀಣಾ ವರ್ಲ್ಡ್ ಇಡೀ ಜಗತ್ತನ್ನು ನಿಮಗೆ ಕನಿಷ್ಠ ದರಗಳಲ್ಲಿ ಒದಗಿಸುತ್ತಿದೆ. ಏಕೆಂದರೆ, ಜಗತ್ತು ಕೈಗೆಟಕುವಂತೆ ಮಾಡುವುದೇ ನಮ ವಾಗ್ದಾನವಾಗಿದೆ. ಬನ್ನಿಫ಼ಿ, ಒಮೆ ಟ್ರೈಮಾಡಿ ನೋಡಿ; ಇದು ನಿಜವೆಂದು ಸದಾ ನಿಮಗೆ ನಂಬಿಕೆಯಾಗುವುದು ಖಂಡಿತ!

## ಯುರೋಪ್ ಕೇವಲ ₹ 1.5 ಲಕ್ಷದಲ್ಲಿ

6 ದಿನಗಳು, 5 ದೇಶಗಳು ಸ್ವಿಟ್ಜರ್‌ಲ್ಯಾಂಡ್,ಫ್ರಾನ್ಸ್ , ಆಸ್ಟ್ರಿಯಾ, ಲಿಕ್ಟನ್‌ಸ್ಟೈನ್ ಮತ್ತು ಜರ್ಮನಿ

## ಜಪಾನ್ ಕೇವಲ ₹ 1.75 ಲಕ್ಷದಲ್ಲಿ

5 ದಿನಗಳು - ಒಸಾಕಾ, ಟೋಕಿಯೊ, ಕ್ಯೋಟೊ ಮತ್ತು ಇನ್ನೂ ಬಹಳಷ್ಟು

## ಆಸ್ಟ್ರೇಲಿಯಾ ಕೇವಲ ₹ 2 ಲಕ್ಷದಲ್ಲಿ

7 ದಿನಗಳು - ಸಿಡ್ನಿ , ಕ್ಯಾನ್ಬೆರಾ, ಮೆಲ್ಬರ್ನ್, ಮೌಂಟ್ ಬುಲರ್ (ಒಂದು ವಿಹಂಗಮ ಹೆಲಿಕಾಪ್ಟರ್ ರೈಡ್ ಕೂಡ ಸೇರಿದೆ!)

## ಥೈಲ್ಯಾಂಡ್ ಕೇವಲ ₹ 50,000ದಲ್ಲಿ , ನೇಪಾಳ ಕೇವಲ ₹ 75,000ದಲ್ಲಿ , ಇಂಡಿಯಾ ಟೂರ್ಸ್ ಕೇವಲ ₹ 25,000ದಿಂದ ಆರಂಭ, ಫ್ಲೈಟ್ಸ್ ಕೂಡ ಸೇರಿವೆ!

ಇನ್ನೇಕೆ ಕಾಯುತ್ತಿರುವಿರಿ?
1,000ಕ್ಕೂ ಹೆಚ್ಚು ಪ್ರವಾಸಿಗರು ಈ ಸಮಯದಲ್ಲಿ ವೀಣಾ ವರ್ಲ್ಡ್‌ನೊಂದಿಗೆ ಜಗತ್ತಿನಾದ್ಯಂತ ಸುತ್ತಾಡುತ್ತಿದ್ದಾರೆ.

## ಚಲೋ, ಬ್ಯಾಗ್ ಭರೋ, ನಿಕಲ್ ಪಡೋ! ಜಗತ್ತನ್ನು ಆವಿಷ್ಕರಿಸಿರಿ ವೀಣಾ ವರ್ಲ್ಡ್‌ನೊಂದಿಗೆ

ನೀವು ನಮ್ಮೊಂದಿಗೆ ನಿಶ್ಚಿಂತರಾಗಿ ಪ್ರಯಾಣಿಸಬಹುದು; ಏಕೆಂದರೆ, ಪ್ರತೀ ಟೂರ್‌ನಲ್ಲಿ ನಿಮ್ಮೊಂದಿಗೆ ವೀಣಾ ವರ್ಲ್ಡ್ ಟೂರ್ ಮ್ಯಾನೇಜರ್ ಇರುವರು. ಅಲ್ಲದೆ, 1000+ ಎಕ್ಸ್‌ಪರ್ಟ್ಸ್ ಇರುವ ಸುದೃಢ ವೀಣಾ ವರ್ಲ್ಡ್ ಟೀಮ್ 24x7 ನಿಮ್ಮ ಸಹಾಯಕ್ಕಿರುತ್ತದೆ. ನಿಮ್ಮ ಆನಂದದ ಬಗ್ಗೆ ನಾವು ಸದಾ ಕಾಳಜಿ ವಹಿಸುತ್ತೇವೆ; ಏಕೆಂದರೆ, ನೀವು ಮನೆಗೊಯ್ಯುವ ಪ್ರತಿಯೊಂದು ಮಂದಹಾಸ ನಮ್ಮ ಪಾಲಿಗೆ ನಿಮ್ಮ ಅಭಿಪ್ರಾಯವಾಗಿರುತ್ತದೆ. ಯಾವಾಗಲೂ, ಈ ಧ್ಯೇಯವೇ ನಮ್ಮ ಪ್ರಯಾಣದ ಅಂತಿಮ ಗುರಿಯಾಗಿರುತ್ತದೆ.



12 ವರ್ಷಗಳಲ್ಲಿ 8,65,000ಕ್ಕಿಂತಲೂ ಹೆಚ್ಚು ಪ್ರವಾಸಿಗರು! ಭಾರತದಿಂದ ಜಗತ್ತಿನಾದ್ಯಂತ - ಇದೇ ವೀಣಾ ವರ್ಲ್ಡ್ ಗಳಿಸಿರುವ ವಿಶ್ವಾಸಪಾತ್ರತೆ. ನಮ್ಮ ಜನಪ್ರಿಯತೆಗೆ ಇದಕ್ಕಿಂತ ಉತ್ತಮ ಪುರಾವೆ ಬೇರೇನು?

ವೀಣಾ ವರ್ಲ್ಡ್ ಅಂದರೆ ಡಿಸ್ಕೌಂಟ್ಸ್ ಇಲ್ಲ ! ಸುಪ್ತ ವೆಚ್ಚಗಳಿಲ್ಲ ! ಆಪ್ಷನಲ್ಸ್ ಇಲ್ಲ ! ಕೇವಲ 100% ಆಲ್‌ಇನ್‌ಕ್ಲೂಜಿವ್ ಹಾಲಿಡೇಸ್, ಯಾವಾಗಲೂ.

ಸ್ಪೆಷಲ್ ಟೂರ್ಸ್ ಸ್ಪೆಷಲ್ ಬೆಲೆ
ಶ್ರೀಲಂಕಾ 6 ಈಬಥಾ
**69000**
ವಿಮೆನ್ಸ್ ಸ್ಪೆಷಲ್ - ಅಕ್ಟೋಬರ್ 3
ಸೀನಿಯರ್ಸ್ ಸ್ಪೆಷಲ್ - 19, 23 ಸೆಪ್ಟೆಂಬರ್
ಆಲ್-ಇನ್‌ಕ್ಲೂಜಿವ್
ಮುಂಬಯಿಯಿಂದ ಮುಂಬಯಿಗೆ

ವಿದೇಶ ಪ್ರವಾಸಕ್ಕೆ ಹೋಗುತ್ತಿರುವಿರಾ? ವೀಣಾ ವರ್ಲ್ಡ್ ಫಾರೆಕ್ಸ್ ಅಧಿಕೃತ ಮನಿ ಎಕ್ಸ್‌ಚೇಂಜರ್‌ನಿಂದ ನಿಮ್ಮ ಫಾರಿನ್ ಎಕ್ಸ್ ಚೇಂಜ್ ಪಡೆಯಿರಿ.

ಫ್ಯಾಮಿಲಿ ಅಥವಾ ಫ್ರೆಂಡ್ಸ್ ಗ್ರೂಪ್ ಇದೆಯೆ? ವೀಣಾ ವರ್ಲ್ಡ್‌ನೊಂದಿಗೆ ನಿಮ್ಮದೇ ಆದ ಎಕ್ಸ್‌ಕ್ಲೂಜಿವ್ ಗ್ರೂಪ್ ಟೂರ್ ಪ್ಲ್ಯಾನ್ ಮಾಡಿ; ನಿಮಗೇ ಮೀಸಲಾಗಿರುವ ಟೂರ್ ಮ್ಯಾನೇಜರ್ ಕೂಡ ನಿಮ್ಮೊಂದಿಗಿರುವರು!

ಟೂರ್ ಯಶಸ್ವಿಯಾಗಿ ಮುಗಿಯಿತೇ? ಏನಾದರೂ ಎಕ್ಸ್‌ಟ್ರಾ ಪ್ಲ್ಯಾನ್ ಮಾಡುತ್ತಿದ್ದೀರಾ? ಪ್ರಿ ಆ್ಯಂಡ್ ಪೋಸ್ಟ್ ಟೂರ್ ಹಾಲಿಡೇ ಪ್ಯಾಕೇಜಸ್ ಲಭ್ಯವಿವೆ-ಪೋಸ್ಟ್ ಟೂರ್-ಹಾಲಿಡೇಸ್‌ಗಾಗಿ ಅಥವಾ ಜಾಯ್ನಿಂಗ್-ಲೀವಿಂಗ್ ಗೆಸ್ಟ್ಸ್‌ಗಾಗಿ.

**Book Online** 365 days **24x7** visit veenaworld.com

2026 ವೀಣಾ ವರ್ಲ್ಡ್ **USA** 2025 ರ ಬೆಲೆಯಲ್ಲಿ ಬುಕಿಂಗ್ಸ್ ತೆರೆದಿವೆ



















**ಮೈ ಹೂಂ ನ!**

ಟೂರ್‌ನಲ್ಲಿ ವೀಣಾ ವರ್ಲ್ಡ್ ಟೂರ್ ಮ್ಯಾನೇಜರ್ ನಿಮ್ಮ ಸೇವೆಗಿರುವುದರಿಂದ, ಜಂಜಾಟರಹಿತರಾಗಿ ಪ್ರವಾಸ ಮಾಡಿರಿ.

## ವೀಣಾ ವರ್ಲ್ಡ್ ಆಲ್-ಇನ್‌ಕ್ಲೂಸಿವ್ ಗ್ರೂಪ್ ಟೂರ್ಸ್‌ನಿಂದ ಆಯ್ಕೆ ಮಾಡಿರಿ. ಭಾರತ ಮತ್ತು ವಿಶ್ವಾದ್ಯಂತದ ಇನ್ನೂ ಅನೇಕ ರೋಚಕ ಟೂರ್ಸ್ ಬಗ್ಗೆ veenaworld.com ನಲ್ಲಿ ತಿಳಿದುಕೊಳ್ಳಿರಿ.

ನೀವು ಬೆಂಗಳೂರು/ಮುಂಬಯಿಯಿಂದ ಆರಂಭಗೊಳ್ಳುವ (Ex-Bengaluru/Mumbai)ನಮ್ಮ ಟೂರ್ಸ್‌ಗೆ ಸೇರಿಕೊಳ್ಳಬಹುದು ಅಥವಾ ಭಾರತದ ಇಲ್ಲವೇ ವಿಶ್ವದ ಯಾವುದೇ ಸ್ಥಳದಿಂದ ಜಾಯ್ನಿಂಗ್ ಆ್ಯಂಡ್ ಲೀವಿಂಗ್ (J&L) ಟೂರ್ಸ್‌ಗೆ ಸೇರಿಕೊಳ್ಳಬಹುದು. ಎಲ್ಲ ಟೂರ್ ಬೆಲೆಗಳನ್ನು ಸಾವಿರ ರೂಪಾಯಿಗಳಲ್ಲಿ ತೋರಿಸಲಾಗಿದೆ. ಈ ಕೆಳಗಿನ ಕೋಷ್ಟಕದಲ್ಲಿ ಟೂರ್ ನೇಮ್, Ex-Bengaluru/Mumbai ಟೂರ್ ಪ್ರೈಸ್ (ಏರ್‌ಫೇರ್, ವಿಸಾ ಮತ್ತು ಇನ್ಶ್ಯೂರೆನ್ಸ್ ಸೇರಿವೆ) ಮತ್ತು ಜಾಯ್ನಿಂಗ್ ಆ್ಯಂಡ್ ಲೀವಿಂಗ್ ಟೂರ್ ಪ್ರೈಸ್ (ಏರ್‌ಫೇರ್, ವಿಸಾ ಮತ್ತು ಇನ್ಶ್ಯೂರೆನ್ಸ್ ಸೇರಿಲ್ಲ) ತೋರಿಸಲಾಗಿದೆ. J&L ಅತಿಥಿಗಳಿಗೆ ಟಿಕೆಟ್, ವಿಸಾ ಮತ್ತು ಇತರ ಸೇವೆಗಳಿಗೆ ಸಂಬಂಧಪಟ್ಟಂತೆ ಸಹಾಯಕ್ಕಾಗಿ ವೀಣಾ ವರ್ಲ್ಡ್ ಟೀಮ್ ಲಭ್ಯವಿರುತ್ತದೆ. ಫಾರಿನ್ ಎಕ್ಸ್‌ಚೇಂಜ್‌ಗಾಗಿ, ವೀಣಾ ವರ್ಲ್ಡ್‌ನ ಆರ್‌ಬಿಐ-ಅಧಿಕೃತ ಫಾರೆಕ್ಸ್ ಸರ್ವೀಸಸ್ ಬಳಸಿಕೊಳ್ಳಿ.

### ಸೌತ್ ಈಸ್ಟ್ ಮತ್ತು ಫಾರ್ ಈಸ್ಟ್ ಏಷ್ಯಾ

| ಟೂರ್ ನೇಮ್ | ಉಙಖಇಚಿಟಜಿ | ಒ-ಔ |
|---|---|---|
| ಸಿಂಗಪೂರ್ ಥೈಲ್ಯಾಂಡ್ ಮಲೇಷ್ಯಾ ಹಾಂಗ್ ಕಾಂಗ್ (13D) | 245K-250K | -- |
| ಸಿಂಗಪೂರ್ ಥೈಲ್ಯಾಂಡ್ ಮಲೇಷ್ಯಾ (10D) | 170K-185K | 135K-150K |
| ಸಿಂಗಪೂರ್ ಮಲೇಷ್ಯಾ ಬಾಲಿ (10D) | 200K-210K | -- |
| ಸಿಂಗಪೂರ್ ಥೈಲ್ಯಾಂಡ್ (8D) | 150K-155K | -- |
| ಸಿಂಗಪೂರ್ (4D/8D Bali) | 114K-185K | 91K-102K |
| ಥೈಲ್ಯಾಂಡ್ (4D/6D/15D ) | 50K-175K | 30K-66K |
| ಬ್ಯಾಂಕಾಕ್ ಪಟ್ಟಾಯ ಪೂಕೆಟ್ ಕ್ರಾಬೀ (8D) | 112K-125K | -- |
| ಬೆಸ್ಟ್ ಆಫ್ ಬಾಲಿ (7D) | 130K-140K | 95K-105K |
| ವಿಯೆಟ್ನಾಂ (5D/8D/13D ) | 100K-225K | -- |
| ವಿಯೆಟ್ನಾಂ ಕಾಂಬೋಡಿಯಾ (11D) | 195K-205K | -- |
| ವಿಯೆಟ್ನಾಂ ಬಾಲಿ (11D) | 195K-205K | -- |
| ಮ್ಯಾನ್ಮಾರ್ ಲಾವೋಸ್ (12D) | 250K-260K | -- |
| ಫಿಲಿಪ್ಪೀನ್ಸ್ ಮನಿಲಾ ಸೀಬೂ (8D) | 201000 | -- |
| ಏಡಿ ಮಕಾವು ಶೆಂಜೆನ್ (7D) | 170K-185K | 129K-145K |
| ಜಪಾನ್ (5D/7D/9D/11D/13D/15D/17D) | 175K-550K | 125K-500K |
| ಜಪಾನ್ ಕೊರಿಯಾ (12D) | 450K-460K | 400K-410K |
| ಜಪಾನ್ ಕೊರಿಯಾ ತೈವಾನ್ ಚೀನಾ (23D) | 440K-450K | 380K-390K |
| ಕೊರಿಯಾ ತೈವಾನ್ (10D) | 350K-360K | 300K-310K |

### ಆಸ್ಟ್ರೇಲಿಯಾ ನ್ಯೂಜಿಲ್ಯಾಂಡ್ ಅಮೆರಿಕಾ ಆಫ್ರಿಕಾ

| ಟೂರ್ ನೇಮ್ | ಉಙಆಛಿಜಜ್ಞ | ಒ-ಔ |
|---|---|---|
| ಆಸ್ಟ್ರೇಲಿಯಾ (7D/9D/10D/11D/13D/15D) | 200K-495K | 135K-420K |
| ನ್ಯೂಜಿಲ್ಯಾಂಡ್ (7D/10D/15D/20D) | 290K-600K | 200K-510K |
| ಆಸ್ಟ್ರೇಲಿಯಾ ನ್ಯೂಜಿಲ್ಯಾಂಡ್ (11D/17D) | 350K- 565K | 250K-465K |
| ಅಮೆರಿಕನ್ ಎಕ್ಸ್‌ಪ್ಲೋರರ್ (21D) | 760K-770K | 630K-640K |
| ಅಮೆರಿಕಾ (12D/13D/15D/18D) | 450K-670K | 330K-540K |
| ಖಿಖಿಅ ಈಸ್ಟ್ ಕೋಸ್ಟ್ ವಿಥ್ ಶಿಕಾಗೊ ಒರ್ಲ್ಯಾಂಡೊ (10D) | 315K-330K / 475K-485K | 190K-205K / -- |
| ಖಿಖಿಅ ವೆಸ್ಟ್ ಕೋಸ್ಟ್ (7D) | 320K-330K | 215K-225K |
| ಕ್ಯಾಲಿಫೋರ್ನಿಯಾ ಕಾರ್ನಿವಲ್ (10D) | 425K-435K | 285K-300K |
| ಬೆಸ್ಟ್ ಆಫ್ ಹವಾಯಿ ಮೆಕ್ಸಿಕೊ (13D) | 785K-800K | -- |
| ಸೌತ್ ಅಮೆರಿಕಾ ಕಾರ್ನಿವಲ್ (21D) | 1425000 | -- |
| ಅಂಟಾರ್ಕ್ಟಿಕಾ (13D) | 1345000 | 1145000 |
| ಬೆಸ್ಟ್ ಆಫ್ ಕೆನ್ಯಾ (8D) | 248K-260K | 200K-212K |
| ಬೆಸ್ಟ್ ಆಫ್ ಸೌತ್ ಆಫ್ರಿಕಾ (9D) | 255K-270K | 210K-225K |
| ಸೌತ್ ಆಫ್ರಿಕಾ ಕೆನ್ಯಾ ವಿಕ್ಟೋರಿಯಾ ಫಾಲ್ಸ್ (15D) | 450K-460K | -- |
| ಕೆನ್ಯಾ ಮಡಗಾಸ್ಕರ್ (11D) | 350000 | -- |
| ಮಾರಿಶಸ್ (7D) | 155K-160K | 105K-120K |
| ಮಾರಿಶಸ್ ಸೀಶೆಲ್ಸ್ (8D) | 225K-235K | -- |
| ಟಾಂಜಾನಿಯಾ ಝಾಂಝಿಬಾರ್ (9D) | 375K-385K | -- |

### ನೇಪಾಳ ಭೂತಾನ್ ಶ್ರೀಲಂಕಾ ದುಬೈ ಭಾರತ

| ಟೂರ್ ನೇಮ್ | ಉಙಖಇಚಿಟಜಿ | ಒ-ಔ |
|---|---|---|
| ನೇಪಾಳ (5D/6D/9D/8D/11D/13D) | 55K- 150K | 35K-130K |
| ಭೂತಾನ್ (7D/9D/12D/15D) | 75K-150K | 55K-120K |
| ಶ್ರೀಲಂಕಾ (5D/7D/9D/11D/13D) | 75K-170K | 50K-130K |
| ಶ್ರೀಲಂಕಾ ಮಾಲ್ಡೀವ್ಸ್ (9D/11D) | 175K-205K | -- |
| ದುಬೈ ಅಬುಧಾಬಿ (5D/7D) | 85K-140K | 60K-115K |
| ಲೇಹ್ ಲಡಾಖ್ (7D/9D) | 65K-85K | 44K-60K |
| ಕಾಶ್ಮೀರ (5D to 8D) | 30K-105K | 35K-90K |
| ಶಿಮ್ಲಾ ಮನಾಲಿ (6D/8D) | 35K-55K | 28K-47K |
| ಲಾಹೌಲ್ ಸ್ಪಿತಿ ಚಂದ್ರತಾಲ್ (12D) | 75K-80K | 63K-68K |
| ನೈನಿತಾಲ್ ಮಸೂರಿ ಹರಿದ್ವಾರ್ ಕಾರ್ಬೆಟ್ ಪಾರ್ಕ್ (6D/8D) | 45K-65K | 38K-58K |
| ಚಾರ್‌ಧಾಮ್ (7D/9D/11D/13D) | 60K-100K | |
| ರಾಜಸ್ತಾನ (4D/6D/8D/10D/17D) | 25K-97K | 18K-90K |
| ಗುಜರಾತ್ (5D/7D/10D/13D/16D) | 30K-95K | 23K-85K |
| ಮಹಾರಾಷ್ಟ್ರ (8D to 30D) | -- | 70K-250K |
| ಮಧ್ಯಪ್ರದೇಶ (5D/8D/10D/13D/17D) | 35K-106K | 28K-97K |
| ವಾರಣಾಸಿ ಅಯೋಧ್ಯಾ ಲಕ್ನೋ (8D) | 60K-70K | 52K-62K |
| ಕರ್ನಾಟಕ (5D/6D/8D/10D/15D) | 44K-105K | 36K-95K |
| ಕೇರಳ (4D/6D/7D/8D/9D/10D/15D) | 25K-105K | 17K-95K |
| ಅಂಡಮಾನ್ (5D/7D) | 60K-80K | 37K-60K |

### ಯುರೋಪ್ - ವೆಸ್ಟರ್ನ್, ಈಸ್ಟರ್ನ್, ನಾರ್ಡರ್ನ್, ಮೆಡಿಟರೇನಿಯನ್

| ಟೂರ್ ನೇಮ್ | ಉಙಆಛಿಜಜ್ಞ | ಒ-ಔ |
|---|---|---|
| ಯುರೋಪಿಯನ್ ಮ್ಯಾಜಿಕ್ (19D) | 485K-495K | 405K-415K |
| ಯುರೋಪಿಯನ್ ಜ್ಯುಯೆಲ್ಸ್ (15D) | 385K-395K | 305K-315K |
| ಯುರೋಪಿಯನ್ ವಂಡರ್ಸ್ (13D) | 320K-330K | 255K-275K |
| ಯುರೋಪಿಯನ್ ಹೈಲೈಟ್ಸ್ (11D) | 310K-320K | 230K-240K |
| ಯುರೋಪಿಯನ್ ಸ್ಪ್ಲೆಂಡರ್ಸ್ (10D) | 260K-270K | 195K-205K |
| ಯುರೋಪಿಯನ್ ಪನೋರಮಾ (8D) | 240K-250K | 175K-185K |
| ಸ್ವಿಸ್ ಪ್ಯಾರಿಸ್ ಆಸ್ಟ್ರಿಯಾ ಜರ್ಮನಿ ಲಿಕ್ಟನ್‌ಸ್ಟೈನ್ (6D) | 150K-160K | 85K-95K |
| ಲಂಡನ್ ಪ್ಯಾರಿಸ್ ಸ್ವಿಸ್ ಇಟಲಿ (9D) | 275K-285K | 195K-205K |
| ಸ್ವಿಸ್ ಪ್ಯಾರಿಸ್ ಲಂಡನ್ (11D) | 345K-355K | 265K-275K |
| ಸ್ವಿಸ್ ಪ್ಯಾರಿಸ್ ಆಸ್ಟ್ರಿಯಾ (11D) | 325K-335K | 255K-265K |
| ಸ್ವಿಸ್ ಪ್ಯಾರಿಸ್ ಇಟಲಿ / ಸ್ವಿಸ್ ಆಸ್ಟ್ರಿಯಾ ಇಟಲಿ (11D) | 305K-315K | 235K-242K |
| ಸ್ವಿಸ್ ಪ್ಯಾರಿಸ್/ಸ್ವಿಸ್ ಆಸ್ಟ್ರಿಯಾ (8D) | 262K-280K | 192K-200K |
| ಸ್ವಿಸ್ ಪ್ಯಾರಿಸ್ ಆ್ಯಮ್‌ಸ್ಟರ್‌ಡ್ಯಾಮ್ ಬ್ರಸೆಲ್ಸ್ (8D) | 225K-235K | 155K-165K |
| ಇಟಲಿ (8D) | 250K-260K | 180K-190K |
| ಸ್ವಿಟ್ಜರ್‌ಲ್ಯಾಂಡ್ (7D/10D) | 255K-340K | 185K-280K |
| ಬೆಸ್ಟ್ ಆಫ್ ಆಸ್ಟ್ರಿಯಾ (8D) | 255K-260K | 180K-190K |
| ಇಂಗ್ಲೆಂಡ್ ಸ್ಕಾಟ್‌ಲ್ಯಾಂಡ್ ಐರ್‌ಲ್ಯಾಂಡ್ ವೇಲ್ಸ್ ಲಂಡನ್ (15D) | 400K-417K | 325K-342K |

| ಟೂರ್ ನೇಮ್ | ಉಙಆಛಿಜಜ್ಞ | ಒ-ಔ |
|---|---|---|
| ಸ್ಕ್ಯಾಂಡಿನೇವಿಯಾ (10D) | 324K-340K | 254K-270K |
| ಸ್ಕ್ಯಾಂಡಿನೇವಿಯಾ ಐಸ್‌ಲ್ಯಾಂಡ್ ನಾರ್ದರ್ನ್ ಲೈಟ್ಸ್ (14D/15D) ಐಸ್ ಬ್ರೇಕರ್ | 530K-580K | -- |
| ಸ್ಪೇನ್ (10D) | 270K-280K | 200K-210K |
| ಸ್ಪೇನ್ ಪೋರ್ಚುಗಲ್ (13D/16D ಮೊರಾಕೊ) | 315K-375K | 200K-290K |
| ಸ್ಪೇನ್ ಏಥನ್ಸ್ ಸಂಟೊರಿನಿ ರ್‍ಹೋಡ್ಸ್ (8D) | 270K-280K | 210K-220K |
| ಗ್ರೀಸ್ ಸೈಪ್ರಸ್ (9D) | 295000 | -- |
| ಈಜಿಪ್ಟ್ ಗ್ರೀಸ್ ಸೈಪ್ರಸ್ (12D) | 335000 | -- |
| ಬೆಸ್ಟ್ ಆಫ್ ಈಜಿಪ್ಟ್ (9D) | 210K-220K | -- |
| ಆಲ್ ಆಫ್ ಈಸ್ಟರ್ನ್ ಯುರೋಪ್ (17D) | 385K-395K | 310K-320K |
| ವಿಯೆನ್ನಾ ಪ್ರಾಗ್ ಬುಡಾಪೆಸ್ಟ್ (8D) | 235K-245K | 155K-165K |
| ಜಾರ್ಜಿಯಾ ಆರ್ಮೇನಿಯಾ (8D) | 180K-190K | 115K-125K |
| ಎಸ್ಟೋನಿಯಾ ಲಾಟ್ವಿಯಾ ಲಿಥುವೇನಿಯಾ (8D) | 235K-245K | 165K-175K |
| ರೊಮೇನಿಯಾ ಬಲ್ಗೇರಿಯಾ ಸರ್ಬಿಯಾ ನಾರ್ತ್ ಮಸೆಡೋನಿಯಾ (12D) | 305K-315K | 245K-255K |
| ಟ್ಯುನೀಸಿಯಾ ಮಾಲ್ಟಾ ಸಿಸಿಲಿ (10D) | 335K-345K | -- |
| ರಷ್ಯಾ (7D) | 180K-190K | 130K-140K |
| ಉಜ್ಬೆಕಿಸ್ತಾನ್ ಕಝಖ್‌ಸ್ತಾನ್ ಕಿರ್ಗಿಜ್‌ಸ್ತಾನ್ (7D) | 220K-230K | 165K-175K |
| ಬೆಸ್ಟ್ ಆಫ್ ಬಾಕು (7D) | 145K-155K | 110K-120K |










## ವೀಣಾ ವರ್ಲ್ಡ್ ಕಾರ್ಪೊರೇಟ್ ಟೂರ್ಸ್ (MICE)

ಮೀಟಿಂಗ್ಸ್ • ಇನ್ಸೆಂಟಿವ್ಸ್ • ಕಾನ್‌ಫರೆನ್ಸಸ್ • ಇವೆಂಟ್ಸ್
ನಿಮ್ಮ ಸಂಸ್ಥೆಗಾಗಿ ಕಾನ್‌ಫರೆನ್ಸಸ್, ಗಾಲಾ ಡಿನ್ನರ್ಸ್, ಅವಾರ್ಡ್ ಫಂಕ್ಷನ್ಸ್, ಟೀಮ್-ಬಿಲ್ಡಿಂಗ್ ಚಟುವಟಿಕೆಗಳು ಮತ್ತು ಇನ್ನೂ ಬಹಳಷ್ಟನ್ನು ಹಮ್ಮಿಕೊಳ್ಳಿ, ನಾವು ಶಾಲೆ/ಕಾಲೇಜುಗಳಿಗಾಗಿ ಸ್ಟಡಿ ಟೂರ್ಸ್, ಕ್ಲಬ್ ಹಾಗೂ ಅಸೋಸಿಯೇಶನ್‌ಗಳಿಗಾಗಿ ಟೂರ್ಸ್, ಡೆಸ್ಟಿನೇಶನ್ ವೆಡ್ಡಿಂಗ್ಸ್ ಮತ್ತು ಇನ್ನೂ ಬಹಳಷ್ಟನ್ನು ಆಯೋಜಿಸುತ್ತೇವೆ!







ಪರ್ಫೆಕ್ಟ್ ಉಡುಗೊರೆ ನೀಡಲು ಬಯಸುತ್ತಿದ್ದೀರಾ? ಆನಂದವನ್ನು ಉಡುಗೊರೆಯಾಗಿ ನೀಡಿ!
ವೀಣಾ ವರ್ಲ್ಡ್ ಗಿಫ್ಟ್ ಕಾರ್ಡ್ಸ್ ಈಗ ಲಭ್ಯವಿವೆ! ಖರೀದಿಸಲು ಸ್ಕ್ಯಾನ್ ಮಾಡಿ




**Travel Now Pay Later!**
EMI options available (3 months to 24 months) subject to EMI partner approval. T&C apply

Group tour price includes return airfare (Ex-Bengaluru/Mumbai), transport, accommodation, all meals: breakfast, lunch, dinner, sightseeing with entrance fees, driver-guide tips, services of a Tour Manager, VISA fee (except for Free Visa Countries) and travel insurance*. J&L tours exclude airfare, visa & insurance. USA tours are for valid USA visa holders only.

Jayanagar: Sharada Plaza, 9th Main Rd, 3rd block, Jayanagar, Opp. SBI, Bengaluru 560011, Call: 887 997 2217
Indiranagar: 2005, 100 feet Road, HAL 2nd Stage, Indiranagar, Bengaluru 560038, Call: 887 997 9500
Mysore, Udupi, Mangaluru **Call: 865 575 5281**
Book Online 24x7 from anywhere on veenaworld.com
Call: 1800 313 5555 I 1800 22 7979

Applications invited for Sales Partners/ Agents across Southern India WhatsApp on : 887 997 9733

**VEENA WORLD**
Travel. Explore. Celebrate Life.

Sales Partners: Karnataka: Veena World Sales Partners: Karnataka: Vijayapur 9980857595 • Hubli 7204411007 Belgaum-College Rd 9980428880 • Belgaum-Goaves Circle 7338685500 Bengaluru-Vijayanagar 9036610005 • Malleshwaram 9663920469 Dharwad 9036715969 • Chikodi 9448627771 • Tamil Nadu: Coimbatore 9994666522 • For MICE Corporate Tours 887 997 2245

Mumbai Online 887 997 2221 • New Delhi 887 997 2700 • Hyderabad 887 997 9700 • Kolkata 887 997 2288
Bengaluru Jayanagar 887 997 2217 • Bengaluru Indiranagar 887 997 9500 • Ahmedabad 887 997 7200 • Indore 887 997 9800

Tour price is per person and on twin sharing basis. These tour prices are nett and no discount is applicable. At the time of booking, tour price to be paid in full INR by UPI/NEFT/RTGS/Cheque, in the name of 'Veena Patil Hospitality Pvt. Ltd.' No cash transactions at Veena World. Government taxes apply. Any increase in YQ taxes, airport taxes, VISA fees, surcharges (if any) will have to be borne by the travellers. T&C apply.

## ಸಮಗ್ರ ಸಾಹಿತ್ಯ ಸಂಪುಟ ಬಿಡುಗಡೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಆಗಸ್ಟ್ 13ರಂದು ಬೆಳಿಗ್ಗೆ 11 ಗಂಟೆಗೆ ಕನ್ನಡ ಭವನದ ನಯನ ರಂಗಮಂದಿರದಲ್ಲಿ ಸಾಹಿತಿಗಳಾದ ಸಿ.ಕೆ. ವೆಂಕಟರಾಮಯ್ಯ, ಗೌರೀಶ್ ಕಾಯ್ಕಿಣಿ, ಅ.ನ.ಕೃಷ್ಣರಾಯ, ಕೋ.ಚನ್ನಬಸಪ್ಪ ಹಾಗೂ ಸಿದ್ದಲಿಂಗಯ್ಯ ಅವರ ಸಮಗ್ರ ಸಾಹಿತ್ಯ ಸಂಪುಟಗಳ ಲೋಕಾರ್ಪಣೆ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಕೊಪ್ಪಳದ ಸಾಹಿತಿ ಪ್ರೊ. ಅಲ್ಲಮಪ್ರಭು ಬೆಟ್ಟದೂರು ಕೃತಿಗಳನ್ನು ಬಿಡುಗಡೆ ಮಾಡಲಿದ್ದು, ಕರ್ನಾಟಕ ಚಲನಚಿತ್ರ ಅಕಾಡೆಮಿ ಸದಸ್ಯೆ ಸಾವಿತ್ರಿ ಮುಜುಮದಾರ ಸಂಪುಟ ಕುರಿತು ಮಾತನಾಡುವರು ಹಾಗೂ ಪ್ರಾಧಿಕಾರದ ಅಧ್ಯಕ್ಷ ಮಾನಸ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

# ಘೋಷಿಸದ ಪ್ರದೇಶಕ್ಕೆ ತೆರಿಗೆ: ನೋಟಿಸ್

### ಇ–ಖಾತಾ: ಕಾವೇರಿ ನೋಂದಣಿ ದಾಖಲೆಗಿಂತ ಭಿನ್ನವಾಗಿದ್ದರೆ ತೆರಿಗೆ ವಿಮರ್ಶೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೋಂದಣಿಯಲ್ಲಿನ ದಾಖಲೆಗಿಂತ ಆಸ್ತಿಯ ಪ್ರದೇಶ ಹೆಚ್ಚಿದ್ದರೆ, ಪಾರ್ಕಿಂಗ್ ಜಾಗವಿದ್ದು ಅದು ತೆರಿಗೆ ವ್ಯಾಪ್ತಿಯಲ್ಲಿ ಇಲ್ಲದಿದ್ದರೆ, ಅಂತಹ ಆಸ್ತಿಗಳ ಮಾಲೀಕರಿಗೆ ಬಿಬಿಎಂಪಿ 'ಷೋಕಾಸ್ ನೋಟಿಸ್' ಜಾರಿ ಮಾಡುತ್ತಿದೆ.

'ಇ–ಖಾತಾ' ಪಡೆದುಕೊಂಡು ಮಾಲೀಕತ್ವ ದೃಢೀಕರಿಸಿಕೊಳ್ಳಿ ಎಂದು ಬಿಬಿಎಂಪಿ ಹೇಳುತ್ತಿದೆ. ಆದರೆ, ನಮ್ಮಿಂದ ಹೆಚ್ಚುವರಿ ಆಸ್ತಿ ತೆರಿಗೆಯನ್ನು ಪಡೆದುಕೊಳ್ಳಲು ಹಲವು ದಾರಿಗಳನ್ನು ಕಂಡುಕೊಳ್ಳುತ್ತಿದೆ' ಎಂದು ನಾಗರಿಕರು ಆರೋಪಿಸಿದ್ದಾರೆ.

ಇ–ಖಾತಾ ಪಡೆಯಲು ದಾಖಲೆಗಳನ್ನು ಅಪ್‌ಲೋಡ್ ಮಾಡಿದ ಸಂದರ್ಭದಲ್ಲಿ ಎಲ್ಲ ದಾಖಲೆಗಳನ್ನು ಆನ್‌ಲೈನ್‌ನಲ್ಲೇ ಪರಾಮರ್ಶಿಸಿ, ವ್ಯತ್ಯಾಸ ಕಂಡು ಬಂದಾಗ ನೋಟಿಸ್ ಜಾರಿ ಮಾಡಲಾಗುತ್ತಿದೆ. ಆಸ್ತಿ ತೆರಿಗೆಯನ್ನು ಪರಿಷ್ಕರಿಸಿ, ವ್ಯತ್ಯಾಸದ ಮೊತ್ತವನ್ನು 15 ದಿನದಲ್ಲಿ ಪಾವತಿಸಬೇಕು ಎಂದು ಸೂಚಿಸಲಾಗುತ್ತಿದೆ.

ಏಕ ನಿವೇಶನ/ ಕಟ್ಟಡ ಮಾಲೀಕರಿಗಿಂತ ಅಪಾರ್ಟ್‌ಮೆಂಟ್ ನಲ್ಲಿರುವ ಫ್ಲ್ಯಾಟ್ ಮಾಲೀಕರಿಗೆ ಹೆಚ್ಚಾಗಿ ನೋಟಿಸ್ ಜಾರಿಯಾಗುತ್ತಿದೆ. ನಾಗರಿಕರಿಂದ ಈ ಬಗ್ಗೆ ಆಕ್ರೋಶ ವ್ಯಕ್ತವಾಗುತ್ತಿದ್ದು, 'ಹಲವು ವರ್ಷಗಳಿಂದ ಪಾವತಿಸುತ್ತಿರುವುದಕ್ಕಿಂತ ಹೆಚ್ಚಿನ ತೆರಿಗೆ ಏಕೆ ಪಾವತಿಸಬೇಕು' ಎಂದು ಪ್ರಶ್ನಿಸುತ್ತಿದ್ದಾರೆ.

'ಫ್ಲ್ಯಾಟ್ ಆಸ್ತಿ ತೆರಿಗೆಯನ್ನು 'ಸೂಪರ್ ಬಿಲ್ಟ್ ಅಪ್ ಏರಿಯಾ'ಗೆ ಸ್ವಯಂ ಘೋಷಣಾ ವ್ಯವಸ್ಥೆಯಲ್ಲಿ (ಎಸ್‌ಎಎಸ್) ನಿಗದಿ ಮಾಡಿ ಪಾವತಿಸಲಾಗುತ್ತಿದೆ. ಕಾರ್ ಪಾರ್ಕಿಂಗ್ ಬಗ್ಗೆ ಇದರಲ್ಲಿ ಮಾಹಿತಿ ನೀಡಿರುವುದಿಲ್ಲ. ಇ–ಖಾತಾ ನೀಡುವ ಪ್ರಕ್ರಿಯೆಯಲ್ಲಿ ಕಾವೇರಿ ಆನ್‌ಲೈನ್‌ನಲ್ಲಿ ಕ್ರಯಪತ್ರದೊಂದಿಗಿರುವ ಮಾಹಿತಿ ಹಾಗೂ ಫ್ಲೋರ್ ಏರಿಯಾ, ಸೂಪರ್ ಬಿಲ್ಟ್ ಅಪ್ ಏರಿಯಾ, ಕಾಮನ್ ಏರಿಯಾ, ಪಾರ್ಕಿಂಗ್ ವಿಸ್ತೀರ್ಣಗಳನ್ನು ಮಾಲೀಕರೇ ನಮೂದಿಸುತ್ತಾರೆ. ಇದರಲ್ಲಿ ವ್ಯತ್ಯಾಸ ಕಂಡು ಬಂದಾಗ, ಅದಕ್ಕೆ ತೆರಿಗೆಯನ್ನು ನಿಗದಿಪಡಿಸಿ, ಅದನ್ನು ಪಾವತಿಸುವಂತೆ ನೋಟಿಸ್ ನೀಡಲಾಗುತ್ತದೆ' ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದರು.

'ಎಸ್‌ಎಎಸ್‌ನಲ್ಲಿ ಮಾಲೀಕರೊಬ್ಬರು ವಸತಿ ಪ್ರದೇಶದ 1275 ಚದರಡಿ ಕಟ್ಟಡಕ್ಕೆ ಇ ವಲಯದಲ್ಲಿ ₹2,968 ಆಸ್ತಿ ತೆರಿಗೆ ಪಾವತಿಸುತ್ತಿದ್ದಾರೆ. 120 ಚದರಡಿಯ ಪಾರ್ಕಿಂಗ್ ಪ್ರದೇಶವನ್ನು ಇ–ಖಾತಾ ಪ್ರಕ್ರಿಯೆಯಲ್ಲಿ ದಾಖಲಿಸಿದ್ದಾರೆ. ಇದಕ್ಕೆ ತೆರಿಗೆ ಪಾವತಿಸಿರಲಿಲ್ಲ. ಹೀಗಾಗಿ, ಅದಕ್ಕೆ ₹139 ವ್ಯತ್ಯಾಸ ತೆರಿಗೆಯನ್ನು ಪಾವತಿಸಲು ನೋಟಿಸ್ ಜಾರಿ ಮಾಡಲಾಗಿದೆ. ಹೆಚ್ಚುವರಿಯಾಗಿ ತೆರಿಗೆ ಕೇಳುತ್ತಿಲ್ಲ' ಎಂದರು.



ಪಾರ್ಕಿಂಗ್ ಪ್ರದೇಶವನ್ನು ಫ್ಲ್ಯಾಟ್‌ನ ತೆರಿಗೆಯಲ್ಲಿ ಸೇರಿಸಲಾಗುವುದಿಲ್ಲ. ಫ್ಲ್ಯಾಟ್ ಆಸ್ತಿ ತೆರಿಗೆ ದರದ ಅರ್ಧದಷ್ಟು ಪ್ರತ್ಯೇಕ ತೆರಿಗೆಯನ್ನು ವಿಧಿಸಲಾಗುತ್ತದೆ. ಇದು 2008ರಿಂದಲೇ ಜಾರಿಯಲ್ಲಿದೆ.
**ಮುನೀಶ್ ಮೌದ್ಗಿಲ್,** ವಿಶೇಷ ಆಯುಕ್ತ, ಕಂದಾಯ ವಿಭಾಗ, ಬಿಬಿಎಂಪಿ

### 'ಪಾರ್ಕಿಂಗ್‌ಗೆ ಹೆಚ್ಚು ತೆರಿಗೆ ವಸೂಲಿ'

'ಫ್ಲ್ಯಾಟ್ ಆಸ್ತಿ ತೆರಿಗೆಯಲ್ಲಿ ಪಾರ್ಕಿಂಗ್, ಕಾಮನ್ ಏರಿಯಾದ ಶುಲ್ಕವೂ ಸೇರಿರುವುದರಿಂದ ಪ್ರತ್ಯೇಕವಾಗಿ ತೆರಿಗೆ ಪಾವತಿಸುವಂತಿಲ್ಲ ಎಂದು ರೇರಾ ಹೇಳಿದೆ. ಅದರಂತೆಯೇ ಇಲ್ಲಿಯವರೆಗೆ ಆಸ್ತಿ ತೆರಿಗೆ ಪಾವತಿಸಲಾಗುತ್ತಿತ್ತು. ಆದರೆ, ಇದೀಗ ಬಿಬಿಎಂಪಿಯವರು ಇ–ಖಾತಾ ಪಡೆದುಕೊಂಡ ಮೇಲೆ ಪಾರ್ಕಿಂಗ್‌ಗೆ ಪ್ರತ್ಯೇಕ ತೆರಿಗೆ ನೀಡಬೇಕು. ಅದನ್ನು ಕೂಡಲೇ ಪಾವತಿಸಬೇಕು ಎಂದು ನೋಟಿಸ್ ನೀಡಿ ಜನರನ್ನು ಹಿಂಸಿಸುತ್ತಿದ್ದಾರೆ' ಎಂದು ಮಾಲೀಕರೊಬ್ಬರು ಅಳಲು ತೋಡಿಕೊಂಡರು.

### ಆಕ್ಷೇಪಣೆಗೆ ಅವಕಾಶ: ಮುನೀಶ್

'ಕ್ರಯ ಪತ್ರದಲ್ಲಿರುವ ಪ್ರದೇಶಕ್ಕಿಂತ ಕಡಿಮೆ ಪ್ರದೇಶಕ್ಕೆ ಆಸ್ತಿ ತೆರಿಗೆ ಪಾವತಿಸಿದ ಸಂದರ್ಭದಲ್ಲಷ್ಟೇ ಬಿಬಿಎಂಪಿ ನೋಟಿಸ್ ನೀಡುತ್ತಿದೆ. ಆನ್‌ಲೈನ್‌ನಲ್ಲಿ ಆಕ್ಷೇಪಣೆ ಅಥವಾ ಮೇಲ್ಮನವಿ ಸಲ್ಲಿಸುವ ಅವಕಾಶವಿದೆ. ದಾಖಲೆಗಳ ಆಧಾರದ ಮೇಲೆ ತೀರ್ಮಾನ ಕೈಗೊಳ್ಳಲಾಗುತ್ತದೆ. BBMPeNyaya.karnataka.gov.in ಮೂಲಕ ಆನ್‌ಲೈನ್‌ನಲ್ಲಿ ನಾಗರಿಕರು ಆಕ್ಷೇಪಣೆ ಸಲ್ಲಿಸಬಹುದು' ಎಂದು ಬಿಬಿಎಂಪಿಯ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

'ಹಿಂದಿನ ಹಸ್ತಚಾಲಿತ ವ್ಯವಸ್ಥೆಗೆ ಹೋಲಿಸಿದರೆ ಇದು ತುಂಬಾ ಪಾರದರ್ಶಕ, ಆನ್‌ಲೈನ್ ವ್ಯವಸ್ಥೆಯಾಗಿದೆ. ಹಿಂದಿನ ವ್ಯವಸ್ಥೆಯಲ್ಲಿ ಸ್ಥಳೀಯ ಕಂದಾಯ ಪರಿವೀಕ್ಷಕರು/ತೆರಿಗೆ ನಿರೀಕ್ಷಕರು ನೋಟಿಸ್ ನೀಡುತ್ತಿದ್ದರು. ಆಕ್ಷೇಪಣೆ ಸ್ಥಳೀಯ ಸಹಾಯಕ ಕಂದಾಯ ಅಧಿಕಾರಿ ಕಚೇರಿಗೆ ಭೇಟಿ ನೀಡಿ ಸಲ್ಲಿಸಬೇಕಾಗುತ್ತಿತ್ತು. ನಾಗರಿಕರು ಸ್ಥಳೀಯ ಸಿಬ್ಬಂದಿಯ ಮೇಲೆ ಅವಲಂಬಿತರಾಗುತ್ತಿದ್ದರು. ಈಗ ಆನ್‌ಲೈನ್‌ನಲ್ಲೇ ಎಲ್ಲ ಪ್ರಕ್ರಿಯೆ ನಡೆಯಲಿದೆ' ಎಂದರು.

## ಸುದ್ದಿ 2 ನಿಮಿಷ

### ಅಂಬೇಡ್ಕರ್ ನಿಗಮದಲ್ಲಿ ಇ.ಡಿ ಶೋಧ ಕಾರ್ಯಾಚರಣೆ

ಬೆಂಗಳೂರು: ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮಹಿಳೆಯರಿಗೆ 'ಭೂ ಒಡೆತನ ಯೋಜನೆ'ಯಲ್ಲಿ ನಡೆದಿದೆ ಎನ್ನಲಾದ ಅಕ್ರಮದ ಸಂಬಂಧ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು, ನಿಗಮದ ಕಚೇರಿ ಸೇರಿ ಹಲವೆಡೆ ಶೋಧ ಕಾರ್ಯ ನಡೆಸಿದ್ದಾರೆ.

'ಬೆಂಗಳೂರಿನಲ್ಲಿರುವ ನಿಗಮದ ಕೇಂದ್ರ ಕಚೇರಿ, ವಿಜಯಪುರ ಜಿಲ್ಲಾ ಕಚೇರಿ, ಅಧಿಕಾರಿಗಳ ಮನೆಗಳು ಸೇರಿ ಒಟ್ಟು ಎಂಟು ಕಡೆ ಇದೇ ಗುರುವಾರ ಮತ್ತು ಶುಕ್ರವಾರ ಶೋಧ ನಡೆಸಲಾಗಿದೆ' ಎಂದು ಇ.ಡಿ ಮೂಲಗಳು ತಿಳಿಸಿವೆ.

'ಭೂರಹಿತರಿಗೆ ಭೂಮಿ ಒದಗಿಸುವ ಸಲುವಾಗಿ ನಿಗಮವು ಭೂಮಿಯನ್ನು ಖರೀದಿಸಿದ್ದು, ಇದರಲ್ಲಿ ಅಕ್ರಮ ನಡೆದಿರುವ ಬಗ್ಗೆ ಆರೋಪಗಳು ಇವೆ. ಭೂಮಿಗೆ ದುಪ್ಪಟ್ಟು ಬೆಲೆ ನೀಡಿ ಖರೀದಿಸಲಾಗಿದೆ ಮತ್ತು ಅನರ್ಹರಿಗೆ ಭೂಮಿ ಹಂಚಿಕೆ ಮಾಡಲಾಗಿದೆ ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ' ಎಂದು ಮೂಲಗಳು ಮಾಹಿತಿ ನೀಡಿವೆ.




'ಭೂಮಿ ಪಡೆದ ಫಲಾನುಭವಿಗಳ ವಿವರಗಳನ್ನು ಆರ್‌ಟಿಸಿಯಲ್ಲಿ ನಮೂದಿಸಿಲ್ಲ. ಅಕ್ರಮದ ಭಾಗವಾಗಿಯೇ ಹೀಗೆ ಮಾಡಲಾಗಿದೆ ಎಂಬುದರ ಬಗ್ಗೆ ಶಂಕೆಗಳಿವೆ. ಹಣ ವರ್ಗಾವಣೆ, ಫಲಾನುಭವಿಗಳು, ಅರ್ಜಿಗಳಿಗೆ ಸಂಬಂಧಿಸಿದ ಕಡತಗಳನ್ನು ಶೋಧದ ವೇಳೆ ವಶಕ್ಕೆ ಪಡೆಯಲಾಗಿದೆ. ಹಲವು ವರ್ಷಗಳ ಕಡತಗಳೇ ಲಭ್ಯವಿಲ್ಲ. ಈ ಬಗ್ಗೆ ವಿವರಣೆ ಕೇಳಲಾಗಿದೆ' ಎಂದು ತಿಳಿಸಿವೆ.

### 'ಸಂಜೆ ನ್ಯಾಯಾಲಯ ಬೇಡ'

ಬೆಂಗಳೂರು: ರಾಜ್ಯದಲ್ಲಿ ಸಂಜೆ ನ್ಯಾಯಾಲಯಗಳ ಸ್ಥಾಪನೆಗೆ ವಿರೋಧ ವ್ಯಕ್ತಪಡಿಸಿರುವ 'ಬೆಂಗಳೂರು ವಕೀಲರ ಸಂಘ' (ಎಎಬಿ), 'ತಕ್ಷಣವೇ ಈ ಪ್ರಸ್ತಾವನೆಯನ್ನು ಹಿಂಪಡೆಯಬೇಕು' ಎಂದು ಆಗ್ರಹಿಸಿ ಬೆಂಗಳೂರು ಜಿಲ್ಲಾ ಕೋರ್ಟ್ ಪ್ರಧಾನ ನ್ಯಾಯಾಧೀಶರಿಗೆ ಪತ್ರ ಬರೆದಿದೆ.

ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ, ಉಪಾಧ್ಯಕ್ಷ ಸಿ.ಎಸ್.ಗಿರೀಶ್ ಕುಮಾರ್, ಪ್ರಧಾನ ಕಾರ್ಯದರ್ಶಿ ಎಚ್.ವಿ.ಪ್ರವೀಣ್ ಗೌಡ ಮತ್ತು ಖಜಾಂಚಿ ಶ್ವೇತಾ ರವಿಶಂಕರ್ ಸಹಿ ಮಾಡಿರುವ ಈ ಪತ್ರವನ್ನು ಬೆಂಗಳೂರು ಜಿಲ್ಲಾ ಪ್ರಧಾನ ನ್ಯಾಯಾಧೀಶ ಮುರಳೀಧರ ಪೈ ಅವರಿಗೆ ಸಲ್ಲಿಸಲಾಗಿದೆ.

**ಪತ್ರದಲ್ಲಿ ಏನಿದೆ?:** ಬೆಂಗಳೂರು ಸೇರಿದಂತೆ ರಾಜ್ಯದಲ್ಲಿರುವ ಸಮಸ್ತ ವಕೀಲ ವೃಂದ ದಿನದಲ್ಲಿ 12 ಗಂಟೆಗಳಿಗೂ ಹೆಚ್ಚಿನ ಸಮಯದ ಹೊರೆ ಹೊಂದಿರುತ್ತದೆ. ಪ್ರತಿದಿನ, ಬೆಳಿಗ್ಗೆ 9 ರಿಂದ ರಾತ್ರಿ 8 ಗಂಟೆಯವರೆಗೆ ಕಚೇರಿ ಮತ್ತು ನ್ಯಾಯಾಲಯಕ್ಕೆ ಹಾಜರಾದ ನಂತರ ಸಂಜೆ ಪುನಃ ನ್ಯಾಯಾಲಯಗಳಿಗೆ ಹಾಜರಾಗಿ ಕೆಲಸ ಮಾಡಬಲ್ಲರು ಎಂಬ ನಿರೀಕ್ಷೆ ಒಪ್ಪತಕ್ಕದ್ದಲ್ಲ.

ಕೋರ್ಟ್ ಸಮಯದ ನಂತರ ಅವರು ಸಂಜೆ ವೇಳೆ ತಮ್ಮ ಕಚೇರಿಗಳಲ್ಲಿ ಕಕ್ಷಿದಾರರನ್ನು ಭೇಟಿ ಮಾಡಬೇಕಾಗುತ್ತದೆ. ಮುಂದಿನ ಪ್ರಕರಣಗಳಿಗೆ ತಯಾರಿ, ಕರಡು ರೂಪಿಸುವುದು ಮತ್ತು ಇತರೆ ದಸ್ತಾವೇಜಿನ ಅಗತ್ಯ ಕೆಲಸಗಳನ್ನು ಪೂರೈಸಬೇಕಿರುತ್ತದೆ. ಒಂದು ವೇಳೆ ಸಂಜೆ ನ್ಯಾಯಾಲಯಗಳನ್ನು ಆರಂಭಿಸಿದರೆ ಮರುದಿನದ ಕೆಲಸಗಳಿಗೆ ಅಣಿಯಾಗುವ ಪ್ರಕ್ರಿಯೆ ಮತ್ತು ಅವಶ್ಯ ಚಟುವಟಿಕೆಗಳಿಗೆ ತಡೆ ಒಡ್ಡಿದಂತಾಗಲಿದೆ.

ಇಂತಹ ವಿಷಮ ಸನ್ನಿವೇಶದಲ್ಲಿ ವಕೀಲರ ಮೇಲಿರುವ ಒತ್ತಡಗಳ ನಿವಾರಣೆಗೆ ಮಾರ್ಗೋಪಾಯ ಕಂಡುಕೊಳ್ಳುವ ಬದಲು, ಸಂಜೆ ನ್ಯಾಯಾಲಯಗಳ ಪ್ರಸ್ತಾವನೆ ಮುಂದಿರಿಸಿರುವುದು ತರವಲ್ಲ. ಈ ಪ್ರಸ್ತಾವನೆಯನ್ನು ವಕೀಲರು ವಿರೋಧಿಸುತ್ತಿದ್ದಾರೆ. ಹಾಗಾಗಿ, ನಿರ್ಧಾರವನ್ನು ತಕ್ಷಣವೇ ಕೈಬಿಡಬೇಕು ಎಂದು ಒತ್ತಾಯಿಸಲಾಗಿದೆ.



ವಾಣಿಜ್ಯ ದಿನದ ಅಂಗವಾಗಿ ಎಬಿಬಿಎಸ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸಂಸ್ಥೆಯ ಪ್ರತಿನಿಧಿಗಳು ಅಮೆರಿಕನ್ ಅಕಾಡೆಮಿ ಆಫ್ ಫೈನಾನ್ಶಿಯಲ್ ಮ್ಯಾನೇಜ್‌ಮೆಂಟ್ ಇಂಡಿಯಾದೊಂದಿಗೆ (ಎಎಎಫ್‌ಎಂ ಇಂಡಿಯಾ) 'ಚಾರ್ಟರ್ಡ್ ವೆಲ್ತ್ ಮ್ಯಾನೇಜರ್' ಕಾರ್ಯಕ್ರಮ ಕುರಿತ ಒಡಂಬಡಿಕೆಗೆ ಸಹಿ ಹಾಕಿದರು

## 'ಬಿಬಿಎಂಪಿ ಕಾಯ್ದೆಯೇ ಮುಂದುವರಿಯಲಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೊಸದಾಗಿ ರಚನೆಯಾಗಲಿರುವ ಐದು ಪಾಲಿಕೆಗಳಿಗೆ ಚುನಾವಣೆ ನಡೆಯುವ ತನಕ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಆಡಳಿತವೇ ಮುಂದುವರಿಯಲಿದೆ' ಎಂದು ಅಡ್ವೊಕೇಟ್ ಜನರಲ್ ಹೈಕೋರ್ಟ್‌ಗೆ ಸ್ಪಷ್ಟಪಡಿಸಿದ್ದಾರೆ.

ಕಟ್ಟಡ ಬೈ–ಲಾ ಉಲ್ಲಂಘನೆ ಆರೋಪಕ್ಕೆ ಸಂಬಂಧಿಸಿದಂತೆ ಬಿಬಿಎಂಪಿ ಸಹಾಯಕ ಕಾರ್ಯಕಾರಿ ಎಂಜಿನಿಯರ್ (ಎಇಇ) ನೀಡಿರುವ ನೋಟಿಸ್ ಪ್ರಶ್ನಿಸಿ ಸಿ.ವಿ.ರಾಮನ್ ನಗರದ ಮುನಿವೆಂಕಟಪ್ಪ ಸಲ್ಲಿಸಿರುವ ಅರ್ಜಿ ವಿಚಾರಣೆ ವೇಳೆ ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠಕ್ಕೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಈ ಕುರಿತಂತೆ ವಿವರಿಸಿದರು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ರಚನೆ ಕುರಿತು ಅಧಿಸೂಚನೆ ಹೊರಡಿಸಲಾಗಿದೆ. ಹಾಗಾಗಿ, ಎಇಇಗೆ ನೋಟಿಸ್ ನೀಡುವ ಅಧಿಕಾರವಿಲ್ಲ. ನೋಟಿಸ್ ಕಾನೂನು ಬಾಹಿರವಾಗಿದ್ದು ರದ್ದುಗೊಳಿಸಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದಕ್ಕೆ ಬಿಬಿಎಂಪಿ ಪರ ವಕೀಲರು ಆಕ್ಷೇಪ ವ್ಯಕ್ತಪಡಿಸಿದರಲ್ಲದೆ, 'ಜಿಬಿಎ ರಚನೆ ಆಗುವ ತನಕ ಬಿಬಿಎಂಪಿ ಕಾಯ್ದೆ–2020 ಜಾರಿಯಲ್ಲಿರುತ್ತದೆ. ಈ ಕುರಿತಂತೆ ಸರ್ಕಾರವೇ 2025ರ ಮೇ 15ರಂದು ಆದೇಶ ಹೊರಡಿಸಿದೆ. ಹಾಗಾಗಿ, ಎಇಇಗೆ ನೋಟಿಸ್ ನೀಡುವ ಎಲ್ಲ ಅಧಿಕಾರವಿದೆ' ಎಂದು ಸಮರ್ಥಿಸಿಕೊಂಡರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಜಿಬಿಎ ರಚನೆಗೆ ಆದೇಶ ಹೊರಡಿಸಿರುವ ಹಿನ್ನೆಲೆಯಲ್ಲಿ ಬಿಬಿಎಂಪಿ ಕಾಯ್ದೆ ಜಾರಿಯಲ್ಲಿ ಇಲ್ಲ ಎಂಬ ವಿಚಾರವನ್ನು ಅರ್ಜಿದಾರರು ಎತ್ತಿದ್ದಾರೆ. ಜಿಬಿಎ ಜಾರಿ ಯಾವಾಗ ಎಂಬ ಬಗ್ಗೆ ಸ್ಪಷ್ಟನೆ ನೀಡಿ' ಎಂದು ಸರ್ಕಾರಕ್ಕೆ ಸೂಚಿಸಿತು.

ನ್ಯಾಯಪೀಠದ ಮುಂದೆ ಹಾಜರಾದ ಅಡ್ವೊಕೇಟ್ ಜನರಲ್, 'ಪಾಲಿಕೆಗಳಿಗೆ ಜನವರಿ ವೇಳೆಗೆ ಚುನಾವಣೆ ನಡೆಯುವ ಸಾಧ್ಯತೆ ಇದೆ. ಅಲ್ಲಿಯವರೆಗೆ ಬಿಬಿಎಂಪಿ ಆಡಳಿತವೇ ಮುಂದುವರಿಯಲಿದೆ' ಎಂದು ಸ್ಪಷ್ಟನೆ ನೀಡಿದರು.

ಇದನ್ನು ಮಾನ್ಯ ಮಾಡಿದ ಪೀಠ, 'ಅರ್ಜಿದಾರರಿಗೆ ಸಂಬಂಧಿಸಿದಂತೆ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು' ಎಂದು ವಕೀಲರಿಗೆ ಸೂಚಿಸಿ ವಿಚಾರಣೆ ಮುಂದೂಡಿತು.

## 'ಆದೇಶದಲ್ಲಿ ಸದುದ್ದೇಶ ಇಲ್ಲದಿದ್ದರೆ ಕ್ರಮ'

### ಹೊಂಗಸಂದ್ರ: ₹100 ಕೋಟಿ ಮೌಲ್ಯದ ಭೂಮಿ ಕಬಳಿಕೆ– ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಂದಾಯ ಇಲಾಖೆಯಲ್ಲಿ ಅರೆ ನ್ಯಾಯಿಕ ಅಧಿಕಾರ ಇರುವವರು ನೀಡುವ ಆದೇಶಗಳು ಸದುದ್ದೇಶದಿಂದ ಕೂಡಿಲ್ಲ ಎಂಬುದು ಕಂಡು ಬಂದರೆ ಅಂಥವರ ವಿರುದ್ಧವೂ ಶಿಸ್ತು ಕ್ರಮಕ್ಕೆ ಈಗಾಗಲೇ ಚಾಲನೆ ನೀಡಲಾಗಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ವಿಧಾನಸಭೆಯಲ್ಲಿ ಬಿಜೆಪಿ ಎಂ. ಸತೀಶ್ ರೆಡ್ಡಿ ಅವರು ಪ್ರಸ್ತಾಪಿಸಿದ್ದ ವಿಚಾರಕ್ಕೆ ಉತ್ತರಿಸಿದ ಕೃಷ್ಣ ಬೈರೇಗೌಡ, 'ಅರೆನ್ಯಾಯಿಕ ಅಧಿಕಾರ ಇರುವವರು ನೀಡುವ ಆದೇಶವನ್ನು ದೂರುದಾರರು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ಈವರೆಗೆ ಅವಕಾಶವಿತ್ತು. ಆದರೆ, ಅವರ ಆದೇಶ ಸದುದ್ದೇಶದಿಂದ ಕೂಡಿಲ್ಲ ಎಂಬುದು ಕಂಡುಬಂದರೆ ಅವರ ವಿರುದ್ಧವೂ ಶಿಸ್ತು ಕ್ರಮ ಜರುಗಿಸುವ ನಿಟ್ಟಿನಲ್ಲಿ ಈಗಾಗಲೇ ಭೂಸುಧಾರಣೆ ಕಾಯಿದೆಯ ಸೆಕ್ಷನ್ 196ಕ್ಕೆ ತಿದ್ದುಪಡಿ ತರಲಾಗಿದೆ' ಎಂದರು.

**₹ 100 ಕೋಟಿ ಮೌಲ್ಯದ ಐದು ಎಕರೆ ಕಬಳಿಕೆ:** 'ಬೊಮ್ಮನಹಳ್ಳಿ ಕ್ಷೇತ್ರದ ಹೊಂಗಸಂದ್ರದ ಗ್ರಾಮ ಸರ್ವೆ ನಂ. 43ರ 2.17 ಎಕರೆ ವಿಸ್ತೀರ್ಣದ ಸ್ಮಶಾನ ಜಾಗಕ್ಕೆ ಹೊಸದಾಗಿ ಪೋಡಿ ಮಾಡಿ ಸರ್ವೆ ನಂ.118ರ ಹೆಸರಿನಲ್ಲಿ ಅಧಿಕಾರಿಗಳು ಶಾಮೀಲಾಗಿ ಖಾಸಗಿ ವ್ಯಕ್ತಿಗಳ ಹೆಸರಿಗೆ ಬದಲಾಯಿಸಿದ್ದಾರೆ. ನೂರಾರು ಕೋಟಿ ರೂಪಾಯಿ ಮೌಲ್ಯದ ಐದು ಎಕರೆ ಸರ್ಕಾರಿ ಭೂಮಿ ಕಬಳಿಕೆಯಾಗುತ್ತಿದೆ. ಈ ಬಗ್ಗೆ ಹಿಂದೆ ಸದನದಲ್ಲಿ ಪ್ರಸ್ತಾಪಿಸಿದ ನಂತರವೂ ಕಂದಾಯ ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳು ನಿವೇಶನ, ಇತರೆ ಪಾಲು ಪಡೆದು ಭೂಕಬಳಿಕೆಗೆ ಕುಮ್ಮಕ್ಕು ನೀಡುತ್ತಿದ್ದಾರೆ' ಎಂದು ಸತೀಶ್ ರೆಡ್ಡಿ ಸದನದ ಗಮನಸೆಳೆದರು.

'ವ್ಯವಸ್ಥಿತ ಭೂಕಬಳಿಕೆ ಪ್ರಕರಣದ ಕಾರಣಕ್ಕೆ ಬೆಂಗಳೂರು ದಕ್ಷಿಣ ತಾಲ್ಲೂಕಿನ ಎ.ಸಿ. ವಿರುದ್ಧ ಎಫ್‌ಐಆರ್ ದಾಖಲಿಸಲು ಪ್ರಯತ್ನ ನಡೆದಿತ್ತು. ಸದ್ಯಕ್ಕೆ ಅವರನ್ನು ಸ್ಥಾನದಿಂದ ಬಿಡುಗಡೆಗೊಳಿಸಲಾಗಿದೆ. ಶಾಸಕರು ಪ್ರಸಾಪಿಸಿರುವ ಸರ್ವೆ ನಂ.43, 44ಕ್ಕೆ ಸಂಬಂಧಪಟ್ಟಂತೆ 10 ದಿನದೊಳಗೆ ಪರಿಶೀಲನೆ ನಡೆಸಲು ಸೂಚನೆ ನೀಡಲಾಗುವುದು. ಈ ಪ್ರಕರಣದಲ್ಲಿ ಅಧಿಕಾರಿಗಳು ಶಾಮೀಲಾಗಿರುವುದು ಕಂಡುಬಂದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು' ಎಂದರು.

'ಕೆಲವು ಎ.ಸಿ.ಗಳು ನೀಡುವ ಆಯ್ದ ಆದೇಶಗಳು ಆಘಾತ ಉಂಟು ಮಾಡುತ್ತವೆ. ಹೀಗಾಗಿ ಗಮನಕ್ಕೆ ಬಂದ ಪ್ರಕರಣಗಳನ್ನು ತನಿಖೆ ಮಾಡಿಸಲಾಗುತ್ತಿದೆ' ಎಂದೂ ಹೇಳಿದರು.

### 'ಅಧಿಕಾರಿಗಳು ಸೂರ್ಯನಿಗೆ ಟಾರ್ಚ್ ಬಿಡ್ತಾರೆ'

'ಕೆಲವು ಅಧಿಕಾರಿಗಳು ಭೂಮಿ ಮೇಲೆ ಇದ್ದಾರೊ, ಎಲ್ಲಿದ್ದಾರೊ ಗೊತ್ತಾಗುವುದಿಲ್ಲ. ಸೂರ್ಯನಿಗೆ ಟಾರ್ಚ್ ಬಿಡ್ತಾರೆ. ಕಪ್ಪನ್ನು ಬಿಳಿ, ಬಿಳಿಯನ್ನು ಕಪ್ಪು ಎಂದು ಮಾಡುತ್ತಾರೆ. ಹೀಗಾಗಿ, ಕಂದಾಯ ಇಲಾಖೆಯಲ್ಲಿ ಅರೆನ್ಯಾಯಿಕ ಅಧಿಕಾರ ಇರುವವರು ನೀಡುವ ಆದೇಶಗಳಲ್ಲಿ ಸದುದ್ದೇಶ ಇಲ್ಲ ಎಂಬುದು ಮೇಲ್ನೋಟಕ್ಕೆ ಕಂಡುಬಂದರೆ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಪ್ರಯತ್ನ ಆರಂಭವಾಗಿದೆ. ಬೆಂಗಳೂರು ದಕ್ಷಿಣ ತಾಲ್ಲೂಕಿನ ಉಪ ವಿಭಾಗಾಧಿಕಾರಿ (ಎ.ಸಿ) ವಿರುದ್ಧ ಇಲಾಖಾ ವಿಚಾರಣೆ ನಡೆಯುತ್ತಿದೆ' ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

## ಅರ್ಜಿ ಆಹ್ವಾನ

ಬೆಂಗಳೂರು: ರುಡ್‌ಸೆಟ್ ಸಂಸ್ಥೆಯ ವತಿಯಿಂದ ಮೊಬೈಲ್ ರಿಪೇರಿ ಹಾಗೂ ಸೇವೆಯ ಕುರಿತು 30 ದಿನಗಳ ಉಚಿತ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು 18 ರಿಂದ 45 ವರ್ಷದೊಳಗಿನ, ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುವ ಗ್ರಾಮೀಣ ಭಾಗದ ಬಿಪಿಎಲ್ ಕಾರ್ಡ್ ಹಾಗೂ ಆಧಾರ್ ಕಾರ್ಡ್ ಹೊಂದಿರುವವರು ಅರ್ಜಿ ಸಲ್ಲಿಸಬಹುದು.

ತರಬೇತಿಯು ಸೆಪ್ಟೆಂಬರ್ 1 ರಿಂದ ಪ್ರಾರಂಭವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ರುಡ್‌ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ.

ಮಾಹಿತಿಗಾಗಿ ಸಂಪರ್ಕಿಸಬಹುದಾದ ಸಂಖ್ಯೆ: 94815 06564, 93801 62042.

## ಎಸ್ಟಿ ಮಂತ್ರಿಗೆ 'ವಜಾ ಗ್ಯಾರಂಟಿ' ಭಾಗ್ಯ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಹುಲ್‌ಗಾಂಧಿ ಸುಳ್ಳಿಗೆ ಕನ್ನಡಿ ಹಿಡಿದ ಪರಿಶಿಷ್ಟ ಪಂಗಡದ ಮಂತ್ರಿಗೆ ವಜಾ ಗ್ಯಾರಂಟಿ ಭಾಗ್ಯ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ಈ ಕುರಿತು 'ಎಕ್ಸ್' ಮಾಡಿರುವ ಅವರು, 'ಕಾಂಗ್ರೆಸ್ ಪಕ್ಷಕ್ಕೆ ಸತ್ಯ ಎಂದರೆ ಅಲರ್ಜಿ, ಸುಳ್ಳು ಎಂದರೆ ಎನರ್ಜಿ. 2024ರ ಲೋಕಸಭೆ ಚುನಾವಣೆ ಸಂದರ್ಭದಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿ ಇದ್ದಾಗಲೇ ಮತದಾರರ ಪಟ್ಟಿ ಸಿದ್ಧಪಡಿಸಿದ್ದು ಎಂಬ ಸರಳ ಸತ್ಯವನ್ನು ಹೇಳಿದ್ದೇ ಸಚಿವ ರಾಜಣ್ಣ ಅವರಿಗೆ ಮುಳುವಾಗಿದೆ' ಎಂದು ತಿಳಿಸಿದ್ದಾರೆ.

'ರಾಜಣ್ಣ ಅವರನ್ನು ಈ ರೀತಿ ಅಗೌರವವಾಗಿ, ಸಂಪುಟದಿಂದ ವಜಾ ಮಾಡಿರುವುದು ಕಾಂಗ್ರೆಸ್ ಪಕ್ಷದ ದಲಿತ ವಿರೋಧಿ ಮನಸ್ಥಿತಿಗೆ ಮತ್ತೊಂದು ತಾಜಾ ಉದಾಹರಣೆ. ಅಂಬೇಡ್ಕರ್ ಅವರನ್ನೇ ಸೋಲಿಸಿದ ಕಾಂಗ್ರೆಸ್‌ನವರು ರಾಜಣ್ಣ ಅವರ ಸತ್ಯವನ್ನು ಸಹಿಸುತ್ತಾರಾ' ಎಂದು ಪ್ರಶ್ನಿಸಿದ್ದಾರೆ.

**ಸಿದ್ದರಾಮಯ್ಯಗೆ ಎಚ್ಚರಿಕೆ ಗಂಟೆ:** 'ರಾಜಣ್ಣ ಹಿರಿಯ ರಾಜಕಾರಣಿ. ತಮ್ಮ ಇಲಾಖೆಯಲ್ಲಿ ದಕ್ಷತೆ ಯಿಂದ ಕೆಲಸ ಮಾಡಿದ್ದರು. ಎಸ್‌ಟಿ ಸಮುದಾಯದ ಹಿರಿಯ ನಾಯಕ ಅವರಿಗೆ ರಾಜೀನಾಮೆ ಕೊಡಲು ಅವಕಾಶ ಕೊಡದೇ ಇರುವುದು ಅವರ ಅನುಭವ, ದಕ್ಷತೆ, ಎಸ್ಟಿ ಜನಾಂಗಕ್ಕೆ ಮಾಡಿರುವ ಅವಮಾನ' ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ರಾಜಣ್ಣ ಅವರ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಮಾಡಿದ್ದೇ ಡಿ.ಕೆ.ಶಿವಕುಮಾರ್. ಈ ಮೂಲಕ ಸಿದ್ದರಾಮಯ್ಯ ಅವರಿಗೆ ಬಲವಾದ ಹೊಡೆತ ನೀಡಿದ್ದಾರೆ
**ಅರವಿಂದ ಬೆಲ್ಲದ**
ವಿರೋಧ ಪಕ್ಷದ ಉಪನಾಯಕ

ಮತ ಕಳ್ಳತನ ದ ಕುರಿತು ರಾಹುಲ್‌ಗಾಂಧಿ ಅವರ ಸುಳ್ಳು ಆರೋಪಕ್ಕೆ ಕೆ.ಎನ್.ರಾಜಣ್ಣ ಅವರು ಇರುವ ಸತ್ಯವನ್ನೇ ಹೇಳಿದ್ದರು. ಅದಕ್ಕೆ ಕಾಂಗ್ರೆಸ್ ಹೈಕಮಾಂಡ್ ಶಿಕ್ಷೆ ವಿಧಿಸಿದೆ
**ಸಿ.ಟಿ. ರವಿ**
ವಿಧಾನ ಪರಿಷತ್ತಿನ ಸದಸ್ಯ

### ಸರ್ಕಾರದ ಹುಳುಕುಗಳನ್ನು ಮುಚ್ಚಿ ಹಾಕುವ ಸಲುವಾಗಿ ಪೊಲೀಸ್ ಅಧಿಕಾರಿಗಳ ಮೇಲೆ ಕ್ರಮ: ಆರೋಪ

## ಸರ್ಕಾರದ ವಿರುದ್ಧ ಬಿಜೆಪಿ– ಜೆಡಿಎಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತದಿಂದ 11 ಜನರು ಸಾವನ್ನಪ್ಪಿದ ಘಟನೆ ಸೇರಿದಂತೆ ವಿವಿಧ ಪ್ರಕರಣಗಳಲ್ಲಿ ಸರ್ಕಾರ ಬೇಜವಾಬ್ದಾರಿಯಿಂದ ನಡೆದುಕೊಂಡಿದೆ' ಎಂದು ಆರೋಪಿಸಿ ಬಿಜೆಪಿ ಮತ್ತು ಜೆಡಿಎಸ್ ಶಾಸಕರು ಸೋಮವಾರ ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ನಡೆದ ಈ ಪ್ರತಿಭಟನೆಯಲ್ಲಿ ವಿರೋಧಪಕ್ಷದ ನಾಯಕ ಆರ್.ಅಶೋಕ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ಸೇರಿ ಎರಡೂ ಪಕ್ಷಗಳ ಶಾಸಕರು ಭಾಗವಹಿಸಿದ್ದರು.

'ಕಾಲ್ತುಳಿತದ ಪ್ರಕರಣದಲ್ಲಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಗೃಹ ಸಚಿವ ಮತ್ತು ಇತರ ಸಚಿವರು ಜವಾಬ್ದಾರಿ ತೆಗೆದುಕೊಳ್ಳಬೇಕಿತ್ತು. ಅದನ್ನು ಬಿಟ್ಟು ಅಮಾಯಕ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿದ್ದಾರೆ. ಇವರ ಹುಳುಕುಗಳನ್ನು ಮುಚ್ಚಿ ಹಾಕುವ ಸಲುವಾಗಿ ಪೊಲೀಸ್ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡಿದ್ದಾರೆ' ಎಂದು ವಿಜಯೇಂದ್ರ ಆರೋಪಿಸಿದರು.

'ರಸಗೊಬ್ಬರ ಕೊರತೆಯಿಂದ ರೈತರು ರಾಜ್ಯದಲ್ಲಿ ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ. ಉತ್ತರ ಕರ್ನಾಟಕದ ನೀರಾವರಿ ಯೋಜನೆಗಳ ಸಂತ್ರಸ್ತರಿಗೆ ಪರಿಹಾರ ನೀಡುತ್ತಿಲ್ಲ. ಈ ಎಲ್ಲ ವಿಷಯಗಳನ್ನು ಸದನದಲ್ಲಿ ಪ್ರಸ್ತಾಪ ಮಾಡುತ್ತೇವೆ' ಎಂದು ಹೇಳಿದರು.

ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ, ವಿಧಾನಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಇದ್ದರು.




ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ದುರಂತದ ಪ್ರಕರಣ ಸೇರಿ ವಿವಿಧ ಪ್ರಕರಣಗಳಲ್ಲಿ ಸರ್ಕಾರ ಹೊಣೆಗಾರಿಕೆ ವಹಿಸಿಕೊಳ್ಳುತ್ತಿಲ್ಲ ಎಂದು ಆರೋಪಿಸಿ ಬಿಜೆಪಿ ಮತ್ತು ಜೆಡಿಎಸ್ ಶಾಸಕರು ವಿಧಾನಸೌಧದ ಗಾಂಧಿ ಪ್ರತಿಮೆ ಮುಂದೆ ಸೋಮವಾರ ಪ್ರತಿಭಟನೆ ನಡೆಸಿದರು ಚಿತ್ರ:ರಂಜು ಪಿ

### 'ಗವಿಸಿದ್ದಪ್ಪ ಹತ್ಯೆ: ಎನ್‌ಐಎಗೆ ವಹಿಸಿ'

ಕೊಪ್ಪಳದಲ್ಲಿ ಇತ್ತೀಚೆಗೆ ನಡೆದ ಹಿಂದೂ ಸಂಘಟನೆಯ ಮುಖಂಡ ಗವಿಸಿದ್ದಪ್ಪ ನಾಯಕ ಅವರ ಹತ್ಯೆ ಪ್ರಕರಣವನ್ನು ಸಿಬಿಐ ಅಥವಾ ಎನ್‌ಐಎಗೆ ಒಪ್ಪಿಸಬೇಕು ಎಂದು ಬಿ.ವೈ.ವಿಜಯೇಂದ್ರ ಒತ್ತಾಯಿಸಿದ್ದಾರೆ.


ಸುದ್ದಿಗಾರರ ಜತೆ ಮಾತನಾಡಿದ ಅವರು, ವಾಲ್ಮೀಕಿ ಸಮುದಾಯದ ನಾಯಕರೂ ಆಗಿದ್ದ ಗವಿಸಿದ್ದಪ್ಪ ಅವರ ಹತ್ಯೆ ಪ್ರಕರಣವನ್ನು ಸರ್ಕಾರ ಹಗುರವಾಗಿ ಪರಿಗಣಿಸಬಾರದು. ಈ ಘಟನೆಯಿಂದ ಇಡೀ ಕೊಪ್ಪಳ ಜಿಲ್ಲೆಯೇ ಆತಂಕಕ್ಕೆ ಒಳಗಾಗಿದೆ ಎಂದರು.

'ಹಿಂದೂ ಕಾರ್ಯಕರ್ತರನ್ನು ಗುರಿ ಮಾಡಿ ಕೊಲ್ಲುವ ಸಮಾಜಘಾತುಕ ಮತ್ತು ದೇಶ ದ್ರೋಹಿಗಳ ಚಟುವಟಿಕೆ ಹಿಂದೆ ಕರಾವಳಿ ಭಾಗದಲ್ಲಿತ್ತು, ಈಗ ಅದು ಕೊಪ್ಪಳ ಜಿಲ್ಲೆಗೂ ವಿಸ್ತರಣೆ ಆಗಿದೆ. ಗೃಹ ಸಚಿವರು ಈ ಘಟನೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು' ಎಂದು ಒತ್ತಾಯಿಸಿದರು.

ವಿಧಾನಸಭೆ ವಿರೋಧಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ, ಶಾಸಕ ಜಿ.ಜನಾರ್ದನ ರೆಡ್ಡಿ ಮಾತನಾಡಿ ಪ್ರಕರಣವನ್ನು ಎನ್‌ಐಎಗೆ ಒಪ್ಪಿಸಬೇಕು ಎಂದರು.

ರಸ್ತೆಗಳಲ್ಲಿ ಒಬ್ಬಂಟಿ ಸಂಚಾರಕ್ಕೆ ಸಂಚಕಾರ • ವೃದ್ಧರು, ಮಕ್ಕಳ ಮೇಲೆ ವ್ಯಗ್ರ ಬೀದಿ ನಾಯಿಗಳ ದಾಳಿಗೆ ಸಿಗುತ್ತಿಲ್ಲ ಶಾಶ್ವತ ಪರಿಹಾರ

# ಬೀದಿ ನಾಯಿ ಹುಚ್ಚಾಟ, ಜನರಿಗೆ ಪ್ರಾಣ ಸಂಕಟ



• ಆರ್. ಮಂಜುನಾಥ್

**ಬೆಂಗಳೂರು:** ನಗರದಲ್ಲಿ ಬೀದಿ ನಾಯಿಗಳ ಹುಚ್ಚಾಟ, ಕಡಿತ ಪ್ರಕರಣಗಳು ಹೆಚ್ಚಾಗಿದ್ದು, ಆಗಾಗ್ಗೆ ಸಾವೂ ಸಂಭವಿಸುತ್ತಿರುವುದರಿಂದ ನಾಗರಿಕರು ಪ್ರಾಣ ಸಂಕಟದಲ್ಲಿದ್ದಾರೆ.

2023ರ ಅಕ್ಟೋಬರ್ 23ರಂದು ಪ್ರಕಟಿಸಿರುವ ಗಣತಿ ವರದಿ ಪ್ರಕಾರ, ನಗರದಲ್ಲಿ ಬೀದಿನಾಯಿಗಳ ಸಂಖ್ಯೆ ಶೇ 10ರಷ್ಟು ಕಡಿಮೆಯಾಗಿವೆ. ಶೇ 71.85ರಷ್ಟು ಬೀದಿನಾಯಿಗಳಿಗೆ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಆದರೆ, ನಾಯಿ ಕಡಿತ ಪ್ರಕರಣಗಳು ಮಾತ್ರ ಹೆಚ್ಚಾಗುತ್ತಲೇ ಇವೆ.

ವಿಧಾನಸೌಧ, ವಿಕಾಸಸೌಧ, ಎಂ.ಜಿ. ರಸ್ತೆಯ ಮೆಯೊ ಹಾಲ್, ಲಾಲ್‌ಬಾಗ್, ಕಬ್ಬನ್‌ಪಾರ್ಕ್ ಸುತ್ತಮುತ್ತ ಸೇರಿದಂತೆ ನಗರದ ಹಲವು ಪ್ರದೇಶ, ಮೈದಾನ, ರಸ್ತೆಗಳಲ್ಲಿ ಕತ್ತಲಾದ ಮೇಲೆ, ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು ಒಬ್ಬರೇ ನಡೆದು ಹೋಗದಂತಹ ಪರಿಸ್ಥಿತಿ ಇದೆ. ವ್ಯಗ್ರ ಬೀದಿ ನಾಯಿಗಳ ಆಟಾಟೋಪಕ್ಕೆ ಮಕ್ಕಳು, ವೃದ್ಧರೂ ಸೇರಿದಂತೆ ಎಲ್ಲ ವಯೋಮಾನದ ನಾಗರಿಕರು ಸಂಕಷ್ಟ ಎದುರಿಸುತ್ತಿದ್ದಾರೆ.

ಐದು ವರ್ಷಗಳಲ್ಲಿ ವರ್ಷಕ್ಕೆ ಸರಾಸರಿ 15 ಸಾವಿರ ಬೀದಿ ನಾಯಿ ಕಡಿತ ಪ್ರಕರಣಗಳು ದಾಖಲಾಗುತ್ತಿವೆ ಎಂದು ಬಿಬಿಎಂಪಿ ಅಂಕಿ–ಅಂಶಗಳು ಹೇಳುತ್ತಿವೆ. ಆದರೆ, 2025ರ ಜನವರಿಯಿಂದ ಜೂನ್‌ವರೆಗೇ 13 ಸಾವಿರಕ್ಕೂ ಹೆಚ್ಚು ಬೀದಿ ನಾಯಿ ಪ್ರಕರಣಗಳು ದಾಖಲಾಗಿವೆ. ಬ್ಯಾಟರಾಯನಪುರದ ಕೆಂಪೇಗೌಡ ನಗರದಲ್ಲಿ ಇತ್ತೀಚೆಗೆ ನಡೆದ ಬೀದಿ ನಾಯಿ ದಾಳಿ, ಕಡಿತ ಪ್ರಕರಣದಲ್ಲಿ ಸೀತಪ್ಪ ಎಂಬುವರು ಮೃತಪಟ್ಟಿದ್ದಾರೆ. ನಗರದಲ್ಲಿ ಹಲವು ಪ್ರದೇಶಗಳಲ್ಲಿ ಬೀದಿ ನಾಯಿ ಕಡಿತ ಪ್ರಕರಣಗಳು ಆಗಾಗ್ಗೆ ವರದಿಯಾಗುತ್ತಿವೆ. ವ್ಯಗ್ರ ಹಾಗೂ ಕಡಿಯುವುದನ್ನೇ ಅಭ್ಯಾಸ ಮಾಡಿಕೊಂಡ ನಾಯಿಗಳನ್ನು ಬಿಬಿಎಂಪಿ ಪಶುಸಂಗೋಪನೆ ವಿಭಾಗದಿಂದ ಹಿಡಿದು, ನಿಗಾ ಕೇಂದ್ರಕ್ಕೆ ದಾಖಲಿಸಲಾಗುತ್ತಿದೆ. ಆದರೂ, ನಾಗರಿಕರು ನೆಮ್ಮದಿಯಿಂದ ರಸ್ತೆಯಲ್ಲಿ ಸಂಚರಿಸಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ಇದೆ.


‘ಕಗ್ಗದಾಸಪುರದ ನೇತ್ರಾವತಿ ಕಾಲೊನಿಯಲ್ಲಿ ನಾಲ್ಕು ನಾಯಿಗಳು ತುಂಬಾ ಕ್ರೂರಿಯಾಗಿದ್ದು, ಈ ವರ್ಷದ ಜನವರಿಯಿಂದ ಈವರೆಗೆ ಸುಮಾರು 40 ಜನರಿಗೆ ಕಡಿದಿವೆ. ಕೆಲವು ಪ್ರಕರಣಗಳು ಅರಿವಿಗೆ ಬಂದಿಲ್ಲ’ ಎಂದು ನೇತ್ರಾವತಿ ಕಾಲೊನಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಲೋಕಾಯುಕ್ತರಿಗೂ ದೂರು ನೀಡಿದ್ದಾರೆ.




‘ನಾಗರಿಕರನ್ನು ಕಚ್ಚುವ ಬೀದಿ ನಾಯಿಗಳನ್ನು ಹಿಡಿದೊಯ್ಯುವ ಬಿಬಿಎಂಪಿಯವರು ಒಂದಷ್ಟು ದಿನವಾದ ಮೇಲೆ ಅದೇ ಸ್ಥಳಕ್ಕೆ ಬಂದು ಬಿಡುತ್ತಾರೆ. ಆ ನಾಯಿ ಮತ್ತೆ ಬೇರೆಯವರಿಗೆ ಕಚ್ಚುತ್ತದೆ’ ಎಂಬುದು ನಾಗರಿಕರ ಆರೋಪ.

‘ವ್ಯಗ್ರ ಅಥವಾ ಕಚ್ಚಿದ ಬೀದಿ ನಾಯಿಗಳನ್ನು ಹಿಡಿದು, ನಿಗಾ ಕೇಂದ್ರದಲ್ಲಿ ಇರಿಸಲಾಗುತ್ತದೆ. ವೈದ್ಯರು ಅವುಗಳಿಗೆ ಚಿಕಿತ್ಸೆ ನೀಡಿ, ಅವುಗಳು ಸಹಜ ಸ್ಥಿತಿಗೆ ಬಂದ ನಂತರ ಆ ನಾಯಿಗಳನ್ನು ಅವುಗಳಿದ್ದ ಸ್ಥಳಕ್ಕೇ ಬಿಡಬೇಕು, ಇದು ನಿಯಮ’ ಎಂದು ಬಿಬಿಎಂಪಿ ಅಧಿಕಾರಿಗಳು ಹೇಳಿದರು.


‘ಬೀದಿ ನಾಯಿಗಳು ಕಚ್ಚಲು ಇಂತಹದ್ದೇ ನಿರ್ದಿಷ್ಟ ಕಾರಣ ಎಂದು ಹೇಳಲು ಸಾಧ್ಯವಿಲ್ಲ. ವ್ಯಗ್ರ ಬೀದಿ ನಾಯಿಗಳು ಯಾವ ಕಾರಣವಿಲ್ಲದಿದ್ದರೂ ಕಚ್ಚುತ್ತವೆ. ಲೈಂಗಿಕಾಸಕ್ತಿಯ ಸಮಯವೂ ಕಚ್ಚಾಟದ ಕಾರಣಗಳಲ್ಲಿ ಒಂದು. ಆಹಾರ ಸಿಗದಿರುವುದು, ಹೆಚ್ಚಿನ ಆಹಾರ ಸಿಗುವುದು, ಮಾಂಸಕ್ಕಾಗಿ ಪರಸ್ಪರ ಕಿತ್ತಾಟದಲ್ಲಿ ಜನರ ಮೇಲೆರಗುವುದೂ ಬೀದಿ ನಾಯಿಗಳ ಕಚ್ಚಾಟಕ್ಕೆ ಕಾರಣಗಳಾಗಿವೆ’ ಎಂದು ಮಾಹಿತಿ ನೀಡಿದರು.




**ಬೀದಿ ನಾಯಿ ಕಡಿತ ಪ್ರಕರಣಗಳು**

| | |
|---|---|
| 13,831 | ಬಿಬಿಎಂಪಿ ವ್ಯಾಪ್ತಿಯಲ್ಲಿ 2025ರ ಜನವರಿಯಿಂದ ಜೂನ್‌ವರೆಗೆ |
| 2,562 | ಮೇ 2025ರಲ್ಲಿ |
| 2,184 | ಜೂನ್ 2025ರಲ್ಲಿ |
| 22,000 | 2022–23ನೇ ಸಾಲು |
| 35,000 | 2017–18ನೇ ಸಾಲು |
| 2,31,091 | ರಾಜ್ಯದಲ್ಲಿ 2025ರ ಜನವರಿಯಿಂದ ಜೂನ್‌ವರೆಗೆ |






## ಚುಚ್ಚುಮದ್ದು, ಶಸ್ತ್ರಚಿಕಿತ್ಸೆಗೆ ‘ಟ್ರ್ಯಾಪ್ ಕೇಜ್’

ರಸ್ತೆ, ಬೀದಿಯಲ್ಲಿ ಹತ್ತಾರು ಸಂಖ್ಯೆಯಲ್ಲಿ ಬೀದಿ ನಾಯಿಗಳು ನಿತ್ಯವೂ ಅಡ್ಡಾಡುತ್ತಿರುತ್ತವೆ, ಬೊಗಳುತ್ತಿರುತ್ತವೆ. ಅವುಗಳನ್ನು ಹಿಡಿಯಲು ಬಿಬಿಎಂಪಿ ವಾಹನ ಬಂದ ಸಂದರ್ಭದಲ್ಲಿ ಎಲ್ಲವೂ ಮಾಯವಾಗುತ್ತವೆ. ಬೀದಿ ನಾಯಿಗಳನ್ನು ಹಿಡಿಯಲು ಸಿಬ್ಬಂದಿ ಹರಸಾಹಸ ಪಡಬೇಕಾಗಿದೆ. ಬೀದಿ ನಾಯಿಗಳನ್ನು ಹಿಡಿದು ಅವುಗಳಿಗೆ ಚುಚ್ಚು ಮದ್ದು ಹಾಗೂ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ನಡೆಸಲು ಬಿಬಿಎಂಪಿ ಹೊಸ ಯೋಜನೆ ಜಾರಿಗೊಳಿಸಿದೆ, ಅದುವೇ ‘ಟ್ರ್ಯಾಪ್ ಕೇಜ್’.

‘ನಗರದಲ್ಲಿ ಹಲವರು ಬೀದಿ ನಾಯಿಗಳಿಗೆ ಆಹಾರ ನೀಡುತ್ತಾರೆ. ಅವರು ಬಂದಾಗ ನಾಯಿಗಳೆಲ್ಲ ಅವರ ಹಿಂದೆ, ಅವರು ಆಹಾರ ಹಾಕುವ ಸ್ಥಳಕ್ಕೆ ಬರುತ್ತವೆ. ಹೀಗಾಗಿ, ಅಂತಹವರನ್ನು ಮನವಿ ಮಾಡಿಕೊಂಡಿದ್ದು, ಬಿಬಿಎಂಪಿ ಇರಿಸುವ ‘ಟ್ರ್ಯಾಪ್ ಕೇಜ್’ನಲ್ಲಿ ಆಹಾರ ಹಾಕುವಂತೆ ಕೇಳಿಕೊಳ್ಳಲಾಗಿದೆ. 10 x 15 ಅಡಿಯ ಬೋನಿನಲ್ಲಿ ಆಹಾರ ಸೇವಿಸಲು ಬರುವ ನಾಯಿಗಳನ್ನು ಹಿಡಿದು, ಅವುಗಳಿಗೆ ಅಗತ್ಯವಾದ ಚುಚ್ಚುಮದ್ದು ನೀಡಲಾಗುತ್ತದೆ. ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಯಾಗಿರದಿದ್ದರೆ ಅದನ್ನು ಮಾಡಿದ ನಂತರ, ಆ ಸ್ಥಳಗಳಲ್ಲೇ ಬೀದಿ ನಾಯಿಗಳನ್ನು ಬಿಡಲಾಗುತ್ತಿದೆ’ ಎಂದು ಬಿಬಿಎಂಪಿ ಪಶುಸಂಗೋಪನೆ ವಿಭಾಗದ ಜಂಟಿ ನಿರ್ದೇಶಕ ಚಂದ್ರಯ್ಯ ಅವರು ಮಾಹಿತಿ ನೀಡಿದರು.

### ದೂರಿನ ಮೇಲೆ ಕ್ರಮ: ಬಿಬಿಎಂಪಿ

‘ಬೀದಿ ನಾಯಿಗಳ ಕಡಿತ ಪ್ರಕರಣಗಳ ಬಗ್ಗೆ ದಾಖಲಾಗುವ ದೂರಿನಂತೆ ಕ್ರಮ ಕ್ರಮ ಕೈಗೊಳ್ಳಲಾಗುತ್ತಿದೆ. ಆ ಪ್ರದೇಶಗಳಿಗೆ ನಮ್ಮ ವೈದ್ಯರ ತಂಡ ಭೇಟಿ ನೀಡಿ, ವ್ಯಗ್ರ ಬೀದಿ ನಾಯಿಗಳನ್ನು ಹಿಡಿಯುವ ಕೆಲಸ ಮಾಡುತ್ತದೆ. ತಕ್ಷಣಕ್ಕೆ ಸಿಗದ ಬೀದಿ ನಾಯಿಗಳನ್ನು ಹಿಡಿಯಲು ಬೋನ್‌ಗಳನ್ನೂ ಹಿಡಲಾಗುತ್ತದೆ’ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

‘ವ್ಯಗ್ರ ಅಥವಾ ಕಚ್ಚುವುದನ್ನೇ ಅಭ್ಯಾಸ ಮಾಡಿಕೊಂಡಿರುವ ಬೀದಿ ನಾಯಿಗಳನ್ನು ಹಿಡಿದು ಅವುಗಳನ್ನು ನಿಗಾ ಕೇಂದ್ರಗಳಲ್ಲಿ ಇರಿಸಲಾಗುತ್ತದೆ. ವೈದ್ಯರು ಅವುಗಳಿಗೆ ಚಿಕಿತ್ಸೆ ನೀಡುತ್ತಾರೆ. ಅವುಗಳು ಸಹಜ ಸ್ಥಿತಿಗೆ ಬಂದಿವೆ ಎಂದು ವೈದ್ಯರು ದೃಢೀಕರಿಸಿದ ಮೇಲೆ ಅವುಗಳನ್ನು ಬಿಡಲಾಗುತ್ತದೆ’ ಎಂದರು.

## ಆಹಾರ ನೀಡಬೇಡಿ ಎಂದರೆ, ಚಿಕನ್ ನೀಡುತ್ತಾರಂತೆ!

‘ಬೀದಿ ನಾಯಿಗಳು ಆಹಾರಕ್ಕಾಗಿ ಮಕ್ಕಳು ಹಾಗೂ ವೃದ್ಧರ ಮೇಲೆ ಎರಗುತ್ತಿವೆ. ಅವುಗಳಿಗೆ ಆಹಾರ ನೀಡುವ ಗುಂಪೇ ಇದೆ. ಕೋಳಿ ಮಾಂಸ, ಮೀನು ಮಾಂಸ, ಮೂಳೆ ಸೇರಿದಂತೆ ಎಲ್ಲೆಲ್ಲಿಂದಲೋ ತಂದು ಕೆಲವು ಬೀದಿ ನಾಯಿಗಳಿಗೆ ಹಾಕುತ್ತಾರೆ. ಕೆಲವು ಪ್ರದೇಶಗಳಲ್ಲಿ ನಿತ್ಯವೂ ಬಿಸ್ಕತ್ ಹಾಕುವುದು ಸಾಮಾನ್ಯವಾಗಿದೆ. ಹೀಗೆ, ಸಿಗುವ ಆಹಾರ ಸಿಗದಾಗ ಬೀದಿ ನಾಯಿಗಳು ನಾಗರಿಕರ ಮೇಲೆ ದಾಳಿ ಮಾಡುತ್ತಿವೆ. ಅವುಗಳಿಗೆ ಆಹಾರ ಹಾಕದಿದ್ದರೆ ಬೇರೆ ಪ್ರದೇಶಗಳಿಗೆ ಹೋಗುತ್ತವೆ ಎಂದು ಹಲವು ಬಾರಿ ಹೇಳುತ್ತಿದ್ದೇವೆ. ಆದರೆ ಯಾರೂ ಕೇಳುತ್ತಿಲ್ಲ. ಬಿಬಿಎಂಪಿಯೇ ಅವರ ಬೆಂಬಲಕ್ಕೆ ನಿಂತಿದೆ. ₹2 ಕೋಟಿ ವೆಚ್ಚ ಮಾಡಿ ಬೀದಿ ನಾಯಿಗಳಿಗೆ ಕೋಳಿ ಮಾಂಸ ಸೇರಿದಂತೆ ಪೌಷ್ಟಿಕ ಆಹಾರ ನೀಡಲು ಮುಂದಾಗಿದೆ. ಇದರ ಬದಲು ಬೀದಿ ನಾಯಿಗಳ ಹಾವಳಿಯನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳಲಿ’ ಎಂದು ನಾಗರಿಕರಾದ ಶ್ರೀನಿವಾಸ್, ಜಗದೀಶ್, ಶರ್ಮಿಳಾ, ಉಮಾ ಅವರು ಆಗ್ರಹಿಸಿದರು.

### ‘ಆಶ್ರಯ ಕೇಂದ್ರ’ಗಳಿಗೆ ಬೇಕು ನೂರಾರು ಎಕರೆ!

ದೆಹಲಿಯ ಎಲ್ಲ ಪ್ರದೇಶಗಳಲ್ಲಿರುವ ಬೀದಿ ನಾಯಿಗಳನ್ನು ‘ಆಶ್ರಯ ಕೇಂದ್ರ’ಕ್ಕೆ ಸ್ಥಳಾಂತರಿಸಬೇಕು ಎಂಬ ಸುಪ್ರೀಂ ಕೋರ್ಟ್ ಆದೇಶವನ್ನು ಬೆಂಗಳೂರಿನಲ್ಲೂ ಪಾಲಿಸಿದರೆ, ಸಾವಿರಾರು ‘ಆಶ್ರಯ ಕೇಂದ್ರ’ಗಳನ್ನು ಬಿಬಿಎಂಪಿ ಸ್ಥಾಪಿಸಬೇಕಾಗುತ್ತದೆ.

ವ್ಯಗ್ಯ ಹಾಗೂ ಕಚ್ಚುವ ನಾಯಿಗಳನ್ನು ಇರಿಸಿ, ಅವುಗಳಿಗೆ ಚಿಕಿತ್ಸೆ ನೀಡಲು ‘ನಿಗಾ ಕೇಂದ್ರ’ಗಳನ್ನೇ ಬಿಬಿಎಂಪಿ ಸ್ಥಾಪಿಸಲು ಸಾಧ್ಯವಾಗುತ್ತಿಲ್ಲ. ದಾಸರಹಳ್ಳಿಯಲ್ಲಿ ಸುಮಾರು 50 ಬೀದಿ ನಾಯಿಗಳನ್ನು ಇರಿಸುವ ‘ನಿಗಾ ಕೇಂದ್ರ’ವಿದೆ. ಯಲಹಂಕ ಹಾಗೂ ಆರ್.ಆರ್. ನಗರದಲ್ಲಿ ಇದೇ ರೀತಿಯ ‘ನಿಗಾ ಕೇಂದ್ರ’ಗಳು ನಿರ್ಮಾಣವಾಗುತ್ತಿವೆ. ಇಲ್ಲಿ ಸುಮಾರು 500 ನಾಯಿಗಳಿಗೆ ಅವಕಾಶವಿದೆ. ವ್ಯಗ್ರ ನಾಯಿಗಳನ್ನೇ ನಿಗಾ ವಹಿಸಲು ಬಿಬಿಎಂಪಿಯಲ್ಲಿ ಸ್ಥಳಾವಕಾಶದ ಕೊರತೆ ಇದೆ. ಇನ್ನು ಎಲ್ಲ 2.79 ಲಕ್ಷ ಬೀದಿ ನಾಯಿಗಳಿಗೆ ‘ಆಶ್ರಯ ಕೇಂದ್ರ’ ಸ್ಥಾಪಿಸಬೇಕಾದರೆ ನೂರಾರು ಎಕರೆ ಭೂಮಿ ಬೇಕಾಗುತ್ತದೆ. ನಿರ್ಮಾಣಕ್ಕೆ ಸಾವಿರಾರು ಕೋಟಿ ಬೇಕಾಗುತ್ತದೆ ಎನ್ನಲಾಗಿದೆ.

---

## ಮೆಟ್ರೊ ಹಳಿಗೆ ಹಾರಿದ ವ್ಯಕ್ತಿಯ ರಕ್ಷಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮೆಜೆಸ್ಟಿಕ್ ಮೆಟ್ರೊ ನಿಲ್ದಾಣದಲ್ಲಿ ಸೋಮವಾರ ರಾತ್ರಿ 10.04ಕ್ಕೆ ವ್ಯಕ್ತಿಯೊಬ್ಬರು ಮೆಟ್ರೊ ರೈಲು ಬರುವ ಹೊತ್ತಿಗೆ ಹಳಿಗೆ ಹಾರಿದ್ದು, ಮೆಟ್ರೊ ಸಿಬ್ಬಂದಿ ಕೂಡಲೇ ವಿದ್ಯುತ್ ಸರಬರಾಜು ಸ್ಥಗಿತ ಗೊಳಿಸಿ ರಕ್ಷಿಸಿದ್ದಾರೆ. ವ್ಯಕ್ತಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಹಸಿರು ಮಾರ್ಗದಲ್ಲಿ ರೇಷ್ಮೆ ಸಂಸ್ಥೆ ಕಡೆಗೆ ತೆರಳುವ ಮಾರ್ಗದಲ್ಲಿ ಈ ಘಟನೆ ನಡೆದಿದ್ದು, ಅರ್ಧಗಂಟೆ ಮೆಟ್ರೊ ಸಂಚಾರ ಸ್ಥಗಿತಗೊಂಡಿತು.

ರಾತ್ರಿ 10.30ರ ನಂತರ ರೈಲು ಸಂಚಾರ ಮತ್ತೆ ಆರಂಭವಾಯಿತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

**ನಿಧನ ವಾರ್ತೆ**

## ಲಿಂಬಾವಳಿಗೆ ಮಾತೃ ವಿಯೋಗ

**ಬಾಗಲಕೋಟೆ:** ಮಾಜಿ ಸಚಿವ, ಬಿಜೆಪಿ ಮುಖಂಡ ಅರವಿಂದ ಲಿಂಬಾವಳಿ ಅವರ ತಾಯಿ ಭೀಮಾಬಾಯಿ ವೆಂಕಟರಾವ ಲಿಂಬಾವಳಿ(84) ಬಾಗಲಕೋಟೆಯಲ್ಲಿ ಸೋಮವಾರ ಬೆಳಿಗ್ಗೆ ನಿಧನರಾದರು. ಮೃತರಿಗೆ ಅರವಿಂದ ಲಿಂಬಾವಳಿ ಸೇರಿ ಐವರು ಪುತ್ರರು ಮತ್ತು ಇಬ್ಬರು ಪುತ್ರಿಯರು ಇದ್ದಾರೆ.



ಭೀಮಾಬಾಯಿ ಲಿಂಬಾವಳಿ

ಐಟಿ ಉದ್ಯೋಗಿಗಳಿಗೆ ಸಂತಸ • ದಟ್ಟಣೆ ಅವಧಿಯಲ್ಲಿ ನೂಕುನುಗ್ಗಲು

# ಹಳದಿ ಮಾರ್ಗ: ಮೊದಲ ದಿನ ಉತ್ತಮ ಸ್ಪಂದನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಮೆಟ್ರೊ ಸಂಚಾರ ಆರಂಭಗೊಂಡಿದ್ದು, ಮೊದಲ ದಿನ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ದೊರೆತಿದೆ. ವಿಪರೀತ ವಾಹನದಟ್ಟಣೆಯ ಕಾರಣದಿಂದ ರಸ್ತೆಯಲ್ಲೇ ತಾಸುಗಟ್ಟಲೆ ಸಮಯ ಕಳೆದು ಹೋಗುವುದು ತಪ್ಪಿರುವುದು ಜನರಲ್ಲಿ ಅದರಲ್ಲಿಯೂ ಐಟಿ ಉದ್ಯೋಗಿಗಳಿಗೆ ಸಂತಸವನ್ನು ಉಂಟು ಮಾಡಿದೆ.

ಆರ್.ವಿ. ರಸ್ತೆಯಿಂದ ಮೊದಲ ಮೆಟ್ರೊ ಆರಂಭಗೊಂಡಾಗ ಪ್ರಯಾಣಿಕರ ಸಂಖ್ಯೆ ಸಾಧಾರಣವಾಗಿತ್ತು. ಅಧಿಕ ಸಂಖ್ಯೆಯಲ್ಲಿ ಜನರು ಕೆಲಸಕ್ಕೆ ತೆರಳುವ ಸಮಯವಾಗಿರುವ ಬೆಳಿಗ್ಗೆ 8ರಿಂದ 10 ಗಂಟೆಯವರೆಗೆ ಭಾರಿ ಜನದಟ್ಟಣೆ ಉಂಟಾಗಿತ್ತು. ಸಂಜೆ ಕೆಲಸ ಮುಗಿಸಿ ವಾಪಸ್ಸಾಗುವ ಸಮಯದಲ್ಲಿಯೂ ಇದೇ ರೀತಿ ದಟ್ಟಣೆ ಉಂಟಾಯಿತು.

ಆರ್.ವಿ. ರಸ್ತೆಯಿಂದ ಬೆಳಿಗ್ಗೆ 6.30ಕ್ಕೆ ಮೊದಲು ರೈಲು ಹೊರಟಿತು. ರಾಗಿಗುಡ್ಡಕ್ಕೆ 6.32ಕ್ಕೆ, ಜಯದೇವ ಆಸ್ಪತ್ರೆ ನಿಲ್ದಾಣಕ್ಕೆ 6.35ಕ್ಕೆ, ಬಿಟಿಎಂ ಲೇಔಟ್‌ಗೆ 6.37ಕ್ಕೆ, ಸೆಂಟ್ರಲ್ ಸಿಲ್ಕ್ ಬೋರ್ಡ್‌ಗೆ 6.40ಕ್ಕೆ ಬೊಮ್ಮನಹಳ್ಳಿಗೆ 6.42, ಹೊಂಗಸಂದ್ರಕ್ಕೆ 6.44, ಕೂಡ್ಲು ಗೇಟ್ 6.46, ಸಿಂಗಸಂದ್ರ 6.48, ಹೊಸ ರೋಡ್ 6.50, ಬೆರಟೆನ ಅಗ್ರಹಾರ 6.52, ಎಲೆಕ್ಟ್ರಾನಿಕ್ ಸಿಟಿ 6.54, ಕೋನಪ್ಪನ ಅಗ್ರಹಾರ 6.56, ಹುಸ್ಕೂರು ರಸ್ತೆ 6.58, ಹೆಬ್ಬಗೋಡಿ 6.59, ಬೊಮ್ಮಸಂದ್ರಕ್ಕೆ 7.02ಕ್ಕೆ ತಲುಪಿದೆ ಎಂದು ‘ಬೆಂಗಳೂರು ಮೆಟ್ರೊ ಅಪ್‌ಡೇಟ್’ ಎಂಬ ‘ಎಕ್ಸ್’ ಖಾತೆಯಲ್ಲಿ ಪ್ರಯಾಣಿಕರೊಬ್ಬರು ಹಂಚಿಕೊಂಡಿದ್ದಾರೆ.



ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಸೋಮವಾರ ಪ್ರಯಾಣಿಸಲು ಬಂದ ಜನಸ್ತೋಮ —ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಈ ದಿನಕ್ಕಾಗಿ ನಾನು ತುಂಬಾ ಕಾತುರದಿಂದ ಕಾಯುತ್ತಿದ್ದೆ. ನನ್ನ ಮೊದಲ ಸಂಚಾರವನ್ನು ಮುಗಿಸಿದೆ. ಜಯನಗರ, ಬಿಟಿಎಂ, ಸಿಲ್ಕ್ ಬೋರ್ಡ್ ಮತ್ತು ಬೊಮ್ಮನಹಳ್ಳಿಯ ಸಂಚಾರದ ಅವ್ಯವಸ್ಥೆಯಿಂದ ಪಾರಾಗಿ ಕೇವಲ 32 ನಿಮಿಷಕ್ಕೆ 19.15 ಕಿ.ಮೀ. ಕ್ರಮಿಸಿದೆ. ಬಹಳ ಆನಂದ ಉಂಟಾಯಿತು ಎಂದು ಅವರು ಸಂತಸ ಹಂಚಿಕೊಂಡಿದ್ದಾರೆ.

‘ಹಳದಿ ಮಾರ್ಗದಲ್ಲಿ ಮೊದಲ ದಿನವೇ ಸಂಚರಿಸುತ್ತಿರುವುದು ನನಗೆ ಬಹಳ ಖುಷಿ ನೀಡಿದೆ. ಇಲ್ಲಿವರೆಗೆ ರಾಜಾಜಿನಗರದಿಂದ ಆರ್.ವಿ. ರಸ್ತೆವರೆಗೆ ಹಸಿರು ಮಾರ್ಗದ ಮೆಟ್ರೊದಲ್ಲಿ ಬಂದು ಇಲ್ಲಿಂದ ಬಸ್ ಇಲ್ಲವೇ ಆಟೊದಲ್ಲಿ ಎಲೆಕ್ಟ್ರಾನಿಕ್ ಸಿಟಿಗೆ ಹೋಗುತ್ತಿದ್ದೆ. ಮೆಟ್ರೊದಲ್ಲಿಯೇ ಹೋಗುತ್ತಿದ್ದೇನೆ. ಒಂದೇ ಒಂದು ಸಮಸ್ಯೆ ಎಂದರೆ ಒಂದು ಮೆಟ್ರೊ ತಪ್ಪಿದರೆ ಇಲ್ಲಿ 25 ನಿಮಿಷ ಕಾಯಬೇಕು. ಕಾಯುವ ಅವಧಿ ಕಡಿಮೆ ಯಾಗಬೇಕು’ ಎಂದು ಎಲೆಕ್ಟ್ರಾನಿಕ್ ಸಿಟಿಯ ಖಾಸಗಿ ಕಂಪನಿ ಉದ್ಯೋಗಿ ನಿಖಿತಾ ಅನುಭವ ಹಂಚಿಕೊಂಡರು.

‘ಮೆಜೆಸ್ಟಿಕ್‌ನಿಂದ ಬಿಟಿಎಂ ಲೇಔಟ್‌ಗೆ ಹೋಗಬೇಕಿದ್ದರೆ ಬಸ್‌ನಲ್ಲೇ ಒಂದೂವರೆ ಗಂಟೆ ಕಳೆದು ಹೋಗುತ್ತಿತ್ತು. ಇವತ್ತು ಹಸಿರು ಮಾರ್ಗದ ಮೆಟ್ರೊದಲ್ಲಿ ಆರ್.ವಿ. ರಸ್ತೆಗೆ 15 ನಿಮಿಷದಲ್ಲಿ ಬಂದಿದ್ದೇನೆ. ಇಲ್ಲಿಂದ ಹಳದಿ ಮೆಟ್ರೊದಲ್ಲಿ ಐದಾರು ನಿಮಿಷಕ್ಕೆ ಬಿಟಿಎಂ ಲೇಔಟ್‌ಗೆ ತಲುಪಲಿದ್ದೇನೆ’ ಎಂದು ಪ್ರಯಾಣಿಕರಾದ ಪ್ರೀತಿ ಅವರು ತಿಳಿಸಿದರು.

‘ಡೆಲ್ಟಾ ಎಲೆಕ್ಟ್ರಾನಿಕ್ಸ್ ಬೊಮ್ಮಸಂದ್ರ ಮತ್ತು ಆರ್.ವಿ. ರಸ್ತೆ ಟರ್ಮಿನಲ್‌ಗಳಿಂದ ಪ್ರತಿ ದಿನ ಬೆಳಿಗ್ಗೆ 6.30ಕ್ಕೆ (ಭಾನುವಾರ ಮಾತ್ರ ಬೆಳಿಗ್ಗೆ 7) ಮೊದಲ ಮೆಟ್ರೊ ಹೊರಡಲಿದೆ. ಕೊನೇ ರೈಲು ಮಾತ್ರ ಬೊಮ್ಮಸಂದ್ರದಿಂದ 10.42ಕ್ಕೆ ಹೊರಟರೆ, ಆರ್.ವಿ. ರಸ್ತೆಯಿಂದ 11.55ಕ್ಕೆ ಹೊರಡಲಿದೆ. ಮೆಜೆಸ್ಟಿಕ್‌ನಿಂದ ಹಸಿರು ಮಾರ್ಗದಲ್ಲಿ ಕೊನೇ ಮೆಟ್ರೊದಲ್ಲಿ ಬರುವವರಿಗೆ ಅನುಕೂಲವಾಗಲಿ ಎಂಬ ಕಾರಣಕ್ಕೆ ಆರ್.ವಿ. ರಸ್ತೆಯಿಂದ ಹೊರಡುವ ಕೊನೇ ಮೆಟ್ರೊ ಅವಧಿಯನ್ನು ಹೊಂದಾಣಿಕೆ ಮಾಡಲಾಗಿದೆ’ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದರು.

‘ಆರ್.ವಿ. ರಸ್ತೆ ಮೆಟ್ರೊ ನಿಲ್ದಾಣ ಇಂಟರ್‌ಚೇಂಜ್ ನಿಲ್ದಾಣ ಆಗಿರುವುದರಿಂದ ಪ್ರಯಾಣಿಕರು ಮೆಟ್ರೊಗೆ ಕಾಯುತ್ತಾ ನಿಲ್ಲುವ ಪ್ರದೇಶ ಇನ್ನಷ್ಟು ವಿಶಾಲವಾಗಿರಬೇಕಿತ್ತು’ ಎಂದು ಪ್ರಯಾಣಿಕರು ಅಭಿಪ್ರಾಯಪಟ್ಟರು.

### ಅಕ್ಟೋಬರ್‌ನಿಂದ ಪ್ರತಿ ತಿಂಗಳು 2 ರೈಲು

‘ನಾನು ಟಿಟಾಗಢ್‌ನ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಮಾತನಾಡಿದ್ದು, ಅಕ್ಟೋಬರ್‌ನಿಂದ ಪ್ರತಿ ತಿಂಗಳು ಎರಡು ಹೊಸ ರೈಲು ಸೆಟ್‌ಗಳನ್ನು ತಲುಪಿಸಲಾಗುವುದು. ಈ ತಿಂಗಳ ಅಂತ್ಯದ ವೇಳೆಗೆ ಒಂದು ಹೆಚ್ಚುವರಿ ರೈಲು ಸಂಚರಿಸಲಿದೆ’ ಎಂದು ಸಂಸದ ತೇಜಸ್ವಿ ಸೂರ್ಯ ತಿಳಿಸಿದರು.

ಅವರು ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಸೋಮವಾರ ಸಂಚರಿಸಿದ ಬಳಿಕ ಮಾತನಾಡಿದರು.

‘ನಮ್ಮ ಮೆಟ್ರೊ ಹಳದಿ ಮಾರ್ಗ ಮೊದಲ ದಿನ ಮೊದಲ ಸಂಚಾರ ಹೌಸ್‌ಫುಲ್ ಆಗಿದೆ. ಸಾವಿರಾರು ಪ್ರಯಾಣಿಕರೊಂದಿಗೆ ನಾನೂ ಪ್ರಯಾಣಿಸಿದೆ. ವಿದ್ಯಾರ್ಥಿಗಳು, ಐಟಿ ಉದ್ಯೋಗಿಗಳು, ಬೊಮ್ಮಸಂದ್ರದ ಕಾರ್ಖಾನೆಯ ಕಾರ್ಮಿಕರು, ಗಾರ್ಮೆಂಟ್ಸ್ ಕಾರ್ಮಿಕರು ಮತ್ತು ಇತರ ಸಾವಿರಾರು ಜನರಿದ್ದರು’ ಎಂದು ಹೇಳಿದರು.

‘ಈ ಮಾರ್ಗದಲ್ಲಿ ಹಿಂದೆ ಪ್ರಯಾಣಿಸಲು ಎರಡು ಗಂಟೆಗಳಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳುತ್ತಿತ್ತು, ಈಗ ಕೇವಲ 35 ನಿಮಿಷಗಳಲ್ಲಿ ತಲುಪಬಹುದು ಎಂದು ಹಲವರು ನನ್ನೊಂದಿಗೆ ಸಂತೋಷ ಹಂಚಿಕೊಂಡಿದ್ದಾರೆ’ ಎಂದು ವಿವರಿಸಿದರು.

‘ಆರ್.ವಿ. ರಸ್ತೆ ನಿಲ್ದಾಣದಲ್ಲಿ ಜನಸಂದಣಿಯನ್ನು ಗಮನಿಸಿ, ಪ್ರಯಾಣಿಕರ ಸಂಚಾರಕ್ಕಾಗಿ ತಕ್ಷಣವೇ ಸ್ಟೀಲ್ ಬ್ಯಾರಿಕೇಡ್‌ಗಳನ್ನು ಅಳವಡಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದೇನೆ’ ಎಂದರು.



ಶಿಲ್ಪಿ ಅರುಣ್ ಯೋಗಿರಾಜ್ ಅವರನ್ನು ಕೆ.ಎಂ. ನಾಗರಾಜ್, ಎಚ್‌.ಎಂ. ರೇವಣ್ಣ, ಗಂಗಾಂಬಿಕೆ ಮಲ್ಲಿಕಾರ್ಜುನ್, ರಂಗಶ್ರೀ ರಂಗರಾಜು, ಡಿ. ಹೇಮಚಂದ್ರ ಸಾಗರ್ ಸನ್ಮಾನಿಸಿದರು

## ಮಿಟ್ಲಮರದ ಮುನೇಶ್ವರಸ್ವಾಮಿ ದೇವಸ್ಥಾನ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜಯನಗರ 2ನೇ ಬ್ಲಾಕ್‌ನ ಟಿ.ಮರಿಯಪ್ಪ ರಸ್ತೆಯಲ್ಲಿರುವ ಮಿಟ್ಲಮರದ ಮುನೇಶ್ವರಸ್ವಾಮಿಯ ದೇವರ ಪ್ರತಿಷ್ಠಾಪನೆ, ನೂತನ ದೇವಾಲಯ ಲೋಕಾರ್ಪಣೆ, ಮಹಾಕುಂಭಾಭಿಷೇಕ ಕಾರ್ಯಕ್ರಮ ಸಡಗರದಿಂದ ನಡೆಯಿತು.

6 ಅಡಿ ಎತ್ತರದ ಕೃಷ್ಣ ಶಿಲೆಯಿಂದ ಮುನೇಶ್ವರ ಸ್ವಾಮಿಯ ಮೂರ್ತಿಯನ್ನು ಅರುಣ್‌ಯೋಗಿರಾಜ್ ಕೆತ್ತಿದ್ದರು. ₹ 4 ಕೋಟಿ ವೆಚ್ಚದಲ್ಲಿ ದೇವಾಲಯದ ಕಟ್ಟಡ ನಿರ್ಮಾಣ ಮಾಡಿದ್ದು, 5 ಎತ್ತರದ ರಾಜಗೋಪುರಗಳನ್ನು ಒಳಗೊಂಡಿದೆ. ಬಹುತೇಕ ಕಲ್ಲಿನ ಕೆತ್ತನೆಯಿಂದ ಕೂಡಿದೆ. ಎಸ್‌.ಆರ್‌.ನರಸಿಂಹಮೂರ್ತಿ ಅವರ ನೇತೃತ್ವದಲ್ಲಿ 40ಕ್ಕೂ ಹೆಚ್ಚು ಅರ್ಚಕರಿಂದ ವಿವಿಧ ಹೋಮ-ಹವನಗಳು, ವಿಶೇಷ ಪೂಜೆಗಳು ಜರುಗಿದವು.

ಮುನೇಶ್ವರ ದೇವಸ್ಥಾನ ಅಭಿವೃದ್ಧಿ ಸಂಘ ಟ್ರಸ್ಟ್ ಅಧ್ಯಕ್ಷ ಕೆ.ಎಂ.ನಾಗರಾಜ್ ಅಧ್ಯಕ್ಷತೆ ವಹಿಸಿದ್ದರು. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್‌.ಎಂ. ರೇವಣ್ಣ, ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ಮಾಜಿ ಶಾಸಕ ಡಿ. ಹೇಮ ಚಂದ್ರಸಾಗರ್, ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ, ದಿ ಜಯನಗರ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ ಅಧ್ಯಕ್ಷ ಬಿ.ಆರ್. ವಾಸುದೇವ್, ಕಾಂಗ್ರೆಸ್ ಮುಖಂಡ ಮಲ್ಲಿಕಾರ್ಜುನ, ಮಾಜಿ ಶಾಸಕ ಕೆ. ಚಂದ್ರಶೇಖರ್, ಬಿಎಂಟಿಸಿ ಮಾಜಿ ಅಧ್ಯಕ್ಷ ವಿ.ಎಸ್.ಆರಾಧ್ಯ, ಶಿಲ್ಪಿ ಅರುಣ್ ಯೋಗಿರಾಜ್, ಟಿಟಿಡಿಯ ಕೆ.ಎನ್. ರಾಮಕೃಷ್ಣ ಭಾಗವಹಿಸಿದ್ದರು.

> **ದೇವರನ್ನು ನಂಬಿದರೆ ಯಶಸ್ಸು, ಆರೋಗ್ಯ, ಸುಖ- ಶಾಂತಿ ಸಿಗಲಿದೆ. ನಂಬಿದ ಭಕ್ತರನ್ನು ಭಗವಂತ ಯಾವತ್ತೂ ಕೈ ಬಿಡುವುದಿಲ್ಲ.**
> **ಡಿ.ಕೆ.ಶಿವಕುಮಾರ್**, ಉಪ ಮುಖ್ಯಮಂತ್ರಿ

**ನಗರದಲ್ಲಿ ಇಂದು**

**ಗ್ರಂಥಪಾಲಕರ ದಿನಾಚರಣೆ, ಪ್ರಶಸ್ತಿ ಪ್ರದಾನ:** ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಪ್ರಶಸ್ತಿ ಪ್ರದಾನ: ಎಸ್. ಮಧು ಬಂಗಾರಪ್ಪ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ‘ಪುಸ್ತಕ ಸಂಸ್ಕೃತಿ’ ಉಪನ್ಯಾಸ: ಪುರುಷೋತ್ತಮ ಬಿಳಿಮಲೆ, ಕರೀಗೌಡ ಬೀಚನಹಳ್ಳಿ, ‘ಗ್ರಂಥಪಾಲಕರ ದಿನಾಚರಣೆ’ ಉಪನ್ಯಾಸ: ಶಿವರಾಮ್ ಬಿ.ಎಸ್., ಆಯೋಜನೆ: ಸಾರ್ವಜನಿಕ ಗ್ರಂಥಾಲಯ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 9

**ವಿದ್ಯಾರ್ಥಿಗಳ ಪದಗ್ರಹಣ ಸಮಾರಂಭ:** ಅತಿಥಿ: ಬಿ. ರಮೇಶ್, ಆಯೋಜನೆ ಮತ್ತು ಸ್ಥಳ: ಬಿಷಪ್ ಕಾಟನ್ ವುಮೆನ್ಸ್ ಕ್ರಿಶ್ಚಿಯನ್ ಕಾಲೇಜು, ಮಿಷನ್ ರಸ್ತೆ, ಬೆಳಿಗ್ಗೆ 10

**‘ಒಳ ಮೀಸಲಾತಿ ಸಮೀಕ್ಷಾ ವರದಿಯ ಮುಂದಿನ ಸವಾಲುಗಳು’ ರಾಜ್ಯ ಮಟ್ಟದ ಚಿಂತನಾ ಸಭೆ:** ಆಯೋಜನೆ: ಕರ್ನಾಟಕ ಬಂಜಾರ ಹಕ್ಕು ಸಂರಕ್ಷಣಾ ಸಮಿತಿ, ಸ್ಥಳ: ಬಂಜಾರ ಭವನ, ವಸಂತನಗರ, ಬೆಳಿಗ್ಗೆ 10.30

**ಸಾಂಸ್ಕೃತಿಕ, ಕ್ರೀಡೆ, ಎನ್‌ಎಸ್‌ಎಸ್, ರೆಡ್‌ಕ್ರಾಸ್, ರೋವರ್ಸ್–ರೇಂಜರ್ಸ್, ಕನ್ನಡ ಸಂಘ ಹಾಗೂ ವಿವಿಧ ಸಮಿತಿ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಪದವಿ ವಿದ್ಯಾರ್ಥಿಗಳಿಗೆ ಉಚಿತ ನೋಟ್‌ಬುಕ್ ಹಾಗೂ ಸುದ್ದಿ ಪತ್ರಿಕೆ ವಿತರಣೆ:** ಉದ್ಘಾಟನೆ: ಎಸ್. ಮುನಿರಾಜು, ಅಧ್ಯಕ್ಷತೆ: ಅಮೃತಾಕ್ಷಿ ಜಿ., ಆಯೋಜನೆ ಮತ್ತು ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಟಿ. ದಾಸರಹಳ್ಳಿ, ಬೆಳಿಗ್ಗೆ 11

**‘ಒಳ ಮೀಸಲಾತಿ’ ರಾಜ್ಯ ಮಟ್ಟದ ಚಿಂತನಾ ಸಭೆ:** ಆಯೋಜನೆ: ಮೀಸಲಾತಿ ಸಂರಕ್ಷಣಾ ಒಕ್ಕೂಟ–ಕರ್ನಾಟಕ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

**ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಆಯೋಗದ ವರದಿಯ ಅನುಷ್ಠಾನದ ಕುರಿತು ಕಾರ್ಯಾಗಾರ:** ಭಾಗವಹಿಸುವವರು: ಗೋವಿಂದ ಕಾರಜೋಳ, ಎ. ನಾರಾಯಣಸ್ವಾಮಿ, ರಮೇಶ್ ಜಿಗಜಿಣಗಿ, ಬಸವರಾಜ ಮತ್ತಿಮಡು, ದುರ್ಯೋಧನ ಐಹೊಳೆ, ಎಚ್. ವೆಂಕಟೇಶ್ ದೊಡ್ಡೇರಿ, ಹೂಡಿ ಮಂಜುನಾತ್, ಅನಿಲ್ ಕುಮಾರ್, ಆಯೋಜನೆ: ಕರ್ನಾಟಕ ಮಾದಿ ಸಂಘಟನೆಗಳ ಒಕ್ಕೂಟ, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11.30

**‘ಪ್ರೀತಿಯ ಫಿಡೆಲ್’ 100ರ ನೆನಪು:** ಕ್ಯೂಬಾಗೆ ಭೇಟಿ ನೀಡಿರುವ ವಿವಿಧ ಕ್ಷೇತ್ರಗಳ ಗಣ್ಯರೊಂದಿಗೆ ಸಂವಾದ: ಜಿ.ಎನ್. ಮೋಹನ್, ಮಮತಾ ಸಾಗರ್, ಡಾ. ಅನಿಲ್ ಕುಮಾರ್, ಸಿದ್ಧನಗೌಡ ಪಾಟೀಲ, ರಂಜಿತ್ ಕುಮಾರ್, ಉಪಸ್ಥಿತಿ: ಬಿ.ಜಿ. ಗುಜ್ಜಾರಪ್ಪ, ಪ್ರಕಾಶ್ ಕೆ. ಅನುವಾದಿಸಿರುವ ‘ಕ್ಯಾಸ್ಟ್ರೋ ಕತೆ’, ಜಿ.ಎನ್. ಮೋಹನ್ ಅವರು ಅನುವಾದಿಸಿದ ‘ನನ್ನೊಳಗಿನ ಹಾಡು ಕ್ಯೂಬಾ’ ಪುಸ್ತಕಗಳ ಬಿಡುಗಡೆ, ‘ಫಿಡೆಲ್’ ಜನ್ಮದಿನ ಸಂಭ್ರಮ: ಬಿ. ಸುರೇಶ, ಕೆ.ಎಸ್. ವಿಮಲಾ, ಪ್ರಕಾಶ್ ಕೆ., ಆಯೋಜನೆ: ಕ್ಯೂಬಾ ಸೌಹಾರ್ದ ಸಮಿತಿ, ಸ್ಥಳ: ಸೌಹಾರ್ದ, ಮೊದಲನೇ ಅಡ್ಡರಸ್ತೆ, ಸಿಎಸ್‌ಐ ಕಾಂಪೌಂಡ್, ಮಿಷನ್ ರಸ್ತೆ, ಮಧ್ಯಾಹ್ನ 3.30ರಿಂದ



ಫಿಡೆಲ್ ಕ್ಯಾಸ್ಟ್ರೊ

**‘ದೇಶ ವಿಭಜನೆ’ ಕರಾಳ ದಿನ:** ಭಾಷಣ ಮಾಡುವವರು: ಬಾಬು ಕೃಷ್ಣಮೂರ್ತಿ, ವಿ. ನಾಗರಾಜ್, ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ. ಪಿ. ವಾಡಿಯಾ ರಸ್ತೆ, ಬಸವನಗುಡಿ ಸಂಜೆ 5

**ಹರಿನಾಮ ಸಂಕೀರ್ತನೆ:** ಭವಾನಿ ಎಂ. ರಾವ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಉತ್ತಾರಾದಿಮಠ, ಸಹಕಾರನಗರ, ಸಂಜೆ 5.30



ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಲಾಯಿತು

## ವಿಷ್ಣು ಸಮಾಧಿ ತೆರವು: ಮುತ್ತಿಗೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಭಿಮಾನ್ ಸ್ಟುಡಿಯೊದ ಆವರಣದಲ್ಲಿದ್ದ ನಟ ವಿಷ್ಣುವರ್ಧನ್ ಅವರ ಸಮಾಧಿ ತೆರವು ವಿಚಾರದಲ್ಲಿ ಚಲನಚಿತ್ರ ವಾಣಿಜ್ಯ ಮಂಡಳಿ ಮೌನ ವಹಿಸಿರುವ ಕ್ರಮವನ್ನು ಖಂಡಿಸಿ ವಿಷ್ಣುವರ್ಧನ್ ಅಭಿಮಾನಿಗಳ ಸಂಘದ ಪದಾಧಿಕಾರಿಗಳು ಮಂಡಳಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಸಮಾಧಿಯನ್ನು ಏಕಾಏಕಿ ತೆರವು ಮಾಡಿರುವುದು ಅಭಿಮಾನಿಗಳಿಗೆ ನೋವು ಉಂಟು ಮಾಡಿದೆ. ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ನರಸಿಂಹಲು ಅವರು ಮೌನ ವಹಿಸಿರುವುದು, ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಮನವಿ ಮಾಡದೇ ಇರುವುದು ಖಂಡನೀಯ ಎಂದು ವಿಷ್ಣುವರ್ಧನ್ ಅಭಿಮಾನಿ ಕ್ರಾಂತಿರಾಜು ದೂರಿದರು.

ವಿಷ್ಣುವರ್ಧನ್ ಅಭಿಮಾನಿಗಳನ್ನು ನಿರ್ಮಾಪಕ ಸಾ.ರಾ.ಗೋವಿಂದ ಅವರು ಸಮಾಧಾನ ಪಡಿಸಿದರು. ಸರ್ಕಾರದ ಜೊತೆಯಲ್ಲಿ ಮಾತುಕತೆ ನಡೆಸಿ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದರು.

ವಿಷ್ಣುವರ್ಧನ್ ಬದುಕಿದ್ದಾಗ ನೂರಾರು ತೊಂದರೆ ಅನುಭವಿಸಿದ್ದರು. ಅವರು ಮೃತಪಟ್ಟ ಮೇಲೂ ಸಮಾಧಿ ತೆರವು ಮಾಡಿ ಅಭಿಮಾನಿಗಳಿಗೆ ನೋವು ಮಾಡಿದ್ದಾರೆ ಎಂದು ವೆಂಕಟೇಶ್‌ಗೌಡ, ಶ್ರೀನಿವಾಸ್ ಗೌಡ ಹೇಳಿದರು.

## 17ರಂದು ಸಭೆ ಕರೆದ ನಟ ಅನಿರುದ್ಧ್

ಪ್ರಜಾವಾಣಿ ವಾರ್ತೆ


**ಬೆಂಗಳೂರು:** ಇಲ್ಲಿನ ಅಭಿಮಾನ್ ಸ್ಟುಡಿಯೊದ ಆವರಣದಲ್ಲಿ ನಟ ವಿಷ್ಣುವರ್ಧನ್ ಅವರ ಅಂತ್ಯಕ್ರಿಯೆ ನಡೆದ ಸ್ಥಳದಲ್ಲಿದ್ದ ಸ್ಮಾರಕ ಮತ್ತು ಗೋಪುರವನ್ನು ತೆರವುಗೊಳಿಸಿದ ವಿಚಾರಕ್ಕೆ ಸಂಬಂಧಿಸಿದಂತೆ ಆ.17ಕ್ಕೆ ನಟ ಅನಿರುದ್ಧ್ ಜತಕರ ಸಭೆ ಕರೆದಿದ್ದಾರೆ.

ಈ ಕುರಿತು ಇನ್‌ಸ್ಟಾಗ್ರಾಂನಲ್ಲಿ ವಿಡಿಯೊವೊಂದನ್ನು ಪೋಸ್ಟ್ ಮಾಡಿದ್ದಾರೆ. ‘ಇತ್ತೀಚೆಗೆ ಅಭಿಮಾನ್ ಸ್ಟುಡಿಯೊದಲ್ಲಿ ನಡೆದಿರುವ ದುರ್ಘಟನೆ ಅತ್ಯಂತ ಖಂಡನೀಯ. ಅದರ ಬಗ್ಗೆ ಚರ್ಚೆ ಮಾಡಲು, ಮುಂದೆ ಏನು ಮಾಡಬೇಕು ಎನ್ನುವುದರ ಬಗ್ಗೆ ಸಕಾರಾತ್ಮಕವಾಗಿ ಯೋಚಿಸುವುದಕ್ಕೆ ಆ.17ರಂದು ಬೆಳಿಗ್ಗೆ 11ಕ್ಕೆ ವಿಷ್ಣುವರ್ಧನ್ ಅವರ ಜಯನಗರ ನಿವಾಸಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬನ್ನಿ’ ಎಂದು ಅವರು ಅಭಿಮಾನಿಗಳನ್ನು ಆಹ್ವಾನಿಸಿದ್ದಾರೆ.

ಚರ್ಚೆಗೆ ಬಂದು ಗಲಾಟೆ ಮಾಡಬೇಕು ಎನ್ನುವ ಉದ್ದೇಶವಿದ್ದವರು ದಯ ವಿಟ್ಟು ಬರಬೇಡಿ. ಕೆಲವರು ವಿಷ್ಣು ಅವರ ಕುಟುಂಬ, ಅಭಿಮಾನಿಗಳ ಮಧ್ಯೆ ಬಿರುಕು ಮೂಡಿಸುವ ಪ್ರಯತ್ನ ಮಾಡುತ್ತಿದ್ದಾರೆ’ ಎಂದು ದೂರಿದ್ದಾರೆ.

ಚಿಟಿಕೆ ಸುದ್ದಿ

## ಮಹದಾಯಿ ನ್ಯಾಯಮಂಡಳಿ ಅವಧಿ ಮತ್ತೆ ವಿಸ್ತರಣೆ



ನವದೆಹಲಿ: ಮಹದಾಯಿ ಜಲವಿವಾದಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವರದಿ ಸಲ್ಲಿಸುವ ಸಂಬಂಧ ನ್ಯಾಯಮಂಡಳಿಯ ಅವಧಿಯನ್ನು ಒಂದು ವರ್ಷ ವಿಸ್ತರಿಸಲಾಗಿದೆ.

ಕರ್ನಾಟಕ, ಗೋವಾ ಮತ್ತು ಮಹಾರಾಷ್ಟ್ರ ನಡುವಿನ ನೀರು ಹಂಚಿಕೆ ವಿವಾದಗಳನ್ನು ಪರಿಹರಿಸಲು ಈ ನ್ಯಾಯಮಂಡಳಿಯನ್ನು 2010ರಲ್ಲಿ ಸ್ಥಾಪಿಸಲಾಗಿತ್ತು. ನ್ಯಾಯಮಂಡಳಿಗೆ ಕರ್ನಾಟಕ ಹಾಗೂ ಗೋವಾ ಸರ್ಕಾರಗಳು ಸ್ಪಷ್ಟೀಕರಣ ಅರ್ಜಿ ಸಲ್ಲಿಸಿವೆ. ಹೀಗಾಗಿ, ಹೆಚ್ಚಿನ ವರದಿ ನೀಡಲು ಇನ್ನಷ್ಟು ಕಾಲಾವಕಾಶ ನೀಡಬೇಕು ಎಂದು ಜಲಶಕ್ತಿ ಸಚಿವಾಲಯವನ್ನು ನ್ಯಾಯಮಂಡಳಿ ಕೋರಿತ್ತು. ವರದಿ ನೀಡುವ ಅವಧಿಯನ್ನು ವಿಸ್ತರಿಸಿ ಸಚಿವಾಲಯ ಅಧಿಸೂಚನೆ ಹೊರಡಿಸಿದೆ.

ಮಹದಾಯಿ ವಿವಾದ ಬಗೆಹರಿಸಲು ಅಂತರ ರಾಜ್ಯ ನದಿ ನೀರು ವಿವಾದ ಕಾಯ್ದೆ 1956ರ ಸೆಕ್ಷನ್ 4ರ ಅನ್ವಯ ನ್ಯಾಯಮಂಡಳಿ ರಚಿಸಲಾಗಿತ್ತು. ಸುಪ್ರೀಂ ಕೋರ್ಟ್ ಆದೇಶದ ಅನುಸಾರ ನ್ಯಾಯಮಂಡಳಿಯು 2018ರ ಆಗಸ್ಟ್‌ನಲ್ಲಿ ವರದಿ ಸಲ್ಲಿಸಿತ್ತು. ಈ ವರದಿಯ ಬಗ್ಗೆ 2020ರ ಫೆ.20ರಂದು ಅಧಿಸೂಚನೆ ಹೊರಡಿಸಲಾಗಿತ್ತು. ಹೆಚ್ಚುವರಿ ವರದಿ ನೀಡಲು ನ್ಯಾಯಮಂಡಳಿಯ ಅವಧಿ ವಿಸ್ತರಿಸುತ್ತಿರುವುದು ಇದು ಆರನೇ ಬಾರಿ.

## ‘ಆರೋಗ್ಯ ಸೇವೆ ವ್ಯತ್ಯಯವಾಗದಿರಲಿ’

ಬೆಂಗಳೂರು: ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಆಗಸ್ಟ್ 12ರಿಂದ ಆಶಾ ಕಾರ್ಯಕರ್ತೆಯರು ಅಹೋರಾತ್ರಿ ಧರಣಿಯಲ್ಲಿ ಭಾಗವಹಿಸಿದರೆ ಆರೋಗ್ಯ ಸೇವೆಯಲ್ಲಿ ತೊಂದರೆ ಉಂಟಾಗದಂತೆ ಕ್ರಮ ವಹಿಸುವಂತೆ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕರು ಸೂಚನೆ ನೀಡಿದ್ದಾರೆ.

ಆಗಸ್ಟ್ 12ರಿಂದ 14ರವರೆಗೆ ನಿತ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಕರ್ತವ್ಯಕ್ಕೆ ಗೈರು ಹಾಜರಾದ ಆಶಾ ಕಾರ್ಯಕರ್ತೆಯರ ಮಾಹಿತಿಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಪಡೆದು ಜಿಲ್ಲಾಮಟ್ಟದಲ್ಲಿ ಕ್ರೋಡೀಕರಿಸಿ ನಿತ್ಯ 3 ಗಂಟೆಯೊಳಗೆ ಆಯುಕ್ತಾಲಯಕ್ಕೆ ಸಲ್ಲಿಸಬೇಕು. ಸಮುದಾಯ ಆರೋಗ್ಯ ಅಧಿಕಾರಿಗಳು, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು, ಆರೋಗ್ಯ ನಿರೀಕ್ಷಣಾಧಿಕಾರಿಗಳು, ಅಂಗನವಾಡಿ ಕಾರ್ಯಕರ್ತೆಯರ ಸಹಕಾರ ಪಡೆದು ಆರೋಗ್ಯ ಸೇವೆಯಲ್ಲಿ ತೊಡಕಾಗದಂತೆ ಕ್ರಮ ವಹಿಸಬೇಕು ಎಂದು ಹೇಳಿದ್ದಾರೆ.

ಅಧಿಕಾರಿಗಳು, ಕಾಯಂ ಮತ್ತು ಗುತ್ತಿಗೆ ಸಿಬ್ಬಂದಿಗೆ ವೈದ್ಯಕೀಯ ತುರ್ತು ಹೊರತುಪಡಿಸಿ ಇತರೆ ರಜೆ ನಿರ್ಬಂಧಿಸಬೇಕು. ಕಾನೂನು ಬಾಹಿರ ಹೋರಾಟದಲ್ಲಿ ಭಾಗವಹಿಸದಂತೆ ಮನವೊಲಿಸಬೇಕು ಎಂದು ತಿಳಿಸಿದ್ದಾರೆ.

# ರಾಜಣ್ಣ ‘ರಾಜೀನಾಮೆ’: ವಾಕ್ಸಮರ

## ಯಾವ ಕಾರಣಕ್ಕೆ ರಾಜೀನಾಮೆ ಕೊಟ್ಟಿದ್ದಾರೆ: ಆರ್.ಅಶೋಕ ಪ್ರಶ್ನೆ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ರಾಜೀನಾಮೆ ಕಾರಣ ಬಹಿರಂಗಪಡಿಸಲು ಆಗ್ರಹ
- ಜನರ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸುವಂತೆ ಕಾಂಗ್ರೆಸ್ ಶಾಸಕರಿಂದ ಸಲಹೆ

ಬೆಂಗಳೂರು: ಕೆ.ಎನ್. ರಾಜಣ್ಣ ಅವರು ಸಚಿವ ಸ್ಥಾನಕ್ಕೆ ‘ರಾಜೀನಾಮೆ’ ನೀಡಿದ್ದಾರೆಂಬ ಸುದ್ದಿ ವಿಧಾನಸಭೆಯಲ್ಲಿ ಸೋಮವಾರ ಕೆಲಕಾಲ ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ನಡುವೆ ವಾಕ್ಸಮರಕ್ಕೆ ಕಾರಣವಾಯಿತು.

ಭೋಜನ ವಿರಾಮದ ಬಳಿಕ ಕಲಾಪ ಆರಂಭವಾಗುತ್ತಿದ್ದಂತೆ ವಿಷಯ ಪ್ರಸ್ತಾಪಿಸಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, ‘ರಾಜಣ್ಣ ಯಾವ ಕಾರಣಕ್ಕೆ ರಾಜೀನಾಮೆ ಕೊಟ್ಟಿದ್ದಾರೆ? ಎಷ್ಟು ಹಣ ಹೊಡೆದಿದ್ದಾರೆ? ಯಾರ ಮನೆಯಲ್ಲಿ ಇರಿಸಿದ್ದಾರೆ? ಅವರ ಮೇಲೆ ಯಾವ ಭ್ರಷ್ಟಾಚಾರದ ಆರೋಪವಿದೆ? ಮುಖ್ಯಮಂತ್ರಿ ಜೊತೆಗೆ ಇರುವವರು ರಾಜಣ್ಣ, ಈ ಬಗ್ಗೆ ಸದನಕ್ಕೆ ಸ್ಪಷ್ಟಪಡಿಸಬೇಕು’ ಎಂದು ಆಗ್ರಹಿಸಿದರು. ಆಗ ಪ್ರತಿಕ್ರಿಯಿಸಿದ ಕಾನೂನು ಸಚಿವ ಎಚ್.ಕೆ. ಪಾಟೀಲ, ‘ಮಾಧ್ಯಮಗಳಲ್ಲಿ ಸುದ್ದಿ ಬಂದ ತಕ್ಷಣ ಸ್ಪಷ್ಟನೆ ಕೇಳುವುದು ಸರಿಯಲ್ಲ. ಹಾಗೇನಾದರೂ ಬೆಳವಣಿಗೆಗಳಾಗಿದ್ದರೆ ಮುಖ್ಯಮಂತ್ರಿ ಸದನಕ್ಕೆ ತಿಳಿಸುತ್ತಾರೆ’ ಎಂದರು.

ಅದಕ್ಕೆ ಬಿಜೆಪಿಯ ಎಸ್. ಸುರೇಶ್ ಕುಮಾರ್, ‘ಸದನದಲ್ಲೇ ಇರುವ ರಾಜಣ್ಣ ಅವರು ರಾಜೀನಾಮೆ ಕೊಟ್ಟಿದ್ದಾರೊ ಇಲ್ಲವೊ ಎಂಬ ಬಗ್ಗೆ ಅವರೇ ಸ್ಪಷ್ಟಪಡಿಸಲಿ’ ಎಂದು ಒತ್ತಾಯಿಸಿದರು. ದನಿಗೂಡಿಸಿದ ಆರ್. ಅಶೋಕ, ‘ರಾಜಣ್ಣ ಅವರು ಈಗ ಮಂತ್ರಿಯಾಗಿ ಇಲ್ಲಿ ಕುಳಿತಿದ್ದಾರೊ ಇಲ್ಲವೊ ಎಂದು ತಿಳಿಸಲಿ’ ಎಂದು ಆಗ್ರಹಿಸಿದರು. ಬಿಜೆಪಿಯ ವಿ. ಸುನಿಲ್ ಕುಮಾರ್, ‘ಸದನದಲ್ಲಿ ರಾಜಣ್ಣ ಅವರನ್ನು ನಾವು ಏನೆಂದು ಸಂಬೋಧಿಸಬೇಕು’ ಎಂದು ಕೇಳಿದರು. ಆಗ ಸಭಾಧ್ಯಕ್ಷ ಯು.ಟಿ. ಖಾದರ್, ‘ಮನಸ್ಸಿಗೆ ಬಂದಂತೆ ಮಾತನಾಡಬೇಡಿ’ ಎಂದು ಗದರಿದರು. ‘ರಾಜಣ್ಣ ಯಾಕೆ ಮೌನವಾಗಿದ್ದಾರೆ’ ಎಂದು ಬಿಜೆಪಿಯ ಸಿ.ಸಿ.ಪಾಟೀಲ ಕೆಣಕಿದರು.

ವಿರೋಧ ಪಕ್ಷದ ಸದಸ್ಯರ ಒತ್ತಾಯ ಹೆಚ್ಚುತ್ತಿದ್ದಂತೆ ಸಚಿವ ಕೃಷ್ಣ ಬೈರೇಗೌಡ, ‘ರಾಜಣ್ಣ ಅವರು ಸಚಿವರಾಗಿ ಇಲ್ಲದ್ದಾರೆಂದು ಕಾನೂನು ಸಚಿವರೇ ಹೇಳಿದ್ದಾರೆ. ಮುಖ್ಯಮಂತ್ರಿ ಬಂದು ಮಾತನಾಡುತ್ತಾರೆ. ಇಲ್ಲಿ ಜನರ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸೇರಿದ್ದೇವೆ. ಆ ವಿಚಾರಗಳ ಬಗ್ಗೆ ಚರ್ಚಿಸೋಣ’ ಎಂದರು.

ಬಿಜೆಪಿಯ ಅರವಿಂದ ಬೆಲ್ಲದ, ‘ದಲಿತ ಮಂತ್ರಿ ರಾಜಣ್ಣ ಹನಿಟ್ರ್ಯಾಪ್ ಆಗಿದೆ ಎಂದಿದ್ದಕ್ಕೆ ರಾಜೀನಾಮೆಯ ಶಿಕ್ಷೆನಾ? ಅವರು ಏನು ತಪ್ಪು ಮಾಡಿದ್ದಾರೆ’ ಎಂದು ಪ್ರಶ್ನಿಸಿದರು. ‘ರಾಜಣ್ಣ ಪಾಕಿಸ್ತಾನದಿಂದ ಬಂದಿದ್ದಾರಾ’ ಎಂದೂ ಅಶೋಕ ಪ್ರಶ್ನಿಸಿದರು. ಕೆರಳಿದ ಸಚಿವ ಕೃಷ್ಣ ಬೈರೇಗೌಡ, ‘ರಾಜಕೀಯ ಮಾಡುವುದನ್ನು ಬಿಟ್ಟು ಜನರ ಸಮಸ್ಯೆಗಳ ಬಗ್ಗೆ ಮಾತನಾಡಿ’ ಎಂದು ಸಿಡುಕಿದರು.

ವಾಕ್ಸಮರದ ನಡುವೆ ಎದ್ದುನಿಂತ ರಾಜಣ್ಣ, ‘ನೀವು ಮಾತನಾಡಬೇಡಿ. ಮುಖ್ಯಮಂತ್ರಿ ಬಂದು ಮಾತನಾಡುತ್ತಾರೆಂದು ಕಾನೂನು ಸಚಿವರು ಹೇಳಿದ್ದಾರೆ. ಅವರ ಮಾತಿಗೆ ಬದ್ಧನಾಗಿದ್ದೇನೆ. ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು, ಇಲ್ಲಿ ಹೇಗೆ ಕುಳಿತಿದ್ದೀರಿ ಎಂದು ಪ್ರಶ್ನಿಸಿದ್ದಾರೆ. ನಾಚಿಕೆ ಆಗಬೇಕು ಎಂದಿದ್ದಾರೆ. ಇಷ್ಟು ಕೀಳುಮಟ್ಟಕ್ಕೆ ಇಳಿದು ಮಾತನಾಡುವುದು ಸರಿಯಲ್ಲ. ಹೀಗೆ ಮಾತನಾಡಲು ನಿಮಗೆ ನಾಚಿಕೆಯಾಗಬೇಕು’ ಎಂದು ತಿರುಗೇಟು ನೀಡಿದರು.

ಆಗ ಅಶೋಕ, ‘ನಾನು ನಾಚಿಕೆ ಪದ ಬಳಸಿಲ್ಲ. ನೀವು ಮಂತ್ರಿ ಆಗದಿದ್ದಲ್ಲಿ ಅಲ್ಲಿ ಕೂರಬಾರದು ಎಂದಷ್ಟೇ ಹೇಳಿದ್ದೇನೆ’ ಎಂದರು.

ಮಧ್ಯಪ್ರವೇಶಿಸಿದ ಸಭಾಧ್ಯಕ್ಷ ಯು.ಟಿ. ಖಾದರ್, ಕೊನೆಗೂ ಸದಸ್ಯರನ್ನು ಸಮಾಧಾನಪಡಿಸುವಲ್ಲಿ ಯಶಸ್ವಿಯಾದರು.



ಸೋಮವಾರ ಆರಂಭಗೊಂಡ ವಿಧಾನ ಸಭೆ ಕಾರ್ಯಕಲಾಪಕ್ಕೆ ಸಿದ್ದರಾಮಯ್ಯ ಆಗಮಿಸಿದರು –ಪ್ರಜಾವಾಣಿ ಚಿತ್ರ

## ರಾಹುಲ್ ಷಡ್ಯಂತ್ರಕ್ಕೆ ರಾಜಣ್ಣ ಬಲಿ: ವಿ.ಸೋಮಣ್ಣ

ನವದೆಹಲಿ:‘ಕಾಂಗ್ರೆಸ್ ಹೈಕಮಾಂಡ್ ಜುಟ್ಟು ಜನಿವಾರ ಇಲ್ಲದ ಹಾಗೂ ದೇಶದ ವ್ಯವಸ್ಥೆ ಗೊತ್ತಿಲ್ಲದ ನಾಯಕನಿಗೆ ಪಕ್ಷದ ನೇತೃತ್ವ ನೀಡಿದೆ. ರಾಹುಲ್ ಗಾಂಧಿ ಷಡ್ಯಂತ್ರಕ್ಕೆ ಸತ್ಯವಂತ ಕೆ.ಎನ್.ರಾಜಣ್ಣ ಬಲಿಯಾಗಿದ್ದಾರೆ’ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಹೇಳಿದರು.



ವಿ.ಸೋಮಣ್ಣ

ಸೋಮವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿ, ‘ರಾಜಣ್ಣ ಅವರು ಸಿದ್ದರಾಮಯ್ಯ ಕಟ್ಟಾ ಬೆಂಬಲಿಗ. ಅವರನ್ನು ಸಿದ್ದರಾಮಯ್ಯ ನಡುನೀರಿನಲ್ಲಿ ಕೈಬಿಟ್ಟರು. ಇದು ಇತರ ಸಚಿವರಿಗೆ ಎಚ್ಚರಿಕೆಯ ಗಂಟೆ. ಕಪ್ಪ ಕಾಣಿಕೆ ಕೊಟ್ಟು ಸರಿಯಾಗಿ ಇರದಿದ್ದರೆ ಎಲ್ಲರಿಗೂ ಇದೇ ಗತಿ’ ಎಂದರು.

‘ರಣದೀಪ್ ಸಿಂಗ್ ಸುರ್ಜೇವಾಲಾ ಎಂಬ ವ್ಯಕ್ತಿ ಸುಲಿಗೆ ಮಾಡಲು ಇದ್ದಾರೆ. ಅವರು ರಾಜ್ಯದ ಉಸ್ತುವಾರಿಯಾಗಿ ಇರುವ ತನಕ ಬೇರೆ ನಾಯಕರಿಗೆ ಗ್ಯಾರಂಟಿ ಇಲ್ಲ. ಆ ವ್ಯಕ್ತಿ ಬೆಂಗಳೂರಿಗೆ ಬಂದು ಅಧಿಕಾರಿಗಳ ಸಭೆ ನಡೆಸುತ್ತಾರೆ. ಇದೆಂತಹ ಸರ್ಕಾರ’ ಎಂದು ಅವರು ಪ್ರಶ್ನಿಸಿದರು.

**ಸುಳ್ಳು ಹೇಳಿದ ಸಿಎಂ–ಸೋಮಣ್ಣ:** ‘ನಮ್ಮ ಮೆಟ್ರೊ ಉದ್ಘಾಟನೆಯ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಸುಳ್ಳು ಹೇಳಿದ್ದಾರೆ. ಯೋಜನೆಯ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಯಾವುದೇ ಹಣ ಬಿಡುಗಡೆ ಮಾಡಿಲ್ಲ. ಭೂಸ್ವಾಧೀನಕ್ಕೆ ಹಣ ಕೊಟ್ಟಿದೆ ಅಷ್ಟೇ. ಮೆಟ್ರೊ ಯೋಜನೆಗೆ ರಾಜ್ಯ ಹಾಗೂ ಕೇಂದ್ರ ತಲಾ ಶೇ 20 ಭರಿಸುತ್ತವೆ. ಉಳಿದ ಮೊತ್ತವನ್ನು ಸಾಲ ರೂಪದಲ್ಲಿ ಪಡೆಯಲಾಗುತ್ತದೆ’ ಎಂದು ಸೋಮಣ್ಣ ಹೇಳಿದರು.

# ಸುದ್ದಿ 2 ನಿಮಿಷ

## ‘ಸಂಸದ ಸುಧಾಕರ್ ವಿರುದ್ಧ ಬಲವಂತದ ಕ್ರಮ ಬೇಡ’

ಬೆಂಗಳೂರು: ‘ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯಿತಿ ಮುಖ್ಯ ಲೆಕ್ಕಾಧಿಕಾರಿಯ ಕಾರು ಚಾಲಕ ಬಾಬು ಆತ್ಮಹತ್ಯೆಗೆ ಕುಮ್ಮಕ್ಕು ನೀಡಿದ ಆರೋಪದಡಿ ಬಿಜೆಪಿ ಸಂಸದ ಡಾ.ಕೆ.ಸುಧಾಕರ್ ವಿರುದ್ಧ ಯಾವುದೇ ಬಲವಂತದ ಕ್ರಮ ಜರುಗಿಸಬಾರದು’ ಎಂದು ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ.

‘ನನ್ನ ವಿರುದ್ಧದ ಎಫ಼್ಐಆರ್ ರದ್ದುಪಡಿಸಬೇಕು’ ಎಂದು ಕೋರಿ ಡಾ.ಕೆ.ಸುಧಾಕರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ, ‘ಪ್ರಕರಣದ ತನಿಖೆಗೆ ಸಹಕರಿಸಿ’ ಎಂದು ಸುಧಾಕರ್ ಅವರಿಗೆ ನಿರ್ದೇಶಿಸಿದೆ.

ಸುಧಾಕರ್ ಪರ ಪದಾಂಕಿತ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ ಅವರ ವಾದ ಆಲಿಸಿದ ನ್ಯಾಯಪೀಠ, ‘ಪ್ರಕರಣಕ್ಕೆ ಸಂಬಂಧಿಸಿದಂತೆ ಅರ್ಜಿದಾರರ ವಿರುದ್ಧ ಬಲವಂತದ ಕ್ರಮ ಕೈಗೊಳ್ಳಬಾರದು ಮತ್ತು ಹೈಕೋರ್ಟ್ ಅನುಮತಿ ಪಡೆಯದೇ ಸಕ್ಷಮ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸುವಂತಿಲ್ಲ’ ಎಂದು ಚಿಕ್ಕಬಳ್ಳಾಪುರ ಗ್ರಾಮಾಂತರ ಠಾಣೆಯ ಪೊಲೀಸರಿಗೆ ಆದೇಶಿಸಿತು.



ಚಿಕ್ಕಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆಯ ಅಧಿಕಾರಿಗೆ ನೋಟಿಸ್ ಹಾಗೂ ಮೃತ ಬಾಬು ಪತ್ನಿ ಎನ್.ಶಿಲ್ಪಾ ಅವರಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿತು. ರಾಜ್ಯ ಸರ್ಕಾರದ ಪರ ರಾಜ್ಯ ಪ್ರಾಸಿಕ್ಯೂಟರ್ ಬಿ.ಎ. ಬೆಳ್ಳಿಯಪ್ಪ ವಾದ ಮಂಡಿಸಿದರು.

## 18 ಶಾಸಕರ ಅಮಾನತು ರದ್ದು: ಸದನದ ಒಪ್ಪಿಗೆ

ಬೆಂಗಳೂರು: ಸಭಾಧ್ಯಕ್ಷರ ಪೀಠಕ್ಕೆ ಅಗೌರವ ತೋರಿದ ಕಾರಣಕ್ಕೆ ಅಮಾನತುಗೊಂಡಿದ್ದ ಬಿಜೆಪಿಯ 18 ಶಾಸಕರ ಅಮಾನತು ಆದೇಶ ರದ್ದುಪಡಿಸುವ ಪ್ರಸ್ತಾವಕ್ಕೆ ಸೋಮವಾರ ವಿಧಾನಸಭೆ ಅನುಮೋದನೆ ನೀಡಿತು.

ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ.ಪಾಟೀಲ ಅವರು ಪ್ರಸ್ತಾವ ಮಂಡಿಸಿದರು. ಮೇ 25 ರಂದು ಸಭಾಧ್ಯಕ್ಷ ಯು.ಟಿ.ಖಾದರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅಮಾನತು ಆದೇಶ ರದ್ದುಗೊಳಿಸಲು ತೀರ್ಮಾನಿಸಲಾಗಿತ್ತು. ಸೋಮವಾರ ಇದಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.

ಬಜೆಟ್ ಅಧಿವೇಶನದ ವೇಳೆ ಸದನದಲ್ಲಿ ಗದ್ದಲ ನಡೆಸಿ, ಸಭಾಧ್ಯಕ್ಷರ ಪೀಠಕ್ಕೆ ಕಾಗದ ತೂರಿದ ಕಾರಣಕ್ಕೆ ಬಿಜೆಪಿಯ ದೊಡ್ಡನಗೌಡ ಪಾಟೀಲ (ವಿರೋಧ ಪಕ್ಷದ ಮುಖ್ಯ ಸಚೇತಕ), ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಎಸ್.ಆರ್. ವಿಶ್ವನಾಥ್, ಬೈರತಿ ಬಸವರಾಜು, ಎಸ್.ಎನ್. ಚನ್ನಬಸಪ್ಪ, ಉಮಾನಾಥ ಕೋಟ್ಯಾನ್, ಬಿ. ಸುರೇಶ್ ಗೌಡ, ಡಾ. ಶೈಲೇಂದ್ರ ಬೆಲ್ದಾಳೆ, ಶರಣು ಸಲಗರ, ಸಿ.ಕೆ. ರಾಮಮೂರ್ತಿ, ಯಶ್ ಪಾಲ್ ಸುವರ್ಣ, ಹರೀಶ್ ಬಿ. ಪಿ, ಡಾ.ಭರತ್ ಶೆಟ್ಟಿ, ಬಸವರಾಜ ಮತ್ತಿಮಡು, ಧೀರಜ್ ಮುನಿರಾಜು, ಮುನಿರತ್ನ ಮತ್ತು ಡಾ.ಚಂದ್ರು ಲಮಾಣಿ ಅಮಾನತುಗೊಂಡಿದ್ದರು.

# ಪರಿಷತ್ತಿನ ಕಲಾಪ ನುಂಗಿದ ‘ಗೂಂಡಾಗಿರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಲಬುರಗಿ ಜಿಲ್ಲೆಯ ಚಿತ್ತಾಪುರಕ್ಕೆ ಹೋಗಿದ್ದಾಗ ಗೂಂಡಾಗಳು ತಮ್ಮನ್ನು ಕೂಡಿಹಾಕಿದ್ದರು’ ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಹೇಳಿದ ಮಾತು ವಿಧಾನ ಪರಿಷತ್ತಿನ ಸೋಮವಾರದ ಕಲಾಪದ ಬಹುಪಾಲು ಸಮಯವನ್ನು ನುಂಗಿ ಹಾಕಿತು.

ಅರಣ್ಯ ಪ್ರದೇಶ ಒತ್ತುವರಿ ತೆರವಿಗೆ ಸಂಬಂಧಿಸಿದ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ಛಲವಾದಿ ನಾರಾಯಣಸ್ವಾಮಿ ಅವರು, ಚಿತ್ತಾಪುರದ ಗಲಾಟೆಯತ್ತ ವಿಷಯ ಹೊರಳಿಸಿದರು. ಈ ವೇಳೆ ಸಚಿವ ಪ್ರಿಯಾಂಕ್ ಖರ್ಗೆ ಅವರ ಹೆಸರು ಪ್ರಸ್ತಾಪಿಸಿ ಗೂಂಡಾಗಳು ತಮ್ಮನ್ನು ಕೂಡಿಹಾಕಿದ್ದರು ಎಂದರು. ಇದಕ್ಕೆ ಕಾಂಗ್ರೆಸ್‌ನ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಕಾರಣ, ಸಭಾಧ್ಯಕ್ಷರು ಕಲಾಪವನ್ನು ಮಧ್ಯಾಹ್ನ 3.30ರವರೆಗೆ ಮುಂದೂಡಿದರು.

ಮಧ್ಯಾಹ್ನ ಕಲಾಪ ಆರಂಭವಾದಾಗಲೂ ನಾರಾಯಣಸ್ವಾಮಿ ಅವರು ಚಿತ್ತಾಪುರದ ವಿಷಯ ಪ್ರಸ್ತಾಪಕ್ಕೆ ಮುಂದಾದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸಭಾಧ್ಯಕ್ಷ ಬಸವರಾಜ ಹೊರಟ್ಟಿ ಅವರು, ‘ನೀವು ದೂರು ನೀಡಿದ್ದೀರಿ. ಅದು ಹಕ್ಕುಚ್ಯುತಿ ಸಮಿತಿ ಮುಂದಿದೆ’ ಎಂದರು. ತಾವು ವಿಷಯ ಪ್ರಸ್ತಾಪಿಸಲೇಬೇಕು ಎಂದು ನಾರಾಯಣಸ್ವಾಮಿ ಅವರು ಪಟ್ಟು ಹಿಡಿದ ಕಾರಣ, ಸಭಾಧ್ಯಕ್ಷರು ಅನುಮತಿ ನೀಡಿದರು.

ನಾರಾಯಣಸ್ವಾಮಿ ಅವರು, ‘ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ, ‘ಶ್ವಾನ ಬೊಗಳಿದರೆ ಆನೆ ಹೆದರುವುದೇ’ ಎಂದು ಗಾದೆ ಮಾತು ಹೇಳಿದ್ದೆ. ಆನಂತರ ಚಿತ್ತಾಪುರಕ್ಕೆ ತೆರಳಿದೆ. ಅಲ್ಲಿ ಐದೇ ನಿಮಿಷದಲ್ಲಿ ಗೂಂಡಾಗಳು ಸೇರಿ ನನ್ನನ್ನು ಕೂಡಿ ಹಾಕಿದರು’ ಎನ್ನುತ್ತಿದ್ದಂತೆಯೇ ಕಾಂಗ್ರೆಸ್ ಸದಸ್ಯರು ಆಕ್ಷೇಪ ಎತ್ತಿದರು.

‘ವಿರೋಧ ಪಕ್ಷದ ನಾಯಕರು ಸತ್ಯವನ್ನು ಮುಚ್ಚಿಡುತ್ತಿದ್ದಾರೆ. ಸಚಿವರಿಗೆ ಅಂತಹ ಎಂಬ ಪದಬಳಕೆ ಮಾಡಿದ್ದಾರೆ. ಅವರು ಕ್ಷಮೆ ಕೇಳಬೇಕು’ ಎಂದು ಪಟ್ಟು ಹಿಡಿದರು.

‘ತನ್ನನ್ನು ಕೂಡಿ ಹಾಕಿಸಿದ ಸಚಿವರು ಮುಖ್ಯಮಂತ್ರಿ ಸಮ್ಮುಖದಲ್ಲಿ ಉತ್ತರ ನೀಡಬೇಕು ಇಲ್ಲವೇ ರಾಜೀನಾಮೆ ನೀಡಬೇಕು’ ಎಂದು ನಾರಾಯಣಸ್ವಾಮಿ ಪಟ್ಟು ಬದಲಿಸಿದರು. ‘ಸಚಿವರನ್ನು ನಾಯಿ ಎನ್ನಬಹುದೇ’ ಎಂದು ಕಾಂಗ್ರೆಸ್ ಸದಸ್ಯರು ಪ್ರಶ್ನೆಹಾಕಿದರು.

‘ನಾನು ತಪ್ಪು ಮಾಡಿದ್ದರೆ, ದೂರು ನೀಡಬೇಕಿತ್ತು. ಕೂಡಿಹಾಕಿ ಶಿಕ್ಷೆ ನೀಡುವ ಅಧಿಕಾರವನ್ನು ಕಾಂಗ್ರೆಸ್‌ಗೆ ನೀಡಿದವರು ಯಾರು? ಅದು ಗೂಂಡಾಗಿರಿ’ ಎಂದು ನಾರಾಯಣಸ್ವಾಮಿ ಕೂಗಿದರು. ತಕ್ಷಣವೇ ಆಡಳಿತ ಮತ್ತು ವಿರೋಧ ಪಕ್ಷದ ಎಲ್ಲ ಸದಸ್ಯರು, ‘ನೀವು ಗೂಂಡಾ, ನಿಮ್ಮದು ಗೂಂಡಾಗಿರಿ’ ಎಂದು ಪರಸ್ಪರ ಬೈದುಕೊಂಡರು. ಒಂದು ಹಂತದಲ್ಲಿ ನಾರಾಯಣಸ್ವಾಮಿ ಅವರು, ‘ನೀವು ನಾಯಿ ಎಂದು ಕರೆದದ್ದು ಪ್ರಿಯಾಂಕ್ ಖರ್ಗೆ ಅವರನ್ನೇ ಎಂದು ಪತ್ರಕರ್ತರು ಪ್ರಶ್ನಿಸಿದ್ದರು. ಅದಕ್ಕೆ ನಾನು ಹೌದು ಎಂದು ಉತ್ತರಿಸಿದ್ದೆ’ ಎಂದರು. ಗದ್ದಲದ ಮಧ್ಯೆಯೇ ಸಿ.ಟಿ.ರವಿ ಅವರು, ‘ನಾವು ಬೀದಿನಾಯಿಗಳಂತೆ ಹೀಗೆ ಬೊಗಳುತ್ತಿದ್ದರೆ, ನಾಯಿಗಳೇ ಅನ್ನಬೇಕಾಗುತ್ತದೆ’ ಎಂದರು.

ಸಭಾಧ್ಯಕ್ಷರ ಪೀಠದಲ್ಲಿದ್ದ ಬೋಜೇಗೌಡ ಅವರು, ‘ಸದನಕ್ಕೆ ಗೌರವವಿದೆ. ಅಂತಹ ಪದಗಳನ್ನು ಬಳಸಬಾರದು’ ಎಂದು ತಾಕೀತು ಮಾಡಿದರು. ‘ವಿರೋಧ ಪಕ್ಷದ ನಾಯಕರು ನೀಡಿರುವ ದೂರು ಹಕ್ಕುಚ್ಯುತಿ ಸಮಿತಿ ಮುಂದಿದೆ. ಅದರ ವರದಿ ಬಂದ ನಂತರ ಚರ್ಚೆ ನಡೆಸೋಣ’ ಎಂದು ಗದ್ದಲಕ್ಕೆ ತಡೆ ಹಾಕಿದರು. ಸಚಿವರ ಹೆಸರು ಹೇಳಿ ಗೂಂಡಾ ಎಂದ ಮಾತನ್ನು ಕಡತದಿಂದ ತೆಗೆದುಹಾಕುವಂತೆ ಸೂಚಿಸಿದರು.



ವಿಧಾನ ಪರಿಷತ್ ಕಲಾಪದಲ್ಲಿ ಎಚ್ ವಿಶ್ವನಾಥ್ ಮತ್ತು ಎಂ.ಟಿ.ಬಿ ನಾಗರಾಜ್ ಜೊತೆ ಮಾತುಕತೆಯಲ್ಲಿ ತೊಡಗಿದ್ದ ಛಲವಾದಿ ನಾರಾಯಣ ಸ್ವಾಮಿ –ಪ್ರಜಾವಾಣಿ ಚಿತ್ರ/ ರಂಜು ಪಿ

## ‘ಮನೆಗಳ ಮಂಜೂರು: ಶೀಘ್ರ ನಿರ್ಧಾರ’

ಬೆಂಗಳೂರು: ಈ ಹಿಂದೆ ಮಂಜೂರಾಗಿದ್ದ 12.50 ಲಕ್ಷ ಮನೆಗಳಿಗೆ ಸಂಬಂಧಪಟ್ಟಂತೆ ₹ 9 ಸಾವಿರ ಕೋಟಿ ಬಿಲ್ ಪಾವತಿ ಬಾಕಿಯಿದೆ. ಇದರಿಂದಾಗಿ ಹೊಸ ಮನೆಗಳ ಮಂಜೂರಾತಿಯಲ್ಲಿ ವಿಳಂಬ ಆಗುತ್ತಿದೆ. ಈ ಸಂಬಂಧ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಚರ್ಚಿಸಲಾಗಿದೆ. ಹೊಸ ಮನೆಗಳ ಮಂಜೂರು ಬಗ್ಗೆ ಶೀಘ್ರದಲ್ಲಿ ನಿರ್ಧರಿಸಲಾಗುವುದು ಎಂದು ವಸತಿ ಸಚಿವ ಜಮೀರ್ ಅಹ್ಮದ್ ತಿಳಿಸಿದರು.

# ಹೈಕಮಾಂಡ್ ಕೆಂಗಣ್ಣಿಗೆ ಬಿದ್ದರೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು:ಕೆ .ಎನ್. ರಾಜಣ್ಣ ಅವರು ಸಚಿವ ಸ್ಥಾನಕ್ಕೆ ದಿಢೀರ್ ‘ರಾಜೀನಾಮೆ’ ನೀಡಿದ್ದಾರೆಂಬ ಸುದ್ದಿಯ ಹಿಂದಿನ ಕಾರಣಗಳು ಚರ್ಚೆಗೆ ಗ್ರಾಸವಾಗಿವೆ.

ಲೋಕಸಭೆ ಚುನಾವಣೆಯಲ್ಲಿ ಮತ ಕಳ್ಳತನ ನಡೆದಿದೆ ಆರೋಪಕ್ಕೆ ಸಂಬಂಧಿಸಿದಂತೆ ರಾಜಣ್ಣ ಹೇಳಿಕೆ ಕಾಂಗ್ರೆಸ್ ವರಿಷ್ಠರನ್ನು ಕಂಗೆಡಿಸಿತ್ತು ಎನ್ನಲಾಗಿದೆ.

ಸೋಮವಾರ ಬೆಳಿಗ್ಗೆ 11ರ ಸುಮಾರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕರೆ ಮಾಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ‘ರಾಜಣ್ಣ ಅವರಿಂದ ರಾಜೀನಾಮೆ ಪಡೆಯುವಂತೆ ರಾಹುಲ್ ಸೂಚಿಸಿದ್ದಾರೆ. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಚರ್ಚಿಸಿ ಈ ತೀರ್ಮಾನ ತೆಗೆದುಕೊಂಡಿದ್ದಾರೆ’ ಎಂದಿದ್ದಾರೆ. ಅದಕ್ಕೆ ಸಿದ್ದರಾಮಯ್ಯ, ‘ಆಯಿತು’ ಎಂದಿದ್ದಾರೆ.

ಕೆಲಹೊತ್ತಿನ ಬಳಿಕ ಕೆ.ಸಿ ವೇಣುಗೋಪಾಲ್ ಅವರಿಗೆ ಕರೆ ಮಾಡಿದ ಸಿದ್ದರಾಮಯ್ಯ, ‘ಅಧಿವೇಶನ ನಡೆಯುತ್ತಿದೆ. ಈಗ ರಾಜೀನಾಮೆ ಪಡೆದರೆ ವಿರೋಧ ಪಕ್ಷಗಳು ಮುಗಿಬೀಳಲಿವೆ. ಅಧಿವೇಶನ ಮುಗಿದ ಬಳಿಕ ರಾಜಣ್ಣ ಜೊತೆ ಮಾತನಾಡಿ, ರಾಜೀನಾಮೆ ತೆಗೆದುಕೊಳ್ಳುತ್ತೇನೆ’ ಎಂದಿದ್ದಾರೆ. ಅದಕ್ಕೆ ವೇಣುಗೋಪಾಲ್, ‘ಇದು ಪಕ್ಷದ ತೀರ್ಮಾನ. ರಾಹುಲ್ ತೀರ್ಮಾನ’ ಎಂದಿದ್ದಾರೆ. ಅಲ್ಲದೆ, ರಾಹುಲ್ ಜೊತೆ ಮಾತನಾಡುವಂತೆ ಸಿದ್ದರಾಮಯ್ಯ ಅವರಿಗೆ ಸಲಹೆ ನೀಡಿದ್ದಾರೆ ಎಂದು ಗೊತ್ತಾಗಿದೆ.

ರಾಹುಲ್ ಗಾಂಧಿಗೆ ಕರೆ ಮಾಡಿದ ಸಿದ್ದರಾಮಯ್ಯ, ಅಧಿವೇಶನ ಮುಗಿದ ಬಳಿಕ ರಾಜಣ್ಣ ಅವರಿಂದ ರಾಜೀನಾಮೆ ಪಡೆಯುವುದಾಗಿ ಹೇಳಿದ್ದಾರೆ. ಅದಕ್ಕೆ ರಾಹುಲ್, ‘ರಾಜೀನಾಮೆ ಪಡೆಯುವುದಲ್ಲ, ಸಂಪುಟದಿಂದ ವಜಾ ಮಾಡಬೇಕು. ಸಚಿವರಾದವರು ಹೀಗೆ ಮಾತನಾಡುವುದು ಎಷ್ಟು ಸರಿ? ಸರ್ಕಾರ ಅಧಿಕಾರಕ್ಕೆ ಬಂದ ಮೊದಲ ದಿನದಿಂದಲೇ ಈ ರೀತಿ ಮಾತನಾಡುತ್ತಿದ್ದಾರೆ’ ಎಂದು ರಾಜಣ್ಣ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು ಎಂದು ಗೊತ್ತಾಗಿದೆ.

ಈ ಬೆಳವಣಿಗೆಯ ಬೆನ್ನಲ್ಲೆ, ಸಚಿವರಾದ ಸತೀಶ ಜಾರಕಿಹೊಳಿ ಮತ್ತು ಜಿ. ಪರಮೇಶ್ವರ ಜೊತೆ ಸಿದ್ದರಾಮಯ್ಯ ಚರ್ಚೆ ನಡೆಸಿದ್ದಾರೆ. ಆ ಬಳಿಕ, ರಾಜ್ಯಪಾಲರಿಗೆ ಪತ್ರ ಬರೆದು ಸಂಪುಟದಿಂದ ರಾಜಣ್ಣ ಅವರನ್ನು ಕೈಬಿಡುವ ತೀರ್ಮಾನದ ಮಾಹಿತಿಯನ್ನು ತಿಳಿಸಿದ್ದಾರೆ.

**ಸುರ್ಜೇವಾಲಾಗೆ ದೂರು:** ಮತ ಕಳ್ಳತನ ವಿರುದ್ಧ ರಾಹುಲ್ ಗಾಂಧಿ ಸೇರಿದಂತೆ ಪಕ್ಷದ ಎಲ್ಲ ನಾಯಕರು ಧ್ವನಿ ಎತ್ತಿರುವಾಗ, ಸಚಿವರಾದ ರಾಜಣ್ಣ ಅದನ್ನು ಪ್ರಶ್ನಿಸಿರುವುದು ಎಷ್ಟು ಸರಿ ಎಂದು ಬೆಂಗಳೂರು ನಗರ ಕಾಂಗ್ರೆಸ್ ಪ್ರಚಾರ ಸಮಿತಿಯು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರಿಗೆ ದೂರು ಕೂಡಾ ಸಲ್ಲಿಸಿತ್ತು.

## ಶಾಲಾ ಸ್ವಚ್ಛತೆಗೆ ಹೊರಗುತ್ತಿಗೆ

ರಾಜ್ಯದಲ್ಲಿ 47,469 ಶಾಲೆಗಳಿದ್ದು, 43.46 ಲಕ್ಷ ಮಕ್ಕಳು ಕಲಿಯುತ್ತಿದ್ದಾರೆ. ಶಾಲಾ ಸ್ವಚ್ಛತಾ ಕೆಲಸವನ್ನು ಹೊರಗುತ್ತಿಗೆ ನೀಡುವ ಕುರಿತು ಚಿಂತನೆ ನಡೆದಿದೆ. ಸ್ವಚ್ಛತೆಗಾಗಿ ನೀಡುತ್ತಿರುವ ಮೊತ್ತವನ್ನು ಹೆಚ್ಚಳ ಮಾಡಲಾಗಿತ್ತು. ಮತ್ತೆ ಶೇ 10ರಿಂದ 20ರಷ್ಟು ಹೆಚ್ಚಳ ಮಾಡಲು ಪ್ರಸ್ತಾವ ಸಲ್ಲಿಸಲಾಗುವುದು

**ಮಧು ಬಂಗಾರಪ್ಪ,** ಶಾಲಾ ಶಿಕ್ಷಣ ಸಚಿವ (ಪ್ರಶ್ನೆ: ರಾಮೋಜಿಗೌಡ, ಕಾಂಗ್ರೆಸ್ ಸದಸ್ಯ)

ರಾಜ್ಯದಲ್ಲಿ 15.59 ಫಲಾನುಭವಿಗಳನ್ನು ಒಳಗೊಂಡ 12.68 ಲಕ್ಷ ಅಕ್ರಮ ಪಡಿತರ ಚೀಟಿಗಳನ್ನು ಪಟ್ಟಿ ಮಾಡಿದ್ದು, ಅವುಗಳನ್ನು ಶೀಘ್ರ ರದ್ದು ಮಾಡಲಾಗುವುದು. ಇಲ್ಲವೇ ಎಪಿಎಲ್ ಪಡಿತರಕ್ಕೆ ಪರಿವರ್ತಿಸಲಾಗುವುದು. ನಿಯಮ ಮೀರಿ ಅಕ್ರಮವಾಗಿ ಪಡೆದ ಪಡಿತರ ಚೀಟಿಗಳನ್ನು ರದ್ದು ಮಾಡಲು ಪಕ್ಷಭೇದ ಮರೆತು ಸಹಕಾರ ನೀಡಬೇಕು

**ಕೆ.ಎಚ್. ಮುನಿಯಪ್ಪ,** ಆಹಾರ ಸಚಿವ (ಪ್ರಶ್ನೆ: ಎಂ. ನಾಗರಾಜ್, ಕಾಂಗ್ರೆಸ್ ಸದಸ್ಯ)

ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಶೇ 60ಕ್ಕಿಂತ ಕಡಿಮೆ ಫಲಿತಾಂಶ ಬಂದರೆ ಶಿಕ್ಷಕರ ವಾರ್ಷಿಕ ವೇತನ ಬಡ್ತಿ, ಮೂರು ವರ್ಷ ಫಲಿತಾಂಶ ಕುಸಿದರೆ ವೇತನಾನುದಾನ ಸ್ಥಗಿತಗೊಳಿಸುವ ಆದೇಶವನ್ನು ತಡೆ ಹಿಡಿಯಲಾಗುವುದು

**ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಸಚಿವ** (ಪ್ರಶ್ನೆ: ಎಸ್.ವಿ. ಸಂಕನೂರ, ಬಿಜೆಪಿ ಸದಸ್ಯ)

2,878 ಸರ್ಕಾರಿ ಆಸ್ಪತ್ರೆಗಳಲ್ಲಿ 14 ಆಸ್ಪತ್ರೆಗಳು ಅಗ್ನಿ ಸುರಕ್ಷತಾ ವ್ಯವಸ್ಥೆ ಅಳವಡಿಸಿಕೊಂಡಿವೆ. ಉಳಿದ ಆಸ್ಪತ್ರೆಗಳ ಕಟ್ಟಡಗಳಿಗೆ ಅಳವಡಿಸಲು ₹550 ಕೋಟಿ ಅಗತ್ಯವಿದೆ. ನಿಯಮ ಸಡಿಲಿಕೆ ಕುರಿತು ಅಗ್ನಿ ಶಾಮಕ ಸೇವೆಯ ಎಡಿಜಿಪಿ ಜತೆ ಮಾತುಕತೆ ನಡೆದಿದೆ

**ದಿನೇಶ್ ಗುಂಡೂರಾವ್,** ಆರೋಗ್ಯ ಸಚಿವ (ಪ್ರಶ್ನೆ: ಧನಂಜಯ ಸರ್ಜಿ, ಬಿಜೆಪಿ ಸದಸ್ಯ)

ಸ್ಮಾರ್ಟ್ ಮೀಟರ್ ಅಳವಡಿಕೆಗೆ ದುಬಾರಿ ದರ ನಿಗದಿ ಮಾಡಲಾಗಿದೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ದುಪ್ಪಟ್ಟು ಇದೆ. ಗ್ರಾಹಕರ ದರೋಡೆಗೆ ಸರ್ಕಾರವೇ ಪರವಾನಗಿ ನೀಡಿದೆ

**ಸಿ.ಟಿ. ರವಿ,** ಬಿಜೆಪಿ ಸದಸ್ಯ

## ‘ರಾಜ್ಯದಾದ್ಯಂತ ‘ಎ’ ಖಾತಾಗೆ ಕ್ರಮ’

‘ಬಿ’ ಖಾತಾ ಇರುವ ಕಟ್ಟಡಗಳಿಗೆ ‘ಎ’ ಖಾತಾ ನೀಡುವ ಕಾರ್ಯಕ್ರಮವನ್ನು ರಾಜ್ಯದಾದ್ಯಂತ ವಿಸ್ತರಿಸುವ ಬಗ್ಗೆ ಅಭಿಪ್ರಾಯ ಕೇಳಿ ಕಾನೂನು ಇಲಾಖೆಗೆ ಪ್ರಸ್ತಾವ ಕಳುಹಿಸಲಾಗಿದೆ. ಅಕ್ರಮ ಬಡಾವಣೆಗಳ ತೆರವಿಗೆ ಆದೇಶಿಸಲಾಗಿದೆ. ಕ್ರಮ ತೆಗೆದುಕೊಳ್ಳದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳುತ್ತೇವೆ.

**ವಿಧಾನ ಪರಿಷತ್ತಿನ ಸದಸ್ಯ ಸಿ.ಎನ್.ಮಂಜೇಗೌಡ ಅವರು ನಿಯಮ 303ರ ಅಡಿಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ನೀಡಿದ ಉತ್ತರ**

## ‘ಮಂಗಳೂರಿಗೂ ಆನೆ ಕಾರ್ಯಪಡೆ’

ಈಚೆಗೆ ಕಾಡಾನೆಗಳ ಹಾವಳಿ ಎದುರಿಸುತ್ತಿರುವ ಮಂಗಳೂರಿಗೂ ಒಂದು ಆನೆ ಕಾರ್ಯಪಡೆಯನ್ನು ಶೀಘ್ರವೇ ಮಂಜೂರು ಮಾಡಲಾಗುತ್ತದೆ. ಅಲ್ಲಿ ಆನೆ ಕಾರಿಡಾರ್ ಅನ್ನು ಗುರುತಿಸುವ ಉದ್ದೇಶದಿಂದ ಅಧ್ಯಯನ ಕೈಗೊಳ್ಳಲಾಗುತ್ತದೆ.

**ಕಾಂಗ್ರೆಸ್‌ನ ಐವನ್ ಡಿಸೋಜಾ ಗಮನ ಸೆಳೆಯುವ ಸೂಚನೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ನೀಡಿದ ಉತ್ತರ**

# ಸಂಪುಟದಿಂದ ರಾಜಣ್ಣ ವಜಾ

ಒಂದನೇ ಪುಟದಿಂದ...

**ರಾಜೀನಾಮೆ ಅಲ್ಲ ವಜಾ:** ಮುಂಗಾರು ಅಧಿವೇಶನದ ಮೊದಲ ದಿನವೇ ರಾಜಣ್ಣ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಿದ್ದರಿಂದಾಗಿ, ಸರ್ಕಾರದ ವಿರುದ್ಧ ಹೋರಾಟ ರೂಪಿಸಲು ಅಣಿಯಾಗಿದ್ದ ಪ್ರತಿಪಕ್ಷಗಳಿಗೆ ಇದು ಪ್ರಬಲ ಅಸ್ತ್ರವಾಗಿ ಪರಿಣಮಿಸಿದೆ.

ಕಲಾಪ ಆರಂಭವಾದ ಹೊತ್ತಿನಲ್ಲಿ ರಾಜೀನಾಮೆ ನೀಡಿದ್ದಾರೆ ಎಂಬ ಸುದ್ದಿ ಹರಿದಾಡಿತ್ತು. ಸಂಜೆಯ ಹೊತ್ತಿಗೆ ರಾಜಣ್ಣ ರಾಜೀನಾಮೆ ನೀಡಿದ್ದಲ್ಲ; ಅವರನ್ನು ಸಚಿವ ಸ್ಥಾನದಿಂದ ವಜಾ ಮಾಡಲಾಗಿದೆ ಎಂಬ ಸುದ್ದಿ ಖಚಿತವಾಯಿತು. ಮುಖ್ಯಮಂತ್ರಿ ಕಚೇರಿಯಿಂದ ರಾಜಭವನಕ್ಕೆ ಅದೇ ರೀತಿಯ ಸೂಚನೆ ರವಾನೆಯಾಯಿತು. ರಾಜಣ್ಣ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸುವ ಶಿಫಾರಸಿನ ಕುರಿತು ರಾಜಭವನದಿಂದ ಮಾರೋಲೆಯು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ತಲುಪಿತು. ಇದು ಮಾಧ್ಯಮಗಳಿಗೂ ಹಂಚಿಕೆಯಾಯಿತು. ವಜಾಗೊಳಿಸಿದ ಅಧಿಸೂಚನೆ ಹೊರಬಿದ್ದಿತು.

**ವಜಾಕ್ಕೆ ಹೈಕಮಾಂಡ್ ಪಟ್ಟು:** ರಾಹುಲ್ ಗಾಂಧಿ ನೇತೃತ್ವದಲ್ಲಿ ‘ಇಂಡಿಯಾ’ ಮೈತ್ರಿಕೂಟ ಸೋಮವಾರ ದೆಹಲಿಯಲ್ಲಿ ಬೃಹತ್ ಹೋರಾಟ ಹಮ್ಮಿಕೊಂಡಿತ್ತು. ಇದೇ ವೇಳೆ, ರಾಜಣ್ಣ ಅವರ ವ್ಯತಿರಿಕ್ತ ಹೇಳಿಕೆಯನ್ನು ಮಿತ್ರ ಪಕ್ಷದ ನಾಯಕರು ಪ್ರಶ್ನಿಸಿದ್ದರಿಂದಾಗಿ, ಕಾಂಗ್ರೆಸ್ ನಾಯಕರು ಮುಜುಗರಕ್ಕೆ ಸಿಲುಕಿದರು ಎನ್ನಲಾಗಿದೆ.

ಇದರ ಬೆನ್ನಲ್ಲೇ ರಾಜಣ್ಣ ಅವರನ್ನು ಸಂಪುಟದಿಂದ ವಜಾಗೊಳಿಸುವಂತೆ ಹೈಕಮಾಂಡ್, ಸಿದ್ದರಾಮಯ್ಯ ಅವರಿಗೆ ಸೂಚನೆ ನೀಡಿತು. ‘ಸದನ ನಡೆಯುತ್ತಿರುವ ಸಂದರ್ಭದಲ್ಲಿ ವಜಾ ಮಾಡಿದರೆ ವಿರೋಧಪಕ್ಷಗಳಿಗೆ ಅಸ್ತ್ರವಾಗುತ್ತದೆ. ಅಧಿವೇಶನ ಮುಗಿದ ಬಳಿಕ ರಾಜೀನಾಮೆ ಪಡೆಯೋಣ’ ಎಂದು ಸಿದ್ದರಾಮಯ್ಯ ಅವರು ಪಕ್ಷದ ವರಿಷ್ಠರಿಗೆ ಮನವರಿಕೆ ಮಾಡುವ ಪ್ರಯತ್ನ ಮಾಡಿದರು. ಆದರೆ, ಅದಕ್ಕೆ ಹೈಕಮಾಂಡ್ ಒಪ್ಪಲಿಲ್ಲ ಎಂದು ಹೇಳಲಾಗಿದೆ.

ಈ ಬೆಳವಣಿಗೆಯು, ರಾಜಣ್ಣ ಅವರ ಗಮನಕ್ಕೆ ಬರುತ್ತಿದ್ದಂತೆ ರಾಜೀನಾಮೆ ಪತ್ರ ಸಿದ್ಧಪಡಿಸಿಕೊಂಡರು. ಕಲಾಪ ನಡೆಯುತ್ತಿರುವಾಗಲೇ ಸದನದ ಒಳಗೆ ಬಂದು ಮುಖ್ಯಮಂತ್ರಿಯವರ ಕಿವಿಯಲ್ಲಿ ಏನೋ ಉಸುರಿ ಹೊರ ನಡೆದರು. ಈ ಬೆನ್ನಲ್ಲೇ, ರಾಜಣ್ಣ ರಾಜೀನಾಮೆ ನೀಡಿದ್ದಾರೆ ಎಂಬ ಸುದ್ದಿ ಹರಿದಾಡಿತು. ಮಾಧ್ಯಮಗಳು ಇದನ್ನು ಬಿತ್ತರಿಸುತ್ತಿದ್ದಂತೆ, ವಿರೋಧ ಪಕ್ಷ ಬಿಜೆಪಿ ಸದನದಲ್ಲೇ ಇದನ್ನು ಪ್ರಶ್ನಿಸಿತು. ವಿಧಾನಸಭೆ ಕಲಾಪದಲ್ಲಿ ಈ ವಿಷಯದ ಮೇಲೆ ವಾಕ್ಸಮರವೂ ನಡೆಯಿತು.

ಭೋಜನ ವಿರಾಮದ ಬಳಿಕ ವಿಧಾನ ಸಭೆಯಲ್ಲಿ ಈ ವಿಷಯ ವಿರೋಧಪಕ್ಷಗಳಿಗೆ ಪ್ರಬಲ ಅಸ್ತ್ರವಾಯಿತು. ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ರಾಜಣ್ಣ ಅವರ ವಜಾಕ್ಕೆ ಕಾರಣ ಕೇಳಿ ಸರ್ಕಾರವನ್ನು ಒತ್ತಾಯಿಸಿದಾಗ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಬಂದು ಉತ್ತರ ನೀಡುತ್ತಾರೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಮತ್ತು ಕೆ.ಎನ್. ರಾಜಣ್ಣ ಸಮಜಾಯಿಷಿ ನೀಡಿದರು. ಆದರೆ, ಕಲಾಪ ಮುಗಿಯುವವರೆಗೆ ಸಿದ್ದರಾಮಯ್ಯ ಸದನದ ಒಳಗೆ ಬರಲೇ ಇಲ್ಲ.

## ‘ಷಡ್ಯಂತ್ರದ ಬಗ್ಗೆ ಕಾಲ ಬಂದಾಗ ಹೇಳುವೆ’

ಒಂದನೇ ಪುಟದಿಂದ...

‘ಇದು ಪಕ್ಷದ ತೀರ್ಮಾನ. ಪ್ರಶ್ನೆ ಮಾಡುವುದಿಲ್ಲ. ರಾಹುಲ್ ಗಾಂಧಿ, ವೇಣುಗೋಪಾಲ್ ಮತ್ತು ನಮ್ಮ ಅಧ್ಯಕ್ಷರಿಗೆ (ಮಲ್ಲಿಕಾರ್ಜುನ ಖರ್ಗೆ) ತಪ್ಪು ಗ್ರಹಿಕೆ ನಿವಾರಣೆ ಮಾಡಲು ದೆಹಲಿಗೆ ಹೋಗುತ್ತೇನೆ’ ಎಂದರು.

‘ರಾಹುಲ್ ಗಾಂಧಿ ಈ ದೇಶದ ನಾಯಕ. ಅವರ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತೇನೆ. ಮಾಜಿ ಸಚಿವ ಎಂದು ಕರೆಸಿಕೊಳ್ಳಲು ಸಂತೋಷ ಇದೆ. ಮುಖ್ಯಮಂತ್ರಿಗೆ ಶಕ್ತಿ ತುಂಬಲು ರಾಜೀನಾಮೆ ನೀಡಿದ್ದೇನೆ’ ಎಂದು ಹೇಳಿ ತೆರಳಿದರು.

### ಪಕ್ಷದ ತೀರ್ಮಾನ: ಡಿಕೆಶಿ

ಒಂದನೇ ಪುಟದಿಂದ...



ಶಿವಕುಮಾರ್

‘ಪಕ್ಷದಿಂದ ಉಚ್ಚಾಟಿಸಬೇಕು ಎಂದು ಹೈಕಮಾಂಡ್‌ನಿಂದ ಸೂಚನೆ ಏನಾದರೂ ಬಂದಿತ್ತೇ’ ಎಂಬ ಪ್ರಶ್ನೆಗೆ, ‘ಶಾಸಕರು ಮತ್ತು ಮಂತ್ರಿಗಳು ನನ್ನ ಕಾರ್ಯವ್ಯಾಪ್ತಿಗೆ ಬರುವುದಿಲ್ಲ. ಶಾಸಕರಾದ ನಂತರ ಪಕ್ಷಕ್ಕೆ ಸಂಬಂಧಪಟ್ಟಂತೆ ಅಶಿಸ್ತು ತೋರಿದರೆ ಸಣ್ಣಪುಟ್ಟ ನೋಟಿಸ್ ನೀಡುವ ಕೆಲಸ ಮಾಡಲಾಗುತ್ತದೆ. ಇದರ ಹೊರತಾಗಿ ಸಿಎಲ್‌ಪಿ ನಾಯಕರೇ (ಸಿದ್ದರಾಮಯ್ಯ) ಮಂತ್ರಿಗಳು ಹಾಗೂ ಶಾಸಕರ ಮೇಲೆ ನಿಯಂತ್ರಣ ಹೊಂದಿರುತ್ತಾರೆ’ ಎಂದರು.

### ಮುಖ್ಯಮಂತ್ರಿ ಬದಲಾವಣೆ ವಿಚಾರ ಬಂದಾಗಲೆಲ್ಲಾ ಸಿದ್ದರಾಮಯ್ಯ ಪರ ನಿರಂತರ ಹೇಳಿಕೆ

# ವಿವಾದದ ಅಲೆ ಎಬ್ಬಿಸಿದ್ದ ರಾಜಣ್ಣ ಮಾತುಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಸಹಕಾರ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದ ಕೆ.ಎನ್. ರಾಜಣ್ಣ, ಸದಾ ಒಂದಲ್ಲ ಒಂದು ವಿವಾದಾತ್ಮಕ ಹೇಳಿಕೆ ನೀಡುತ್ತಲೇ ಬಂದಿದ್ದರು.

**ಐದು ವರ್ಷವೂ ಸಿದ್ದರಾಮಯ್ಯ:** ಕೆ.ಎನ್. ರಾಜಣ್ಣ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ನಿಂತಿದ್ದರು. ಮುಖ್ಯಮಂತ್ರಿ ಬದಲಾವಣೆ ವಿಚಾರ ಬಂದಾಗಲೆಲ್ಲ, ಮುಂಚೂಣಿಯಲ್ಲಿ ನಿಂತು ಮಾತನಾಡುತ್ತಿದ್ದರು. ಚುನಾವಣೆ ಸಮಯ ಮತ್ತು ನಂತರ ಅಧಿಕಾರ ಹಂಚಿಕೆ ಸೂತ್ರ ಆಗಿಲ್ಲ. ಐದು ವರ್ಷಗಳವರೆಗೆ ಅವರೇ ಮುಂದುವರಿಯುತ್ತಾರೆ. ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ ಎನ್ನುತ್ತಿದ್ದರು.

**ಮೂವರು ಉಪಮುಖ್ಯಮಂತ್ರಿ ಹೇಳಿಕೆ:** ರಾಜ್ಯದಲ್ಲಿ ಮೂವರಿಗೆ ಉಪ ಮುಖ್ಯಮಂತ್ರಿ ಹುದ್ದೆ ನೀಡಬೇಕು ಎಂದು 2024ರ ಲೋಕಸಭಾ ಚುನಾವಣೆಗೂ ಮೊದಲು ಧ್ವನಿ ಎತ್ತಿದ್ದರು. ಉತ್ತರ ಭಾರತದ ವಿವಿಧ ರಾಜ್ಯಗಳಲ್ಲಿ ಚುನಾವಣೆ ನಡೆದಾಗ ಒಂದಕ್ಕಿಂತ ಹೆಚ್ಚು ಮಂದಿಗೆ ಉಪ ಮುಖ್ಯಮಂತ್ರಿ ಹುದ್ದೆ ನೀಡುವ ತೀರ್ಮಾನವನ್ನು ಬಿಜೆಪಿ ಮಾಡಿತ್ತು. ಈಗ ರಾಜ್ಯದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರನ್ನು ಕಾಂಗ್ರೆಸ್ ಪಕ್ಷದ ಜತೆಯಲ್ಲಿ ಉಳಿಸಿಕೊಳ್ಳಬೇಕಿದೆ. ಅದಕ್ಕಾಗಿ ಇನ್ನಷ್ಟು ಮಂದಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದ್ದರು.



**ನೇರ, ನಿಷ್ಠುರವಾಗಿ ಮಾತನಾಡುತ್ತಿದ್ದ ಸಚಿವ ರಾಜಣ್ಣ ಅವರನ್ನು ಕಾಣದ ಕೈಗಳ ಒತ್ತಡಕ್ಕೆ ಮಣಿದು ಸಂಪುಟದಿಂದ ತೆಗೆದಿರುವುದು ವಾಲ್ಮೀಕಿ ಸಮುದಾಯಕ್ಕೆ ಮಾಡಿದ ಅಪಮಾನ**

**ಶ್ರೀರಾಮುಲು,** ಬಿಜೆಪಿ ಮುಖಂಡ

**ಹೈಕಮಾಂಡ್‌ಗೆ ಸವಾಲು:** ‘ಉಪ ಮುಖ್ಯಮಂತ್ರಿ ಹುದ್ದೆ, ಜತೆಗೆ ಲೋಕಸಭೆ ಚುನಾವಣೆವರೆಗೂ ಅಧ್ಯಕ್ಷ ಸ್ಥಾನದಲ್ಲಿ ಡಿ.ಕೆ. ಶಿವಕುಮಾರ್ ಇರುತ್ತಾರೆ ಎಂದು ಹೈಕಮಾಂಡ್ ಹೇಳಿತ್ತು. ಲೋಕಸಭೆ ಚುನಾವಣೆ ಮುಗಿದರೂ ಬದಲಾವಣೆ ಏಕಿಲ್ಲ’ ಎಂದು ರಾಜಣ್ಣ ಪ್ರಶ್ನಿಸಿದ್ದರು. ‘ನಾನು ಕೆಪಿಸಿಸಿ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದು, ಆ ಸ್ಥಾನ ಸಿಕ್ಕಿದರೆ ಸಚಿವ ಸ್ಥಾನ ತೊರೆಯಲು ಸಿದ್ಧ. ಕೆಪಿಸಿಸಿ ಅಧ್ಯಕ್ಷ ಹುದ್ದೆಯ ವಿಚಾರದಲ್ಲಿ ಗೊಂದಲ ಉಂಟಾಗಲು ಹೈಕಮಾಂಡ್ ಕಾರಣ. ಹೀಗಾಗಿ, ಈ ಗೊಂದಲವನ್ನು ಹೈಕಮಾಂಡ್‌ನವರೇ ನಿವಾರಿಸಬೇಕು’ ಎಂದು ಹೈಕಮಾಂಡ್‌ಗೇ ಸವಾಲು ಹಾಕಿದ್ದರು.

**ಸುರ್ಜೇವಾಲಾ ವಿರುದ್ಧವೂ ಗುಡುಗು:** ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಸಚಿವರ ಕಾರ್ಯವೈಖರಿ ಮೌಲ್ಯಮಾಪನ ಮಾಡುವ ಕುರಿತು ಟೀಕಿಸಿದ್ದರು. ಅವರು ‘ನನಗೇನು ತಾಕೀತು ಮಾಡುತ್ತಾರೆ’ ಎಂದು ಅಸಮಾಧಾನ ವ್ಯಕ್ತಪಡಿಸಿದ್ದರು.

**ಎಐಸಿಸಿ ಹೆಸರು ದುರ್ಬಳಕೆ ಆರೋಪ:** ಎಐಸಿಸಿ ಹೆಸರನ್ನು ಡಿ.ಕೆ. ಶಿವಕುಮಾರ್ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದ್ದರು. ಸಿದ್ದರಾಮಯ್ಯನವರ ಹೆಸರನ್ನು ಕೆಲವರು ದುರ್ಬಳಕೆ ಮಾಡಿಕೊಳ್ಳುವುದು ಬೇಡ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿದ್ದರು.

**ಸದನದಲ್ಲೇ ಹನಿಟ್ರ್ಯಾಪ್ ಪ್ರಸ್ತಾಪ:** ಇದೇ ವರ್ಷದ ಬಜೆಟ್ ಮೇಲಿನ ಚರ್ಚೆ ವೇಳೆ ಹನಿಟ್ರ್ಯಾಪ್ ವಿಚಾರ ಪ್ರಸ್ತಾಪಿಸಿದ ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಅವರ ಮಾತಿಗೆ ಧ್ವನಿಗೂಡಿಸಿದ್ದ ಅವರು, ‘ಕೆಲವರು ಹನಿಟ್ರ್ಯಾಪ್‌ನ ಖೆಡ್ಡಾಕ್ಕೆ ಬೀಳಿಸಲು ಯತ್ನಿಸಿದ್ದಾರೆ. ಈ ಬಗ್ಗೆ ದಾಖಲೆಗಳಿವೆ. ರಾಜಕೀಯ ಪಕ್ಷದಲ್ಲಿ ಇರುವವರು ತಮ್ಮ ಹಾಗೂ ತಮ್ಮ ಕುಟುಂಬದ ಭವಿಷ್ಯಕ್ಕಾಗಿಯೋ, ಮುಖ್ಯಮಂತ್ರಿ ಆಗಬೇಕೆಂಬ ಕಾರಣಕ್ಕೊ ಹೀಗೆಲ್ಲ ಮಾಡುವುದು ಸರಿಯಲ್ಲ’ ಎಂದಿದ್ದರು. ಈ ವಿಷಯ ಆಡಳಿತ ಪಕ್ಷದಲ್ಲಿ ಕಂಪನವನ್ನೇ ಎಬ್ಬಿಸಿತ್ತು.

### ಸೆಪ್ಟೆಂಬರ್‌ನಲ್ಲಿ ರಾಜಕೀಯ ಕ್ರಾಂತಿ

ರಾಜ್ಯ ರಾಜಕೀಯದಲ್ಲಿ ಸೆಪ್ಟೆಂಬರ್ (2025) ನಂತರ ಕ್ರಾಂತಿ ಆಗಲಿದೆ ಎಂಬ ರಾಜಣ್ಣ ಅವರ ಮಾತು ಕಾಂಗ್ರೆಸ್ ವಲಯದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿತ್ತು. ಕಾಂಗ್ರೆಸ್‌ನಲ್ಲಿ ಪವರ್ ಸೆಂಟರ್‌ಗಳು ಜಾಸ್ತಿ ಆಗಿವೆ. 2013-18ರಲ್ಲಿ ಪವರ್ ಸೆಂಟರ್ ಒಂದೇ ಇದ್ದದ್ದು. ಈಗ ಎರಡು-ಮೂರು ಎಷ್ಟು ಬೇಕಿದ್ದರೂ ಹೇಳಿಕೊಳ್ಳಬಹುದು. ಪವರ್ ಸೆಂಟರ್ ಜಾಸ್ತಿ ಇದ್ದಾಗ ಜಂಜಾಟವೂ ಜಾಸ್ತಿ ಆಗುತ್ತದೆ. ಅದಕ್ಕೆ ಅನುಗುಣವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸರ್ಕಾರವನ್ನು ನಡೆಸಬೇಕಾಗುತ್ತದೆ. 2013-18ರ ಸಿದ್ದರಾಮಯ್ಯ ಈಗ ಇಲ್ಲ ಎಂಬುದು ಜನರ ಅಭಿಪ್ರಾಯ ಎಂದಿದ್ದರು.

# ಧರ್ಮಸ್ಥಳಕ್ಕೆ ಎನ್‌ಎಚ್‌ಆರ್‌ಸಿ ಭೇಟಿ

## ಮೃತದೇಹಗಳನ್ನು ಹೂತು ಹಾಕಲಾಗಿದೆ ಎನ್ನಲಾದ ಪ್ರಕರಣ • ವಿವರ ಸಂಗ್ರಹ

• ಪ್ರವೀಣ್ ಕುಮಾರ್ ಪಿ.ವಿ.

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ಅಪರಾಧ ಕೃತ್ಯಗಳ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂಬ ಆರೋಪ ಕುರಿತು ವಿಶೇಷ ತನಿಖಾ ತಂಡ ತನಿಖೆ ನಡೆಸುತ್ತಿರುವಂತೆಯೇ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ (ಎನ್‌ಎಚ್‌ಆರ್‌ಸಿ) ತಂಡವು ಧರ್ಮಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಕಲೆಹಾಕಿದೆ.

ಎನ್‌ಎಚ್‌ಆರ್‌ಸಿ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಎಸ್‌ಪಿ) ಯುವರಾಜ್, ಡಿವೈಎಸ್‌ಪಿ ರವಿ ಸಿಂಗ್ ಮತ್ತಿತರರನ್ನು ಒಳಗೊಂಡ ನಾಲ್ವರ ತಂಡ ಸೋಮವಾರ ಬೆಳ್ತಂಗಡಿಯಲ್ಲಿರುವ ಎಸ್‌ಐಟಿ ಕಚೇರಿ, ಧರ್ಮಸ್ಥಳ ಗ್ರಾಮ ಪಂಚಾಯಿತಿ ಕಚೇರಿ, ಧರ್ಮಸ್ಥಳ ಠಾಣೆಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡಿತು. ಸಾಕ್ಷಿ ದೂರುದಾರನಿಂದಲೂ ಹೇಳಿಕೆ ಪಡೆದುಕೊಂಡಿದೆ ಎಂದು ಗೊತ್ತಾಗಿದೆ.

ಧರ್ಮಸ್ಥಳದಲ್ಲಿ ಈಚಿನ ದಶಕಗಳಲ್ಲಿ ಮೃತದೇಹ ಪತ್ತೆಗೆ ಸಂಬಂಧಿಸಿ ಅಸಹಜ ಸಾವು ಪ್ರಕರಣಗಳು ಎಷ್ಟು ದಾಖಲಾಗಿವೆ ಎಂಬ ಮಾಹಿತಿಯನ್ನು ಎನ್‌ಎಚ್‌ಆರ್‌ಸಿ ತಂಡದ ಮುಖ್ಯಸ್ಥ, ಐಪಿಎಸ್ ಅಧಿಕಾರಿ ಯುವರಾಜ್ ಅವರು ಧರ್ಮಸ್ಥಳ ಠಾಣೆಯಿಂದ ಪಡೆದುಕೊಂಡರು.

ಎನ್‌ಎಚ್‌ಆರ್‌ಸಿಯ ಕೆಲವು ಅಧಿಕಾರಿಗಳು ಗ್ರಾಮ ಪಂಚಾಯಿತಿ ಕಚೇರಿಗೆ ತೆರಳಿ, ಗ್ರಾಮದಲ್ಲಿ ಈಚಿನ ದಶಕಗಳಲ್ಲಿ ಸಿಕ್ಕಿದ್ದ,ಗುರುತು ಪತ್ತೆಯಾಗದ ಶವಗಳನ್ನು ವಿಲೇ ಮಾಡಿದ ಕುರಿತ ವಿವರ ಪಡೆದರು.

'ಈಚಿನ ದಶಕಗಳಲ್ಲಿ ಮೃತದೇಹಗಳ ವಿಲೇವಾರಿಗೆ ಎಷ್ಟು ಕಾರ್ಮಿಕರನ್ನು ಬಳಸಿಕೊಳ್ಳಲಾಗಿದೆ, ಅವರಲ್ಲಿ ಯಾರಾದರೂ ಈಗಲೂ ಕಾರ್ಯ ನಿರ್ವಹಿಸುತ್ತಿರುವರೇ' ಎಂದು ಮಾಹಿತಿ ಪಡೆದರು. ಮೃತದೇಹಗಳ ವಿಲೇವಾರಿ ಮಾಡಿದ್ದ ಕಾರ್ಮಿಕರು ಗ್ರಾಮದಲ್ಲೇ ವಾಸವಾಗಿದ್ದು, ಅವರ ಮನೆಗಳಿಗೂ ತೆರಳಿ ಹೇಳಿಕೆ ದಾಖಲಿಸಿಕೊಂಡರು. ಗ್ರಾಮ ಪಂಚಾಯಿತಿಯಲ್ಲಿ ಸ್ವಚ್ಛತಾ ಕಾರ್ಮಿಕನಾಗಿರುವ ವ್ಯಕ್ತಿಯೊಬ್ಬರನ್ನು ಗ್ರಾಮ ಪಂಚಾಯಿತಿ ಕಚೇರಿಗೆ ಕರೆಸಿಕೊಂಡು ವಿಚಾರಣೆ ನಡೆಸಿದರು.

ವಿಶೇಷ ತನಿಖಾ ತಂಡದವರು ಧರ್ಮಸ್ಥಳದ ಬಾಹುಬಲಿ ಬೆಟ್ಟಕ್ಕೆ ತೆರಳುವ ದಾರಿ ಬದಿಯಲ್ಲಿ ಶನಿವಾರ ಶೋಧಕಾರ್ಯ ನಡೆಸಿದ್ದ ಸ್ಥಳಕ್ಕೂ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು.

### ದೂರು ಸಲ್ಲಿಸಿದ ಪದ್ಮಲತಾ ಸಹೋದರಿ

ಬೆಳ್ತಂಗಡಿ: 'ಪತ್ತೆಯಾಗದ ಪ್ರಕರಣ ಎಂದು 39 ವರ್ಷದ ಹಿಂದೆ ಮುಚ್ಚಿ ಹಾಕಿರುವ ಪ್ರಕರಣದ ಮರು ತನಿಖೆ ನಡೆಸಿ, ನ್ಯಾಯ ಒದಗಿಸಬೇಕು' ಎಂದು ಪದ್ಮಲತಾ ಎಂಬವರ ಅಕ್ಕ ಇಂದ್ರಾವತಿ ಬೆಳ್ತಂಗಡಿಯಲ್ಲಿ ಎಸ್‌ಐಟಿ ಕಚೇರಿಗೆ ದೂರು ನೀಡಿದ್ದಾರೆ.

ಈ ವೇಳೆ ಅವರು, '1986ರ ಡಿ. 22ರಂದು ಅಪಹರಣಕ್ಕೊಳಗಾದ ಪದ್ಮಲತಾಳ ಮೃತದೇಹ 1987ರ ಫೆ. 17ರಂದು ನೆರಿಯ ಹೊಳೆಯ ಬದಿಯಲ್ಲಿ ಸಿಕ್ಕಿತ್ತು. ಈ ಕುರಿತು ನ್ಯಾಯ ಸಿಗಲಿಲ್ಲ. ಮರು ತನಿಖೆ ಕೋರಿ ದೂರು ನೀಡಲಾಗಿದೆ' ಎಂದರು.



ಎನ್‌ಎಚ್‌ಆರ್‌ಸಿ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಯುವರಾಜ್, ಡಿವೈಎಸ್‌ಪಿ ರವಿ ಸಿಂಗ್ ಅವರನ್ನೊಳಗೊಂಡ ತಂಡ ಧರ್ಮಸ್ಥಳದ ಬಾಹುಬಲಿ ಬೆಟ್ಟದ ಬಳಿ ಎಸ್‌ಐಟಿ ಶೋಧ ನಡೆಸಿರುವ ಸ್ಥಳವನ್ನು ಪರಿಶೀಲಿಸಿತು ಚಿತ್ರ: ಫಕ್ರುದ್ದೀನ್ ಎಚ್

### 'ಸ್ವಯಂಪ್ರೇರಿತ ತನಿಖೆ'

'ಈ ಪ್ರಕರಣದ ಬಗ್ಗೆ ದೂರು ಬಂದಿಲ್ಲ. ಸ್ವಯಂಪ್ರೇರಿತವಾಗಿ ಪರಿಶೀಲಿಸುತ್ತಿದ್ದೇವೆ. ಮೃತದೇಹಗಳನ್ನು ಪಂಚಾಯಿತಿಯವರು, ಸ್ಥಳೀಯ ಠಾಣೆಯವರು ನಿಯಮ ಪ್ರಕಾರ ವಿಲೇ ಮಾಡಿದ್ದಾರೆಯೇ ಎಂಬುದನ್ನು ಪರಿಶೀಲಿಸುತ್ತೇವೆ' ಎಂದು ಎನ್‌ಎಚ್‌ಆರ್‌ಸಿ ತಂಡದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

### ಜಿಪಿಆರ್ ಬಳಸಿ ಶೋಧಕ್ಕೆ ಸಿದ್ಧತೆ

ಸಾಕ್ಷಿ ದೂರುದಾರ ನೇತ್ರಾವತಿ ಸ್ನಾನಘಟ್ಟದ ಬಳಿ ತೋರಿಸಿರುವ 13ನೇ ಸ್ಥಳದಲ್ಲಿ ಗ್ರೌಂಡ್ ಪೆನೆಟ್ರೇಟಿಂಗ್ ರೇಡಾರ್ (ಜಿಪಿಆರ್) ಸಾಧನದ ನೆರವಿನಿಂದ ಶೋಧ ಕಾರ್ಯ ಮುಂದುವರಿಸಲು ವಿಶೇಷ ತನಿಖಾ ತಂಡ (ಎಸ್‌ಐಟಿ) ಸಿದ್ಧತೆ ನಡೆಸಿದೆ.

'ಜಿಪಿಆರ್ ಸಾಧನ ತರಿಸಿಕೊಂಡಿದ್ದೇವೆ. ಅದನ್ನು ಬಳಸಿ ಶವ ಹೂತಿರುವ ಕುರುಹುಗಳು ಇವೆಯೇ ಎಂದು ಪರಿಶೀಲಿಸುತ್ತೇವೆ. ಅವಶೇಷ ಇರುವುದು ಖಚಿತವಾದರೆ ಮಾತ್ರ ಅಗೆಯುತ್ತೇವೆ' ಎಂದು ವಿಶೇಷ ತನಿಖಾ ತಂಡದ (ಎಸ್‌ಐಟಿ) ಮೂಲಗಳು ತಿಳಿಸಿವೆ.

ಸಾಕ್ಷಿ ದೂರುದಾರ ತೋರಿಸಿದ್ದ ಜಾಗದಲ್ಲಿದ್ದ ಕಳೆ ಸ್ವಚ್ಛಗೊಳಿಸಿ, ಡ್ರೋನ್ ಮೂಲಕ ಜಾಗದ ಜಿಪಿಎಸ್ ಲೊಕೇಷನ್ ವಿವರಗಳನ್ನು ಸೋಮವಾರ ದಾಖಲಿಸಲಾಯಿತು.

### ವಿಧಾನಸಭೆಯಲ್ಲಿ ವಿಚಾರ ಪ್ರಸ್ತಾಪಿಸಲು ಬಿಜೆಪಿ ತಯಾರಿ

ಬೆಂಗಳೂರು: ವಿಧಾನಸಭೆಯಲ್ಲಿ ಮಂಗಳವಾರ ಆರ್‌ಸಿಬಿ ಕಾಲ್ತುಳಿದ ವಿಷಯವನ್ನು ಪ್ರಸ್ತಾಪಿಸಲಾಗುವುದು. ಅದೇ ರೀತಿ ಧರ್ಮಸ್ಥಳದ ಬಗ್ಗೆ ನಡೆಯುತ್ತಿರುವ ಅಪಪ್ರಚಾರದ ವಿಷಯವನ್ನು ಇದೇ ಅಧಿವೇಶನದಲ್ಲಿ ದೊಡ್ಡ ಮಟ್ಟದಲ್ಲಿ ಪ್ರಸ್ತಾಪಿಸಲು ಶಾಸಕಾಂಗ ಪಕ್ಷದ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ತಿಳಿಸಿದರು.

ಶಾಸಕಾಂಗ ಪಕ್ಷದ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿ ಅವರು ಈ ವಿಷಯ ತಿಳಿಸಿದರು. ಕಾಲ್ತುಳಿತದ ವಿಷಯದ ಬಗ್ಗೆ ಈಗಾಗಲೇ ನಿಲುವಳಿ ಸೂಚನೆ ನೀಡಲಾಗಿದೆ. ಅಲ್ಲದೇ, ರಸಗೊಬ್ಬರ ಕೊರತೆ, ಬಗರ್ ಹುಕುಂ ಸಮಸ್ಯೆ, ಬೆಲೆ ಏರಿಕೆ, ಶೇ 60 ರ ಕಮಿಷನ್, ಸಚಿವರ ರಾಜಣ್ಣ ಅವರನ್ನು ವಜಾ ಮಾಡಿದ ವಿಚಾರವನ್ನೂ ಪ್ರಸ್ತಾಪಿಸಲಾಗುವುದು ಎಂದರು.

ಧರ್ಮಸ್ಥಳಕ್ಕೆ ಅಪಪ್ರಚಾರ ಮಾಡುತ್ತಿರುವ ವಿಷಯವನ್ನು ಪ್ರಸ್ತಾಪಿಸಬೇಕು ಎಂದು ಕರಾವಳಿ ಮತ್ತು ಮಲೆನಾಡು ಭಾಗದ ಶಾಸಕರು ಒತ್ತಾಯಿಸಿದ್ದಾರೆ. ಈ ವಿಷಯವನ್ನೂ ದೊಡ್ಡ ಮಟ್ಟದಲ್ಲಿ ಪ್ರಸ್ತಾಪಿಸಲಾಗುವುದು. ಎಸ್‌ಐಟಿ ತನಿಖೆ ಆರಂಭವಾಗಿ ಹಲವು ದಿನಗಳೇ ಕಳೆದಿವೆ. ದಿನಕ್ಕೊಂದು ಹೊಸ ಹೊಸ ಸ್ಥಳಗಳಲ್ಲಿ ಶವಗಳ ಹುಡುಕಾಟ ನಡೆದಿದೆ. ಎಲ್ಲೂ ಏನೂ ಸಿಕ್ಕಿಲ್ಲ. ಆ ಭಾಗದ ಜನ ರೊಚ್ಚಿಗೆದ್ದಿದ್ದಾರೆ. ಕಾಂಗ್ರೆಸ್ ಮುಖಂಡ ಜನಾರ್ದನ ಪೂಜಾರಿ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ ಎಂದು ಹೇಳಿದರು.

ಅನಾಮಿಕ ನೂರಾರು ಶವಗಳನ್ನು ಹೂತಿರುವುದಾಗಿ ಹೇಳಿದ್ದಾನೆ. ಶವ ಇದ್ದಿದ್ದರೆ ಆತ ತೋರಿಸಿದ ಮೊದಲ ಗುಂಡಿಯಲ್ಲೇ ಸಿಗಬೇಕಿತ್ತು. ಎಲ್ಲೂ ಏನೂ ಸಿಕ್ಕಿಲ್ಲ. ಇದರ ಹಿಂದೆ ಯಾರದ್ದೋ ಚಿತಾವಣೆ ಇರಬಹುದು. ಸರ್ಕಾರ ಏಕೆ ಕಣ್ಣು ಮುಚ್ಚಿ ಕುಳಿತಿದೆ ಎಂದು ಅಶೋಕ ಪ್ರಶ್ನಿಸಿದರು. ಸಭೆಯಲ್ಲಿ ಸುಮಾರು 15 ಕ್ಕೂ ಹೆಚ್ಚು ಶಾಸಕರು ಮಾತನಾಡಿ, ತಮ್ಮ ಅಭಿಪ್ರಾಯಗಳನ್ನು ಹೇಳಿದರು.

## ಆಶ್ರಯ ಕೇಂದ್ರಗಳಿಗೆ ಸಾಗಿಸಲು 'ಸುಪ್ರೀಂ' ನಿರ್ದೇಶನ

# 'ಬೀದಿ ನಾಯಿಗಳ ಸ್ಥಳಾಂತರಿಸಿ'

ನವದೆಹಲಿ (ಪಿಟಿಐ): ದೆಹಲಿ ಮತ್ತು ರಾಷ್ಟ್ರ ರಾಜಧಾನಿಯ ಸುತ್ತಮುತ್ತಲಿನ ಪ್ರದೇಶಗಳ ಬೀದಿ ನಾಯಿಗಳನ್ನು ಹಿಡಿದು, ಅವುಗಳನ್ನು ಆಶ್ರಯ ತಾಣಗಳಿಗೆ ಸ್ಥಳಾಂತರಿಸಿ ಎಂದು ಸುಪ್ರೀಂ ಕೋರ್ಟ್ ಅಧಿಕಾರಿಗಳಿಗೆ ಸೋಮವಾರ ನಿರ್ದೇಶನ ನೀಡಿದೆ.

ಬೀದಿ ನಾಯಿ ಕಡಿತ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿರುವ ನ್ಯಾಯಾಲಯವು, ಆ ನಾಯಿಗಳು ಮತ್ತೆ ಬೀದಿಗೆ ಬರಕೂಡದು ಎಂದು ತಾಕೀತು ಮಾಡಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್. ಮಹಾದೇವನ್ ಅವರ ನೇತೃತ್ವದ ನ್ಯಾಯಪೀಠವು ಅಧಿಕಾರಿಗಳಿಗೆ ಈ ರೀತಿಯ ಕೆಲವು ಸೂಚನೆಗಳನ್ನು ನೀಡಿತು. ನ್ಯಾಯಾಲಯದ ಆದೇಶ ಪಾಲನೆ ಕಾರ್ಯಕ್ಕೆ ಅಡ್ಡಿ ಉಂಟುಮಾಡುವ ವ್ಯಕ್ತಿ ಅಥವಾ ಸಂಸ್ಥೆಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದೆ. ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸುವುದಾಗಿಯೂ ತಿಳಿಸಿದೆ.

ಪ್ರಾಣಿ ಸಂರಕ್ಷಣೆ ಕಾರ್ಯಕರ್ತರು ಮತ್ತು 'ಪ್ರಾಣಿ ಪ್ರೇಮಿಗಳು' ಎಂದು ಕರೆಸಿಕೊಳ್ಳುವವರಿಗೆ ರೇಬಿಸ್‌ಗೆ ಬಲಿಯಾದ ಮಕ್ಕಳನ್ನು ಮರಳಿ ತಂದುಕೊಡಲು ಸಾಧ್ಯವೇ ಎಂದು ನ್ಯಾಯಪೀಠ ಪ್ರಶ್ನಿಸಿತು.

ನಾಯಿಗಳ ಸೆರೆ ಹಿಡಿಯುವ ಕಾರ್ಯವನ್ನು ಹೇಗೆ ಅನುಷ್ಠಾನ ಮಾಡಬೇಕು ಎಂಬುದು ಅಧಿಕಾರಿಗಳಿಗೆ ಬಿಟ್ಟಿದ್ದು. ನಗರ ಮತ್ತು ನಗರದ ಹೊರವಲಯವನ್ನು ಬೀದಿ ನಾಯಿಗಳಿಂದ ಮುಕ್ತಗೊಳಿಸುವುದು ಮೊತ್ತಮೊದಲ ಆದ್ಯತೆಯಾಗಬೇಕು. ಈ ವಿಚಾರದಲ್ಲಿ ಯಾವುದೇ ರಾಜಿ ಇಲ್ಲ ಎಂದು ಸ್ಪಷ್ಟಪಡಿಸಿತು.

ಆರು ವಾರಗಳ ಬಳಿಕ ಮತ್ತೆ ಅರ್ಜಿ ವಿಚಾರಣೆ ನಡೆಸುವುದಾಗಿ ನ್ಯಾಯಪೀಠ ತಿಳಿಸಿತು. ಬೀದಿ ನಾಯಿ ಹಾವಳಿಯಿಂದ ರಾಷ್ಟ್ರ ರಾಜಧಾನಿಯಲ್ಲಿ ರೇಬಿಸ್ ಹೆಚ್ಚಾಗಿರುವ ಕಾರಣ ಜುಲೈ 28ರಂದು ಸುಪ್ರೀಂ ಕೋರ್ಟ್ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿತ್ತು.

### ಕೋರ್ಟ್ ಹೇಳಿದ್ದೇನು?

- ಗುರುಗ್ರಾಮ, ನೊಯಿಡಾ ಮತ್ತು ಗಾಜಿಯಾಬಾದ್‌ನಲ್ಲಿ ದೆಹಲಿ ಸರ್ಕಾರ ಮತ್ತು ಸ್ಥಳೀಯ ಸ್ಥಂಸ್ಥೆಗಳು ನಿರ್ಮಿಸಿರುವ ಆಶ್ರಯ ಕೇಂದ್ರಗಳಿಗೆ ಬೀದಿ ನಾಯಿಗಳನ್ನು ಸ್ಥಳಾಂತರಿಸಬೇಕು
- ಈ ಆಶ್ರಯ ಕೇಂದ್ರಗಳಲ್ಲಿ ನಾಯಿಗಳ ಕಾಳಜಿಗಾಗಿ ಸಿಬ್ಬಂದಿ ನೇಮಿಸಬೇಕು
- ಈ ಕೇಂದ್ರಗಳನ್ನು ಸಿ.ಸಿ.ಟಿ.ವಿ. ಕ್ಯಾಮೆರಾ ಕಣ್ಗಾವಲಿನಲ್ಲಿ ಇಡಬೇಕು
- ಸ್ಥಳಾಂತರಿಸುವ ನಾಯಿಗಳ ಕುರಿತ ಅಂಕಿಅಂಶವನ್ನು ದಾಖಲಿಸಬೇಕು ಮತ್ತು ಅದನ್ನು ಮುಂದಿನ ವಿಚಾರಣೆ ವೇಳೆ ನ್ಯಾಯಾಲಯಕ್ಕೆ ಸಲ್ಲಿಸಬೇಕು
- ನಾಯಿ ಕಡಿತ ಪ್ರಕರಣದ ಬಗ್ಗೆ ವರದಿಗಾಗಿ ವಾರದ ಒಳಗಾಗಿ ಸಹಾಯವಾಣಿ ಆರಂಭಿಸಬೇಕು. ದೂರು ದಾಖಲಾದ ನಾಲ್ಕು ಗಂಟೆಗಳ ಒಳಗಾಗಿ ನಾಯಿಯನ್ನು ಹಿಡಿಯಬೇಕು
- ರೇಬಿಸ್ ಲಸಿಕೆ ಲಭ್ಯವಿರುವಂತೆ ನೋಡಿಕೊಳ್ಳಬೇಕು



ಕಾಲಮಿತಿಯ ಒಳಗಾಗಿ ದೆಹಲಿ ಸರ್ಕಾರವು ಸುಪ್ರೀಂ ಕೋರ್ಟ್ ಆದೇಶವನ್ನು ಅನುಷ್ಠಾನ ಮಾಡಲಿದೆ
**ಕಪಿಲ್ ಮಿಶ್ರಾ,** ಆಶ್ರಯ ಮನೆ ಅಭಿವೃದ್ಧಿ ಸಚಿವ

ದೆಹಲಿಯಲ್ಲಿನ ನಾಯಿಗಳ ಸ್ಥಳಾಂತರ, ನಿರ್ವಹಣೆಗಾಗಿ ಸುಮಾರು ₹15,000 ಕೋಟಿ ವೆಚ್ಚವಾಗಲಿದೆ. ದೆಹಲಿ ಸರ್ಕಾರದ ಬಳಿ ಇಷ್ಟು ಹಣ ಇದೆಯೇ?
**ಮೇನಕಾ ಗಾಂಧಿ,** ಪ್ರಾಣಿಗಳ ಹಕ್ಕು ಹೋರಾಟಗಾರ್ತಿ, ಮಾಜಿ ಕೇಂದ್ರ ಸಚಿವೆ

### ಮಹಾದೇವಿ ಆನೆ ಸ್ಥಳಾಂತರ: ಗುರುವಾರ 'ಸುಪ್ರೀಂ'ನಲ್ಲಿ ಅರ್ಜಿ ವಿಚಾರಣೆ

ಮಹಾರಾಷ್ಟ್ರದ ಕೊಲ್ಹಾಪುರದ ಜೈನ ಮಠದ ಆನೆ 'ಮಹಾದೇವಿ' (30) ಯನ್ನು ಗುಜರಾತ್‌ನ ವಂತಾರ ವನ್ಯಜೀವಿ ಸಂರಕ್ಷಣಾ ಕೇಂದ್ರಕ್ಕೆ ಸ್ಥಳಾಂತರಿಸುವ ಆದೇಶವನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಯನ್ನು ಗುರುವಾರ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಸಮ್ಮತಿಸಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಹಾಗೂ ನ್ಯಾಯಮೂರ್ತಿಗಳಾದ ಕೆ. ವಿನೋದ್ ಚಂದ್ರನ್, ಎ.ಎಸ್ ಚಂದುಕರ್ ಅವರನ್ನೊಳಗೊಂಡ ನ್ಯಾಯಪೀಠವು ಈ ವಿಚಾರಣೆಯನ್ನು ಕೈಗೆತ್ತಿಕೊಳ್ಳಲಿದೆ.

### ಕೆನೆಪದರ ಅರ್ಜಿ: ಕೇಂದ್ರಕ್ಕೆ ನೋಟಿಸ್

ನವದೆಹಲಿ: ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡಗಳ (ಎಸ್ಸಿ/ಎಸ್ಟಿ) ಮೀಸಲಾತಿಯಲ್ಲಿ ಕೆನೆಪದರ ನಿಯಮವನ್ನು ಜಾರಿಗೊಳಿಸುವಂತೆ ಕೋರಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ನೋಟಿಸ್ ಜಾರಿಗೊಳಿಸಿದೆ.

# ರಾಮದುರ್ಗ: ಮರಕ್ಕೆ ಕಟ್ಟಿ ಪರಿಶಿಷ್ಟ ಯುವಕರಿಗೆ ಥಳಿತ

ರಾಮದುರ್ಗ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಗೊಡಚಿ ಗ್ರಾಮದಲ್ಲಿ ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಸೇರಿದ ಈರಣ್ಣ ವಿಠ್ಠಲ ನಾಯ್ಕರ (18), ಲಕ್ಷ್ಮಣ ಮಲ್ಲಪ್ಪ ಚಿಪ್ಪಲಕಟ್ಟಿ (19) ಎಂಬುವರನ್ನು ಮರಕ್ಕೆ ಕಟ್ಟಿ ಹಾಕಿ ಹಲ್ಲೆ ಮಾಡಿದ್ದು, ಹಲ್ಲೆ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ.

ಹಲ್ಲೆ ಮಾಡಿದ ಆರೋಪವುಳ್ಳ ಲಿಂಗಾಯತ ಸಮಾಜದವರು ಮತ್ತು ಎಸ್‌ಟಿ ಸಮಾಜದವರು ಪರಸ್ಪರ ದೂರು ದಾಖಲಿಸಿದ್ದಾರೆ. ಆಗಸ್ಟ್ 5ರಂದು ಹಲ್ಲೆ ನಡೆದಿದ್ದು, ಆಗಸ್ಟ್ 11ರಂದು ದೂರು ದಾಖಲಾಗಿದೆ.



ಯುವಕನನ್ನು ಮರಕ್ಕೆ ಕಟ್ಟಿದ ವಿಡಿಯೊ ದೃಶ್ಯ

ಲಿಂಗಾಯತ ಸಮಾಜದ ಈರಣ್ಣ ಸಂಗಪ್ಪ ಪಾಕನಟ್ಟಿ, ಬಸನಗೌಡ ನಿಂಗನಗೌಡ ಪಾಟೀಲ, ಪ್ರದೀಪ ಈರಣ್ಣ ಪಾಕನಟ್ಟಿ, ಮಹಾಂತೇಶ ಲಕ್ಷ್ಮಣ ಪಾಕನಟ್ಟಿ, ಸಚಿನ್ ದಾನಪ್ಪ ಪಾಕನಟ್ಟಿ, ನಿಂಗರಾಜ ಈರಪ್ಪ ಪಾಕನಟ್ಟಿ, ಸಂಗಪ್ಪ ಪಾಕನಟ್ಟಿ ವಿರುದ್ಧ ಕೊಲೆ ಯತ್ನ ಜಾತಿ ನಿಂದನೆ ದೂರು ದಾಖಲಾಗಿದೆ.

'ಆರೋಪಿಗಳು ಹಾಗೂ ನಮ್ಮ ಜಮೀನು ಅಕ್ಕಪಕ್ಕದಲ್ಲಿವೆ. ಜಮೀನಿಗೆ ಹೋಗಲು ದಾರಿ ಏಕೆ ಬಿಡುವುದಿಲ್ಲ ಎಂದು ಜಗಳ ತೆಗೆದ ಆರೋಪಿಗಳು ಮರಕ್ಕೆ ಕಟ್ಟಿ ಹೊಡೆದಿದ್ದಾರೆ' ಎಂದು ವಿಠ್ಠಲ ಅವರು ದೂರು ನೀಡಿದ್ದಾರೆ.

ಪ್ರತಿದೂರು ದಾಖಲಿಸಿರುವ ಲಿಂಗಾಯತ ಸಮಾಜದ ವ್ಯಕ್ತಿಯೊಬ್ಬರು, 'ಘಟನೆ ಹೊಲಕ್ಕೆ ಸಂಬಂಧಿಸಿಲ್ಲ. ಇಬ್ಬರೂ ಯುವಕರು ನನ್ನ ಮಗಳಿಗೆ ಕಿರುಕುಳ ನೀಡುತ್ತಿದ್ದರು. ಶಾಲೆಗೆ ಹೋಗುವಾಗ–ಬರುವಾಗ ಮೊಬೈಲ್ ನಂಬರ್ ಕೊಡು. ಇಲ್ಲ ಬಿಡುವುದಿಲ್ಲ ಎಂದು ಬೆದರಿಸಿದ್ದರು' ಎಂದು ಆರೋಪಿಸಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಹರಿ ದಾಡಿದ ವಿಡಿಯೊದಲ್ಲಿ ಪರಿಶಿಷ್ಟ ಯುವಕನ ಕಡೆಯ ಕೆಲ ಹೆಣ್ಣುಮಕ್ಕಳೂ ಯುವಕನಿಗೇ ಬೈದು ಬುದ್ಧಿ ಹೇಳಿರುವ ಮಾತುಗಳಿವೆ. ಕಟಕೋಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

### ಚಟಕೆ ಸುದ್ದಿ

#### ವಿದ್ಯಾರ್ಥಿಗೆ ವಿದ್ಯುತ್ ಶಾಕ್

ದಾಚೆಪಲ್ಲಿ, ಪಲ್ನಾಡು (ಆಂಧ್ರ ಪ್ರದೇಶ) (ಪಿಟಿಐ): ಇಲ್ಲಿನ ಹಿಂದುಳಿದ ವರ್ಗಗಳ ಹಾಸ್ಟೆಲ್‌ನಲ್ಲಿ ಐದು ಮಂದಿ ವಯಸ್ಕ ಹಾಗೂ ಒಬ್ಬ ಅಪ್ರಾಪ್ತ ವಯಸ್ಸಿನ ವಿದ್ಯಾರ್ಥಿ ಸೇರಿಕೊಂಡು, ಇಬ್ಬರು ದಲಿತ ಬಾಲಕರಿಗೆ ವಿದ್ಯುತ್ ಶಾಕ್ ನೀಡಿದ ಪ್ರಕರಣ ವರದಿಯಾಗಿದೆ.

ಆಗಸ್ಟ್ 7ರಂದೇ ಈ ಪ್ರಕರಣ ನಡೆದಿದೆ. ಸಾಮಾಜಿಕ ಮಾಧ್ಯಮದಲ್ಲಿ ಆಗಸ್ಟ್ 9ರಂದು ಈ ವಿಡಿಯೊ ಹರಿದಾಡಿದ ಬಳಿಕ ಕೃತ್ಯ ನಡೆದಿರುವುದು ಗೊತ್ತಾಗಿದೆ.

ಹಲ್ಲೆಗೊಳಗಾದವರಲ್ಲಿ ಒಬ್ಬ ವಿದ್ಯಾರ್ಥಿಯು ಬಾಲಕಿಯೊಬ್ಬಳ ಜೊತೆ ಸಂಬಂಧ ಹೊಂದಿದ್ದ. ಈ ವಿಚಾರ ತಿಳಿದ ಆರು ಮಂದಿ ಸೇರಿಕೊಂಡು ಆಕೆಯಿಂದ ಬೇರ್ಪಡಿಸಲು ಈ ರೀತಿ ಮಾಡಿದ್ದಾರೆ.

#### '200 ವರ್ಷ ಹಳೆಯ ಸಮಾಧಿಗೆ ಹಾನಿ'

ಲಖನೌ: ಇಲ್ಲಿನ ಫತೇಹ್‌ಪುರ ಜಿಲ್ಲೆಯಲ್ಲಿರುವ 200 ವರ್ಷದ ಹಳೆಯ 'ಮಕ್‌ಬರ' (ಸಮಾಧಿ) ಹಾಗೂ ಎರಡು 'ಮಜಾರ್' (ದೇಗುಲ)ಗಳನ್ನು ಹಿಂದೂ ಸಂಘಟನೆಯ ಕಾರ್ಯಕರ್ತರು ಸೋಮವಾರ ಹಾನಿಗೊಳಿಸಿದ್ದು, ಸ್ಥಳದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ.

'ಸಮಾಧಿಯು ಈ ಹಿಂದೆ ದೇವಾಲಯವಾಗಿತ್ತು. ಮುಸಲ್ಮಾನರ ಆಡಳಿತದಲ್ಲಿ ಅದನ್ನು ಸಮಾಧಿಯನ್ನಾಗಿ ಪರಿವರ್ತಿಸಲಾಗಿತ್ತು'ಎಂದು ಹಿಂದೂ ಸಂಘಟನೆಯ ಮುಖಂಡರು ತಿಳಿಸಿದ್ದಾರೆ. ಈ ವೇಳೆ ಮುಸ್ಲಿಂ ಸಮುದಾಯದವರು ಸ್ಥಳಕ್ಕೆ ಭೇಟಿ ನೀಡಿದ್ದು, ಹಿಂದೂ ಸಂಘಟನೆಯ ಕಾರ್ಯಕರ್ತರ ಜೊತೆಗೆ ವಾಗ್ವಾದ ನಡೆಸಿದ್ದಾರೆ.

#### 'ಮಿಯಾ ಮುಸ್ಲಿಮರು ಮಾತ್ರ ಹೊರಕ್ಕೆ'

ಗುವಾಹಟಿ: ಒತ್ತುವರಿ ಭೂಮಿ ತೆರವು ಕಾರ್ಯಾಚರಣೆ ಹೆಸರಿನಲ್ಲಿ ಅಸ್ಸಾಂ ಸರ್ಕಾರವು ಮುಸ್ಲಿಂ ಸಮುದಾಯಗಳನ್ನು ಗುರಿಯಾಗಿಸುತ್ತಿದೆ ಎಂಬ ಆರೋಪಗಳ ನಡುವೆಯೇ 'ನಾವು ಮಿಯಾ ಮುಸ್ಲಿಮರನ್ನು ಮಾತ್ರ ಹೊರ ಹಾಕುತ್ತಿದ್ದೇವೆ' ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಹೇಳಿದ್ದಾರೆ. ಸರ್ಕಾರ ಮುಸ್ಲಿಂ ಸಮುದಾಯವನ್ನು ಗುರಿಯಾಗಿಸಿಕೊಂಡಿದೆ ಎಂದು ಪ್ರತಿಪಕ್ಷಗಳು ಆರೋಪಿಸಿರುವುದರ ಬಗ್ಗೆ ಸಿ.ಎಂ. ಶರ್ಮ ಪ್ರತಿಕ್ರಿಯಿಸಿದ್ದಾರೆ.

# ಮಂತ್ರಾಲಯ: ಸ್ವರ್ಣ ರಥೋತ್ಸವ ಸಂಭ್ರಮ

ಪ್ರಜಾವಾಣಿ ವಾರ್ತೆ

ಮಂತ್ರಾಲಯ (ರಾಯಚೂರು): ರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವದ ಪ್ರಯುಕ್ತ ಮಂತ್ರಾಲಯದಲ್ಲಿ ಸೋಮವಾರ ಮಧ್ಯಾರಾಧನೆ ವಿಜೃಂಭಣೆಯಿಂದ ನಡೆಯಿತು.

ಪೀಠಾಧಿಪತಿ ಸುಬುಧೇಂದ್ರ ತೀರ್ಥರ ನೇತೃತ್ವದಲ್ಲಿ ವಿಶೇಷ ಮಹಾಪಂಚಾಮೃತ ಅಭಿಷೇಕ, ಪೂಜಾ ಕೈಂಕರ್ಯ ಜರುಗಿದವು. ನಂತರ ಮಠದ ಪ್ರಾಂಗಣದಲ್ಲಿ ಗಜ, ರಜತ, ಚಿನ್ನದ ರಥೋತ್ಸವ ನಡೆಯಿತು.

ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ಹಾಗೂ ಕರ್ನಾಟಕದ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ಸಂಭ್ರಮಿಸಿದರು. ಸ್ವರ್ಣ ಕವಚ ರಾಯರ ಬೃಂದಾವನವನ್ನು ಪುಷ್ಪಗಳಿಂದ ಅಲಂಕರಿಸಲಾಗಿತ್ತು. ಪಂಡಿತರಿಂದ ಕೀರ್ತನೆ, ಪ್ರವಚನ, ಕಲಾವಿದರಿಂದ ಸಂಗೀತ, ನೃತ್ಯ ಕಾರ್ಯಕ್ರಮಗಳು ನಡೆದವು.



ಮಂತ್ರಾಲಯದ ರಾಘವೇಂದ್ರ ಸ್ವಾಮಿ ಮಠದಲ್ಲಿ ಸೋಮವಾರ ಸ್ವರ್ಣ ರಥೋತ್ಸವ ನಡೆಯಿತು

## ಕಾಡಾನೆ–ಮಾನವ ಸಂಘರ್ಷ ತಡೆಗೆ ಆನೆಗಳ ಚಲನವಲನದ ಮೇಲೆ ನಿಗಾ

# ಥರ್ಮಲ್ ಡ್ರೋನ್ ಕಣ್ಗಾವಲು

ಪ್ರಜಾವಾಣಿ ವಾರ್ತೆ

ಹಾಸನ: ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಕಾಡಾನೆ-ಮಾನವ ಸಂಘರ್ಷ ನಿವಾರಣೆಗೆ ಮುಂದಾಗಿರುವ ಅರಣ್ಯ ಇಲಾಖೆಯು, ಆನೆಗಳ ಚಲನವಲನದ ಮೇಲೆ ನಿಗಾ ಇಡಲು ಥರ್ಮಲ್ ಡ್ರೋನ್ ಸ್ಕ್ವಾಡ್ ಆರಂಭಿಸಿದೆ.

ಅರಣ್ಯ ಸಚಿವ ಈಶ್ವರ ಖಂಡ್ರೆ, ಭಾನುವಾರ ರಾತ್ರಿ ಜಿಲ್ಲಾ ಆನೆ ಕಾರ್ಯಪಡೆಯ ಸಮಗ್ರ ತಂತ್ರಜ್ಞಾನ ಆಧಾರಿತ ಥರ್ಮಲ್ ಡ್ರೋನ್ ಸ್ಕ್ವಾಡ್ ಉದ್ಘಾಟಿಸಿದರು.

ಈ ಆಧುನಿಕ ಕ್ಯಾಮೆರಾವನ್ನು ಮೊದಲು ನಾಗರಹೊಳೆ ರಾಷ್ಟ್ರೀಯ ಉದ್ಯಾನಕ್ಕೆ ತರಿಸಲಾಗಿತ್ತು. ಅಲ್ಲಿಂದ ವಿವಿಧೆಡೆ ಆರಂಭಿಸಲಾಗಿದ್ದು, ಈಗ ಜಿಲ್ಲೆಯಲ್ಲೂ ಕಾರ್ಯಾರಂಭ ಮಾಡಿದಂತಾಗಿದೆ.

ಜಿಲ್ಲೆಯಲ್ಲಿ ಸುಮಾರು 60–80 ಕಾಡಾನೆಗಳು ಜನವಸತಿ ಪ್ರದೇಶಗಳಿಗೆ ಬಂದಿದ್ದು, ಕಾಫಿ ತೋಟಗಳಲ್ಲಿ ಬೀಡು ಬಿಟ್ಟಿವೆ. ಬೇಲೂರು ತಾಲ್ಲೂಕಿನ ಬಿಕ್ಕೋಡು ಹೋಬಳಿಯೇ ಅವುಗಳ ಆವಾಸ ಸ್ಥಾನವಾಗಿದೆ.

ಕಾರ್ಯಪಡೆಯ ಕಚೇರಿಯನ್ನು ಸದ್ಯ ಬಿಕ್ಕೋಡಿಗೆ ಸ್ಥಳಾಂತರಿಸಿದ್ದು, ಅಲ್ಲಿಗೇ ಡ್ರೋನ್ ಸ್ಕ್ವಾಡ್ ಒದಗಿಸಲಾಗಿದೆ. ಹಗಲು–ರಾತ್ರಿ ಕಾಡಾನೆಗಳ ಚಲನವಲನ ಸೆರೆ ಹಿಡಿಯಬಲ್ಲ ಸಾಮರ್ಥ್ಯವಿರುವ ಡ್ರೋನ್ ಬಳಸಲು ಕಾರ್ಯಪಡೆಯ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ.

ಕ್ಯಾಮೆರಾಗೆ ಮೂರು ಬ್ಯಾಟರಿಗಳಿದ್ದು, ತಲಾ 40 ನಿಮಿಷ ಬಳಸಬಹುದು. ಆನೆಗಳು ಇರುವಿಕೆ ಪತ್ತೆಯಾದ ತಕ್ಷಣ ಲೊಕೇಷನ್ ಸಹಿತ ಚಿತ್ರ ಸೆರೆ ಹಿಡಿದು, ಸಿಬ್ಬಂದಿಗೆ ಕಳಿಸಲಾಗುತ್ತದೆ. ಸಿಬ್ಬಂದಿ ಆನೆಗಳನ್ನು ಕಾಡಿಗೆ ಕಳುಹಿಸುವ ಕೆಲಸ ಮಾಡಲಿದ್ದು, ಸ್ಥಳೀಯರಿಗೂ ಮುನ್ಸೂಚನೆ ನೀಡಲಾಗುತ್ತದೆ.

ಜಿಪಿಎಸ್ ಮೂಲಕ ಲೊಕೇಷನ್ ಗುರುತಿಸಿದರೆ, ಡ್ರೋನ್ ವಸ್ತುಸ್ಥಿತಿ ಸೆರೆಹಿಡಿಯಲಿದೆ. ಜೇನುನೊಣದ ರೀತಿ ಡ್ರೋನ್ ಶಬ್ದ ಇರುವುದರಿಂದ ಆನೆ, ಹುಲಿ ಸೇರಿದಂತೆ ಪ್ರಾಣಿಗಳಿಗೂ ತೊಂದರೆಯಾಗದು.

ಸ್ಕ್ವಾಡ್ ಉದ್ಘಾಟನೆ ಕಾರ್ಯಕ್ರಮದಲ್ಲಿ ಅರಣ್ಯ ಸಂರಕ್ಷಣಾಧಿಕಾರಿ ಏಡುಕೊಂಡಲು, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್ ಕುಮಾರ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಾದ ಮೋಹನ ವಿ.ಎಸ್., ಮಧುಸೂಧನ್ ಹಾಜರಿದ್ದರು.

### ಮುಖ್ಯಾಂಶಗಳು

- ಬೇಲೂರಿನಲ್ಲಿ ಸ್ಕ್ವಾಡ್ ನಿಯೋಜನೆ
- ಸಾರ್ವಜನಿಕರು, ಸಿಬ್ಬಂದಿ ಮಾಹಿತಿ ಪಡೆಯಲು ಸಹಕಾರಿ





ಹಗಲಿನಲ್ಲಿ ಡ್ರೋನ್ ಮೂಲಕ ಸೆರೆ ಹಿಡಿದ ಆನೆಗಳ ಚಿತ್ರ

ಡ್ರೋನ್ ಸ್ಕ್ವಾಡ್ ವಾಹನದಲ್ಲಿ ಥರ್ಮಲ್ ಡ್ರೋನ್ ಮತ್ತು ಕಂಪ್ಯೂಟರ್ ಸಿಸ್ಟಮ್ ಒಳಗೊಂಡಿದೆ. ಕಾಡಾನೆಗಳ ಚಲನವಲನಗಳನ್ನು ಗಮನಿಸಬಹುದಾಗಿದೆ
**ಸೌರಭ್‌ಕುಮಾರ್,** ಡಿಸಿಎಫ್

ಕೊಡಗು, ಹಾಸನ ಜಿಲ್ಲೆಯಲ್ಲಿ ನೂರಾರು ಕಾಡಾನೆಗಳಿವೆ. ಮಾನವ–ಕಾಡಾನೆ ಸಂಘರ್ಷ ನಿವಾರಣೆಗೆ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳುತ್ತಿದ್ದು, ಹಾಸನ ಜಿಲ್ಲೆಯಲ್ಲಿ ಸ್ಕ್ವಾಡ್ ಆರಂಭಿಸಲಾಗಿದೆ
**ಈಶ್ವರ್ ಖಂಡ್ರೆ,** ಅರಣ್ಯ ಸಚಿವ

### ಪಟ್ಟಿಯಿಂದ 476 ಪಕ್ಷ ಹೊರಗೆ: ಆಯೋಗ

ನವದೆಹಲಿ (ಪಿಟಿಐ): ನೋಂದಾಯಿತ ಮಾನ್ಯತೆ ಪಡೆಯದ 476 ರಾಜಕೀಯ ಪಕ್ಷಗಳನ್ನು ಪಟ್ಟಿಯಿಂದ ತೆಗೆದುಹಾಕುವ ಪ್ರಕ್ರಿಯೆ ಪ್ರಾರಂಭಿಸಲಾಗಿದೆ ಎಂದು ಚುನಾವಣಾ ಆಯೋಗ ಸೋಮವಾರ ಮಾಹಿತಿ ನೀಡಿದೆ. ಇವುಗಳು ಕಳೆದ ಆರು ವರ್ಷಗಳಲ್ಲಿ ಒಂದೂ ಚುನಾವಣೆಯಲ್ಲಿ ಭಾಗವಹಿಸಿಲ್ಲ ಹಾಗೂ ಮಾನದಂಡಗಳನ್ನು ಪಾಲಿಸಿಲ್ಲ ಎಂದು ಅದು ಹೇಳಿದೆ. ಕರ್ನಾಟಕದ 12 ಪಕ್ಷ ಗಳು ಸೇರಿದಂತೆ 334 ಪಕ್ಷಗಳನ್ನು ಮೊದಲ ಹಂತದಲ್ಲಿ ಪಟ್ಟಿಯಿಂದ ಕೈಬಿಡಲಾಗಿತ್ತು.

# ನಾನು ಕನ್ನಡ ವಿರೋಧಿಯಲ್ಲ: ರಾಘವೇಂದ್ರ

ಬೆಂಗಳೂರು: ನಟ ಧ್ರುವ ಸರ್ಜಾ ವಿರುದ್ಧ ಮುಂಬೈನಲ್ಲಿ ದೂರು ನೀಡಿದ್ದ ನಿರ್ದೇಶಕ, ನಿರ್ಮಾಪಕ ರಾಘವೇಂದ್ರ ಹೆಗಡೆ, 'ಧ್ರುವ ಸರ್ಜಾ ಅವರಿಗೆ ನೋಟಿಸ್ ಕಳುಹಿಸಿದ ಮೇಲೆ ನನ್ನನ್ನು ಕನ್ನಡ ವಿರೋಧಿ ಎಂದು ಬಿಂಬಿಸುವ ಪ್ರಯತ್ನವಾಗಿದೆ. ನಾನು ಕನ್ನಡ ವಿರೋಧಿಯಲ್ಲ' ಎಂದಿದ್ದಾರೆ.

ವಿಡಿಯೊವೊಂದರ ಮುಖಾಂತರ ಪ್ರತಿಕ್ರಿಯೆ ನೀಡಿರುವ ಅವರು, 'ಮುಂಬೈನಲ್ಲಿರುವ ನಾನು ನಿರ್ದೇಶಕ, ನಿರ್ಮಾಪಕನಾಗಬೇಕು ಎಂಬ ಕನಸು ಕಂಡಾಗ ಕಂಡಿದ್ದು ನನ್ನ ತಾಯ್ನಾಡು ಕರ್ನಾಟಕ. ಹೀಗೆ 'ಜಗ್ಗುದಾದ' ಚಿತ್ರ ನಿರ್ದೇಶಿಸಿದೆ. ಎರಡನೇ ಸಿನಿಮಾ ಮಾಡಬೇಕು ಎಂದು ಧ್ರುವ ಸರ್ಜಾ ಅವರಿಗೆ ಹಣ ನೀಡಿದೆ. 'KD' ಸಿನಿಮಾ ಮುಗಿಸಿದ ಬಳಿಕ ಸಿನಿಮಾ ಮಾಡೋಣ ಎಂದು ಅವರು ಹೇಳಿದ್ದರು. ಹೀಗೆ ಕಾಯುತ್ತಾ ಎಂಟು ವರ್ಷ ವ್ಯರ್ಥವಾಯಿತು' ಎಂದಿದ್ದಾರೆ.

'ತಮಿಳಿನಲ್ಲಿ 'ಅಮರನ್' ಸಿನಿಮಾ ಬಿಡುಗಡೆಯಾದಾಗ 'I am a soldier'ನ ಶೇ 60–70 ಭಾಗ ಆ ಸಿನಿಮಾದಲ್ಲಿದೆ ಎಂದು ಧ್ರುವ ಅವರು ಹೇಳಿದರು. ನಂತರದಲ್ಲಿ ಅವರೇ ಒಬ್ಬ ಬರಹಗಾರರನ್ನು ನೀಡಿದರು. ಅವರು ಬರೆದ ಕನ್ನಡದ ಕಥೆ ಒಪ್ಪಿಗೆಯಾಯಿತು. ಮಾರ್ಟಿನ್' ದೊಡ್ಡ ಲೆವೆಲ್‌ನಲ್ಲಿ ಮಾಡಿದ್ದೇವೆ. 'KD'ಯೂ ದೊಡ್ಡಮಟ್ಟದಲ್ಲಿ ಬರುತ್ತಿದೆ ಹಾಗೂ ಮುಂಬೈ ನಿರ್ಮಾಪಕರೊಬ್ಬರಿಗೆ ಡೇಟ್ಸ್ ಕೊಟ್ಟಿದ್ದೇನೆ. ಆನಂತರ ನೀವು ಮಾಡಿ ಎಂದು ಧ್ರುವ ಹೇಳಿದರು. ಇವರು ಹೇಳಿದಂತೆ ಕೇಳಿದರೆ ಇನ್ನೂ ನಾಲ್ಕೈದು ವರ್ಷ ಸಿನಿಮಾ ಆಗುವುದಿಲ್ಲ ಎಂದು ಲೆಕ್ಕಾಚಾರ ಹಾಕಿದೆ. ಹೀಗಾಗಿ ಅಗ್ರಿಮೆಂಟ್ ಪ್ರಕಾರವೇ ನನ್ನ ಹಣ ವಾಪಸ್ ಕೊಡಲು ನೋಟಿಸ್ ಕಳುಹಿಸಿದ್ದೆ' ಎಂದು ತಿಳಿಸಿದ್ದಾರೆ.

## ಬೆಂಗಳೂರಿನಲ್ಲಿ ಸಂಚಾರ ದಟ್ಟಣೆ ನಿವಾರಿಸಿ: ಉದ್ಯಮಿಗಳಿಂದ ಸರ್ಕಾರಕ್ಕೆ ಒತ್ತಾಯ

# 'ಗುಂಡಿ ಮುಚ್ಚಿ, ಮೂಲಸೌಕರ್ಯ ಉನ್ನತೀಕರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರಸ್ತೆಗಳಲ್ಲಿ ಸಂಚರಿಸುವುದು ಕಷ್ಟವಾಗುತ್ತಿದೆ. ಸಂಚಾರ ದಟ್ಟಣೆಯೂ ಅತಿಯಾಗಿದೆ. ಗುಂಡಿ ಬಿದ್ದಿರುವ ರಸ್ತೆಗಳನ್ನು ಸರಿಪಡಿಸಿ. ಬೆಂಗಳೂರಿನ ಪ್ರಮುಖ ಭಾಗಗಳಿಗೆ ಮೂಲಸೌಕರ್ಯಗಳನ್ನು ಒದಗಿಸಿ ಎಂದು ಉದ್ಯಮಿಗಳು ಸರ್ಕಾರಕ್ಕೆ ಸಲಹೆ ನೀಡಿದರು.

ನವೆಂಬರ್‌ನಲ್ಲಿ ನಡೆಯುವ ಬೆಂಗಳೂರು ಟೆಕ್ ಶೃಂಗ ಸಭೆ ಭಾಗವಾಗಿ ಸೋಮವಾರ ಹಮ್ಮಿಕೊಂಡಿದ್ದ ಉಪಾಹಾರ ಸಭೆಯಲ್ಲಿ ಮಾತನಾಡಿದ ಉದ್ಯಮಿಗಳು, ಬೆಂಗಳೂರಿನಲ್ಲಿ ಐ.ಟಿ ಮಾನವ ಸಂಪನ್ಮೂಲ ತರಬೇತಿಗೆ ಹೆಚ್ಚಿನ ಒತ್ತು ನೀಡಬೇಕು. ನವೋದ್ಯಮ, ಡೀಪ್ ಟೆಕ್ ವಲಯಕ್ಕೆ ಆದ್ಯತೆ ಕೊಡಬೇಕು. ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರಕ್ಕೂ ಇನ್ನಷ್ಟು ಒತ್ತು ಸಿಗಬೇಕು ಎಂದರು.



ಬೆಂಗಳೂರು ಟೆಕ್ ಶೃಂಗ ಸಭೆ ಅಂಗವಾಗಿ ನಡೆದ ಉಪಾಹಾರ ಸಭೆಯಲ್ಲಿ ಡಿ.ಕೆ.ಶಿವಕುಮಾರ್ ಉದ್ಯಮಿಗಳಿಗೆ ನಮಸ್ಕರಿಸಿದರು ಪ್ರಜಾವಾಣಿ ಚಿತ್ರ

ಐ.ಟಿ, ಎಲೆಕ್ಟ್ರಾನಿಕ್ಸ್ ವಿಷನ್ ಗ್ರೂಪ್‌ನ ಅಧ್ಯಕ್ಷ ಕ್ರಿಸ್ ಗೋಪಾಲಕೃಷ್ಣನ್, ಸ್ಟಾರ್ಟಪ್ಸ್ ವಿಷನ್ ಗ್ರೂಪ್ ಅಧ್ಯಕ್ಷ ಪ್ರಶಾಂತ್ ಪ್ರಕಾಶ್, ಸ್ಪೇಸ್ ವಿಷನ್ ಗ್ರೂಪ್ ಅಧ್ಯಕ್ಷ ಡಾ.ಎ.ಎಸ್.ಕಿರಣ್ ಕುಮಾರ್, ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ ಮತ್ತು ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಅಧ್ಯಕ್ಷ ಬಿ.ವಿ.ನಾಯ್ಡು ಸಹಿತ ವಿಷನ್ ಗ್ರೂಪ್‌ಗಳ ಮುಖ್ಯಸ್ಥರು ವಿವಿಧ ವಲಯಗಳ ಅವಕಾಶಗಳು ಮತ್ತು ಕಾರ್ಯತಂತ್ರದ ಬಗ್ಗೆ ವಿವರ ನೀಡಿದರು.

ಕೆಲವು ವರ್ಷದಿಂದ ಉದ್ಯಮ ವಲಯ ಬೆಂಗಳೂರಿನಲ್ಲಿ ಮೂಲಸೌಕರ್ಯ ಒದಗಿಸುವ ಬೇಡಿಕೆ ಇಡುತ್ತಿದೆ. ಸರ್ಕಾರವೂ ಇದಕ್ಕಾಗಿ ಯೋಜನೆಗಳನ್ನು ರೂಪಿಸಿದೆ. ಹೊಸ ಫ್ಲೈ ಓವರ್‌ಗಳು, ಸುರಂಗ ಮಾರ್ಗ ಸೇರಿದಂತೆ ಕೆಲವು ಯೋಜನೆಗಳಿಗಾಗಿ ₹75 ಸಾವಿರ ಕೋಟಿ ಖರ್ಚು ಮಾಡಲಾಗುತ್ತಿದೆ ಎಂದು ಐಟಿ, ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, 1997ರಲ್ಲಿ ಭಾರತದ ಮೊದಲ ಐಟಿ ನೀತಿಯನ್ನು ಜಾರಿಗೆ ತರುವುದರಿಂದ ಹಿಡಿದು 2024ರಲ್ಲಿ ಕ್ವಾಂಟಮ್ ತಂತ್ರಜ್ಞಾನ ರೋಡ್‌ಮ್ಯಾಪ್ ಅನ್ನು ಪರಿಚಯಿಸುವ ಮೂಲಕ ಈ ಕ್ಷೇತ್ರದಲ್ಲಿ ದಿಟ್ಟ ಹೆಜ್ಜೆ ಇಟ್ಟ ದೇಶದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ತಿಳಿಸಿದರು.

ಭಾರತದ ಸಾಫ್ಟ್‌ವೇರ್ ರಫ್ತಿನ ಶೇ 44ರಷ್ಟು ಕರ್ನಾಟಕದ ಪಾಲಿದ್ದು, 18,300ಕ್ಕೂ ಹೆಚ್ಚು ಸ್ಟಾರ್ಟಪ್‌ಗಳು, 875ರಷ್ಟು ಜಾಗತಿಕ ಸಾಮರ್ಥ್ಯ ಕೇಂದ್ರಗಳು ಮತ್ತು ದೇಶದ ಸುಮಾರು ಅರ್ಧದಷ್ಟು ಎಐ ಪ್ರತಿಭೆಗಳೊಂದಿಗೆ ಮುಂದಡಿ ಇಟ್ಟಿದೆ. ನಾವೀನ್ಯತೆ, ಪ್ರತಿಭೆ ಮತ್ತು ತಂತ್ರಜ್ಞಾನದಲ್ಲಿ ಕರ್ನಾಟಕವನ್ನು ಜಾಗತಿಕ ನಾಯಕನನ್ನಾಗಿ ರೂಪಿಸುವುದು ನಮ್ಮ ಧ್ಯೇಯವಾಗಿದೆ ಎಂದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, 'ನಮ್ಮ ಮೆಟ್ರೊ ಮತ್ತು ಉಪನಗರ ರೈಲು ವಿಸ್ತರಣೆಯಿಂದ ಹಿಡಿದು ಎಲಿವೇಟೆಡ್ ಕಾರಿಡಾರ್‌ಗಳು ಮತ್ತು ಬೆಂಗಳೂರು ಬ್ಯುಸಿನೆಸ್ ಕಾರಿಡಾರ್‌ಗಳನ್ನು ಅಭಿವೃದ್ಧಿಪಡಿಸುವುದತ್ತ ನಮ್ಮ ಚಿತ್ತ ಹರಿದಿದೆ. ಬೆಂಗಳೂರನ್ನು ವಿಶ್ವ ಮಟ್ಟದ ವಾಸಯೋಗ್ಯ ನಗರವನ್ನಾಗಿ ಮಾಡುವ ಗುರಿಯೊಂದಿಗೆ ಕಾರ್ಯೋನ್ಮುಖವಾಗಿದ್ದೇವೆ' ಎಂದು ತಿಳಿಸಿದರು.

### ನವೆಂಬರ್‌ನಲ್ಲಿ ಟೆಕ್ ಶೃಂಗಸಭೆ

ಬೆಂಗಳೂರು: ಬೆಂಗಳೂರಿನ 28ನೇ ಟೆಕ್ ಶೃಂಗಸಭೆ ನವೆಂಬರ್ 18ರಿಂದ ಮೂರು ದಿನ ನಡೆಯಲಿದೆ. ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಇಲಾಖೆಯು ಭವಿಷ್ಯೋದಯ ಎನ್ನುವ ಪರಿಕಲ್ಪನೆಯೊಂದಿಗೆ ಶೃಂಗಸಭೆಯನ್ನು ಮೊದಲ ಬಾರಿಗೆ ಬೆಂಗಳೂರು ಅಂತರ ರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಅಯೋಜಿಸಲಿದೆ.


ಈ ವರ್ಷವೂ ಹೊಸ ಪರಿಕಲ್ಪನೆಗಳೊಂದಿಗೆ ಸಭೆ ನಡೆಯಲಿದೆ. 20,000ಕ್ಕೂ ಹೆಚ್ಚಿನ ಸ್ಟಾರ್ಟಪ್‌ಗಳ ಸಂಸ್ಥಾಪಕರು, 1000ಕ್ಕೂ ಅಧಿಕ ಹೂಡಿಕೆದಾರರು, 15,000 ಪ್ರತಿನಿಧಿಗಳು, 600 ಭಾಷಣಕಾರರು ಮತ್ತು 1,200 ಪ್ರದರ್ಶಕರು ಪಾಲ್ಗೊಳ್ಳುವ ನಿರೀಕ್ಷೆ ಇದೆ.

ಸೋಮವಾರ ನಡೆದ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಐಟಿ, ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಬೆಂಗಳೂರು ಟೆಕ್ ಶೃಂಗ ಸಭೆ 1998ರಿಂದ ಅರಮನೆ ಮೈದಾನದಲ್ಲಿ ನಡೆಯುತ್ತಿತ್ತು. ಹೆಚ್ಚುತ್ತಿರುವ ಬೇಡಿಕೆ ಕಾರಣದಿಂದ ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರಕ್ಕೆ (ಬಿಐಇಸಿ) ಸ್ಥಳಾಂತ ರಿಸಲಾಗುತ್ತಿದೆ. ಇಲ್ಲಿ ವಿಶ್ವ ದರ್ಜೆಯ ಮೂಲಸೌಕರ್ಯ, ವಿಸ್ತಾರವಾದ ಪ್ರದರ್ಶನ ಸಭಾಂಗಣಗಳು, ಅತ್ಯಾಧುನಿಕ ಸಮ್ಮೇಳನ ಸೌಲಭ್ಯಗಳು ಇರಲಿವೆ. 55 ದೇಶಗಳ ಪ್ರತಿನಿಧಿಗಳು ಟೆಕ್ ಶೃಂಗಸಭೆಗೆ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಇಲಾಖೆ ಕಾರ್ಯದರ್ಶಿ ಡಾ.ಏಕರೂಪಕೌರ್ ಮಾತನಾಡಿ, ಕಳೆದ ವರ್ಷ ಕರ್ನಾಟಕದ ಐಟಿ- ಬಿಟಿ ವಲಯದ ವಹಿವಾಟು ಪ್ರಮಾಣ ₹4.1 ಲಕ್ಷ ಕೋಟಿ. ಶೇ 64ರಷ್ಟು ವಹಿವಾಟಿನಲ್ಲಿ ಹೆಚ್ಚಳವಾಗಿರುವುದು ವಿಶೇಷ. ಅಮೆರಿಕದಿಂದ ಶೇ 70ರಷ್ಟು ಕಂಪನಿಗಳು ಕರ್ನಾಟಕಕ್ಕೆ ಬಂದಿವೆ. ಶೇ 50ರಷ್ಟು ದೊಡ್ಡ ಕಂಪನಿಗಳು ಕರ್ನಾಟಕದಲ್ಲಿ ಹೂಡಿಕೆ ಮಾಡಿದ್ದು. ಸಾಕಷ್ಟು ಉದ್ಯೋಗವೂ ಲಭಿಸಿದೆ. ಈ ಬಾರಿಯೂ ರಕ್ಷಣೆ ಸೇರಿ ನಾಲ್ಕು ವಲಯಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದರು.



ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ನುಗ್ಗೆಸೊಪ್ಪಿನ ಪುಡಿಯನ್ನು ಮಿತವಾಗಿ ಬಳಸಬಹುದು



ನಮ್ಮ ಮೌಲ್ಯವನ್ನು ನಾವು ಅರಿತುಕೊಂಡು ನಮ್ಮನ್ನು ನಾವು ಅನುಮೋದಿಸಿಕೊಳ್ಳುವುದೇ ನಿಜವಾದ ಗೆಲುವು. ಬೇರೆಯವರು ನಮ್ಮ ಮೌಲ್ಯವನ್ನು ನಿರ್ಧರಿಸಿ, ನಮ್ಮನ್ನು ಮಾನ್ಯ ಮಾಡಲಿ, ಅನುಮೋದಿಸಲಿ ಎಂಬ ನಿರೀಕ್ಷೆಯೇ ಸೋಲು

# ಸೋತೆ ಎನಬೇಡ...

• ರಮ್ಯಾ ಶ್ರೀಹರಿ

ಸೋಲು-ಗೆಲುವಿನ ಪರಿಭಾಷೆಯಲ್ಲಿ ಬದುಕಿನ ಬಗೆಗೆ ಮಾತನಾಡುವವರು ನೀವಾದರೆ ಒಮ್ಮೆ ನಿಮ್ಮ ಈ ಅಭ್ಯಾಸವನ್ನು, ಅದರ ಹಿಂದಿರುವ ನಿಮ್ಮ ನಿಲುವನ್ನು ಆಳವಾದ ವಿಮರ್ಶೆಗೆ ಒಳಪಡಿಸುವುದು ಉತ್ತಮ. ಹೆಚ್ಚಿನ ಸಮಯ ನಾವು ಯಾವುಯಾವುದನ್ನೋ ಸೋಲು-ಗೆಲುವು ಎಂದು ಅರ್ಥೈಸುತ್ತಿರುತ್ತೇವೆ. ನಿಜವಾಗಿ ನೋಡಿದಾಗ ಅದು ಸೋಲು ಅಥವಾ ಗೆಲುವು ಯಾವುದೂ ಆಗಿರದೆ ಕೇವಲ ಜೀವನದ ಸಹಜ ಗತಿ, ಸಹಜ ಬದಲಾವಣೆ, ಸಹಜ ರೀತಿ, ಸಹಜ ಆಯ್ಕೆ ಆಗಿರುತ್ತದೆ ಅಷ್ಟೇ.

ನಮಗೆ ಬೇಕಾದ ಉದ್ಯೋಗ ದೊರೆಯದಿದ್ದರೆ, ಸಾಕಷ್ಟು ಸಂಪಾದಿಸದಿದ್ದರೆ, ಸಂಬಂಧಗಳಲ್ಲಿ ಮನಸ್ತಾಪಗಳಾಗಿ ಒಂಟಿಯಾಗಿ ಹೋದಂತೆನಿಸಿದರೆ, ಎಲ್ಲರಂತೆ 'ತೋರಿಕೆಯ' ಜೀವನ ಮಾಡಲಾಗದಿದ್ದರೆ; ಒಟ್ಟಿನಲ್ಲಿ ಎಲ್ಲದರಲ್ಲೂ ಸಮಾಜದ ಮುಂಚೂಣಿಯಲ್ಲಿ 'ಮೆರೆಯದಿದ್ದರೆ' ಅದನ್ನೆಲ್ಲಾ ಸೋಲೆನ್ನುವುದೇಕೆ?

ಜೀವನದ ಯಾವುದೋ ಸಂದರ್ಭದಲ್ಲಿ 'ನಾನು ಸೋತೆ' ಎಂಬ ಭಾವವುಂಟಾಗುತ್ತದೆಯಲ್ಲ, ಆ ಸಂದರ್ಭದಲ್ಲಿ ಹಾಗಿದ್ದರೆ 'ಗೆದ್ದವರು' ಯಾರು? ನಾವೇ ನಮ್ಮೊಡನೆ ಸ್ಪರ್ಧಿಸಲು ತಯಾರಾಗಿಸಿ ನಮ್ಮ ಮನಸ್ಸಿನಲ್ಲಿ ನಿಲ್ಲಿಸಿಕೊಂಡಿರುವ, ನಮ್ಮ ಸೋಲಿನಲ್ಲಿ ಗೆಲುವು ಕಾಣುತ್ತಿರುವ, ನಮ್ಮನ್ನು ಅಣಕಿಸಿ ಕೆಣಕುತ್ತಿರುವ, ನಮ್ಮ ದುಃಖದಲ್ಲಿ ಸಂತಸವನ್ನರಸುತ್ತಿರುವ ಆ ರಹಸ್ಯ ಶತ್ರುಗಳು ಯಾರು? ನಮ್ಮ ಸೋಲಿಗಾಗಿಯೇ ಕಾಯುತ್ತಿರುವ ಅವರಿಗೆ ನಾವೇಕೆ ನಮ್ಮ ಮನಸ್ಸಿನಲ್ಲಿ ಒಂದು ಅಧಿಕಾರಯುತ ಸ್ಥಾನ ನೀಡಿದ್ದೇವೆ?

ಯಾರೊಡನೆಯೋ ಹೋಲಿಕೆ, ಸ್ಪರ್ಧೆ, ತೋರ್ಪಡಿಸಿಕೊಳ್ಳಲಾಗದ ಅಸೂಯೆ, ಒಳಗೇ ಕೊರೆಯುತ್ತಿರುವ ಕೀಳರಿಮೆ, ಯಾರಿಂದಲೋ ಸೈ ಎನಿಸಿಕೊಳ್ಳುವ ಮೂಲಕ ನಮ್ಮ ಯೋಗ್ಯತೆಯನ್ನು, ಪ್ರಾಮುಖ್ಯವನ್ನು ಪ್ರತಿಷ್ಠಾಪಿಸಿಕೊಳ್ಳುವ ಹವಣಿಕೆ - ಇವುಗಳೇ ಅಲ್ಲವೇ 'ನಾನು ಸೋತುಹೋದೆ' ಎಂಬ ಭಾವದ ಹಿಂದಿರುವುದು?

'ನಾನು ಸೋತುಹೋದೆ' ಎನಿಸಿದಾಗಲೆಲ್ಲಾ ಯಾವಯಾವ ಭಾವಗಳು ನಿಮ್ಮನ್ನು ಹಾದುಹೋಗುತ್ತವೆ ಎನ್ನುವುದನ್ನು, ಆಗ ನಿಮ್ಮೊಳಗೇ ನಡೆಯುವ ಮಾತು-ಕತೆಗಳನ್ನು ಒಮ್ಮೆ ಅವಲೋಕಿಸಿ ನೋಡಿ; ನಿಮ್ಮೊಳಗೇ ನಿಮ್ಮ ಸೋಲಿನ ಬಗೆಗೆ ಮಾತನಾಡಿಕೊಳ್ಳುತ್ತಿರುವಾಗ ಆ 'ಸೋಲನ್ನು' ಹಂಗಿಸಿ, ಟೀಕಿಸಿ, ಅವಮಾನಿಸುತ್ತಿರುವ ಧ್ವನಿಯಿದೆಯೇ? ಯಾರದದು ಆ ಧ್ವನಿ? 'ಸೋಲಿನ' ಬಗೆಗಾಗುತ್ತಿರುವ ದುಃಖದ ಬಗ್ಗೆ ಸಹಾನುಭೂತಿಯ, ಸಮಾಧಾನದ ಮಾತುಗಳನ್ನಾಡುತ್ತಿರುವ ಧ್ವನಿಯಿದೆಯೇ? ನಮ್ಮೊಳಗೇ ನಮ್ಮ ಬಗ್ಗೆಯೇ ಶತ್ರುತ್ವದ ಭಾವ ಬಿತ್ತಿದವರಾರು?

ನಮ್ಮೊಳಗೇ ನಡೆಯುವ ಸೋಲು-ಗೆಲುವಿನ ಮಂಥನವನ್ನು ಸೂಕ್ಷ್ಮವಾಗಿ ಗಮನಿಸಿದಾಗ ನಮ್ಮೊಳಗೆ ಅಡಗಿರುವ ನಮ್ಮ ವ್ಯಕ್ತಿತ್ವದ ನೂರಾರು ಬಿಂಬಗಳನ್ನು, ನಮ್ಮ ಆಂತರ್ಯದ ಅನೇಕ ಚಹರೆಗಳನ್ನು ಕಾಣಬಹುದು. ಯಾರದೋ ಆಜ್ಞೆಯಂತೆ ನಡೆಯುವ, ಯಾರದೋ ಗಡಿರೇಖೆಗಳನ್ನು, ರೀತಿನೀತಿಗಳನ್ನು ಮೀರಿ ಹೋಗದಂತೆ ನಮ್ಮನ್ನು ನಾವೇ ತಟಸ್ಥಗೊಳಿಸಿಕೊಳ್ಳುವ, ಯಾರದೋ ಅಧಿಕೃತ ಮುದ್ರೆಗಾಗಿ ಹಂಬಲಿಸುವ, ಯಾರ್ಯಾರನ್ನೋ ಮೆಚ್ಚಿಸುವ, ಒಪ್ಪಿಸುವ, ಸದಾ ಅನ್ಯರ ಯಾವುದೋ ನಿರ್ದಿಷ್ಟವಿಲ್ಲದ ಆಳತೆಗೋಲಿಗೆ ಸರಿಯಾಗಿ ನಮ್ಮನ್ನು ಹೊಂದಿಸಿಕೊಳ್ಳುವ ಎಂದಿಗೂ ಮುಗಿಯದ ಹೋರಾಟದ ಹಾದಿಯನ್ನು ನಾವೇಕೆ ಆಯ್ದುಕೊಳ್ಳಬೇಕು? ನಮ್ಮನ್ನು ನಾವು ತೊರೆದು, ನಮ್ಮನ್ನು ನಾವೇ ಹೀನವಾಗಿರುವಂತೆ ಕಂಡುಕೊಳ್ಳುವ, ನಮ್ಮ ಮೌಲ್ಯವನ್ನು ನಾವೇ ಅನುಮಾನಿಸುವ ಪ್ರವೃತ್ತಿ ಹೇಗೆ ನಮ್ಮಲ್ಲಿ ಬೆಳೆದುಬಂದಿದೆಯಲ್ಲವೇ?

ಬೇರೆಯವರು ನಮ್ಮ ಬಗೆಗೆ ಕೊಡಬಹುದು ಎಂದು ನಾವು ಭಾವಿಸಿರುವ ತೀರ್ಪುಗಳನ್ನು, ಅಭಿಪ್ರಾಯಗಳನ್ನು ನಮಗೆ ನಾವೇ ಕೊಟ್ಟುಕೊಳ್ಳುತ್ತಾ ಸಂಕಟಪಡುತ್ತಿರುತ್ತೇವೆ. ಆದರೆ ನಿಜವಾಗಲೂ ನಮ್ಮನ್ನು ಟೀಕಿಸುತ್ತಿರುವ ನಮ್ಮೊಳಗಿನ ಆ 'ಅನ್ಯಧ್ವನಿ'ಯನ್ನು ಹೊರಪ್ರಪಂಚದಲ್ಲಿ ಪ್ರತಿನಿಧಿಸಬಹುದಾದ ವ್ಯಕ್ತಿಯೇನಾದರೂ ಸಿಕ್ಕಿ ಮಾತನಾಡಿಸಿದರೆ ಅವರು ನಮ್ಮ ಬಗೆಗೆ ಬೇರೆಯೇ ಧೋರಣೆ ಇಟ್ಟುಕೊಂಡಿರಬಹುದು. ಅದೂ ಅಲ್ಲದೆ ಅವರ ಅಭಿಪ್ರಾಯಗಳು 'ಅವರು ಯಾರು?' ಎನ್ನುವಂಥದ್ದನ್ನು ತೋರಿಸಿಕೊಡುವುದೇ ಹೊರತು 'ನಾವು ಯಾರೆಂದು?' ತೋರಿಸಿಕೊಡುವಂಥದ್ದಲ್ಲ. ಅವರು ನಮ್ಮ ಬಗ್ಗೆ ಒಂದು ಕ್ಷಣವೂ ಯೋಚಿಸದೇ ಇರಬಹುದು. ನಾವು ಮಾತ್ರ ಅವರ ವ್ಯಕ್ತಿತ್ವದ ಯಾವುದೋ ಅಮುಖ್ಯವಾದ ಭಾಗವನ್ನೇ ಮನಸ್ಸಿನಲ್ಲಿಟ್ಟುಕೊಂಡು ಹೋರಾಡುತ್ತಿರಬಹುದು. ಅಂದರೆ ತಾತ್ಪರ್ಯವಿಷ್ಟು: ಯಾರ ಮನಸ್ಸಿನಲ್ಲಿ ನಾವು ಹೇಗೆ ಚಿತ್ರಿತವಾಗಿರುತ್ತೇವೆ ಎನ್ನುವುದು ಅಸ್ಪಷ್ಟತೆಗೆ ಆಸ್ಪದವೇ ಇಲ್ಲದಂತೆ ನಿಚ್ಚಳವಾಗಿ ನಮಗೆ ದಕ್ಕುವಂಥದ್ದಲ್ಲ. ಹಾಗಿದ್ದಮೇಲೆ ನಮ್ಮೊಳಗಿರುವ 'ಆ ನಾಲ್ಕು ಜನರನ್ನು', 'ಆ ಅನ್ಯರನ್ನು' ಮೆಚ್ಚಿಸುವ ಹುನ್ನಾರವೇಕೆ?

ಕಡೆಗೂ ನಮಗಿರುವುದು ನಾವೊಬ್ಬರೇ, ನಾವು ನಮ್ಮ ಬಗೆಗೆ ಯಾವ ಭಾವ ಹೊಂದಿದ್ದೇವೆ, ನಮ್ಮ ಅನುಭವಗಳನ್ನು ಹೇಗೆ ಸ್ವೀಕರಿಸುತ್ತೇವೆ, ನಮ್ಮ ಆಲೋಚನೆಗಳನ್ನು, ಭಾವನೆಗಳನ್ನು ಹೇಗೆ ನಿರ್ವಹಿಸುತ್ತೇವೆ ಎನ್ನುವುದಷ್ಟೇ ನಮಗೆ ನಿಜವಾಗಲೂ ದಕ್ಕುವಂಥದ್ದು ಮತ್ತು ಬಹುಕಾಲ ಉಳಿಯುವಂಥದ್ದು.

'ಅನ್ಯ'ರ ದೃಷ್ಟಿಯಿಂದ ನಮ್ಮನ್ನು ನಾವು ತುಲನೆಗೊಳಪಡಿಸಿಕೊಂಡಾಗ ಮಾತ್ರ ಸೋಲೆಂಬ ಭಾವವಿದೆ. ನಮ್ಮನ್ನು ನಾವು ಸ್ನೇಹದಿಂದ, ಕರುಣೆಯಿಂದ ನೋಡಿಕೊಂಡಾಗ ಸೋಲೆಂಬ ಭಾವಕ್ಕೆ ಅಸ್ತಿತ್ವವೇ ಇಲ್ಲ. ನಮ್ಮ ಹೃದಯದ ಬಡಿತವನ್ನು ನಾವೇ ಅದುಮಿಟ್ಟು, ನಮ್ಮನ್ನು ಕಾಣುವ ನಮ್ಮ ಕಣ್ಣನ್ನೇ ಮುಚ್ಚಿಕೊಂಡು, ನಮ್ಮನ್ನು 'ಅನ್ಯ'ರ ತಕ್ಕಡಿಯಲ್ಲಿಟ್ಟು ತೂಗಿ ನೋಡುತ್ತಾ ನಮಗೆ ನಾವೇ ಶತ್ರುವಾಗುವ ಸ್ವಪ್ರೇಮವಿಲ್ಲದ ಸ್ಥಿತಿಯೇ ನಿಜವಾದ ಅರ್ಥದಲ್ಲಿ ಸೋಲು.

ನಮ್ಮ ಮೌಲ್ಯವನ್ನು ನಾವು ಅರಿತುಕೊಂಡು ನಮ್ಮನ್ನು ನಾವು ಅನುಮೋದಿಸಿಕೊಳ್ಳುವುದೇ (self validation) ನಿಜವಾದ ಗೆಲುವು. ನಮ್ಮ ಮೌಲ್ಯವನ್ನು ಬೇರೆಯವರು ನಿರ್ಧರಿಸಿ, ನಮ್ಮನ್ನು ಮಾನ್ಯ ಮಾಡಲಿ, ಅನುಮೋದಿಸಲಿ (other validation) ಎಂಬ ನಿರೀಕ್ಷೆಯೇ ಸೋಲು.

ಹಾಗಾದರೆ ನಮಗೆ ಬೇರೆಯವರ ಪ್ರೋತ್ಸಾಹ, ಮೆಚ್ಚುಗೆ ಬೇಡವೇ? ಸಮಾಜ ಒಪ್ಪುವಂತೆ ಬಾಳುವುದು ಬೇಡವೇ? ನಿಜ; ಸಮಾಜದ ಮೆಚ್ಚುಗೆ, ಪ್ರೋತ್ಸಾಹ, ಮಾನ್ಯತೆ ಮನುಷ್ಯನ ಅಭ್ಯುದಯಕ್ಕೆ ಸಹಕಾರಿ. ಆದರೆ ಸಮಾಜದ ಮೆಚ್ಚುಗೆಯೇ ಗುರಿಯಾಗಿ, ಅದೇ ನಮ್ಮತನಕ್ಕೆ ಆಧಾರವಾದರೆ ಅದು ದೊರೆಯದೇ ಹೋದ ಸಂದರ್ಭದಲ್ಲಿ ಕಲ್ಪಿತ ತಿರಸ್ಕಾರದಿಂದ ಬಳಲಿ ನಾವು ಕುಸಿದು ಬೀಳಬಹುದು. ಅನೇಕ ಕಾರಣಗಳಿಗಾಗಿ ನಮ್ಮನ್ನು ಹೆಚ್ಚು ಜನ ಮೆಚ್ಚದಿರಬಹುದು. ಆದರೂ ನಾವು ನಂಬಿದ ತತ್ವಗಳಿಗಾಗಿ, ನಮ್ಮ ಆತ್ಮತೃಪ್ತಿಗಾಗಿ, ನಮ್ಮ ಜೀವನಪ್ರೀತಿಯ ಅಭಿವ್ಯಕ್ತಿಗಾಗಿ ನಾವು ಬಾಳಲೇಬೇಕು.

# ಪ್ರವಾಸದಲ್ಲೂ ಇರಲಿ ಆರೋಗ್ಯದ ಕಾಳಜಿ



• ಡಾ. ಕುಶ್ವಂತ್ ಕೋಳಿಬೈಲು

**ಇತ್ತೀಚಿನ ದಿನಗಳಲ್ಲಿ** ಪ್ರವಾಸಕ್ಕೆ ಹೋಗುವವರ ಸಂಖ್ಯೆ ಹೆಚ್ಚುತ್ತಿದೆ. ಸಂತೋಷವನ್ನು ಕೊಡುವುದು ಮಾತ್ರವಲ್ಲ, ನಮ್ಮ ಮಾನಸಿಕ ಮತ್ತು ದೈಹಿಕ ಆರೋಗ್ಯದ ಸಮತೋಲನವನ್ನು ಕಾಪಾಡಲು ಕೂಡ ಪ್ರವಾಸಗಳು ನೆರವಾಗುತ್ತವೆ. ಆದರೆ ಪ್ರವಾಸದ ಸಂದರ್ಭದಲ್ಲಿ, ಪ್ರವಾಸಿಗಳ ತಂಡದಲ್ಲಿರುವ ಯಾರಾದರೂ ಒಬ್ಬ ವ್ಯಕ್ತಿಯ ಆರೋಗ್ಯ ಕೈಕೊಟ್ಟರೂ ನಮ್ಮ ಪ್ರವಾಸದ ಮಜಾ ಹಾಳಾಗಿಬಿಡುತ್ತದೆ. ತಮ್ಮ ಊರಿನಿಂದ ಮತ್ತು ವೈದ್ಯರಿಂದ ದೂರದ ಅಪರಿಚಿತ ವಾತಾವರಣದಲ್ಲಿರುವುದು ರೋಗಿಗಳಿಗೆ ಹೆಚ್ಚಿನ ಆತಂಕವನ್ನೂ ನೀಡಬಹುದು. ಈ ಕಾರಣಗಳಿಂದ ಪ್ರವಾಸಕ್ಕೆ ಹೋಗುವವರು ತಮ್ಮ ವೈದ್ಯರ ಸಲಹೆಯನ್ನು ಪಡೆಯುವುದು ಮತ್ತು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಅತ್ಯಗತ್ಯ. ತೀವ್ರವಾದ ಕಾಯಿಲೆಯಿಂದ ಬಳಲುತ್ತಿರುವವರು ತಾವು ಪ್ರವಾಸ ಕೈಗೊಳ್ಳುವ ಪ್ರದೇಶದಲ್ಲಿರುವ ವೈದ್ಯಕೀಯ ಸೌಲಭ್ಯಗಳ ಕುರಿತು ಮಾಹಿತಿ ಕಲೆಹಾಕುವುದು ಕೂಡ ಸುರಕ್ಷತೆಯ ದೃಷ್ಟಿಯಿಂದ ಸೂಕ್ತವಾದ ಕ್ರಮವಾಗಿದೆ.

ಪ್ರವಾಸಿಗರಲ್ಲಿ ಕಂಡುಬರುವ ಹೆಚ್ಚಿನ ಕಾಯಿಲೆಗಳು ಶುಚಿಯಿಲ್ಲದ ನೀರು ಮತ್ತು ಆಹಾರವನ್ನು ಸೇವಿಸುವುದರಿಂದ ಬರುತ್ತವೆ. ಪ್ರವಾಸಿಗರು ಹೆಚ್ಚಿನ ಸಂದರ್ಭದಲ್ಲಿ ಉಪಾಹಾರಗೃಹಗಳ ಮೇಲೆ ತಮ್ಮ ಊಟೋಪಚಾರವನ್ನು ಅವಲಂಬಿಸಿರುತ್ತಾರೆ. ಅಲ್ಲಿಯ ಊಟ-ತಿಂಡಿಗಳು ಶುದ್ಧವಾಗಿಲ್ಲದಿದ್ದರೆ ಅಥವಾ ಹೊಂದಾಣಿಕೆ ಆಗದಿದ್ದರೆ ಆಗ ವಾಂತಿ, ಅತಿಸಾರ ಮುಂತಾದ ಕಾಯಿಲೆಗಳು ಕಾಣಿಸಿಕೊಳ್ಳಬಹುದು. ಆಹಾರದ ಆಯ್ಕೆಯಲ್ಲಿ ಸ್ವಲ್ಪ ಹೆಚ್ಚು ಜಾಗರೂಕರಾಗಿರುವುದರಿಂದ ಆಹಾರ ಮತ್ತು ನೀರಿನಿಂದ ಉಂಟಾಗುವ ಸೋಂಕುಗಳನ್ನು ಕಡಿಮೆ ಮಾಡಿಕೊಳ್ಳಬಹುದು. ಕುದಿಸಿ ಆರಿಸಿದ ನೀರು ಅಥವಾ 'ಫಿಲ್ಟರ್' ಮೂಲಕ ಶುದ್ಧೀಕರಣ ಮಾಡಿದ ನೀರನ್ನು ಬಳಸಬೇಕು. ಸರಿಯಾಗಿ ಬೇಯಿಸದ ಆಹಾರಗಳನ್ನು ಮತ್ತು ರಸ್ತೆಬದಿಯಲ್ಲಿ ನೊಣಗಳಿಂದ ಮುತ್ತಿಕೊಂಡಿರುವ ತಿಂಡಿಪದಾರ್ಥಗಳಿಂದ ಸದಾ ದೂರವಿರಬೇಕು. ತಮ್ಮ ದೇಹ ಪ್ರಕೃತಿಗೆ ಹೊಂದಿಕೊಳ್ಳದ ಆಹಾರವನ್ನು ಸೇವಿಸದಿರುವುದು ಉತ್ತಮ. ನಮಗೆ 'ಅಲರ್ಜಿ' ಇರುವ ಪದಾರ್ಥಗಳಿಂದ ದೂರ ಉಳಿಯುವುದು ಒಳಿತು. ಪ್ರವಾಸದ ವೇಳೆಯಲ್ಲಿ ದಿನಕ್ಕೆ ಕನಿಷ್ಠ ಎರಡು-ಮೂರು ಲೀಟರಿನಷ್ಟು ನೀರನ್ನು ಕುಡಿಯುವುದರಿಂದ ದೇಹವು ನಿರ್ಜಲೀಕರಣವಾಗುವುದನ್ನು ತಡೆಯಬಹುದು.

ವಿವಿಧ ಪ್ರದೇಶಗಳ ಹವಾಗುಣವು ವಿಭಿನ್ನವಾಗಿರುವುದರಿಂದ ಅಲ್ಲಿಯ ಹವಾಮಾನ ಮತ್ತು ವಾತಾವರಣಕ್ಕೆ ಅನುಗುಣವಾಗಿ ಬಟ್ಟೆಗಳನ್ನು ಧರಿಸಬೇಕು. ಕೆಲವು ಪ್ರದೇಶದಲ್ಲಿ ಹವಾಮಾನದ ಕಾರಣದಿಂದ ಸೊಳ್ಳೆಗಳು ಮತ್ತು ಕೀಟಗಳಿಂದ ಹರಡುವ ಕಾಯಿಲೆಗಳು ಜಾಸ್ತಿಯಿರುತ್ತವೆ. ಆ ಕುರಿತು ಸೂಕ್ತ ಎಚ್ಚರಿಕೆಗಳನ್ನು ವಹಿಸಬೇಕು. ಬೆಟ್ಟಗುಡ್ಡಗಳತ್ತ ಚಾರಣ ಹೊರಟವರು ಕಾಡಿನ ಕೀಟಗಳಿಂದ ಬರುವ 'ರಿಕೆಟ್ಸಿಯಾ' ಮುಂತಾದ ಕಾಯಿಲೆಗಳ ಕುರಿತು ಎಚ್ಚರವನ್ನು ವಹಿಸಬೇಕು. ಬಿಸಿಲು ಜಾಸ್ತಿಯಿರುವ ಕಡೆ ಹೋದಾಗ ತ್ವಚೆಯ ರಕ್ಷಣೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.

ದಕ್ಷಿಣ ಭಾರತದಿಂದ ಉತ್ತರ ಭಾರತದ ಕಡೆಗೆ ಪ್ರವಾಸ ಹೋಗುವವರು ಅಲ್ಲಿನ ಹವಾಮಾನದ ಕುರಿತು ಅರಿತುಕೊಳ್ಳುವುದು ಅತ್ಯಗತ್ಯ. ಅಲ್ಲಿ ಚಳಿಗಾಲದಲ್ಲಿ ತಾಪಮಾನ ಶೂನ್ಯ ಡಿಗ್ರಿಯ ತನಕ ಇಳಿಯುವುದು ಮತ್ತು ಬೇಸಿಗೆಯಲ್ಲಿ ವಿಪರೀತ ಸೆಕೆಯಿರುವುದು ಸಾಮಾನ್ಯ. ಅದಕ್ಕೆ ಅನುಗುಣವಾಗಿ ಧರಿಸಲು ಸೂಕ್ತ ಬಟ್ಟೆಗಳನ್ನು ತೆಗೆದುಕೊಂಡು ಹೋಗಬೇಕು.

ಘಟ್ಟಪ್ರದೇಶದಲ್ಲಿ ಪ್ರಯಾಣ ಮಾಡುವಾಗ ಕೆಲವರಿಗೆ ತಲೆಸುತ್ತ ಬರುವುದು ಮತ್ತು ವಾಂತಿ ಆಗುವ ಸಮಸ್ಯೆಯಿರುತ್ತದೆ. ಪ್ರಯಾಣದ ಮೊದಲು ಸೂಕ್ತ ಔಷಧಗಳನ್ನು ತೆಗೆದುಕೊಳ್ಳುವುದರಿಂದ ಈ ಸಮಸ್ಯೆಯಿಂದ ಮುಕ್ತಿ ಪಡೆಯಬಹುದು. ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ಕಾಯಿಲೆಯಿಂದ ಬಳಲುವವರು ಆರೋಗ್ಯ ಕಾಪಾಡಿಕೊಳ್ಳಲು ಸರಿಯಾದ ಆಹಾರಕ್ರಮವನ್ನು ಪಾಲಿಸುವುದು ಅತ್ಯಗತ್ಯ. ಪ್ರಯಾಣದ ವೇಳೆಯಲ್ಲಿ ತಾವು ಸೇವಿಸುವ ಆಹಾರದಲ್ಲಿರುವ ಕ್ಯಾಲರಿಯ ಬಗ್ಗೆ ಗಮನ ಹರಿಸಬೇಕು. ಸಿಹಿತಿಂಡಿಗಳಿಂದ ಮತ್ತು ಎಣ್ಣೆಯಲ್ಲಿ ಕರಿದ ಪದಾರ್ಥಗಳಿಂದ ಅಂತರವನ್ನು ಕಾಯ್ದುಕೊಳ್ಳಬೇಕು. ಹೃದಯ ಮತ್ತು ಮಿದುಳುಸಂಬಂಧಿ ಕಾಯಿಲೆಗಳಿಂದ ಬಳಲುವವರು ತಮ್ಮ ವೈದ್ಯಕೀಯ ದಾಖಲೆಗಳನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗುವುದು ಉತ್ತಮ. ಒಂದು ವೇಳೆ ತೀವ್ರ ಅನಾರೋಗ್ಯಕ್ಕೆ ಒಳಗಾದರೆ ಅಂಥವರನ್ನು ಆಗ ಹೊಸದಾಗಿ ನೋಡುವ ತಜ್ಞ ವೈದ್ಯರಿಗೆ ಅಗತ್ಯ ಮಾಹಿತಿ ಕೂಡಲೇ ಸಿಗುತ್ತದೆ. ಹೀಗಾಗಿ ರೋಗಿಯ ಸಮಸ್ಯೆಯನ್ನು ಗ್ರಹಿಸಲು ಮತ್ತು ಸೂಕ್ತ ಚಿಕಿತ್ಸೆಯನ್ನು ಆರಂಭಿಸಲು ತಡವಾಗದು.

ಇಂದಿನ ದಿನಗಳಲ್ಲಿ ಬಹಳ ಭಾರತೀಯರು ವಿದೇಶ ಪ್ರಯಾಣವನ್ನು ಮಾಡುತ್ತಿದ್ದಾರೆ. ಆಫ್ರಿಕಾ ಮುಂತಾದ ದೇಶಗಳಲ್ಲಿ ಭಾರತದಲ್ಲಿ ಇರದ ಹಲವು ಸೋಂಕುಗಳಿವೆ. ಹಾಗಾಗಿ 'ಎಲ್ಲೋ ಫೀವರ್' (yellow fever) ಮುಂತಾದ ಕಾಯಿಲೆಗಳಿಗೆ ಲಸಿಕೆಯನ್ನು ಪಡೆಯಬೇಕಾಗಿ ಬರುತ್ತದೆ. ಭಾರತದಲ್ಲಿ ಟೈಫಾಯ್ಡ್ ಕಾಯಿಲೆ ಹೆಚ್ಚಾಗಿರುವುದರಿಂದ ಇಲ್ಲಿಗೆ ಬರುವ ವಿದೇಶಿಗರು ಆಹಾರದ ಬಗ್ಗೆ ಎಚ್ಚರವನ್ನು ವಹಿಸುವ ಜೊತೆಗೆ ಟೈಫಾಯ್ಡ್ ಲಸಿಕೆಯನ್ನೂ ಪಡೆಯುತ್ತಾರೆ. ವಿದೇಶಗಳಲ್ಲಿ ಮತ್ತು ಭಾರತದೊಳಗೂ ಉತ್ತಮ ವೈದ್ಯಕೀಯ ಚಿಕಿತ್ಸೆ ದುಬಾರಿಯಾಗಿರುವುದರಿಂದ ಆರೋಗ್ಯ ವಿಮೆಯ ಬಗ್ಗೆಯೂ ಪ್ರವಾಸ ಹೋಗುವವರು ಗಮನ ಹರಿಸಬೇಕಿದೆ.

ಒಟ್ಟಿನಲ್ಲಿ, ನಮ್ಮ ಪ್ರವಾಸದ ಸಂತೋಷಕ್ಕೆ ತೊಂದರೆ ಎದುರಾಗದಿರಲು ಕೆಲವೊಂದು ಎಚ್ಚರಿಕೆಗಳನ್ನು ವಹಿಸಬೇಕು. ನಾವು ಹೋಗುತ್ತಿರುವ ಸ್ಥಳದ ಬಗ್ಗೆ ಅಗತ್ಯ ಮಾಹಿತಿಯನ್ನು ಸಂಗ್ರಹಿಸಿ, ಅಲ್ಲಿ ಎದುರಾಗಬಹುದಾದ ತೊಂದರೆಗಳನ್ನು ಗ್ರಹಿಸಿ, ಅದಕ್ಕೆ ತಕ್ಕ ಉಪಾಯಗಳನ್ನು ಮಾಡಿಕೊಳ್ಳಬೇಕು. ನಮ್ಮ ಆರೋಗ್ಯದ ಸಮಸ್ಯೆಗಳ ಬಗ್ಗೆ ನಮಗೆ ಮೊದಲು ಚೆನ್ನಾಗಿ ತಿಳಿದಿರಬೇಕು; ನಮ್ಮ ಹತ್ತಿರದವರಿಗೂ ತಿಳಿದಿದ್ದರೆ ಒಳ್ಳೆಯದು. ಮಕ್ಕಳ ಮತ್ತು ವೃದ್ಧರ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ಅಗತ್ಯ. ನಮ್ಮ ಆರೋಗ್ಯಕ್ಕೆ ತೊಂದರೆಯಾಗಬಹುದಾದ ಯಾವುದೇ ರೀತಿಯ ಚಟುವಟಿಕೆಯಲ್ಲೂ ಪ್ರವಾಸದ ವೇಳೆ ತೊಡಗಲೇಬಾರದು.

## ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

### ಗಣಿತ

**ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು**

**ಅಭ್ಯಾಸ 3.3**

1. ಕೆಳಗಿನ ರೇಖಾತ್ಮಕ ಸಮೀಕರಣಗಳ ಜೋಡಿಗಳನ್ನು ವರ್ಜಿಸುವ ವಿಧಾನ ಮತ್ತು ಆದೇಶ ವಿಧಾನಗಳಿಂದ ಬಿಡಿಸಿರಿ

ಪರಿಹಾರ:

**(iii) $3x - 5y - 4 = 0$ ಮತ್ತು $9x = 2y + 7$**

ವರ್ಜಿಸುವ ವಿಧಾನ

$3x - 5y - 4 = 0$ ........................ (i)

$9x = 2y + 7$

$9x - 2y - 7 = 0$ ........................(ii)

ಸಮೀಕರಣ (1)ನ್ನು 3ರಿಂದ ಗುಣಿಸಿದಾಗ ಕೆಳಗಿನದ್ದನ್ನು ಪಡೆಯುತ್ತೇವೆ

$9x - 15y - 12 = 0$ ... ........................(iii)

ಸಮೀಕರಣ (3)ನ್ನು ಸಮೀಕರಣ (2)ರಿಂದ ಕಳೆದಾಗ, ನಾವು ಕೆಳಗಿನದನ್ನು ಪಡೆಯುತ್ತೇವೆ (ಹಿಂದಿನ ಸಂಚಿಕೆಯಿಂದ)

$13y = -5$

$y = -5/13$ ........................(iv)

ಸಮೀಕರಣ (4)ನ್ನು ಸಮೀಕರಣ (1)ರಿಂದ ಕಳೆದಾಗ, ನಾವು ಕೆಳಗಿನದನ್ನು ಪಡೆಯುತ್ತೇವೆ

$3x + 25/13 - 4 = 0$

$3x = 27/13$

$x = 9/13$

**$\therefore x = 9/13$ ಮತ್ತು $y = -5/13$**

ಆದೇಶ ವಿಧಾನ

ಸಮೀಕರಣ (1)ರಿಂದ ನಾವು ಕೆಳಗಿನದನ್ನು ಪಡೆಯುತ್ತೇವೆ

, $x = (5y+4)/3$ ......... (v)

ಸಮೀಕರಣ (5)ಬೆಲೆಯನ್ನು ಸಮೀಕರಣ (2)ರಲ್ಲಿ ಆದೇಶಿಸಿದಾಗ ನಾವು ಕೆಳಗಿನದನ್ನು ಪಡೆಯುತ್ತೇವೆ

$9(5y+4)/3 - 2y - 7 = 0$

$13y = -5$

$y = -5/13$

ಸಮೀಕರಣ ಸಮೀಕರಣ(5)ರಲ್ಲಿ $y = -5/13$ ಮೌಲ್ಯವನ್ನು ಹಾಕಿದಾಗ ನಾವು ಕೆಳಗಿನದ್ದನ್ನು ಪಡೆಯುತ್ತೇವೆ

$x = (5(-5/13)+4)/3$

$x = 9/13$

**$\therefore x = 9/13, \quad y = -5/13$**

(iv) $\frac{x}{2} + \frac{2y}{3} = -1$ and $x - \frac{y}{3} = 3$

ವರ್ಜಿಸುವ ವಿಧಾನ

$\frac{x}{2} + \frac{2y}{3} = -1$ ..............(1)

$x - \frac{y}{3} = 3$ ........................(2)

**ಸಮೀಕರಣ (1)ನ್ನು 6ರಿಂದ ಮತ್ತು ಸಮೀಕರಣ (2)ಅನ್ನು 3 ರಿಂದ ಗುಣಿಸಿದಾಗ ನಾವು ಕೆಳಗಿನದನ್ನು ಪಡೆಯುತ್ತೇವೆ**

$3x + 4y = -6$ .............................. (3)

$x - y/3 = 3$

$3x - y = 9$ .............................. (4)

**ಸಮೀಕರಣ (4)ನ್ನು ಸಮೀಕರಣ (3)ರಿಂದ ಕಳೆದಾಗ, ನಾವು ಕೆಳಗಿನದನ್ನು ಪಡೆಯುತ್ತೇವೆ**

$5y = -15$

$y = -3$ ..............................(5)

ಸಮೀಕರಣ (5)ಬೆಲೆಯನ್ನು ಸಮೀಕರಣ (3)ರಲ್ಲಿ ಆದೇಶಿಸಿದಾಗ ನಾವು ಕೆಳಗಿನದನ್ನು ಪಡೆಯುತ್ತೇವೆ

$3x - 12 = -6$

$3x = 6$

$x = 2$

ಆದ್ದರಿಂದ **$x = 2, y = -3$**

ಆದೇಶ ವಿಧಾನ

ಸಮೀಕರಣ (4)ದಿಂದ ನಾವು ಕೆಳಗಿನದ್ದನ್ನು ಪಡೆಯುತ್ತೇವೆ

$3x - y = 9$

$3x = y + 9$

$x = (y+9)/3$ .........(7)

ಸಮೀಕರಣ ಸಮೀಕರಣ(7)ರ $x = (y+9)/3$ ಮೌಲ್ಯವನ್ನು ಸಮೀಕರಣ (3)ರಲ್ಲಿ ಹಾಕಿದಾಗ ನಾವು ಕೆಳಗಿನದ್ದನ್ನು ಪಡೆಯುತ್ತೇವೆ

$3x + 4y = -6$

$3(y+9)/3 + 4y = -6$

$5y = -6 - 9$

$5y = -15$

$y = -3$

ಸಮೀಕರಣ ಸಮೀಕರಣ(7)ರಲ್ಲಿ $y = -3$ ಮೌಲ್ಯವನ್ನು ಹಾಕಿದಾಗ ನಾವು ಕೆಳಗಿನದ್ದನ್ನು ಪಡೆಯುತ್ತೇವೆ

$x = (y+9)/3$

$x = (-3+9)/3$

$= 2$

ಆದ್ದರಿಂದ **$x = 2$** ಮತ್ತು **$y = -3$**

**2) ಕೆಳಗಿನ ಸಮಸ್ಯೆಗಳಿಗೆ ರೇಖಾತ್ಮಕ ಸಮೀಕರಣಗಳ ಜೋಡಿಗಳನ್ನು ರಚಿಸಿರಿ ಮತ್ತು ವರ್ಜಿಸುವ ವಿಧಾನದಿಂದ ಅವುಗಳಿಗೆ ಪರಿಹಾರಗಳನ್ನು (ಇರುವುದಾದರೆ) ಕಂಡುಹಿಡಿಯಿರಿ.**

**(i)** ಒಂದು ಭಿನ್ನರಾಶಿಯ ಅಂಶಕ್ಕೆ 1ನ್ನು ಸೇರಿಸಿ, ಛೇದದಿಂದ 1ನ್ನು ಕಳೆದು ಸಂಕ್ಷೇಪಿಸಿದರೆ, 1 ಸಿಗುತ್ತದೆ. ಆ ಭಿನ್ನರಾಶಿಯ ಛೇದಕ್ಕೆ 1ನ್ನು ಸೇರಿಸಿದರೆ ಅದು 1/2 ಎಂದಾಗುತ್ತದೆ. ಆ ಭಿನ್ನರಾಶಿ ಯಾವುದು?

ಪರಿಹಾರ:– ಭಿನ್ನರಾಶಿಯ ಅಂಶವು a ಮತ್ತು ಛೇದವು b ಆಗಿರಲಿ

ಭಿನ್ನರಾಶಿ a/b

ಸಮಸ್ಯೆಯ ಪ್ರಕಾರ

**$(a+1)/(b-1) = 1$**

**$\Rightarrow a - b = -2$ ........................(i)**

**$a/(b+1) = 1/2$**

**$\Rightarrow 2a - b = 1$........................(ii)**

ಸಮೀಕರಣ (1)ನ್ನು ಸಮೀಕರಣ (2)ರಿಂದ ಕಳೆದಾಗ, ನಾವು ಕೆಳಗಿನದನ್ನು ಪಡೆಯುತ್ತೇವೆ

$a = 3$ ..............................(iii)

ಸಮೀಕರಣ (3)ಬೆಲೆ $a = 3$ ಸಮೀಕರಣ (1)ರಲ್ಲಿ ಆದೇಶಿಸಿದಾಗ ನಾವು ಕೆಳಗಿನದನ್ನು ಪಡೆಯುತ್ತೇವೆ

$3 - b = -2$

$-b = -5$

$b = 5$

ಆದ್ದರಿಂದ ಭಿನ್ನರಾಶಿ **3/5.**

**(ii) ಐದು ವರ್ಷಗಳ ಹಿಂದೆ ನೂರಿಯ ವಯಸ್ಸು ಸೋನುವಿನ ವಯಸ್ಸಿನ ಮೂರು ಪಟ್ಟು ಆಗಿತ್ತು. ಹತ್ತು ವರ್ಷಗಳ ಬಳಿಕ ನೂರಿಯ ವಯಸ್ಸು ಸೋನುವಿನ ವಯಸ್ಸಿನ ಎರಡು ಪಟ್ಟು ಆಗುತ್ತದೆ. ಹಾಗಾದರೆ, ನೂರಿ ಮತ್ತು ಸೋನುವಿನ ಈಗಿನ ವಯಸ್ಸೆಷ್ಟು?**

**ಪರಿಹಾರ:–** ನೂರಿಯ ಈಗಿನ ವಯಸ್ಸು x ವರ್ಷಗಳು ಮತ್ತು ಸೋನುವಿನ ಈಗಿನ ವಯಸ್ಸು y ಆಗಿರಲಿ

* ಐದು ವರ್ಷಗಳ ಹಿಂದೆ ನೂರಿಯ ವಯಸ್ಸು $= (x-5)$ ವರ್ಷಗಳು ಮತ್ತು ಸೋನುವಿನ ವಯಸ್ಸು $= (y-5)$ (ಮುಂದುವರಿಯುವುದು)

## ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

### MATHS

**DIFFERENTIABILITY**

**27) If $y = \sqrt{\text{Cos}x + \sqrt{\text{Cos}x + \sqrt{\text{Cos}x + \ldots + \infty}}}$; find $\frac{dy}{dx}$**

Soln: – Given, $y = \sqrt{\text{Cos}x + \sqrt{\text{Cos}x + \sqrt{\text{Cos}x + \ldots + \infty}}}$

$y = \sqrt{\text{Cos}x + y}$

**Squaring both sides we get**

$$y^2 = \left(\sqrt{\text{Cos}x + y}\right)^2 \Rightarrow y^2 = \text{Cos}x + y$$

$$\frac{dy}{dx}(y^2) = \frac{d}{dx}\text{Cos}\,x + \frac{dy}{dx}$$

$$2y\frac{dy}{dx} = -\text{Sin}\,x + \frac{dy}{dx}$$

$$2y\frac{dy}{dx} - \frac{dy}{dx} = -\text{Sin}\,x$$

$$(2y-1)\frac{dy}{dx} = -\text{Sin}x \Rightarrow \frac{dy}{dx} = \frac{-\text{Sin}x}{2y-1}$$

$$\therefore \frac{dy}{dx} = \frac{\text{Sin}x}{1-2y}$$

**28) Find $\frac{dy}{dx}$, if $y = (\text{Cos}x)^x + x^{\text{Sin}x}$.**

Soln: – Given, $y = (\text{Cos}x)^x + x^{\text{Sin}x}$

Let $u = (\text{Cos}x)^x$ and $v = x^{\text{Sin}x}$

Then $y = u + v \Rightarrow \frac{du}{dx} + \frac{dv}{dx}$..........(i)

Consider, $u = (\text{Cos}x)^x$

Taking logarithms on both sides, we have

$\log u = \log(\text{Cos}x)^x = x\log(\text{Cos}x)$

$$\frac{d}{dx}(\log u) = \frac{d}{dx}(x\log\text{Cos}x)$$

$$\frac{1}{u}\cdot\frac{du}{dx} = x.\frac{1}{\text{Cos}x}(-\text{Sin}x) + \log(\text{Cos}x).1$$

$$= -x\tan x + \log(\text{Cos}x)$$

$$\therefore \frac{du}{dx} = u\left[-x\tan x + \log(\text{Cos}x)\right]$$

$$= (\text{Cos}x)^x\left[-x\tan x + \log(\text{Cos}x)\right]$$

Now consider, $v = x^{\text{Sin}x}$

taking Logarithms on both sides, we get

$\log v = \text{Sin}\,x\log x$

$$\frac{d}{dx}(\log v) = \frac{d}{dx}(\text{Sin}x.\log x)$$

$$\frac{1}{v}\cdot\frac{dv}{dx} = \text{Sin}x.\frac{1}{x} + \log x.\text{Cos}x$$

$$\therefore \frac{dv}{dx} = v\left(\frac{\text{Sin}x}{x} + \log x.\text{Cos}x\right)$$

$$= x^{\text{Sin}x}\left(\frac{\text{Sin}x}{x} + \log x\,.\,\text{Cos}x\right)$$

Substituting for $\frac{du}{dx}$ and $\frac{dv}{dx}$ in (1)

$$\frac{dy}{dx} = (\text{Cos}x)^x\left[-x\tan x + \log(\text{Cos}x)\right] + x^{\text{Sin}x}\left(\frac{\text{Sin}x}{x} + \log x\,.\,\text{Cos}x\right)$$

**29) Differentiate $\tan^{-1}\left(\frac{\sqrt{1+x^2}-1}{x}\right)$ w.r.t $\text{Cos}^{-1}\left(\frac{1-x^2}{1+x^2}\right)$**

Soln: – Let $y = \tan^{-1}\left(\frac{\sqrt{1+x^2}-1}{x}\right)$.....(1) and

$z = \text{Cos}^{-1}\left(\frac{1-x^2}{1+x^2}\right)$......(2)

**Put $x = \tan\theta$ & $\theta = \tan^{-1}x$ in eqn (1)**

$$y = \tan^{-1}\left(\frac{\sqrt{1+\tan^2\theta}-1}{\tan\theta}\right)$$

$$= \tan^{-1}\left(\frac{\text{Sec}\theta - 1}{\tan\theta}\right) = \tan^{-1}\left(\frac{\frac{1}{\text{Cos}\theta}-1}{\frac{\text{Sin}\theta}{\text{Cos}\theta}}\right)$$

$$= \tan^{-1}\left(\frac{1-\text{Cos}\theta}{\text{Sin}\theta}\right) = \tan^{-1}\left(\frac{2\text{Sin}^2\theta/2}{2\text{Sin}\theta/2\,\text{Cos}\theta/2}\right)$$

$$\Rightarrow y = \tan^{-1}(\tan\theta/2)$$

$$\therefore \frac{dy}{dx} = \frac{d}{dx}\left(\frac{\tan^{-1}(x)}{2}\right) = \frac{1}{2}\cdot\frac{1}{(1+x^2)} = \frac{1}{2(1+x^2)}$$

**In eqn (2) Put $x = \tan\theta$ then, $\theta = \tan^{-1}x$**

$$z = \text{Cos}^{-1}\left(\frac{1-\tan^2\theta}{1+\tan^2\theta}\right)$$

$$= \text{Cos}^{-1}(\text{Cos}2\theta)\quad\left[\because \text{Cos}2\theta = \frac{1-\tan^2\theta}{1+\tan^2\theta}\right]$$

$$= 2\theta = 2\tan^{-1}x$$

$$\therefore \frac{dz}{dx} = 2.\frac{1}{1+x^2}$$

$$\therefore \frac{dy}{dz} = \frac{\frac{dy}{dx}}{\frac{dz}{dx}} = \frac{\frac{1}{2(1+x^2)}}{\frac{2}{1+x^2}} = \frac{1}{4}$$

**30) If $y = (x^2+a^2)^6$; show that**

$$(x^2+a^2)\frac{d^2y}{dx^2} - 10x\frac{dy}{dx} - 12y = 0$$

Soln: - Given $y = (x^2+a^2)^6$

$$\frac{dy}{dx} = 6(x^2+a^2)^5.2x$$

Multiply both sides by $(x^2+a^2)$

$$(x^2+a^2)\frac{dy}{dx} = 6(x^2+a^2)^6\,2x$$

$$= 12x(x^2+a^2)^6 = 12xy$$

$$\therefore (x^2+a^2)\frac{dy}{dx} = 12xy$$

Differentiating w.r.t x, on both sides

(Contd.......)

# ರಾಯಚೂರು: ಕೊಚ್ಚಿಹೋದ ರಸ್ತೆ

## ಶ್ರೀರಂಗಪಟ್ಟಣ–ಬೀದರ್ ರಾಷ್ಟ್ರೀಯ ಹೆದ್ದಾರಿ

● ಕಲಬುರಗಿ: ದೇವಾಲಯ ಜಲಾವೃತ

ಪ್ರಜಾವಾಣಿ ವಾರ್ತೆ

ಸಿಂಧನೂರು(ರಾಯಚೂರು ಜಿಲ್ಲೆ): ಶ್ರೀರಂಗಪಟ್ಟಣ–ಬೀದರ್ (150ಎ) ರಾಷ್ಟ್ರೀಯ ಹೆದ್ದಾರಿಯಲ್ಲಿ ಬೂತಲದಿನ್ನಿ ಬಳಿ ಸೇತುವೆ ಕಾಮಗಾರಿ ಸ್ಥಳದಲ್ಲಿ ತಾತ್ಕಾಲಿಕ ರಸ್ತೆ ಮಳೆಯಿಂದ ಕೊಚ್ಚಿಕೊಂಡು ಹೋಗಿದೆ. ಇದರಿಂದಾಗಿ ರಸ್ತೆ ಸಂಪರ್ಕ ಕಡಿತಗೊಂಡು, ಪ್ರಯಾಣಿಕರು ನಾಲ್ಕು ತಾಸು ಪರದಾಡಿದರು.

ಮಸ್ಕಿ–ಸಿಂಧನೂರು ಮಧ್ಯೆ ಬೂತಲದಿನ್ನಿ ಬಳಿ ಹಳ್ಳಕ್ಕೆ ಸೇತುವೆ, ಪಕ್ಕದಲ್ಲಿ ಪೈಪ್ ಅಳವಡಿಸಿ ತಾತ್ಕಾಲಿಕ ರಸ್ತೆ ನಿರ್ಮಿಸಲಾಗಿತ್ತು. ಮಳೆ ರಭಸಕ್ಕೆ ಮಣ್ಣು ಕೊಚ್ಚಿಕೊಂಡು ಹೋಗಿದೆ. ಬೆಳಿಗ್ಗೆ 6.30ರಿಂದ 11 ಗಂಟೆಯವರೆಗೂ ಮೂರು ಕಿ.ಮೀವರೆಗೆ ವಾಹನಗಳು ಸಾಲುಗಟ್ಟಿದ್ದವು. ಬೆಂಗಳೂರು, ಬಳ್ಳಾರಿ ಕಡೆಯಿಂದ ಬಂದಿದ್ದ ಬಸ್‌ಗಳು, ಲಾರಿಗಳು, ಶಾಲಾ ವಾಹನಗಳು ಸಾಲುಗಟ್ಟಿ ನಿಂತಿದ್ದವು.

'ಹನುಮಸಾಗರದಿಂದ ಸಿಂಧನೂರು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗೆ ಹೆರಿಗೆಗಾಗಿ ಲಿಂಗಮ್ಮ ಎಂಬ ಗರ್ಭಿಣಿಯನ್ನು ಆಂಬುಲೆನ್ಸ್‌ನಲ್ಲಿ ಕರೆದುಕೊಂಡು ಹೋಗಲಾಗುತ್ತಿತ್ತು. ರಸ್ತೆ ಕೊಚ್ಚಿ ಹೋಗಿದ್ದರಿಂದ ಮಹಿಳೆಯನ್ನು ಬೈಕ್‌ನಲ್ಲಿ ಕೂರಿಸಿಕೊಂಡು ಹಳ್ಳ ದಾಟಿಸಿ, ನಂತರ ಕಾರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು' ಎಂದು ನಿಂಗನಗೌಡ ಅಳಲು ತೋಡಿಕೊಂಡರು.



ಸಿಂಧನೂರು–ಮಸ್ಕಿ ನಡುವಿನ ಬೂತಲದಿನ್ನಿ ಬಳಿ ತಾತ್ಕಾಲಿಕ ರಸ್ತೆ ಮಳೆಯಿಂದಾಗಿ ಕೊಚ್ಚಿ ಹೋಗಿದ್ದರಿಂದ ವಾಹನಗಳು ರಸ್ತೆ ಮಧ್ಯೆಯೇ ನಿಂತುಕೊಂಡಿದ್ದವು

'ಸೋಮವಾರ ಬೆಳಗಿನಜಾವ ಮಳೆ ಅಬ್ಬರಿಸಿದ್ದು ತಾತ್ಕಾಲಿಕ ರಸ್ತೆ ಕೊಚ್ಚಿಹೋಗಿತ್ತು. ಸದ್ಯ ಸರಿಪಡಿಸಲಾಗಿದೆ' ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಿರಿಯ ಎಂಜಿನಿಯರ್ ಗೋಪಾಲ ತಿಳಿಸಿದ್ದಾರೆ.

**ದೇವಾಲಯ ಜಲಾವೃತ:** ಕಲಬುರಗಿ ಜಿಲ್ಲೆ ಕುಪನೂರಿನ ಪ್ರಸಿದ್ಧ ಮಲ್ಲಿಕಾರ್ಜುನ ದೇವಾಲಯ, ನೂರಾರು ಎಕರೆ ಜಮೀನಿನಲ್ಲಿ ಬೆಳೆ ಸೋಮವಾರ ಭಾರಿ ಮಳೆಗೆ ಜಲಾವೃತವಾಗಿದೆ. ಗಾರಂಪಳ್ಳಿಯಲ್ಲಿ ಸಿಡಿಲಿಗೆ 4 ಮೇಕೆಗಳು ಸತ್ತಿವೆ.

ಬೀದರ್ ಜಿಲ್ಲೆಯಲ್ಲಿ ನಗರ, ಹುಲಸೂರ, ಭಾಲ್ಕಿ, ಹುಮನಾಬಾದ್ ಮತ್ತು ಚಿಟಗುಪ್ಪದಲ್ಲಿ ಉತ್ತಮ ಮಳೆಯಾಗಿದೆ.

### ಮನೆಗಳಿಗೆ ಹಾನಿ

ಹುಬ್ಬಳ್ಳಿ: ಬಳ್ಳಾರಿ, ವಿಜಯನಗರ ಜಿಲ್ಲೆಯ ವಿವಿಧೆಡೆ ಭಾನುವಾರ ರಾತ್ರಿ, ಸೋಮವಾರ ಮಳೆಯಾಯಿತು. ಬೆಳಗಾವಿ, ಉತ್ತರ ಕನ್ನಡ ಜಿಲ್ಲೆಯಲ್ಲಿ ತುಂತುರು ಮಳೆ ಮುಂದುವರಿಯಿತು.

ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆಯಲ್ಲಿ ಹಳ್ಳಕೊಳ್ಳಗಳು ಭರ್ತಿಯಾಗಿವೆ. ಐದು ಮನೆಗಳಿಗೆ ಹಾನಿಯಾಗಿದೆ. ಕರೂರು, ಎಚ್ ಹೊಸಹಳ್ಳಿ, ಬಲಕುಂದಿ, ಸಿರಿಗೆರೆ, ಎಂ.ಸೂಗೂರು ಗ್ರಾಮಗಳಲ್ಲಿ ತಗ್ಗು ಪ್ರದೇಶಗಳಲ್ಲಿ ನೀರು ನಿಂತಿದೆ.

ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ಯು. ಕಲ್ಲಹಳ್ಳಿ ಕೆರೆ, 500 ಎಕರೆ ವಿಸ್ತೀರ್ಣದ ಕುಂಚೂರು ಕೆರೆ ಭರ್ತಿಯಾಗಿ ಕೋಡಿ ಬಿದ್ದಿವೆ.

### ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯೂಸೆಕ್‌ಗಳಲ್ಲಿ) | ಹೊರಹರಿವು (ಕ್ಯೂಸೆಕ್‌ಗಳಲ್ಲಿ) |
|---|---|---|---|---|
| ಕೆ ಆರ್ ಎಸ್ * | 124.80 | 124.40 | 11,470 | 11,583 |
| ಹಾರಂಗಿ | 2,859 | 2,855.90 | 1,781 | 1,600 |
| ಕಬಿನಿ | 2,284.00 | 2,281.77 | 3,233 | 200 |
| ಹೇಮಾವತಿ | 2,922 | 2,921.95 | 7,398 | 7,675 |
| ಲಿಂಗನಮಕ್ಕಿ | 1,819 | 1,811.90 | 4,255 | 5,261 |
| ಸೂಪಾ (ಮೀ) | 564 | 551.72 | 2,926.9 | 1,310.0 |
| ಮಾಣಿ | 595 | 590.80 | 905 | 709 |
| ತುಂಗಭದ್ರಾ | 1,633 | 1,626.06 | 31,980 | 31,775 |
| ಮಲಪ್ರಭಾ | 2,079.5 | 2,076.35 | 2,485 | 194 |
| ಘಟಪ್ರಭಾ | 2,175 | 2,172.25 | 2,792 | 2,792 |
| ಭದ್ರಾ * | 186 | 183.7 | 10,983 | 6,214 |
| ಆಲಮಟ್ಟಿ (ಮೀ) | 519.6 | 519.52 | 32,395 | 30,370 |
| ನಾರಾಯಣಪುರ (ಮೀ) | 492.25 | 492.09 | 30,000 | 15,000 |

* ನೆಲಮಟ್ಟದಿಂದ

## ಧರ್ಮಸ್ಥಳ: ಷಡ್ಯಂತ್ರ ಆರೋಪ, ಪ್ರತಿಭಟನೆ

ಧಾರವಾಡ/ಹುಬ್ಬಳ್ಳಿ: 'ಧರ್ಮಸ್ಥಳ ಕ್ಷೇತ್ರ ಹಾಗೂ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ವಿರುದ್ಧ ಷಡ್ಯಂತ್ರ ನಡೆಯುತ್ತಿದೆ' ಎಂದು ಆರೋಪಿಸಿ ಧರ್ಮಸ್ಥಳ ಭಕ್ತಾಭಿಮಾನಿ ವೇದಿಕೆ ಸದಸ್ಯರು ಸೋಮವಾರ ಧಾರವಾಡದಲ್ಲಿ ಪ್ರತಿಭಟನೆ ನಡೆಸಿದರು. ಸುಳ್ಳು ಸುದ್ದಿ ಪ್ರಸಾರ ಮಾಡಿ, ಅಪಪ್ರಚಾರ ಮಾಡುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

### ಚಿಟಿಕೆ ಸುದ್ದಿ



ತೂಕ ಪರೀಕ್ಷೆಯಲ್ಲಿ ಅಂಬಾರಿ ಆನೆ 'ಅಭಿಮನ್ಯು' ಪ್ರಜಾವಾಣಿ ಚಿತ್ರ

## 5.36 ಟನ್ ತೂಗಿದ 'ಅಭಿಮನ್ಯು'

ಮೈಸೂರು: ನಾಡಹಬ್ಬ ದಸರಾ ಮಹೋತ್ಸವಕ್ಕೆ ಅರಮನೆಯಲ್ಲಿ ಬೀಡು ಬಿಟ್ಟಿರುವ ಗಜಪಡೆಯ ತೂಕ ಪರೀಕ್ಷೆ ಸೋಮವಾರ ನಡೆಯಿತು. ಅಂಬಾರಿ ಆನೆ 'ಅಭಿಮನ್ಯು' ಒಟ್ಟು 5,360 ಕೆ.ಜಿ ತೂಗಿದನು.

ಧನ್ವಂತರಿ ರಸ್ತೆಯಲ್ಲಿರುವ 'ಸಾಯಿರಾಂ ಎಲೆಕ್ಟ್ರಾನಿಕ್ ವೇಬ್ರಿಡ್ಜ್‌'ನಲ್ಲಿ ತೂಕ ಮಾಡಲಾಯಿತು. ಗಜಪಡೆಯಲ್ಲಿಯೇ ಅತಿ ಕಿರಿಯ ಆನೆ 'ಭೀಮ' (25 ವರ್ಷ) 5,465 ಕೆ.ಜಿ ತೂಗಿ ಮೊದಲ ಸ್ಥಾನ ಪಡೆದರೆ, 59 ವರ್ಷದ ಕ್ಯಾಪ್ಟನ್ 'ಅಭಿಮನ್ಯು' ದ್ವಿತೀಯ ಸ್ಥಾನ ಪಡೆದನು.ಧನಂಜಯ (5,310 ಕೆ.ಜಿ), ಏಕಲವ್ಯ (5,305 ಕೆ.ಜಿ), ಮಹೇಂದ್ರ (5,120 ಕೆ.ಜಿ), ಪ್ರಶಾಂತ (5,110 ಕೆ.ಜಿ) ಇದ್ದರು.

## ಸಿಂಧೂ ರೂಪೇಶ್ ಬಾಹ್ಯಾಕಾಶ ಇಲಾಖೆ ನಿರ್ದೇಶಕಿ

ಬೆಂಗಳೂರು: ಕರ್ನಾಟಕ ಕೇಡರ್‌ನ ಐಎಎಸ್ ಅಧಿಕಾರಿ ಸಿಂಧೂ ರೂಪೇಶ್ ಅವರನ್ನು ಕೇಂದ್ರ ಬಾಹ್ಯಾಕಾಶ ಇಲಾಖೆ ನಿರ್ದೇಶಕರನ್ನಾಗಿ ನೇಮಿಸಲಾಗಿದೆ.

ಕೇಂದ್ರ ಸಿಬ್ಬಂದಿ ಯೋಜನೆ ಅಡಿ ಅವರು ತೆರಳಲಿದ್ದು, 5 ವರ್ಷಗಳ ವರೆಗೆ ನಿರ್ದೇಶಕರಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಹುದ್ದೆಗಳಿಂದ ಮುಕ್ತಗೊಳಿಸಲಾಗಿದೆ.

ಸಮಗ್ರ ಶಿಕ್ಷಣ ಇಲಾಖೆ ನಿರ್ದೇಶಕಿ ವಿದ್ಯಾ ಕುಮಾರಿ ಅವರಿಗೆ ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

## ಗೂಳಿಗೌಡ 'ಗ್ಯಾರಂಟಿ' ಪ್ರಾಧಿಕಾರದ ಉಪಾಧ್ಯಕ್ಷ

ಬೆಂಗಳೂರು: ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ ಅವರನ್ನು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರನ್ನಾಗಿ ನೇಮಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಸೋಮವಾರ ಆದೇಶ ಹೊರಡಿಸಿದೆ.



ದಿನೇಶ್ ಗೂಳಿಗೌಡ

ಮಂಡ್ಯ ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ದಿನೇಶ್ ಗೂಳಿಗೌಡ ಅವರು ವಿಧಾನ ಪರಿಷತ್‌ಗೆ ಆಯ್ಕೆ ಆಗಿದ್ದಾರೆ. ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥರಾಗಿ ಹಾಗೂ ಮಾಧ್ಯಮ ಘಟಕದ ಉಪಾಧ್ಯಕ್ಷರಾಗಿ ಈ ಹಿಂದೆ ಅವರು ಕಾರ್ಯನಿರ್ವಹಿಸಿದ್ದಾರೆ.

## ಕೃಷಿ ಹೊಂಡಕ್ಕೆ ಬಿದ್ದು ಇಬ್ಬರು ಮಕ್ಕಳ ಸಾವು

ಕುಷ್ಟಗಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಬಿಜಕಲ್ ಗ್ರಾಮದ ಹೊರವಲಯ ಜಮೀನೊಂದರ ಕೃಷಿ ಹೊಂಡದಲ್ಲಿ ಸೋಮವಾರ ಆಕಸ್ಮಿಕವಾಗಿ ಬಿದ್ದು ಇಬ್ಬರು ಮಕ್ಕಳು ಮೃತಪಟ್ಟಿದ್ದಾರೆ.

ಗ್ರಾಮದ ಮಲ್ಲಮ್ಮ ನೀಲಪ್ಪ ತೆಗ್ಗಿನಮನಿ (11) ಮತ್ತು ಬಿಜಕಲ್ ಗ್ರಾಮ ಪಂಚಾಯಿತಿ ಅಧ್ಯಕ್ಷ ಸಂಗಪ್ಪ ತೆಗ್ಗಿನಮನಿ ಅವರ ಪುತ್ರ ಶ್ರವಣಕುಮಾರ (8) ಮೃತರು.

ಜಮೀನಿಗೆ ಕುಟುಂಬದವರೊಂದಿಗೆ ತೆರಳಿದ್ದಾಗ ಈ ಘಟನೆ ನಡೆದಿದೆ. ಮಳೆಯಿಂದಾಗಿ ಕೃಷಿಹೊಂಡ ತುಂಬಿಕೊಂಡಿತ್ತು. ಮಕ್ಕಳು ಆಕಸ್ಮಿಕವಾಗಿ ಕಾಲು ಜಾರಿ ಬಿದ್ದಿರಬಹುದು ಎನ್ನಲಾಗುತ್ತಿದೆ.

## ಮೀನುಗಾರಿಕೆ ವೇಳೆ ಇಬ್ಬರು ನೀರುಪಾಲು; ಒಬ್ಬನ ಶವ ಪತ್ತೆ

ಯಲ್ಲಾಪುರ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ಕವಳಗಿ ಹಳ್ಳಕ್ಕೆ ಮೀನುಗಾರಿಕೆಗೆ ತೆರಳಿದ್ದಾಗ ನೀರು ಪಾಲಾಗಿದ್ದ ಮಹಮ್ಮದ್ ರಫೀಕ್ (27) ಶವ ಸೋಮವಾರ ಬೇಡ್ತಿ ನದಿಯಲ್ಲಿ ಪತ್ತೆಯಾಗಿದೆ. ನಾಪತ್ತೆ ಆಗಿರುವ ಇವರ ಸಹೋದರ ಮಹಮ್ಮದ್ ಹನೀಫ್ (25) ಅವರಿಗಾಗಿ ಶೋಧ ನಡೆದಿದೆ.

'ಭಾನುವಾರ 8 ಮಂದಿ ಕವಲಗಿ ಹಳ್ಳಕ್ಕೆ ಮೀನು ಹಿಡಿಯಲು ಹೋಗಿದ್ದರು. ಹಳ್ಳದಲ್ಲಿ ಏಕಾಏಕಿ ನೀರು ಹೆಚ್ಚಾಗಿ, ಇಬ್ಬರೂ ಮುಳುಗಿದ್ದರು. 6 ಮಂದಿ ಸುರಕ್ಷಿತವಾಗಿದ್ದಾರೆ' ಎಂದು ಪೊಲೀಸರು ತಿಳಿಸಿದರು.



ವಾಲ್ಮೀಕಿ ಸಮುದಾಯದ ಯುವಕ ಗವಿಸಿದ್ಧಪ್ಪ ನಾಯಕ ಕೊಲೆ ಖಂಡಿಸಿ ಕೊಪ್ಪಳದಲ್ಲಿ ಸೋಮವಾರ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ಸೇರಿದ್ದ ಜನ ಚಿತ್ರ: ಭರತ್ ಕಂದಕೂರ

## ಕೊಪ್ಪಳ: ಕೊಲೆ ಖಂಡಿಸಿ ಬೃಹತ್ ಪ್ರತಿಭಟನಾ ಮೆರವಣಿಗೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ವಾಲ್ಮೀಕಿ ಸಮುದಾಯದ ಗವಿಸಿದ್ಧಪ್ಪ ನಾಯಕ ಅವರನ್ನು ಆಗಸ್ಟ್ 3ರಂದು ಮುಸ್ಲಿಂ ಯುವಕ ಕೊಲೆ ಮಾಡಿರುವುದನ್ನು ಖಂಡಿಸಿ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ನೇತೃತ್ವದಲ್ಲಿ ಸೋಮವಾರ ನಗರದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಯಿತು.

ಕೊಲೆಯಾದ ಯುವಕನ ಪೋಷಕರ ಮನವಿ ಮೇರೆಗೆ ವ್ಯಾಪಾರಿಗಳು ಅಂಗಡಿಗಳನ್ನು ಸಂಪೂರ್ಣ ಬಂದ್ ಮಾಡಿ ಹೋರಾಟದಲ್ಲಿ ಭಾಗಿಯಾದರು. ಮೆರವಣಿಗೆಯಲ್ಲಿ ಸಾವಿರಾರು ಜನ ಸೇರಿದ್ದರು.

ಮಾಜಿ ಸಚಿವ ರಾಜೂಗೌಡ ನಾಯಕ ಮಾತನಾಡಿ, 'ಪ್ರತಿಭಟನೆಯಲ್ಲಿ ವಾಲ್ಮೀಕಿ ಸಮುದಾಯ ಮಾತ್ರವಲ್ಲ; ಕೊಪ್ಪಳದ ಸಮಸ್ತ ಹಿಂದೂಗಳು ಭಾಗಿಯಾಗಿದ್ದರಿಂದ ಸಮಾಜದ ಶಕ್ತಿ ಸಾಬೀತಾಗಿದೆ. ಯುವಕನನ್ನು ಸುಪಾರಿ ನೀಡಿ ಕೊಲೆ ಮಾಡಿಸಲಾಗಿದೆ' ಎಂದು ಆರೋಪಿಸಿದರು.

ಮುಂಜಾಗ್ರತೆಯಾಗಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಿದ್ದು, ಬಳ್ಳಾರಿ ವಲಯದ ಐಜಿಪಿ ವರ್ತಿಕಾ ಕಟಿಯಾರ್, ಎಸ್‌ಪಿ ಡಾ.ರಾಮ್ ಎಲ್. ಅರಸಿದ್ಧಿ ಭದ್ರತಾ ವ್ಯವಸ್ಥೆ ನೇತೃತ್ವ ವಹಿಸಿದ್ದರು.

**ಬಾಲಮಂದಿರಕ್ಕೆ ಬಾಲಕಿ:** ಕೊಲೆ ಪ್ರಕರಣದಲ್ಲಿ ಕೇಳಿಬಂದಿದ್ದ, ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕಿಯನ್ನು ಬಾಲ ನ್ಯಾಯ ಮಂಡಳಿ ಮುಂದೆ ಹಾಜರುಪಡಿಸಿ ಬಾಲ ಮಂದಿರದಲ್ಲಿ ಇರಿಸಲಾಗಿದೆ ಎಂದು ಮೂಲಗಳು ಖಚಿತಪಡಿಸಿವೆ. ಕೊಲೆಯಾದ ಯುವಕನ ತಂದೆ ಈ ಬಗ್ಗೆ ದೂರು ನೀಡಿದ್ದರು.

## 19ರಂದು ಕುರಿಗಾಹಿಗಳ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಕುರಿಗಾಹಿಗಳ ಹಿತರಕ್ಷಣಾ ಕಾಯ್ದೆ ರೂಪಿಸಲು ಒತ್ತಾಯಿಸಿ ಆಗಸ್ಟ್ 19ರಂದು ಬೆಂಗಳೂರಿನ ವಿಧಾನಸೌಧದ ಬಳಿ ಪ್ರತಿಭಟಿಸಲಾಗುವುದು' ಎಂದು ಸಾಂಪ್ರದಾಯಿಕ ಕುರಿಗಾಹಿಗಳ ಹಿತರಕ್ಷಣಾ ಕಾಯ್ದೆ ಹೋರಾಟ ಸಮಿತಿ ರಾಜ್ಯ ಸಂಚಾಲಕ ಯಲ್ಲಪ್ಪ ಹೆಗಡೆ ಹೇಳಿದರು.

ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಶೋಷಿತ ಸಮುದಾಯಗಳು ಮತ್ತು ವಿವಿಧ ವೃತ್ತಿಪರರ ಹಿತಕ್ಕಾಗಿ ವಿಶೇಷ ಕಾಯ್ದೆ ಜಾರಿಗೊಳಿಸಿದಂತೆ ಕುರಿಗಾಹಿಗಳ ಹಿತರಕ್ಷಣೆಗೂ ವಿಶೇಷ ಕಾಯ್ದೆ ರೂಪಿಸಿ, ಜಾರಿಗೊಳಿಸಬೇಕು. ಪ್ರಸಕ್ತ ಅಧಿವೇಶನದಲ್ಲೇ ಅದಕ್ಕೆ ಆದ್ಯತೆ ನೀಡಬೇಕು' ಎಂದರು.

## ವಿಜಯಪುರ ಪಾಲಿಕೆ: ಬಿಜೆಪಿಗೆ ಚುಕ್ಕಾಣಿ

ಪ್ರಜಾವಾಣಿ ವಾರ್ತೆ

ವಿಜಯಪುರ: ವಿಜಯಪುರ ಮಹಾನಗರಪಾಲಿಕೆಯಲ್ಲಿ ಬಿಜೆಪಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿದೆ. 5ನೇ ವಾರ್ಡ್‌ನ ಬಿಜೆಪಿ ಸದಸ್ಯ ಎಂ.ಎಸ್.ಕರಡಿ ಅವರು ಮೇಯರ್ ಮತ್ತು 17 ವಾರ್ಡ್‌ನ ಬಿಜೆಪಿ ಬೆಂಬಲಿತ ಪಕ್ಷೇತರ ಸದಸ್ಯೆ ಸುಮಿತ್ರಾ ಜಾಧವ ಉಪಮೇಯರ್ ಆಗಿ ಆಯ್ಕೆ ಆಗಿದ್ದಾರೆ.

ಇಬ್ಬರೂ ತಲಾ 24 ಮತ ಗಳಿಸಿದರು. ಮೇಯರ್ ಸ್ಥಾನಕ್ಕೆ ಜನವರಿಯಲ್ಲಿ ಉಪಮೇಯರ್ ಸ್ಥಾನಕ್ಕೆ ಇದೇ ಫೆಬ್ರುವರಿಯಲ್ಲಿ ಚುನಾವಣೆ ನಡೆದಿತ್ತು. ಕೋರ್ಟ್ ಆದೇಶದ ಮೇರೆಗೆ ಸೋಮವಾರ ಪ್ರಾದೇಶಿಕ ಆಯುಕ್ತ ಸಂಜಯ ಶೆಟ್ಟೆಣ್ಣವರ ಫಲಿತಾಂಶ ಪ್ರಕಟಿಸಿದರು.

ಆಸ್ತಿ ವಿವರ ಸಲ್ಲಿಸದ ಕಾರಣ ಬಿಜೆಪಿಯ 18, ಕಾಂಗ್ರೆಸ್‌ನ 10, ಎಐಎಂಐಎಂ 2, ಜೆಡಿಎಸ್ 1 ಹಾಗೂ ಪಕ್ಷೇತರ 5 ಸದಸ್ಯರು ಸೇರಿ ಎಲ್ಲ 35 ಸದಸ್ಯರನ್ನು ರಾಜ್ಯ ಸರ್ಕಾರ ಅನರ್ಹಗೊಳಿಸಿ ಫೆಬ್ರುವರಿಯಲ್ಲಿ ಆದೇಶ ಹೊರಡಿಸಿತ್ತು. ಆಗ ನಡೆದಿದ್ದ ಚುನಾವಣೆ ಫಲಿತಾಂಶವನ್ನು ತಡೆ ಹಿಡಿಯಲಾಗಿತ್ತು.



ಎಂ.ಎಸ್.ಕರಡಿ



ಸುಮಿತ್ರಾ

## ಜೈನ ಧರ್ಮಕ್ಕೆ ಅಪಮಾನ: ದೂರು

ಹುಬ್ಬಳ್ಳಿ: ಜೈನ ಧರ್ಮೀಯರ ವಿರುದ್ಧ ಅವಮಾನಕರ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ಗಿರೀಶ ಮಟ್ಟೆಣ್ಣವರ ಮತ್ತು ಕುಡ್ಲಾ ರ್‍ಯಾಂಪೇಜ್ ಯೂಟ್ಯೂಬ್ ಚಾನಲ್ ಮಾಲೀಕನ ವಿರುದ್ಧ ಇಲ್ಲಿನ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಛಬ್ಬಿ ಗ್ರಾಮದ ಅಜೀತ್ ಬಸಾಪುರ ದೂರು ನೀಡಿದ್ದಾರೆ.

'ಜೈನರು ಕ್ರೂರಿಗಳು, ಮತಾಂಧರು ಎಂದು ಸಮುದಾಯದ ಭಾವನೆಗೆ ಧಕ್ಕೆ ತಂದಿದ್ದಾರೆ' ಎಂದು ದೂರಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–01 editpage@prajavani.co.in

# ಅಭಿಮತ



**ಸುಭಾಷಿತ**

ಹೋಮವ ಮಾಡುವವರ ಕಂಡೆ, ಹೊಗೆಯ ನಿಲಿಸುವವರ ಕಾಣೆ.

–ಬಸವಣ್ಣ

**ಸಂಪಾದಕೀಯ**

## ‘ನಮ್ಮ ಮೆಟ್ರೊ’ಗೆ ‘ಹಳದಿ’ ಬಲ ಪ್ರಯಾಣಿಕರ ಹಿತಚಿಂತನೆ ಅಗತ್ಯ

**ಈಗಾಗಲೇ** ಕಾರ್ಯ ನಿರ್ವಹಿಸುತ್ತಿರುವ ಹಸಿರು ಹಾಗೂ ನೇರಳೆ ಮಾರ್ಗಗಳೊಂದಿಗೆ ‘ಹಳದಿ ಮಾರ್ಗ’ದ ಸೇರ್ಪಡೆಯೊಂದಿಗೆ ಬೆಂಗಳೂರಿನ ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಆಶಾಕಿರಣದಂತಿರುವ ‘ನಮ್ಮ ಮೆಟ್ರೊ’ ಮತ್ತಷ್ಟು ಬಲಗೊಂಡಿದೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಹೃದಯ ಭಾಗವಾಗಿರುವ ಎಲೆಕ್ಟ್ರಾನಿಕ್ ಸಿಟಿಯನ್ನು ಸಂಪರ್ಕಿಸುವ ‘ನಮ್ಮ ಮೆಟ್ರೊ ಹಳದಿ ಮಾರ್ಗ’ವನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಉದ್ಘಾಟಿಸಿದ್ದಾರೆ. 2017ರಲ್ಲಿ ಆರಂಭವಾದ ಈ ಮಾರ್ಗದ ನಿರ್ಮಾಣ 2021ರಲ್ಲಿಯೇ ಪೂರ್ಣಗೊಳ್ಳಬೇಕಾಗಿತ್ತು. ಆದರೆ, ಭೂಸ್ವಾಧೀನಕ್ಕೆ ಸಂಬಂಧಿಸಿದ ಸಮಸ್ಯೆಗಳು ಹಾಗೂ ಕೊರೊನಾ ಸಾಂಕ್ರಾಮಿಕ ಸೇರಿದಂತೆ ವಿವಿಧ ಕಾರಣಗಳಿಂದಾಗಿ ನಿರ್ಮಾಣ ಕಾರ್ಯ ಸಾಕಷ್ಟು ವಿಳಂಬವಾಯಿತು. ಕೊನೆಗೂ, ಸ್ವಾತಂತ್ರ್ಯ ದಿನಾಚರಣೆಯ ತಿಂಗಳಲ್ಲಿ ‘ಹಳದಿ ಮಾರ್ಗ’ಕ್ಕೂ ಸ್ವಾತಂತ್ರ್ಯ ದೊರೆತಿದೆ. 19.15 ಕಿ.ಮೀ. ಉದ್ದದ ಹಳದಿ ಮಾರ್ಗದ ಕಾರ್ಯಾಚರಣೆ ತಡವಾಗಿಯಾದರೂ ಆರಂಭವಾಗಿರುವುದು, ಸಾವಿರಾರು ಪ್ರಯಾಣಿಕರ ದೈನಿಕವನ್ನು ಸ್ವಲ್ಪ ಮಟ್ಟಿಗಾದರೂ ಸಹನೀಯಗೊಳಿಸಲಿದೆ. ಇದರೊಂದಿಗೆ, ಇದುವರೆಗೆ 76.97 ಕಿ.ಮೀ. ಇದ್ದ ನಮ್ಮ ಮೆಟ್ರೊ ಜಾಲ, 96 ಕಿ.ಮೀ.ಗೆ ವಿಸ್ತರಣೆಗೊಂಡಂತಾಗಿದೆ.

‘ಹಳದಿ ಮಾರ್ಗ’ದಲ್ಲಿ ಮೆಟ್ರೊ ರೈಲುಗಳ ಸಂಚಾರ ಆರಂಭಗೊಂಡಿದ್ದರೂ, ಪೂರ್ಣ ಪ್ರಮಾಣದ ಕಾರ್ಯಾಚರಣೆಗಾಗಿ 2026ರ ಮಾರ್ಚ್‌ವರೆಗೂ ಕಾಯಬೇಕಾಗಿದೆ. ಹೊಸ ಮಾರ್ಗದಲ್ಲಿ ಸಂಚಾರಕ್ಕಾಗಿ 15 ರೈಲುಗಳು ಬೇಕಾಗಿದ್ದು, ಸದ್ಯಕ್ಕೆ 3 ರೈಲುಗಳಷ್ಟೇ ಲಭ್ಯವಿವೆ. ಪ್ರಸ್ತುತ, ಪ್ರತಿ ದಿನ 25ರಿಂದ 40 ಸಾವಿರ ಪ್ರಯಾಣಿಕರು ಸಂಚರಿಸುವ ನಿರೀಕ್ಷೆಯಿದ್ದು, ಪೂರ್ಣ ಪ್ರಮಾಣದ ಕಾರ್ಯಾಚರಣೆ ಶುರುವಾದ ನಂತರ ಲಕ್ಷಾಂತರ ನಾಗರಿಕರು ‘ಹಳದಿ ಮಾರ್ಗ’ದ ಪ್ರಯೋಜನ ಪಡೆಯುವ ಸಾಧ್ಯತೆಯಿದೆ. ತಂತ್ರಜ್ಞಾನದ ದೃಷ್ಟಿಯಿಂದಲೂ ‘ಹಳದಿ ಮಾರ್ಗ’ ವಿಶಿಷ್ಟವಾದುದು. ಪ್ರಸ್ತುತ ಪೂರ್ಣ ಪ್ರಮಾಣದ ಕಾರ್ಯಾಚರಣೆ ನಡೆಸುತ್ತಿರುವ ಹಸಿರು ಮತ್ತು ನೇರಳೆ ಮಾರ್ಗಗಳಲ್ಲಿ ಚಾಲಕಸಹಿತ ರೈಲುಗಳು ಸಂಚರಿಸುತ್ತಿವೆ. ಹಳದಿ ಮಾರ್ಗದಲ್ಲಿ ಚಾಲಕರಹಿತ ರೈಲು ಸಂಚರಿಸುವ, ‘ಸಂವಹನ ಆಧಾರಿತ ರೈಲು ನಿಯಂತ್ರಣ ತಂತ್ರಜ್ಞಾನ’ ಲಭ್ಯವಿದೆ. ಆರಂಭದಲ್ಲಿ ಚಾಲಕಸಹಿತ ರೈಲುಗಳು ಸಂಚರಿಸಲಿದ್ದು, ಮುಂದಿನ ದಿನಗಳಲ್ಲಿ ಚಾಲಕರಹಿತ ರೈಲುಗಳು ಹಳದಿ ಮಾರ್ಗದಲ್ಲಿ ಸಂಚರಿಸಲಿವೆ.



‘ಹಳದಿ ಮಾರ್ಗ’ದ ಸೇರ್ಪಡೆಯೊಂದಿಗೆ ‘ನಮ್ಮ ಮೆಟ್ರೊ’ ಕಾರ್ಯ ವ್ಯಾಪ್ತಿ ದೊಡ್ಡದಾಗಿದೆ. ಆರ್ಥಿಕ ಬೆಳವಣಿಗೆಗೆ, ಪರಿಸರದ ಹಿತಕ್ಕೆ ಮೆಟ್ರೊದ ಪ್ರತಿ ವಿಸ್ತರಣೆ ಪೂರಕ.

ಹಳದಿ ಮಾರ್ಗದ ಉದ್ಘಾಟನೆಯ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೆಟ್ರೊ ಯೋಜನೆಯಲ್ಲಿ ರಾಜ್ಯದ ಹಕ್ಕಿನ ಪ್ರಸ್ತಾಪ ಮಾಡಿದ್ದಾರೆ; ಆ ಪ್ರಸ್ತಾಪ ಸರಿಯಾಗಿಯೂ ಇದೆ. ‘ನಮ್ಮ ಮೆಟ್ರೊ’ದ ಯೋಜನೆಗಳಿಗಾಗಿ ರಾಜ್ಯ ಸರ್ಕಾರ ಈವರೆಗೆ ₹25,379 ಕೋಟಿ ಭರಿಸಿದ್ದರೆ, ಕೇಂದ್ರ ಸರ್ಕಾರ ವೆಚ್ಚ ಮಾಡಿರುವುದು ₹7,468.86 ಕೋಟಿ ಮಾತ್ರ. ಹಾಗಾಗಿ, ಸಹಜವಾಗಿಯೇ ‘ನಮ್ಮ ಮೆಟ್ರೊ’ದ ಯಶಸ್ಸಿನ ಮುಖ್ಯ ಪಾಲು ರಾಜ್ಯ ಸರ್ಕಾರಕ್ಕೆ ಸಲ್ಲುತ್ತದೆ. ಆದರೆ, ಈವರೆಗೆ ಮೆಟ್ರೊ ಯೋಜನೆಗಳ ಅನುಷ್ಠಾನದಲ್ಲಿ ತಮ್ಮ ಪಾತ್ರವೇ ಮುಖ್ಯವಾದುದೆಂದು ಸಾಬೀತುಪಡಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಆಗಾಗ ಸ್ಪರ್ಧೆ ನಡೆದಿದೆ. ಈಗ ಪ್ರಧಾನಿ ಅವರ ಸಮ್ಮುಖದಲ್ಲೇ ಮೆಟ್ರೊ ಯೋಜನೆ ಸಾಕಾರಗೊಳ್ಳುವಲ್ಲಿ ರಾಜ್ಯದ ಪಾಲು ಮಹತ್ವದ್ದು ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಮುಖ್ಯಮಂತ್ರಿ ಅವರ ಮಾತಿನಂತೆ ಮೆಟ್ರೊ ಯೋಜನೆಯ ಯಶಸ್ಸಿನ ಕೀರ್ತಿಯ ಅಗ್ರಪಾಲು ರಾಜ್ಯ ಸರ್ಕಾರಕ್ಕೆ ನ್ಯಾಯಯುತವಾಗಿ ಸಲ್ಲುವುದೆಂದು ಒಪ್ಪಿಕೊಳ್ಳುತ್ತಲೇ, ಮೆಟ್ರೊ ಸೇವೆಗಳನ್ನು ಜನರಿಗೆ ಒದಗಿಸುವ ನಿಟ್ಟಿನಲ್ಲಿ ನಿರ್ವಹಿಸಬೇಕಾದ ಜವಾಬ್ದಾರಿಯನ್ನೂ ನೆನಪಿಸಬೇಕಾಗಿದೆ. ಕಳೆದ ಫೆಬ್ರುವರಿಯಲ್ಲಿ ಮೆಟ್ರೊ ಪ್ರಯಾಣ ದರ ಒಮ್ಮಿಂದೊಮ್ಮೆಗೇ ದುಬಾರಿಯಾದಾಗ, ಸಾರ್ವಜನಿಕ ಪ್ರತಿರೋಧ ದೊಡ್ಡ ಮಟ್ಟದಲ್ಲಿ ಎದುರಾಗಿತ್ತು. ಪ್ರಯಾಣ ದರ ಏರಿಕೆಯ ಜವಾಬ್ದಾರಿಯನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಪರಸ್ಪರ ವರ್ಗಾಯಿಸುವ ಮೂಲಕ ಪ್ರಯಾಣಿಕರ ಹಿತ ನಿರ್ಲಕ್ಷ್ಯಕ್ಕೊಳಗಾಗಿತ್ತು. ಪ್ರಯಾಣಿಕರ ಹಿತಾಸಕ್ತಿ ಕಾಪಾಡುವ ಹೊಣೆಗಾರಿಕೆಯ ಬಗ್ಗೆ ಜಾಣತನ ಪ್ರದರ್ಶಿಸಿದ್ದ ರಾಜ್ಯ ಸರ್ಕಾರ, ಈಗ ಹಕ್ಕಿನ ಬಗ್ಗೆ ಮಾತನಾಡುತ್ತಿದೆ. ಮೆಟ್ರೊದ ಹೊಸ ಮಾರ್ಗಗಳನ್ನು ಆರಂಭಿಸಿದ ಮಾತ್ರಕ್ಕೆ ಜನಪರ ಸರ್ಕಾರದ ಜವಾಬ್ದಾರಿ ಮುಗಿಯುವುದಿಲ್ಲ. ಮೆಟ್ರೊ ಪ್ರಯಾಣ ದರ ಜನಸಾಮಾನ್ಯರಿಗೆ ಭಾರವೆನ್ನಿಸದಂತೆ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯ. ಪ್ರಯಾಣ ದರ ದುಬಾರಿಯೆನ್ನಿಸಿ, ದೊಡ್ಡ ಸಂಖ್ಯೆಯ ಪ್ರಯಾಣಿಕರು ಮೆಟ್ರೊದಿಂದ ದೂರವೇ ಉಳಿಯುವಂತಾದರೆ, ಸಾರ್ವಜನಿಕ ಸಾರಿಗೆಯ ಉದ್ದೇಶವೇ ಹಾಳಾಗುತ್ತದೆ. ಮೆಟ್ರೊ ಯೋಜನೆಗಳನ್ನು ಲಾಭದ ದೃಷ್ಟಿಯಿಂದ ನೋಡದೆ, ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ಸರ್ಕಾರ ನೋಡಬೇಕಾಗಿದೆ.

### ಸಾಂಸ್ಕೃತಿಕ ಚಹರೆಗಳ ವಿರೂಪ



**ಕನ್ನಡದ ಸಾಂಸ್ಕೃತಿಕ ವಕ್ತಾರರಾಗಿದ್ದ ಮೇರುನಟ ವಿಷ್ಣುವರ್ಧನ್ ಅವರ ಸಮಾಧಿಯಿದ್ದ ಜಾಗದಲ್ಲಿ ಶಾಪಿಂಗ್ ಮಾಲ್ ತಲೆಯೆತ್ತಲಿದೆ ಎಂದು ಸುದ್ದಿ. ಊರು ಬೆಳೆಯಬೇಕು, ನಿಜ. ಆದರೆ, ತನ್ನ ಸಾಂಸ್ಕೃತಿಕ ಚಹರೆಗಳನ್ನು ತಾನೇ ವಿರೂಪಗೊಳಿಸುವಷ್ಟು ಅನರ್ಥಕಾರಿಯಾಗಿ ಬೆಳೆಯಬಾರದು!**

**ಸವಿರಾಜ್ ಆನಂದೂರು,** ಲೇಖಕ, ಫೇಸ್‌ಬುಕ್‌ನಿಂದ

### ಕಿಡಿನುಡಿ



**ಬಿಜೆಪಿಯ ಕೆಲವು ಖಾಲಿ ಟ್ರಂಕುಗಳು ಶಬ್ದ ಮಾತ್ರ ಮಾಡುತ್ತವೆ. ಬರೀ ಶಬ್ದ ಮಾಡುವವರು ಸಂಸತ್‌ನಲ್ಲಿ ಮಾತನಾಡಿ, ಪ್ರಧಾನ ಮಂತ್ರಿ ಅವರನ್ನು ಭೇಟಿ ಮಾಡಿ ರಾಜ್ಯಕ್ಕೆ ಹತ್ತು ರೂಪಾಯಿಯಾದರೂ ಅನುದಾನ ತೆಗೆದುಕೊಂಡು ಬರಲಿ.**

**ಡಿ.ಕೆ. ಶಿವಕುಮಾರ್,** ಉಪ ಮುಖ್ಯಮಂತ್ರಿ

### 25 ವರ್ಷಗಳ ಹಿಂದೆ

ಶನಿವಾರ, 12-8-2000

**• ಪರಿಶಿಷ್ಟರ ಪಟ್ಟಿಯಿಂದ ಕೆಲವು ಜನಾಂಗಗಳು ಹೊರಗೆ**

**ಬೆಂಗಳೂರು, ಆಗಸ್ಟ್ 11–** ಕೇಂದ್ರ ಸರ್ಕಾರದ ಪರಿಶಿಷ್ಟ ಪಂಗಡಗಳ ಪಟ್ಟಿಗೆ ಅನುಗುಣವಾಗಿ ರಾಜ್ಯ ಸರ್ಕಾರ ತಾನು ರೂಪಿಸಿರುವ ಪಟ್ಟಿಯನ್ನು ಪರಿಷ್ಕರಿಸಿ, ಪ್ರಸಕ್ತ ಆ ಪಟ್ಟಿಯಿಂದ ಮಲೇರು, ಮಾಲೇರು ಹಾಗೂ ಕುರುಬ ಜನಾಂಗಗಳನ್ನು ತೆಗೆದು ಹಾಕಲು ಸಚಿವ ಸಂಪುಟ ತೀರ್ಮಾನ ತೆಗೆದುಕೊಂಡಿದೆ.

ಇಂದು ಇಲ್ಲಿ ಸೇರಿದ್ದ ಸಚಿವ ಸಂಪುಟ ಸಭೆಯ ತೀರ್ಮಾನಗಳನ್ನು ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದ ವಾರ್ತಾ ಸಚಿವ ಪ್ರೊ. ಬಿ.ಕೆ. ಚಂದ್ರಶೇಖರ್ ಅವರು, ತನ್ನ ಪಟ್ಟಿಯಲ್ಲಿಲ್ಲದ ಜಾತಿಗಳನ್ನು ಸೇರಿಸಿ ರಾಜ್ಯ ಸರ್ಕಾರ ತಾನೇ ಪಟ್ಟಿ ತಯಾರಿಸಿರುವುದಕ್ಕೆ ಕೇಂದ್ರ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಈ ತೀರ್ಮಾನ ತೆಗೆದುಕೊಳ್ಳಲಾಯಿತು ಎಂದು ವಿವರಿಸಿದರು.

### 75 ವರ್ಷಗಳ ಹಿಂದೆ

ಶನಿವಾರ, 12-8-1950

**• ಆಗಸ್ಟ್ 15ರಂದು ಹೊಸ ನಾಣ್ಯ ಚಲಾವಣೆ**

**ನವದೆಹಲಿ, ಆಗಸ್ಟ್ 11–** ರಾಜನ ತಲೆಗೆ ಬದಲಾಗಿ ಅಶೋಕ ಸ್ತಂಭದ ಮುದ್ರೆಯನ್ನು ಹೊಂದಿದ ಹೊಸ ನಾಣ್ಯಗಳನ್ನು ಆಗಸ್ಟ್ 15ರಿಂದ ಜಾರಿಗೆ ತರಲಾಗುವುದು ಎಂದು ಭಾರತ ಸರ್ಕಾರದ ಅರ್ಥಶಾಖೆ ಪ್ರಕಟಿಸಿದೆ. ಕಾಲಾಣೆಯ ನಾಣ್ಯವನ್ನುಳಿದು ಎಲ್ಲಾ ನಾಣ್ಯಗಳ ತೂಕ, ಆಕಾರ ಮತ್ತು ರಚನೆಯಲ್ಲಿ ಯಾವ ಬದಲಾವಣೆಯೂ ಇರುವುದಿಲ್ಲ.

ನಾಣ್ಯದ ಇನ್ನೊಂದು ಮುಖದಲ್ಲಿಯೂ ಬದಲಾವಣೆ ಮಾಡಲಾಗಿದೆ. ರೂಪಾಯಿ, ಅರ್ಧ ರೂಪಾಯಿ, ನಾಲ್ಕಾಣೆಗಳಿಗೆ ‘ತೆನೆ’ಯ ಗುರುತನ್ನೂ, ಎರಡಾಣೆ ಒಂದಾಣೆ ಮತ್ತು ಅರ್ಧಾಣೆ ಹಾಗೂ ತಾಮ್ರದ ನಾಣ್ಯಗಳಿಗೆ ‘ಬಸವ’ನ ಗುರುತನ್ನೂ ಹಾಕಲಾಗುವುದು.

# ಉಪರಾಷ್ಟ್ರಪತಿ ಚುನಾವಣೆ ಸುತ್ತ



**ಜನರಾಜಕಾರಣ**

**ಸಂದೀಪ್ ಶಾಸ್ತ್ರಿ**

ಜಗದೀಪ್ ಧನಕರ್ ಅವರ ದಿಢೀರ್ ರಾಜೀನಾಮೆಯಿಂದ ಉಪರಾಷ್ಟ್ರಪತಿ ಸ್ಥಾನ ತೆರವಾಗಿದ್ದು, ಸೆಪ್ಟೆಂಬರ್ ಎರಡನೇ ವಾರದಲ್ಲಿ ಚುನಾವಣೆ ನಡೆಯಲಿದೆ. ಉಪರಾಷ್ಟ್ರಪತಿಗಳ ಇತಿಹಾಸ ಗಮನಿಸಿದರೆ, ಸರ್ಕಾರದೊಂದಿಗೆ ಭಿನ್ನಮತ ಹೊಂದಿದ್ದ ಉಪರಾಷ್ಟ್ರಪತಿಗಳ ಪರಂಪರೆಯೇ ಇದೆ ಹಾಗೂ ಆ ಪರಂಪರೆಯಲ್ಲಿ ಸಾಕಷ್ಟು ಸ್ವಾರಸ್ಯಕರ ಸಂಗತಿಗಳಿವೆ.

ಉಪರಾಷ್ಟ್ರಪತಿ ಚುನಾವಣೆಗೆ ಚುನಾವಣಾ ಆಯೋಗವು ಸೆಪ್ಟೆಂಬರ್ 9ರ ದಿನಾಂಕ ಪ್ರಕಟಿಸಿದೆ. ಈಗ ಎಲ್ಲರ ಗಮನ ಆ ಮಹತ್ವದ ಸ್ಥಾನದ ಆಯ್ಕೆಯತ್ತ ನೆಟ್ಟಿದೆ. ಜಗದೀಪ್ ಧನಕರ್ ಅವರು ಉಪರಾಷ್ಟ್ರಪತಿ ಸ್ಥಾನಕ್ಕೆ ಇತ್ತೀಚೆಗೆ ದಿಢೀರನೆ ರಾಜೀನಾಮೆ ನೀಡಿದ ಪ್ರಕರಣದ ಹಿನ್ನೆಲೆಯಿಂದ, ರಾಜಕಾರಣದ ವಿಶಾಲ ದೃಷ್ಟಿಕೋನದ ಮಸೂರದಲ್ಲಿ ಈ ಬೆಳವಣಿಗೆಯನ್ನೀಗ ನಾವು ನೋಡಬೇಕಿದೆ. ಜಗದೀಪ್ ಧನಕರ್ ರಾಜೀನಾಮೆ ನೀಡಿದ ತಕ್ಷಣ ಅನೇಕರು ಸಾಕಷ್ಟು ಸಂಗತಿಗಳನ್ನು ಚರ್ಚಿಸಿದರು. ಉಪರಾಷ್ಟ್ರಪತಿ ಸ್ಥಾನ ತೆರವಾಗಿ ಸುಮಾರು ಮೂರು ವಾರಗಳೇ ಆಗುತ್ತಿರುವ ಸಂದರ್ಭದಲ್ಲಿ, ಈಗ ಕೆಲವು ಸಮಸ್ಯೆಗಳನ್ನು ಮತ್ತೆ ಕೆದಕಿ ನೋಡುವ ಅವಕಾಶ ನಮ್ಮೆದುರಲ್ಲಿದೆ.

ಭಾರತ ತನ್ನ 15ನೇ ಉಪರಾಷ್ಟ್ರಪತಿಯನ್ನು ಮುಂದಿನ ತಿಂಗಳು ಹೊಂದಲಿದೆ. ಇದುವರೆಗೆ ಈ ಸ್ಥಾನವನ್ನು 14 ಮಂದಿ ಅಲಂಕರಿಸಿದ್ದಾರೆ. ಅವರಲ್ಲಿ ಇಬ್ಬರು, ಎರಡು ಅವಧಿಗೆ ಉಪರಾಷ್ಟ್ರಪತಿ ಸ್ಥಾನದಲ್ಲಿ (ರಾಧಾಕೃಷ್ಣನ್ ಹಾಗೂ ಹಮೀದ್ ಅನ್ಸಾರಿ) ಕಾರ್ಯ ನಿರ್ವಹಿಸಿದ್ದಾರೆ. ಉಪರಾಷ್ಟ್ರಪತಿ ಆಗಿದ್ದವರಲ್ಲಿ ಆರು ಮಂದಿ ಮುಂದೆ ರಾಷ್ಟ್ರಪತಿ ಸ್ಥಾನಕ್ಕೂ ಸಂದವರು. ಒಬ್ಬರು (ಭೈರೋನ್ ಸಿಂಗ್ ಶೆಖಾವತ್) ಆ ಸ್ಥಾನಕ್ಕೆ ಸ್ಪರ್ಧಿಸಿ, ಸೋಲು ಕಂಡಿದ್ದರು. ಹಿಂದಿನ ಐವರು ಉಪರಾಷ್ಟ್ರಪತಿಗಳು (ಕೃಷ್ಣಕಾಂತ್ ಅವರ ನಂತರ) ಮುಂದೆ ರಾಷ್ಟ್ರಪತಿಗಳಾಗಲಿಲ್ಲ ಎನ್ನುವುದು ಆಸಕ್ತಿಕರವೂ, ಗಮನಿಸಬೇಕಾದ ಸಂಗತಿಯೂ ಆಗಿದೆ.

ಮೂವರು ಉಪರಾಷ್ಟ್ರಪತಿಗಳು ಅವಿರೋಧವಾಗಿ ಆಯ್ಕೆ ಆಗಿದ್ದುದನ್ನೂ ನಾವೀಗ ನೆನಪಿಸಿಕೊಳ್ಳಬೇಕಿದೆ. ರಾಧಾಕೃಷ್ಣನ್ ಅವರು ಎರಡು ಅವಧಿಗೆ (1952, 1957) ಹಾಗೂ ಶಂಕರ್ ದಯಾಳ್ ಶರ್ಮ (1987) ಒಮ್ಮೆ ಅವಿರೋಧವಾಗಿ ಆಯ್ಕೆಯಾಗಿದ್ದರು. ಉಪರಾಷ್ಟ್ರಪತಿ ಚುನಾವಣೆಯ ಸ್ವರೂಪವನ್ನು (ಸಂಸತ್‌ನ ಎರಡೂ ಸದನಗಳಲ್ಲಿ) ನೋಡಿದರೆ, ಕೇಂದ್ರದಲ್ಲಿ ಅಧಿಕಾರದಲ್ಲಿ ಇರುವ ಪಕ್ಷದ ಅಭ್ಯರ್ಥಿಯ ಆಯ್ಕೆಗೇ ಮಣೆ ಎನ್ನುವುದು ಖಚಿತ. ಚಂದ್ರಶೇಖರ್ ನೇತೃತ್ವದ ಸರ್ಕಾರ (ಜನತಾ ಪಕ್ಷ– ಎಸ್) ಅಧಿಕಾರದಲ್ಲಿ ಇದ್ದಾಗ, ಕಾಂಗ್ರೆಸ್‌ನಿಂದ ಬಾಹ್ಯ ಬೆಂಬಲ ಪಡೆದುಕೊಂಡು ಹಿದಾಯತ್ ಉಲ್ಲಾ ಅವರು ಉಪರಾಷ್ಟ್ರಪತಿ ಆಗಿದ್ದರು. ಹಾಗೆಯೇ, ಕೃಷ್ಣಕಾಂತ್ ಅವರು ಉಪರಾಷ್ಟ್ರಪತಿ ಆದಾಗ, ಕಾಂಗ್ರೆಸ್‌ನ ಬಾಹ್ಯ ಬೆಂಬಲದೊಂದಿಗೆ ಎರಡನೇ ಅವಧಿಯ ಯುನೈಟೆಡ್ ಫ್ರಂಟ್ ಸರ್ಕಾರದ ಪ್ರಧಾನಿಯಾಗಿ ಐ.ಕೆ. ಗುಜ್ರಾಲ್ ಅಧಿಕಾರದಲ್ಲಿ ಇದ್ದರು.

ಪ್ರಸಕ್ತ ಉಪರಾಷ್ಟ್ರಪತಿ ಚುನಾವಣಾ ಕಣಕ್ಕೆ ತನ್ನ ಅಭ್ಯರ್ಥಿಯನ್ನಾಗಿ ಎನ್‌ಡಿಎ ಯಾರನ್ನು ಇಳಿಸಲಿದೆ ಎಂದು ಈಗಾಗಲೇ ಊಹೆಗಳು ಶುರುವಾಗಿವೆ (ಧನಕರ್ ಅವರು ರಾಜೀನಾಮೆ ಕೊಟ್ಟ ದಿನದಿಂದಲೇ ಇಂತಹ ಊಹೆಗಳು ಶುರುವಾಗಿದ್ದವು). ಉಪರಾಷ್ಟ್ರಪತಿ ವಿಷಯದ ಇತ್ತೀಚಿನ ಬೆಳವಣಿಗೆಗಳು ಹಾಗೂ ಬಿಜೆಪಿ ಅಧಿಕಾರಕ್ಕೆ ಬಂದ ನಂತರದ ಅನುಭವವು, ಎರಡು ಭಿನ್ನ ಸಂಗತಿಗಳ ಮೇಲೆ ಬೆಳಕು ಚೆಲ್ಲುತ್ತವೆ. ಒಂದು, ರಾಜಕಾರಣದ ಒತ್ತಡಗಳ ಮೇಲೆ ಕನ್ನಡಿ ಹಿಡಿದರೆ; ಇನ್ನೊಂದು, ‘ಬಲವಂತದ ರಾಜಕಾರಣ’ಕ್ಕೆ ಮಸೂರ ಹಿಡಿದಿದೆ.

ಮೊದಲಿಗೆ, ರಾಜಕಾರಣದ ಒತ್ತಡಗಳ ಕುರಿತು ಗಮನಿಸೋಣ. ಧನಕರ್ ಪ್ರಕರಣದಿಂದ ಆಡಳಿತಾರೂಢ ಪಕ್ಷವು ಏನನ್ನಾದರೂ ಕಲಿಯುವುದಿದ್ದರೆ, ಅದು– ಈಗಾಗಲೇ ನಡೆಸಿದ ತನ್ನ ಪ್ರಯೋಗ–ಪರೀಕ್ಷೆಗಳ ಮೇಲೆ ನಂಬಿಕೆ ಇಡುವುದು ಹಾಗೂ ನಂಬಿಕಸ್ಥರಾದ ನಿಷ್ಠಾವಂತರನ್ನು ನೆಚ್ಚಿಕೊಳ್ಳುವುದು ಎನ್ನುವುದಾಗಿದೆ. ವಿರೋಧ ಪಕ್ಷಗಳ ರಾಜಕಾರಣದಲ್ಲಿ ಬಲಗುಂದಿ ರಾಜೀನಾಮೆ ನೀಡುವ ಪರಿಸ್ಥಿತಿಯನ್ನು ಧನಕರ್ ಅವರು ತಂದುಕೊಳ್ಳಬೇಕಾಯಿತು ಎನ್ನುವ ಆರೋಪದಲ್ಲಿ ಸಮಸ್ಯೆಯ ಬೇರು ಅಡಗಿದೆ. ಎರಡನೆಯದಾಗಿ, ‘ಬಲವಂತದ ರಾಜಕಾರಣ’ವನ್ನು ಗಮನಿಸೋಣ; ವಿಶೇಷವಾಗಿ, 2014ರ ನಂತರದ ಅವಧಿಯಲ್ಲಿ ಬಿಜೆಪಿ ನಡೆಸುತ್ತಾ ಬಂದಿರುವ ರಾಜಕಾರಣವನ್ನು. ಆಡಳಿತಾರೂಢ ಪಕ್ಷವು ಮಾಡುತ್ತಾ ಬಂದಿರುವ ಎಲ್ಲ ಪ್ರಮುಖ ರಾಜಕೀಯ ನಾಮ ನಿರ್ದೇಶನಗಳಲ್ಲೂ ದೊಡ್ಡಮಟ್ಟದ ಅಚ್ಚರಿಯ ಅಂಶವೊಂದು ಇರುವುದು ಸ್ಫಟಿಕ ಸ್ಪಷ್ಟ. ಈ ಹಿಂದೆ ನಡೆದಿದ್ದ ರಾಷ್ಟ್ರಪತಿ ಚುನಾವಣೆಯ ಅಭ್ಯರ್ಥಿಯಾಗಲೀ (ರಾಮ್‌ನಾಥ್ ಕೋವಿಂದ್), ರಾಜೀನಾಮೆ ನೀಡಿದ ಉಪರಾಷ್ಟ್ರಪತಿ ಧನಕರ್ ಅವರಾಗಲೀ, ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿನ ಮುಖ್ಯಮಂತ್ರಿಗಳು, ರಾಜ್ಯಪಾಲರು ಹಾಗೂ ರಾಜ್ಯಸಭಾ ಚುನಾವಣೆಯ ಅಭ್ಯರ್ಥಿಗಳು... ಈ ಎಲ್ಲವುಗಳಲ್ಲಿ ಬಹುತೇಕ ಆಯ್ಕೆಗಳು ಅಚ್ಚರಿಯದ್ದಾಗಿದ್ದವು. ‘ಚೌಕಟ್ಟಿನಾಚೆಗೆ ಆಲೋಚಿಸಬೇಕು’ ಎನ್ನುವ ಆಯ್ಕೆಯ ವಿಧಾನವನ್ನೇ ಬಿಜೆಪಿ ನಾಯಕತ್ವವು ಉಪರಾಷ್ಟ್ರಪತಿ ಚುನಾವಣೆ ಸಂದರ್ಭದಲ್ಲೂ ಅನುಸರಿಸುವ ಸಾಧ್ಯತೆಯೇ ಹೆಚ್ಚು. ಉಪರಾಷ್ಟ್ರಪತಿ ಸ್ಥಾನದ ಆಯ್ಕೆಗೆ ಅನಿರೀಕ್ಷಿತವಾದ ಹೆಸರು ಕೇಳಿಬರಬಹುದು. ಆದರೆ, ಇತ್ತೀಚಿನ ವಿದ್ಯಮಾನದ ಕಾರಣದಿಂದಾಗಿ, ತನ್ನ ಆಯ್ಕೆಯ ಅಭ್ಯರ್ಥಿ ವಿಶ್ವಾಸಾರ್ಹ ಹಾಗೂ ನಿಷ್ಠಾವಂತ ಆಗಿರಬೇಕು ಎನ್ನುವ ಮಾನದಂಡವನ್ನು ಬಿಜೆಪಿ ನಾಯಕತ್ವ ಅನುಸರಿಸುವುದರಲ್ಲಿ ಅನುಮಾನವಿಲ್ಲ.

ಧನಕರ್ ಅವರ ದಿಢೀರ್ ರಾಜೀನಾಮೆ ಸಂದರ್ಭದಲ್ಲಿ ಸಾಕಷ್ಟು ಚರ್ಚೆಗಳು ನಡೆದವಷ್ಟೇ. ಆ ಸಂದರ್ಭದಲ್ಲಿ ರಾಜಕೀಯ ವಿಶ್ಲೇಷಕರು ಹಲವು ಅಂಶಗಳನ್ನು ಪಟ್ಟಿ ಮಾಡುತ್ತಾ ಹೋದರು. ಆ ಪೈಕಿ ಒಂದು, ವಿರಳವಾದ ವಿದ್ಯಮಾನವೂ ಹಾಗೂ ಈಗಿನ ಬೆಳವಣಿಗೆಗೆ ಪೂರಕವೂ ಆಗಿದೆ. ಧನಕರ್ ಅವರೊಬ್ಬರೇ ವಿವಾದಕ್ಕೆ ಗುರಿಯಾದ ಉಪರಾಷ್ಟ್ರಪತಿ ಅಲ್ಲ ಎನ್ನುವುದೇ ಆ ಅಂಶ. ರಾಧಾಕೃಷ್ಣನ್ ಅವರು ಕೂಡ, ಉಪರಾಷ್ಟ್ರಪತಿ ಆಗಿದ್ದ ಸಂದರ್ಭದಲ್ಲಿ ಸರ್ಕಾರದೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದರು. ಆ ಭಿನ್ನಾಭಿಪ್ರಾಯವನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಲಾಗಿತ್ತು.

ಬಿ.ಡಿ. ಜತ್ತಿ ಅವರು ಉಪರಾಷ್ಟ್ರಪತಿ ಆಗಿದ್ದಾಗ, ಹಂಗಾಮಿ ಪ್ರಧಾನಿಯಾಗಿ ಮೊರಾರ್ಜಿ ದೇಸಾಯಿ ಇದ್ದರು. ಇಬ್ಬರ ನಡುವೆ ಗಂಭೀರ ಸ್ವರೂಪದ ಭಿನ್ನಾಭಿಪ್ರಾಯ ಉಂಟಾಗಿತ್ತು. ಅದೇ ಮೊದಲ ಬಾರಿಗೆ ಕಾಂಗ್ರೆಸ್ ಪಕ್ಷ ಕೇಂದ್ರದಲ್ಲಿ ಅಧಿಕಾರದಲ್ಲಿ ಇರಲಿಲ್ಲ. ಆ ಜಾಗದಲ್ಲಿ ಜನತಾ ಪಕ್ಷ ಅಧಿಕಾರ ಹಿಡಿದಿತ್ತು. ಫಕ್ರುದ್ದೀನ್ ಅಲಿ ಅಹಮದ್ ಅವರು ನಿಧನರಾದ ಕಾರಣ ಹಂಗಾಮಿ ರಾಷ್ಟ್ರಪತಿಯಾಗಿ ಜತ್ತಿ ಅಧಿಕಾರ ಸ್ವೀಕರಿಸಿದ್ದರು. 1977ರ ಏಪ್ರಿಲ್ 30ರಂದು ಪ್ರಧಾನಿ ಹಾಗೂ ರಾಷ್ಟ್ರಪತಿ ನಡುವೆ ಮುಖಾಮುಖಿ ವಾಗ್ವಾದ ನಡೆದಿತ್ತು. ಎಂಟು ರಾಜ್ಯಗಳಲ್ಲಿ ವಿಧಾನಸಭೆಗಳನ್ನು ವಿಸರ್ಜಿಸಿ, ರಾಷ್ಟ್ರಪತಿ ಆಡಳಿತವನ್ನು ಜಾರಿಗೆ ತರಬೇಕು ಎಂದು ಅದಕ್ಕೂ ಒಂದು ತಿಂಗಳ ಹಿಂದಷ್ಟೇ ಅಧಿಕಾರಕ್ಕೆ ಬಂದಿದ್ದ ಮಂತ್ರಿಮಂಡಲ ಶಿಫಾರಸು ಮಾಡಿತ್ತು. ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೋತಿದ್ದರೂ, ಸ್ಥಳೀಯ ಆಡಳಿತದ ಚುಕ್ಕಾಣಿಯನ್ನು ಆ ಪಕ್ಷದವರೇ ಹಿಡಿದಿದ್ದ ರಾಜ್ಯಗಳು ಅವಾಗಿದ್ದವು. ಶಿಫಾರಸಿನ ಅಂಶಗಳು ತಮಗೆ ಸಂಪೂರ್ಣ ಒಪ್ಪಿತವಾಗಿಲ್ಲ ಎನ್ನುವ ಕಾರಣ ನೀಡಿ, ಜತ್ತಿ ಅವರು ಸಹಿ ಹಾಕುವುದಕ್ಕೆ ವಿಳಂಬ ಮಾಡಿದ್ದರು. ಎಂಟು ರಾಜ್ಯಗಳ ವಿಧಾನಸಭೆಗಳನ್ನು ವಿಸರ್ಜಿಸುವ ಘೋಷಣಾ ಪತ್ರಕ್ಕೆ ಸಹಿ ಹಾಕಲು ಆಗಿನ ಪ್ರಧಾನಿ ಮೊರಾರ್ಜಿ ದೇಸಾಯಿ ಅವರು ಹಂಗಾಮಿ ರಾಷ್ಟ್ರಪತಿಗೆ ಗಡುವು ನೀಡಿದ್ದರು. ಒಂದು ವೇಳೆ ನಿಗದಿತ ಅವಧಿಯೊಳಗೆ ಸಹಿ ಹಾಕದೇ ಇದ್ದಲ್ಲಿ, ತಮ್ಮ ಮಂತ್ರಿಮಂಡಲದ ಅಷ್ಟೂ ಸದಸ್ಯರಿಂದ ರಾಜೀನಾಮೆ ಕೊಡಿಸಿ, ಮತ್ತೆ ಲೋಕಸಭಾ ಚುನಾವಣೆಗೆ ಹೋಗುವುದಾಗಿ ಮೊರಾರ್ಜಿ ದೇಸಾಯಿ ಬೆದರಿಕೆ ಒಡ್ಡಿದ್ದರು. ಸಾಕಷ್ಟು ಹಿಂಜರಿಕೆಯ ನಂತರ ಜತ್ತಿ ಅನಿವಾರ್ಯವಾಗಿ ಸಹಿ ಹಾಕಿದ್ದರು.

ಹಮೀದ್ ಅನ್ಸಾರಿ ಅವರು ಎರಡನೇ ಅವಧಿಗೆ ಉಪರಾಷ್ಟ್ರಪತಿ ಆಗಿದ್ದಾಗ (2012–17), ಸರ್ಕಾರ ಹಾಗೂ ಅವರ ನಡುವೆ ಎಲ್ಲವೂ ಸರಿ ಇರಲಿಲ್ಲ. ರಾಜ್ಯಸಭೆಯಲ್ಲಿ ಆ ಕಾಲಘಟ್ಟದಲ್ಲಿ ಮುಖಂಡರು ನಡೆಸಿದ ವಾಗ್ವಾದದ ಒಳಮರ್ಮ ಬಲ್ಲವರಿಗೆ ಆ ತಿಕ್ಕಾಟದ ಸ್ವರೂಪ ಚೆನ್ನಾಗಿಯೇ ತಿಳಿದಿದೆ. ಅಂದಿನ ತಿಕ್ಕಾಟವನ್ನು ಮಾಧ್ಯಮಗಳು ಕೂಡ ವರದಿ ಮಾಡಿದ್ದವು. ಕೆ.ಆರ್. ನಾರಾಯಣನ್, ಕೃಷ್ಣಕಾಂತ್ ಹಾಗೂ ಭೈರೋನ್ ಸಿಂಗ್ ಶೆಖಾವತ್ ಅವರು ಉಪರಾಷ್ಟ್ರಪತಿಗಳಾಗಿ ಕಾರ್ಯ ನಿರ್ವಹಿಸುವಾಗ, ಅವರನ್ನು ಆಯ್ಕೆ ಮಾಡಿದ ಪಕ್ಷಗಳು ಅಧಿಕಾರದಲ್ಲಿ ಇರಲಿಲ್ಲ. ಆದರೂ ಆಡಳಿತ ನಿರ್ವಹಣೆ ಸುಗಮವಾಗಿ ಸಾಗಿದ್ದ ಉದಾಹರಣೆಯೂ ನಮ್ಮ ಮುಂದಿದೆ.

ಧನಕರ್ ಅವರ ರಾಜೀನಾಮೆ ಬಗ್ಗೆ ಮತ್ತೊಂದು ಮಾತು. ಕೇಂದ್ರ ಸರ್ಕಾರ ಹಾಗೂ ಉಪರಾಷ್ಟ್ರಪತಿ ನಡುವೆ ದೀರ್ಘಕಾಲದಿಂದ ಜಮೆಯಾಗಿದ್ದ ಸಮಸ್ಯೆಯ ಸಿಕ್ಕುಗಳು ಧನಕರ್ ಅವರು ರಾಜೀನಾಮೆ ನೀಡಿದ ದಿನ ಬಹಿರಂಗಗೊಂಡಿತಷ್ಟೆ. ಪದೇ ಪದೇ ವಿವಾದಾತ್ಮಕ ಹೇಳಿಕೆಗಳನ್ನು ನೀಡುವ ಮೂಲಕ, ಉಪರಾಷ್ಟ್ರಪತಿ ಅವರು ಜನರ ಹಾಗೂ ಮಾಧ್ಯಮಗಳ ಗಮನವನ್ನು ತಮ್ಮತ್ತ ಸೆಳೆದುಕೊಂಡಿದ್ದರು. ರಾಜ್ಯಸಭೆಯಲ್ಲಿ ಕೇಳಿಬರುತ್ತಿದ್ದ ನಿರ್ಣಯಗಳ ಮಂಡನೆಗೆ ಅನುಮತಿ ನೀಡುವ ಅಥವಾ ನಿರಾಕರಿಸುವ ವಿಷಯದಲ್ಲಿ ಅವರು ನಡೆದುಕೊಂಡ ರೀತಿಯೂ ಸರ್ಕಾರದೊಟ್ಟಿಗೆ ಭಿನ್ನಾಭಿಪ್ರಾಯ ದಟ್ಟವಾಗಲು ಇನ್ನೊಂದು ಕಾರಣ. ವಿಪಕ್ಷಗಳ ಮೂಲಕ ಸಮಸ್ಯೆ ಬಗೆಹರಿಸುವ ಯತ್ನವನ್ನು ಅವರು ನಡೆಸಿದರಾದರೂ, ಆ ವೇಳೆಗೆ ಧನಕರ್ ಪಕ್ಷದ ವಿಶ್ವಾಸಾರ್ಹತೆ ಕಳೆದುಕೊಂಡು ಆಗಿತ್ತು. ಹೊಸ ಉಪರಾಷ್ಟ್ರಪತಿ ಸ್ಥಾನಕ್ಕೆ ಅಭ್ಯರ್ಥಿಯನ್ನು ಆಯ್ಕೆ ಮಾಡುವಾಗ ಆಡಳಿತಾರೂಢ ಪಕ್ಷವು ಈ ಬೆಳವಣಿಗೆಯನ್ನು ಗಮನದಲ್ಲಿ ಇಟ್ಟುಕೊಂಡೇ ಹೆಜ್ಜೆ ಇಡುವುದರಲ್ಲಿ ಅನುಮಾನ ಬೇಕಿಲ್ಲ.





## ವಾಚಕರ ವಾಣಿ

### ಮಕ್ಕಳಿಗೆ ಜವಾಬ್ದಾರಿ ಹೊರಿಸಬೇಡಿ

**79ನೇ** ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮಕ್ಕೆ ಕೆಲವೇ ದಿನಗಳು ಉಳಿದಿವೆ. ಕ್ರೀಡಾಂಗಣದ ತುಂಬೆಲ್ಲಾ ತ್ರಿವರ್ಣ ಧ್ವಜ ಹಿಡಿದು ಮಕ್ಕಳು ಓಡಾಡುವುದನ್ನು ಕಂಡು ಆ ದಿನ ಪೋಷಕರೆಲ್ಲರೂ ತಮ್ಮ ಬಾಲ್ಯದ ಸುಂದರ ದಿನಗಳನ್ನು ನೆನೆದು ಮಕ್ಕಳೊಂದಿಗೆ ಮಕ್ಕಳಾಗಿ ಬಿಡುತ್ತೇವೆ.

ಆ ದಿನ ವಿದ್ಯಾರ್ಥಿ ನಿಲಯ, ಶಾಲಾ ಕಟ್ಟಡ, ಸರ್ಕಾರಿ ಕಚೇರಿ, ಸಾರ್ವಜನಿಕ ಕಟ್ಟಡಗಳ ಮೇಲೆ ಹಾಗೂ ಎತ್ತರದ ಕಂಬಕ್ಕೆ ಧ್ವಜ ಕಟ್ಟುವಾಗ ಬಹಳಷ್ಟು ಎಚ್ಚರಿಕೆ ಅಗತ್ಯ. ಕಟ್ಟಡದ ಮೇಲೆ ಹೆಚ್ಚು ವಿದ್ಯುತ್ ಪ್ರವಹಿಸುವ ತಂತಿಗಳು ಹಾದು ಹೋಗಿರುತ್ತವೆ. ವಿದ್ಯಾರ್ಥಿ ನಿಲಯದ ಮೇಲ್ವಿಚಾರಕರು, ಶಾಲಾ ಮುಖ್ಯಸ್ಥರು, ಕಟ್ಟಡದ ಮಾಲೀಕರು ಯಾವುದೇ ಅವಘಡ ಸಂಭವಿಸದಂತೆ ಎಚ್ಚರಿಕೆ ವಹಿಸಬೇಕು. ಧ್ವಜ ಕಟ್ಟುವ ಕೆಲಸವನ್ನು ಶಾಲಾ ಮಕ್ಕಳಿಗೆ ವಹಿಸಬಾರದು. ಸರ್ಕಾರವೂ ಈ ಬಗ್ಗೆ ಸುತ್ತೋಲೆ ಹೊರಡಿಸಬೇಕಿದೆ.

**ಮಂಜುನಾಥ್ ಪಾಯಣ್ಣ,** ಮಂಡ್ಯ

### ಅಪೆಕ್ಸ್ ನೇಮಕಾತಿ ವಿಳಂಬ ಏಕೆ?

**ಕಳೆದ** ವರ್ಷದ ಸೆಪ್ಟೆಂಬರ್ 1ರಂದು ಅಪೆಕ್ಸ್ ಬ್ಯಾಂಕ್‌ನ ಸಹಾಯಕರ ಹುದ್ದೆಗಳ ನೇಮಕಾತಿಗೆ ಲಿಖಿತ ಪರೀಕ್ಷೆ ನಡೆಯಿತು. ಅಂತಿಮ ಪರಿಷ್ಕೃತ ಫಲಿತಾಂಶ ಪಟ್ಟಿಯನ್ನು ಡಿಸೆಂಬರ್‌ನಲ್ಲೇ ಪ್ರಕಟಿಸಲಾಗಿದೆ. 30 ಅಂಕಗಳ ವೈಯಕ್ತಿಕ ಸಂದರ್ಶನ ನಡೆಸುವುದಕ್ಕಾಗಿ ಇಲ್ಲಿಯವರೆಗೂ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಬಿಡುಗಡೆ ಮಾಡಿಲ್ಲ. ಅಪೆಕ್ಸ್ ಬ್ಯಾಂಕ್ ಆಡಳಿತವು ನಿರುದ್ಯೋಗಿ ಪದವೀಧರರ ಜೀವನದ ಜೊತೆ ಚೆಲ್ಲಾಟ ಆಡಬಾರದು. ವಿಳಂಬ ಧೋರಣೆ ನಿಲ್ಲಿಸಿ, ಆದಷ್ಟು ಬೇಗ ಆಯ್ಕೆ ಪ್ರಕ್ರಿಯೆ ಚುರುಕುಗೊಳಿಸಬೇಕು.

**ಎಸ್.ಎನ್. ರಮೇಶ್,** ಸಾತನೂರು

### ‘ಸುಶ್ರೀ’ ಹಿಂದಿ ಗೌರವ ಸೂಚಕ ಪದ

**ವಂದೇ** ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಚಾಲನೆ ನೀಡುವ ಸಮಾರಂಭದ ಜಾಹೀರಾತಿನಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರ ಹೆಸರಿನ ಮುಂದೆ ಹೊಸದಾಗಿ ‘ಸುಶ್ರೀ’ ಎನ್ನುವ ಉಪಾಧಿ ಇರುವ ಬಗ್ಗೆ ಚರ್ಚೆಯಾಗುತ್ತಿದೆ. ಕನ್ನಡದಲ್ಲಿ ಕುಮಾರಿ/ ಶ್ರೀಮತಿ ಎಂದು ಬಳಸುವಂತೆ, ಹಿಂದಿಯಲ್ಲಿ ಮಹಿಳೆಗೆ ಗೌರವಸೂಚಕವಾಗಿ ‘ಸುಶ್ರೀ’ ಎಂದು ಬಳಸಲಾಗುತ್ತದೆ. ಶೋಭಾ ಅವರು ಕೇಂದ್ರ ಸಚಿವೆ ಆಗಿರುವುದರಿಂದ, ಹಿಂದಿ ಭಾಷೆಯಲ್ಲಿನ ಈ ಪದವನ್ನು ಬಳಸಲಾಗಿದೆ.

**ಪ್ರಕಾಶ್ ಮಲ್ಕಿ ಒಡೆಯರ್,** ಹೂವಿನ ಹಡಗಲಿ

### ಕ್ರೀಡಾ ಪ್ರತಿಭೆಗಳಿಗೆ ಉತ್ತೇಜನ ಅಗತ್ಯ

**ಉದ್ಯೋಗ** ಅರಸಿ ಕೇರಳಕ್ಕೆ ತೆರಳಿದ್ದ ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಮುರುಡಿ ತಾಂಡಾದ ಯುವಕ ರಮೇಶ್ ಬೂದಿಹಾಳ, ಚೆನ್ನೈನಲ್ಲಿ ನಡೆದ ಏಷ್ಯನ್ ಸರ್ಫಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗಳಿಸಿ ಚಾರಿತ್ರಿಕ ಸಾಧನೆ ಮೆರೆದಿದ್ದಾರೆ (ಪ್ರ.ವಾ., ಆಗಸ್ಟ್ 11).

ಹೊಟ್ಟೆಪಾಡಿಗಾಗಿ ಕರ್ನಾಟಕದಿಂದ ಕೇರಳಕ್ಕೆ ವಲಸೆ ಹೋಗಿ ಕೂಲಿ ಕೆಲಸ ಮಾಡುತ್ತಿರುವ ಬಡ ಕುಟುಂಬದ ಹುಡುಗನೊಬ್ಬ ಅಂತರರಾಷ್ಟ್ರೀಯ ಸರ್ಫಿಂಗ್ ಕ್ರೀಡೆಯಲ್ಲಿ ಭಾಗವಹಿಸಿ ಗೆದ್ದಿರುವುದು ಹೆಮ್ಮೆಯ ಸಂಗತಿ. ಪ್ರತಿಭೆಗೆ ಪಾರವಿಲ್ಲ. ಸರ್ಕಾರ ಇಂಥ ಕ್ರೀಡಾ ಪ್ರತಿಭೆಗಳನ್ನು ಗುರ್ತಿಸಿ ಉತ್ತೇಜನ ನೀಡಬೇಕಿದೆ.

**ಪ್ರೊ. ಶಿವರಾಮಯ್ಯ,** ಬೆಂಗಳೂರು

### ನಾಯಕರ ಕಚ್ಚಾಟ ಅರ್ಥಹೀನ

**ಕಳೆದ** ವರ್ಷದ ಆಗಸ್ಟ್ 1ರಂದು ಸುಪ್ರೀಂ ಕೋರ್ಟ್‌ನ ಸಾಂವಿಧಾನಿಕ ಪೀಠ ನೀಡಿದ ತೀರ್ಪು ಆಧರಿಸಿ ರಾಜ್ಯ ಸರ್ಕಾರ ಮುತುವರ್ಜಿಯಿಂದ ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಸಮೀಕ್ಷೆಗೆ ಕ್ರಮಕೈಗೊಂಡಿತ್ತು. ಈಗ ವರದಿಯು ಸರ್ಕಾರದ ಕೈಸೇರಿದೆ. ವಿಧಾನಸಭೆ ಮತ್ತು ವಿಧಾನ ಪರಿಷತ್ ಸಾಮಾಜಿಕ ನ್ಯಾಯದ ಜೀವಾಳವಾಗಿವೆ. ಈ ಮೊದಲು ಪರಿಶಿಷ್ಟ ಜಾತಿಯಲ್ಲಿರುವ ಸ್ಪೃಶ್ಯ ಜಾತಿಗಳ ನಾಯಕರು ಒಳಮೀಸಲಾತಿ ಜಾರಿಗೆ ಅಡ್ಡಿಪಡಿಸುತ್ತಿದ್ದರು.

ಈಗ ಅಸ್ಪೃಶ್ಯ ಜಾತಿಯ ನಾಯಕರು ಒಳ ಮೀಸಲಾತಿ ಸಂಬಂಧ ಪರಸ್ಪರ ಕಿತ್ತಾಡುತ್ತಿರುವುದು ದುರದೃಷ್ಟಕರ. ಸದನದಲ್ಲಿ ಪಕ್ಷಾತೀತವಾಗಿ ಹಾಗೂ ಆರೋಗ್ಯಕರವಾಗಿ ಚರ್ಚಿಸಿ, ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಸಲ್ಲಿಸಿರುವ ವರದಿಯ ಜಾರಿಗೆ ಸರ್ಕಾರ ಕ್ರಮವಹಿಸಬೇಕಿದೆ.

**ಎಂ. ಆಂಜನೇಯ,** ಹಾವೇರಿ

### ಪ್ರಾಧ್ಯಾಪಕರ ಬಡ್ತಿ ಚರ್ಚೆಗೆ ಗ್ರಾಸ

**ರಾಜ್ಯದ** ವಿಶ್ವವಿದ್ಯಾಲಯಗಳು ಶೈಕ್ಷಣಿಕ ವಿಚಾರಗಳಿಗಿಂತ ಹೆಚ್ಚಾಗಿ ಭ್ರಷ್ಟಾಚಾರ, ಜಾತೀಯತೆ ಮತ್ತು ಹಗರಣಗಳ ಚರ್ಚೆಯ ಕೇಂದ್ರಬಿಂದುವಾಗುತ್ತಿವೆ. ಪ್ರಸ್ತುತ ಬಳ್ಳಾರಿಯ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯವು ಪ್ರಾಧ್ಯಾಪಕರ ಬಡ್ತಿ ಸಂಬಂಧ ಚರ್ಚೆಗೆ ಗ್ರಾಸವಾಗಿದೆ (ಪ್ರ.ವಾ., ಆಗಸ್ಟ್ 11).

ಬಡ್ತಿ ಪಟ್ಟಿಯಲ್ಲಿ ಇರುವವರಲ್ಲಿ ಕೆಲವರು ವಂಚನೆ, ನಕಲಿ ಪ್ರಮಾಣ ಪತ್ರ ಮತ್ತು ಭ್ರಷ್ಟಾಚಾರದಂತಹ ಗುರುತರ ಆರೋಪಗಳನ್ನು ಎದುರಿಸುತ್ತಿರುವವರೇ ಆಗಿದ್ದಾರೆ. ವಿಶ್ವವಿದ್ಯಾಲಯ ಬಡ್ತಿ ಪ್ರಕ್ರಿಯೆಗೆ ಚಾಲನೆ ನೀಡಿದೆಯೆಂದರೆ, ಇವರೆಲ್ಲರಿಗೂ ಬಡ್ತಿ ಲಭಿಸುವುದರಲ್ಲಿ ಅನುಮಾನವಿಲ್ಲ. ಈಗಾಗಲೇ, ಸಂದರ್ಶನದ ನೆಪದಲ್ಲಿ ಒಬ್ಬೊಬ್ಬರನ್ನೇ ಕರೆದು ಸಂದರ್ಶನ ಪೂರ್ಣಗೊಳಿಸಲಾಗಿದೆ. ಉಳಿದಿರುವುದು ನೆಪ ಮಾತ್ರದ ಬಡ್ತಿ ಸಭೆಯಷ್ಟೇ. ಇದನ್ನು ಪ್ರಶ್ನಿಸುವ ಮತ್ತು ಪರಿಶೀಲಿಸುವ ನಿಯಮಗಳು ದುರ್ಬಲ ಆಗಿರುವುದರಿಂದ ಭ್ರಷ್ಟಾಚಾರದಿಂದ ಹೊರಬರುವುದು ಸುಲಭ ಪ್ರಕ್ರಿಯೆಯಷ್ಟೆ.

**ತಿಮ್ಮೇಶ ಮುಸ್ಟೂರು,** ಜಗಳೂರು

**ಚುರುಮುರಿ**



### ಮತಗಳ್ಳತನ ಮಹಾತ್ಮೆ

• ಡಿ.ಎಸ್. ಲಿಂಗರಾಜು

**ಶುಕ್ಲಾಂಬರಧರಂ** ವಿಷ್ಣುಂ ಚತುರ್ಭುಜಂ. ಓಂನಮೋ ಅಮಿತಾಯ, ರಾಜನಾಥಾಯ, ರಾಗಾಯ ಸೋನಿಯಾಯ ಖರ್ಗಾಯ ನಮಃ. ಓಂ ಗುರುಪರಂಪರಾಯ. ಈ ದಿನದ ಕೀರ್ತನೆಯಲ್ಲಿ ಮತಮಾಯಾದೇವಿಯು ತನ್ನ ಪ್ರಭಾವವನ್ನು ತೋರಿದ ಕಥೆಯನ್ನು ಕೇಳೋಣ. ಈ ಕಥೆಯನ್ನು ‘ಬೂತುಚೇಷ್ಟೆ’ ಎಂದು ಕೂಡಾ ಕರೆಯುವುದುಂಟು.

ಧರಣಿ ಮಂಡಲ ಮಧ್ಯದಲ್ಲಿರುವ ಕರ್ನಾಟಕ ದೇಶದಲ್ಲಿ ‘ಮಾಯೆ ತುಂಬಿದೆ ಜಗದಲಿ ಮತಮಾಯೆ’ (ಹಾಡು). ರಾಜ್ಯದ ಕೈ ಪಡೆಯ ಅರಸನು ತನ್ನ ಒಡ್ಡೋಲಗದಲ್ಲಿ ‘ನನ್ನ ರಾಜ್ಯದಲ್ಲಿ ಸಕಲ ಪ್ರಜೆಗಳೂ ಕ್ಷೇಮವೇ?’ ಎನ್ನಲಾಗಿ ಮಂತ್ರಿಗಳು, ‘ತಮ್ಮ ಗ್ಯಾರಂಟಿಗಳಿಂದಾಗಿ ಜನರು ಸಂತೋಷದಲ್ಲಿ ಮಗ್ನರಾಗಿದ್ದಾರೆ ಮಹಾಪ್ರಭೋ’ ಎಂದು ಗುಮ್ಮಿದರು. ಹೀಗಿರುವಾಗ ನಿಧಿ ನಿಯಮಗಳಿಗೆ ಬದ್ಧನಾದ ರಾಗಾ ದೇವತೆಯು ‘ಕೈವಶವಾಗಬೇಕಾಗಿದ್ದ ಮತಗಳನ್ನೆಲ್ಲಾ ಯಾರೋ ಸೆರೆ ಹಿಡಿದು ಕದ್ದುಬಿಟ್ಟಿದ್ದಾರೆ. ಇದರಿಂದ ನಮ್ಮ ಸೀಟುಗಳು ನೆಗೆದುಬಿದ್ದಿವೆ’ ಅಂತ ಹುಯಿಲೆಬ್ಬಿಸಿದ.

‘ಏನೂ, ದಿಟ್ಟತನದಿಂ ಕಟ್ಟಿದ ಮತಗಳ ಅಪಹರಿಸಿದಿರಾ, ಹೇಡಿಗಳಾ?’ ಎಂದು ಕೈಪಟುಗಳು ಹಾಡುತ್ತಾ ಪೌರುಷ ತೋರಿದರು.

ರಾಗಾ ದೇವತೆಯಿಂದ ಮತಯುದ್ಧ ಘೋಷಣೆ ಆಯ್ತು. ಯುದ್ಧರಂಗದಲ್ಲಿ ಎದುರಿಗೆ ಘಟಾನುಘಟಿಗಳು ಘೋರ ಕಮಲವ್ಯೂಹವನ್ನು ನಿರ್ಮಿಸಿ ನಿಂತಿದ್ದಾರೆ. ‘ಕಿಡಿಗಳನುಗುಳುತೆ ಕಮಲದ ಪಡೆಯ ಪಿಡಿದರೆ ಸುಡುವೆನು? ಮಹದೇವಪುರದ ಕೋಣೆಯಲಿ ಮತಗಳ ಸವಿದವರಾರು?’ ಎಂದ ಕಮಲ ಕಲಿಗಳ ಮಾತಿಗೆ ಉತ್ತರವಿರಲಿಲ್ಲ.

‘ರೊಕ್ಕವ ಕೊಡದೇ ಆರಿಸಿ ಬಂದ ನೀತಿವಂತ ಎಲ್ಲಿಹನು?’ ಎಂದು ಹಾಡುತ್ತಾ ಬಂದ ವಿದುರನ ನೀತಿ ಮಾತಿಗೆ ಭೀತಿಯಿಂದ ಯುದ್ಧ ಕಲಿಗಳೆಲ್ಲಾ ಓಟ ಕಿತ್ತರು ಎಂಬಲ್ಲಿಗೆ ಮತಗಳ್ಳತನದ ಪ್ರಸಂಗ ಮುಕ್ತಾಯವಾಯಿತು.

ಈ ಕಥೆಯನ್ನು ಕೇಳಿದ ನಕಲಿ ಮತಗಳ ಸೃಷ್ಟಿಕರ್ತರೆಲ್ಲರಿಗೂ ಮಂಗಳವೂ ಶುಭಮಂಗಳವೂ. ಮತವ ಕದ್ದವರಿಗೆ ಬಹುಮತ ಕೊಡುವ ಮಂಗಳ ಮತರಾಜಗೆ, ಮಂಗಳ ಬೂತುರಾಜಗೆ ಮಂಗಳವೂ. ಇಲ್ಲಿಗೆ ಮತದಾರರ ಕಥೆ ಗೋವಿಂದಾ, ಗೋವಿಂದ!

**ಸಂಗತ**

## ಹೊರಳು ಹಾದಿಯಲ್ಲಿ ಗ್ರಂಥಪಾಲಕ

ಗ್ರಂಥಪಾಲಕ ಹುದ್ದೆ ಸಂಕ್ರಮಣ ಅವಸ್ಥೆಯಲ್ಲಿದೆ. ಈ ಹುದ್ದೆ ಅಪ್ರಸ್ತುತ ಎನ್ನುವಂತೆ ಆಗಿರುವುದರಲ್ಲಿ ಬದಲಾಗಿರುವ ಕಾಲದೊಂದಿಗೆ ಗ್ರಂಥಪಾಲಕರ ಪಾತ್ರವೂ ಇದೆ.

• ರಾಜಕುಮಾರ ಕುಲಕರ್ಣಿ

**ಹತ್ತು** ವರ್ಷಗಳ ಹಿಂದೆ ಪ್ರತಿಷ್ಠಿತ ಸಾಫ್ಟ್‌ವೇರ್ ಸಂಸ್ಥೆಯಲ್ಲಿ ಗ್ರಂಥಪಾಲಕ ಹುದ್ದೆಗೆ ನೇಮಕಗೊಂಡಿದ್ದ ನನ್ನ ಸ್ನೇಹಿತರು, ಈಗ ಅದೇ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗಕ್ಕೆ ವರ್ಗಾವಣೆಗೊಂಡಿದ್ದಾರೆ. ಹೊಸ ಪರಿಸರಕ್ಕೆ ಅವರೀಗ ಹೊಂದಿಕೊಳ್ಳಬೇಕಾಗಿದೆ. ತಮ್ಮ ಬದಲಾದ ಕಾರ್ಯಕ್ಷೇತ್ರವನ್ನು ಕುರಿತು ಅವರು ‘ಗ್ರಂಥಪಾಲಕ ವೃತ್ತಿ ಹೊರಳು ಹಾದಿಯಲ್ಲಿರುವುದರ ಸಂಕೇತ’ವಿದು ಎನ್ನುತ್ತಾರೆ.

ಸಾಫ್ಟ್‌ವೇರ್ ಸಂಸ್ಥೆಗಳು ಮಾತ್ರವಲ್ಲದೆ, ಶಿಕ್ಷಣ ಸಂಸ್ಥೆಗಳಲ್ಲೂ ಈ ಬದಲಾವಣೆಯನ್ನು ಕಾಣಬಹುದು. ಪದವಿ ಮಹಾವಿದ್ಯಾಲಯಗಳಲ್ಲಿ ಬೋಧಕರಿಗೆ ಸಮನಾಗಿ ಯುಜಿಸಿ ವೇತನ ಶ್ರೇಣಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರಂಥಪಾಲಕರು, ಗ್ರಂಥಾಲಯಗಳಲ್ಲಿ ಕಾರ್ಯ ನಿರ್ವಹಿಸುವುದಕ್ಕಿಂತ ಆಡಳಿತಾತ್ಮಕ ಕೆಲಸಗಳನ್ನು ಮಾಡುವುದೇ ಹೆಚ್ಚು. ವಿದ್ಯಾರ್ಥಿಗಳ ಪ್ರವೇಶ ದಾಖಲಾತಿ, ಆದಾಯ ಹಾಗೂ ಖರ್ಚಿನ ಲೆಕ್ಕ ಬರವಣಿಗೆ ಮತ್ತು ಪರೀಕ್ಷೆ ನಿರ್ವಹಣೆಯಂತಹ ಕೆಲಸಗಳಲ್ಲಿ ಅವರನ್ನು ತೊಡಗಿಸಲಾಗುತ್ತಿದೆ. ಹಾಗಾಗಿ, ಅದೆಷ್ಟೋ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಗ್ರಂಥಾಲಯಗಳು ಪೂರ್ಣ ಪ್ರಮಾಣದಲ್ಲಿ ಸ್ಥಾಪನೆಯಾಗಿಲ್ಲ. ಒಂದೆರಡು ಅಲ್ಮೆರಾಗಳಲ್ಲಿ ಪುಸ್ತಕಗಳನ್ನಿಟ್ಟು, ಅದನ್ನೇ ಗ್ರಂಥಾಲಯವೆಂದು ಕರೆಯಲಾಗುತ್ತಿದೆ.

ಸರ್ಕಾರದ ಪದವಿ ಮತ್ತು ಪದವಿಪೂರ್ವ ಶಿಕ್ಷಣ ಇಲಾಖೆಗಳಲ್ಲಿ ಬೇರೆ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದವರು ವೇತನ ಶ್ರೇಣಿಯ ಆಕರ್ಷಣೆಯಿಂದಾಗಿ ತಮ್ಮ ಹಿಂದಿನ ಸೇವಾವಧಿ ಸಮೇತ ಗ್ರಂಥಪಾಲಕರಾಗಿ ನೇಮಕಗೊಂಡಿರುವುದಕ್ಕೆ ಉದಾಹರಣೆಗಳಿವೆ. ಹೀಗೆ ನೇಮಕಗೊಳ್ಳುವ ಗ್ರಂಥಪಾಲಕರು ಮುಕ್ತ ವಿಶ್ವವಿದ್ಯಾಲಯಗಳಿಂದ ‘ಗ್ರಂಥಾಲಯ ವಿಜ್ಞಾನ ಪದವಿ’ ಪಡೆದಿರುತ್ತಾರೆ. ಹೆಚ್ಚಿನ ಸಂಬಳ ಮತ್ತು ಕಡಿಮೆ ಒತ್ತಡದ ಕೆಲಸದ ಆಕರ್ಷಣೆಯಿಂದಾಗಿ ಗ್ರಂಥಪಾಲಕರಾಗಿ ನಿಯುಕ್ತಿಗೊಳ್ಳುತ್ತಿರುವವರಿಂದ ವೃತ್ತಿಯ ಬೆಳವಣಿಗೆಯನ್ನು ನಿರೀಕ್ಷಿಸುವುದು ಸಾಧ್ಯವಿಲ್ಲ.



ಈ ಹಿಂದೆ ರಾಜ್ಯದಲ್ಲಿ ಪದವಿಪೂರ್ವ ಕಾಲೇಜುಗಳಲ್ಲಿ ಗ್ರಂಥಾಲಯ ವಿಜ್ಞಾನದ ವೃತ್ತಿಶಿಕ್ಷಣ ಕೋರ್ಸ್ ಜಾರಿಯಲ್ಲಿತ್ತು. ಎರಡು ವರ್ಷ ಅವಧಿಯ ಈ ವೃತ್ತಿಪರ ಕೋರ್ಸ್ ಅನ್ನು ಪದವಿಪೂರ್ವ ಶಿಕ್ಷಣಕ್ಕೆ ತತ್ಸಮಾನವೆಂದು ಪರಿಗಣಿಸಲಾಗುತ್ತಿತ್ತು. ವಿಪರ್ಯಾಸವೆಂದರೆ, ಸ್ವಯಂ ಉದ್ಯೋಗಕ್ಕೆ ಅವಕಾಶ ಕಲ್ಪಿಸಬೇಕಿದ್ದ ಈ ವೃತ್ತಿಪರ ಕೋರ್ಸ್ ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಮುಂದೆ ಶಿಕ್ಷಕರ ತರಬೇತಿ ಕೋರ್ಸಿಗೆ ಪ್ರವೇಶ ಪಡೆದು ಶಿಕ್ಷಕರಾಗಿ ನಿಯುಕ್ತಿಗೊಳ್ಳುತ್ತಿದ್ದರು. ನಂತರದ ದಿನಗಳಲ್ಲಿ ವೃತ್ತಿಪರ ಕೋರ್ಸ್‌ಗಳ ವಿದ್ಯಾರ್ಥಿಗಳು ಶಿಕ್ಷಕರ ತರಬೇತಿ ಕೋರ್ಸಿಗೆ ಪ್ರವೇಶ ಪಡೆಯಲು ಅನರ್ಹರೆಂದು ಸರ್ಕಾರ ನಿಯಮ ಜಾರಿಗೊಳಿಸಿತು. ಪರಿಣಾಮವಾಗಿ, ಗ್ರಂಥಾಲಯ ವಿಜ್ಞಾನದ ವೃತ್ತಿಪರ ಕೋರ್ಸಿನ ಪ್ರವೇಶಕ್ಕೆ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಇಳಿಮುಖವಾಯಿತು. ನಂತರದಲ್ಲಿ ಸರ್ಕಾರ, ಪದವಿಪೂರ್ವ ಹಂತದಲ್ಲಿ ಗ್ರಂಥಾಲಯ ವಿಜ್ಞಾನ ಸೇರಿದಂತೆ ಎಲ್ಲ ವೃತ್ತಿಪರ ಕೋರ್ಸ್‌ಗಳನ್ನು ತೆಗೆದುಹಾಕಿತು.

ಎರಡು ದಶಕಗಳ ಕಾಲ ಗ್ರಂಥಾಲಯ ವಿಜ್ಞಾನವನ್ನು ವೃತ್ತಿ ಶಿಕ್ಷಣದ ಭಾಗವಾಗಿಸಿದ್ದರಿಂದ ಆದ ಪ್ರಯೋಜನವಾದರೂ ಏನು? ವಿದ್ಯಾರ್ಥಿಗಳು ಖಾಸಗಿ ಗ್ರಂಥಾಲಯಗಳನ್ನು ಸ್ಥಾಪಿಸಿ ಸ್ವಯಂ ಉದ್ಯೋಗ ಹೊಂದಲು ಈ ಕೋರ್ಸ್ ಬಳಕೆಯಾಗಬೇಕಿತ್ತು. ಖಾಸಗಿ ಗ್ರಂಥಾಲಯಗಳ ಬಳಕೆಯೇ ಸೀಮಿತವಾಗಿರುವ ಸನ್ನಿವೇಶವಿರುವಾಗ ಗ್ರಂಥಾಲಯ ವಿಜ್ಞಾನವನ್ನು ವೃತ್ತಿಪರ ಕೋರ್ಸ್ ಎಂದು ಪರಿಗಣಿಸಿದ್ದೇ ತಪ್ಪು. ಗ್ರಂಥಾಲಯ ವಿಜ್ಞಾನ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಶಿಕ್ಷಕರ ತರಬೇತಿ ಕೋರ್ಸ್‌ಗೆ ಆಯ್ಕೆಯಾಗಿ ಮುಂದಿನ ದಿನಗಳಲ್ಲಿ ಶಿಕ್ಷಕರೆಂದು ನೇಮಕಗೊಂಡರೆ ವಿನಾ ಗ್ರಂಥಾಲಯ ಕ್ಷೇತ್ರಕ್ಕಾದ ಉಪಯೋಗ ಶೂನ್ಯ.

ಒಂದೇ ಪ್ರಕಾರದ ಪಠ್ಯಕ್ರಮವನ್ನು ಅಭ್ಯಾಸ ಮಾಡಿದವರು ಸಾರ್ವಜನಿಕ ಗ್ರಂಥಾಲಯಗಳು ಮಾತ್ರವಲ್ಲದೆ, ಶಾಲಾ– ಕಾಲೇಜು ಹಾಗೂ ವೈದ್ಯಕೀಯ, ದಂತ ವೈದ್ಯಕೀಯ, ಎಂಜಿನಿಯರಿಂಗ್ ಕಾಲೇಜುಗಳು, ಸಾಫ್ಟ್‌ವೇರ್ ಸಂಸ್ಥೆಗಳು ಮತ್ತು ಸಂಶೋಧನಾ ಸಂಸ್ಥೆಗಳಲ್ಲಿ ಗ್ರಂಥಪಾಲಕರೆಂದು ನೇಮಕಗೊಳ್ಳುತ್ತಿದ್ದಾರೆ. ನೇಮಕಾತಿ ನಂತರ ಆಯಾ ಸಂಸ್ಥೆಯ ವಿಷಯ ವೈವಿಧ್ಯಕ್ಕೆ ಅನುಗುಣವಾಗಿ ಗ್ರಂಥಪಾಲಕರು ರೂಪುಗೊಳ್ಳಬೇಕಾಗಿದೆ. ಇದು ಗ್ರಂಥಪಾಲಕ ವೃತ್ತಿ ಬೆಳವಣಿಗೆಗೆ ತೊಡಕಾಗಿದೆ. ವಿಶ್ವವಿದ್ಯಾಲಯಗಳಲ್ಲಿನ ಗ್ರಂಥಾಲಯ ವಿಜ್ಞಾನದ ಪಠ್ಯಕ್ರಮ ವಿಶೇಷ ಮತ್ತು ನಿಷ್ಣಾತ ಗ್ರಂಥಪಾಲಕರನ್ನು ರೂಪಿಸುವಂತಿರಬೇಕು.

ತಂತ್ರಜ್ಞಾನದ ಬೆಳವಣಿಗೆಯಿಂದಾಗಿ ಇಂದು ಗ್ರಂಥಪಾಲಕರ ಕಾರ್ಯವೈಖರಿಯಲ್ಲಿ ಬದಲಾವಣೆಗಳಾಗಿವೆ. ಈ ಮೊದಲಿನಂತೆ ಪುಸ್ತಕಗಳ ಖರೀದಿ, ದಾಖಲಾತಿ, ಜೋಡಣೆ ಮತ್ತು ಓದುಗರ ಸಮೂಹಕ್ಕೆ ಒದಗಿಸುವುದು ಮಾತ್ರ ಗ್ರಂಥಪಾಲಕರ ಕೆಲಸಗಳಾಗಿ ಉಳಿದಿಲ್ಲ. ತಂತ್ರಜ್ಞಾನದ ಸಹಾಯದಿಂದ ಲೇಖನಗಳ ಶೋಧನೆ, ಸಂಶೋಧನಾ ಲೇಖನಗಳಲ್ಲಿನ ನಕಲು ಪತ್ತೆ, ಗ್ರಂಥಸೂಚಿ ರಚನೆ, ಎಲೆಕ್ಟ್ರಾನಿಕ್ ಪುಸ್ತಕಗಳ ನಿರ್ವಹಣೆ, ಇತ್ಯಾದಿ ಕೆಲಸಗಳಲ್ಲಿ ಅವರು ತೊಡಗಿಸಿಕೊಳ್ಳಬೇಕಾಗಿದೆ. ನಿವೃತ್ತಿ ಅಂಚಿನಲ್ಲಿರುವ ಗ್ರಂಥಪಾಲಕರಿಗೆ ಈ ಎಲ್ಲ ಕಾರ್ಯಗಳು ಹೊರೆಯಾಗಿವೆ. ತಂತ್ರಜ್ಞಾನದ ಮೂಲಕ ಕುಳಿತಲ್ಲೇ ಅಗತ್ಯದ ಮಾಹಿತಿ ಪಡೆಯುತ್ತಿರುವ ಓದುಗರು ಗ್ರಂಥಾಲಯಗಳಿಗೆ ವಿಮುಖರಾಗುತ್ತಿರುವುದರಿಂದ ಯುವ ಗ್ರಂಥಪಾಲಕರಿಗೆ ವೃತ್ತಿಯ ಅಸ್ತಿತ್ವದ ಪ್ರಶ್ನೆ ಎದುರಾಗಿದೆ.

ಗ್ರಂಥಾಲಯ ವಿಜ್ಞಾನ ಪಿತಾಮಹ ಡಾ. ಎಸ್.ಆರ್. ರಂಗನಾಥನ್ ಅವರ ಜನ್ಮದಿನ (ಆಗಸ್ಟ್ 12) ‘ರಾಷ್ಟ್ರೀಯ ಗ್ರಂಥಪಾಲಕರ ದಿನ’ವೂ ಹೌದು. ಈ ಸಂದರ್ಭ, ಗ್ರಂಥಪಾಲಕರ ಆತ್ಮಾವಲೋಕನಕ್ಕೆ ಹಾಗೂ ಆ ಹುದ್ದೆಯ ಘನತೆ ಹೆಚ್ಚಿಸಲಿಕ್ಕೆ ಪ್ರೇರಣೆ ಆಗಬೇಕು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

# ಅಣ್ವಸ್ತ್ರ ಬೆದರಿಕೆ ಪಾಕಿಸ್ತಾನದ ಚಾಳಿ

ಅಣ್ವಸ್ತ್ರ ಹೊಂದಿರುವ ರಾಷ್ಟ್ರ ತಮ್ಮದಾಗಿದ್ದು, ತಾವು ಸೋಲುವ ಸ್ಥಿತಿ ಬಂದರೆ, ಅರ್ಧ ಜಗತ್ತನ್ನು ನಾಶಪಡಿಸುವುದಾಗಿ ಪಾಕಿಸ್ತಾನದ ಸೇನಾ ಪಡೆಗಳ ಮುಖ್ಯಸ್ಥ ಆಸಿಮ್ ಮುನೀರ್ ಅಮೆರಿಕದ ನೆಲದಲ್ಲಿ ನಿಂತು ಅಕ್ಷರಶಃ ಬೆದರಿಕೆ ಹಾಕಿದ್ದಾರೆ. ಆಸಿಮ್ ಮುನೀರ್ ಮಾತುಗಳು ಭಾರತಕ್ಕಷ್ಟೇ ಅಲ್ಲ, 'ಅರ್ಧ ಜಗತ್ತಿಗೆ' ಒಡ್ಡಿದ ಬೆದರಿಕೆಯಾಗಿದೆ. ಪಾಕಿಸ್ತಾನದ ರೀತಿಯಲ್ಲೇ ಚೀನಾ ಮತ್ತು ಉತ್ತರ ಕೊರಿಯಾದಲ್ಲಿಯೂ ಅಣ್ವಸ್ತ್ರಗಳಿದ್ದು, ಅಲ್ಲಿಯೂ ಸರ್ವಾಧಿಕಾರಿಗಳೇ ಆಡಳಿತ ನಡೆಸುತ್ತಿದ್ದಾರೆ. ಇವರೆಲ್ಲರೂ ವಿಶ್ವಶಾಂತಿಗೆ ಕಂಟಕವಾಗುವಂಥ ಸ್ವಭಾವ, ಸಾಮರ್ಥ್ಯ ಹೊಂದಿದ್ದು, ಅಪಾಯಕಾರಿಗಳಾಗಿದ್ದಾರೆ. ಇದರಲ್ಲಿ ವಿಶ್ವದ 'ದೊಡ್ಡಣ್ಣ' ಎಂದೇ ಕರೆಸಿಕೊಳ್ಳುವ ಅಮೆರಿಕದ ಬೆಂಬಲ ಅಥವಾ 'ಮೌನ ಸಮ್ಮತಿ'ಯ ಪಾಲೂ ಇದೆ ಎಂದು ವಿಶ್ಲೇಷಿಸಲಾಗುತ್ತಿದೆ



ಪ್ರಜಾವಾಣಿ ವಾರ್ತೆ

ಜನರಲ್ ಆಸಿಮ್ ಮುನೀರ್, ಪಾಕಿಸ್ತಾನದ ಸೇನಾ ಮುಖ್ಯಸ್ಥ. ಅವರು ಪಾಕ್‌ನ ಮುಂದಿನ ಅಧ್ಯಕ್ಷರಾಗುವ ಕನಸು ಕಾಣುತ್ತಿದ್ದಾರೆ ಎನ್ನುವ ವರದಿಗಳು ಇತ್ತೀಚೆಗೆ ಹರಿದಾಡಿದ್ದವು. ಆದರೆ, ಅಧ್ಯಕ್ಷರಿಗಿಂತಲೂ ಅವರೇ ಪ್ರಭಾವಿಯಾಗಿದ್ದು, ದೇಶದ ಒಳಗಷ್ಟೇ ಅಲ್ಲ, ಹೊರಗೂ ಪಾಕಿಸ್ತಾನವನ್ನು ಪ್ರತಿನಿಧಿಸುತ್ತಿದ್ದಾರೆ. ಶ್ವೇತಭವನದ ಆಹ್ವಾನದ ಮೇರೆಗೆ ಆಸಿಮ್ ಮುನೀರ್ ಇದೇ ಜೂನ್‌ನಲ್ಲಿ ಅಮೆರಿಕಕ್ಕೆ ಭೇಟಿ ನೀಡಿದ್ದರು. ಇದೀಗ ಎರಡನೇ ಬಾರಿ ಅಮೆರಿಕಕ್ಕೆ ಭೇಟಿ ನೀಡಿರುವ ಮುನೀರ್, ಅಲ್ಲಿ ಆಡಿರುವ ಮಾತುಗಳು ಅವರ ಮನಸ್ಥಿತಿಯನ್ನು, ಪಾಕಿಸ್ತಾನ ಸೇನೆಯ ಸರ್ವಾಧಿಕಾರಿ ಆಡಳಿತವನ್ನು, ಅಣ್ವಸ್ತ್ರ ಹೊಂದಿರುವ ರಾಷ್ಟ್ರಗಳ ಪರಿಸ್ಥಿತಿಯನ್ನೂ ಬಿಂಬಿಸುತ್ತವೆ.

ಅಮೆರಿಕದ ನೆಲದಿಂದ ಭಾರತಕ್ಕೆ ಸಂಬಂಧಿಸಿದ ಹಲವು ವಿಚಾರಗಳ ಬಗ್ಗೆ ಮುನೀರ್ ಪ್ರಸ್ತಾಪಿಸಿದ್ದಾರೆ. 'ಕಾಶ್ಮೀರ ವಿವಾದವು ಭಾರತದ ಆಂತರಿಕ ವಿಚಾರವಲ್ಲ, ಅದು ಬಗೆಹರಿಯದ ಅಂತರರಾಷ್ಟ್ರೀಯ ವಿವಾದ' ಎಂದಿದ್ದಾರೆ. 'ಭಾರತವು ಸಿಂಧೂ ನದಿಗೆ ಅಣೆಕಟ್ಟುಗಳನ್ನು ಕಟ್ಟಲಿ, ನಂತರ 10 ಕ್ಷಿಪಣಿಗಳಿಂದ ನಾವು ಅವುಗಳನ್ನು ಧ್ವಂಸ ಮಾಡುತ್ತೇವೆ' ಎಂದಿದ್ದಾರೆ. 'ಭಾರತವು ಮರ್ಸಿಡಿಸ್ ಕಾರ್ ಇದ್ದಂತೆ. ಪಾಕಿಸ್ತಾನವು ಕಲ್ಲು ಸಾಗಿಸುವ ಟ್ರಕ್ ಇದ್ದಂತೆ. ಟ್ರಕ್ ಕಾರಿಗೆ ಡಿಕ್ಕಿ ಹೊಡೆದರೆ, ಯಾರಿಗೆ ನಷ್ಟ ಹೇಳಿ' ಎಂದೂ ಪ್ರಶ್ನಿಸಿದ್ದಾರೆ.

**ಪ್ರಚೋದನಕಾರಿ ಮಾತು:** ಇದೇ ಮುನೀರ್ ಅವರು ಹಿಂದೊಮ್ಮೆ 'ಕಾಶ್ಮೀರವು ಪಾಕಿಸ್ತಾನದ ಕಂಠನಾಳ' ಎಂದಿದ್ದರು. ಆದಾದ ಕೆಲವೇ ದಿನಗಳಲ್ಲಿ ಪಹಲ್ಗಾಮ್ ಮೇಲೆ ಉಗ್ರರು ದಾಳಿ ನಡೆಸಿ 26 ಪ್ರವಾಸಿಗರನ್ನು ಹತ್ಯೆ ಮಾಡಿದ್ದರು. ಭಯೋತ್ಪಾದಕರ ದಾಳಿಗೆ ಮುನೀರ್ ಅವರ ಆ ಮಾತೇ ಪ್ರೇರಣೆ ಎನ್ನಲಾಗಿತ್ತು. ಈಗ ಅಮೆರಿಕ ನೆಲದಿಂದ ಅಂಥದ್ದೇ ಪ್ರಚೋದನಕಾರಿ ಮಾತುಗಳನ್ನು ಆಡಿದ್ದಾರೆ.

ಪಾಕ್‌ನಲ್ಲಿ ಅಧ್ಯಕ್ಷ, ಪ್ರಧಾನಿ ಅವರಿಗಿಂತಲೂ ಸೇನಾ ಮುಖ್ಯಸ್ಥರೇ ಪ್ರಭಾವಿ ಹಾಗೂ ನಿರ್ಣಾಯಕ. ಪಾಕಿಸ್ತಾನ ಜನ್ಮ ತಾಳಿದಂದಿನಿಂದಲೂ ಯಾವ ಪ್ರಧಾನಿಯೂ ಅಲ್ಲಿ ಪೂರ್ಣಾವಧಿ ಆಡಳಿತ ನಡೆಸಿಲ್ಲ. ಮಿಲಿಟರಿ ದಂಗೆಯ ಮೂಲಕ ಸೇನಾ ಮುಖ್ಯಸ್ಥ ಪ್ರಧಾನಿಯನ್ನು ಪದಚ್ಯುತಗೊಳಿಸುವುದು, ಪದಚ್ಯುತ ಪ್ರಧಾನಿ ದೇಶ ತೊರೆದು ಹೋಗುವುದು ಇಲ್ಲವೇ ಜೈಲಿಗೆ ಹೋಗುವಂಥ ಹಲವು ಘಟನೆಗಳು ಅಲ್ಲಿ ಹಲವು ಬಾರಿ ಘಟಿಸಿವೆ. ಈ ದಿಸೆಯಲ್ಲಿ ಆಸಿಮ್ ಮುನೀರ್ ಮಾತುಗಳಿಗೆ ವಿಶೇಷ ಮಹತ್ವ ಪ್ರಾಪ್ತವಾಗಿದೆ.

**ಪದೇ ಪದೇ ಬೆದರಿಕೆ:** ಅಣ್ವಸ್ತ್ರ ಹೊಂದಿರುವ ಯಾವುದೇ ರಾಷ್ಟ್ರವು, ಮತ್ತೊಂದು ರಾಷ್ಟ್ರದ ಮೇಲೆ ಅಣ್ವಸ್ತ್ರ ಪ್ರಯೋಗಿಸುವುದು ಸುಲಭ ಅಲ್ಲ. ಆದರೂ ಪಾಕಿಸ್ತಾನವು ಹಿಂದಿನಿಂದಲೂ ಭಾರತವನ್ನು ಗುರಿಯಾಗಿಸಿಕೊಂಡು ಆಗಿಂದಾಗ್ಗೆ ಈ ಬಗ್ಗೆ ಪುನರುಚ್ಚಾರ ಮಾಡುತ್ತಿದ್ದು, ಅದನ್ನೇ ಚಾಳಿಯಾಗಿಸಿಕೊಂಡಿದೆ. 2002ರಲ್ಲಿ ಅಧ್ಯಕ್ಷರಾಗಿದ್ದ ಪರ್ವೇಜ್ ಮುಷರಫ್ ಅವರು, 'ಪಾಕಿಸ್ತಾನದ ಅಣ್ವಸ್ತ್ರಗಳ ಏಕೈಕ ಗುರಿ ಭಾರತವಾಗಿದ್ದು, ದೇಶದ ಅಸ್ತಿತ್ವಕ್ಕೆ ಆತಂಕ ಎದುರಾದಾಗ ಅವುಗಳನ್ನು ಬಳಸಲಾಗುವುದು' ಎಂದು ಹೇಳಿದ್ದರು.

ಆದರೂ ಹಲವು ಸಂದರ್ಭಗಳಲ್ಲಿ ಅಣ್ವಸ್ತ್ರ ಬಳಕೆಯ ಮಾತುಗಳು ಕೇಳಿಬಂದಿದ್ದವು. 1999ರ ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಪಾಕಿಸ್ತಾನದ ಅಂದಿನ ವಿದೇಶಾಂಗ ಕಾರ್ಯದರ್ಶಿ ಶಂಷಾದ್ ಅಹಮದ್, 'ತನ್ನ ಭೂಪ್ರದೇಶ ರಕ್ಷಿಸಿಕೊಳ್ಳಲು ದೇಶವು ಅಣ್ವಸ್ತ್ರ ಬಳಸಲು ಹಿಂಜರಿಯುವುದಿಲ್ಲ' ಎಂದಿದ್ದರು. 2019ರಲ್ಲಿ ಭಾರತವು ಪಾಕಿಸ್ತಾನದ ಬಾಲಾಕೋಟ್ ಮೇಲೆ 'ನಿರ್ದಿಷ್ಟ ಕಾರ್ಯಾಚರಣೆ' ನಡೆಸಿದಾಗಲೂ ಇಂಥದ್ದೇ ಪ್ರತಿಕ್ರಿಯೆಗಳು ಬಂದಿದ್ದವು.

ಪಹಲ್ಗಾಮ್ ದಾಳಿಯ ನಂತರ, ಮೇ 7ರಿಂದ 10ರವರೆಗೆ ಎರಡೂ ರಾಷ್ಟ್ರಗಳ ನಡುವೆ ಸೇನಾ ಸಂಘರ್ಷದ ಸಮಯದಲ್ಲೂ ಅಣ್ವಸ್ತ್ರ ದಾಳಿಯ ಬಗ್ಗೆ ಚರ್ಚೆಗಳು ನಡೆದಿದ್ದವು. ಮೇ 10ರಂದು ಬೆಳಿಗ್ಗೆ ಪಾಕಿಸ್ತಾನದ ಪ್ರಧಾನಿ, ಅಧ್ಯಕ್ಷರು ಅಣ್ವಸ್ತ್ರಗಳ ಮೇಲುಸ್ತುವಾರಿ ಹೊಂದಿರುವ ನ್ಯಾಷನಲ್ ಕಮಾಂಡ್ ಅಥಾರಿಟಿಯ ಸಭೆ ಕರೆದಿದ್ದರು ಎಂದೂ ವರದಿಯಾಗಿತ್ತು. ಇವುಗಳಲ್ಲಿ ಸತ್ಯ ಎಷ್ಟು ಎನ್ನುವುದು ಸ್ಪಷ್ಟವಾಗಿಲ್ಲ.

ಪಹಲ್ಗಾಮ್ ದಾಳಿಯ ನಂತರ ಭಾರತ ಕೈಗೊಂಡ ರಾಜತಾಂತ್ರಿಕ ಕ್ರಮಗಳು, ಆಪರೇಷನ್ ಸಿಂಧೂರ, ಸೇನಾ ಸಂಘರ್ಷ ನಡೆದಾಗಿನಿಂದಲೂ ಧರ್ಮದ ಹೆಸರಿನಲ್ಲಿ ಪಾಕಿಸ್ತಾನದ ಜನರ ಮನಸ್ಸನ್ನು ಗೆಲ್ಲುವ ಪ್ರಯತ್ನವನ್ನು ಮುನೀರ್ ಮಾಡುತ್ತಲೇ ಇದ್ದಾರೆ. ಧಾರ್ಮಿಕ ಶಿಕ್ಷಣ ಪಡೆದಿರುವ ಮೊದಲ ಪಾಕ್ ಸೇನಾ ಮುಖ್ಯಸ್ಥರಾಗಿರುವ ಮುನೀರ್, ಧಾರ್ಮಿಕ ಪರಿಭಾಷೆಯಲ್ಲಿ ಮಾತನಾಡುವ ಮೂಲಕ ಜನರನ್ನು ಪ್ರಚೋದಿಸಲು ಯತ್ನಿಸುತ್ತಿದ್ದಾರೆ.

**ಅಮೆರಿಕದ ಮೌನ:** ಅಮೆರಿಕವು ಜಪಾನ್‌ನ ನಾಗಸಾಕಿ ಮೇಲೆ ಬಾಂಬ್ ಹಾಕಿದ 80ನೇ ವಾರ್ಷಿಕ ದಿನದಂದೇ ಮುನೀರ್ ಅಮೆರಿಕದಿಂದ ಅಣ್ವಸ್ತ್ರ ದಾಳಿಯ ಬಗ್ಗೆ ಮಾತನಾಡಿದ್ದಾರೆ. ಆದರೆ, ಅಮೆರಿಕ ಇದರ ಬಗ್ಗೆ ಮೌನವಾಗಿದೆ. ಸುಂಕಕ್ಕೆ ಸಂಬಂಧಿಸಿದ ಭಾರತ–ಅಮೆರಿಕ ಮಾತುಕತೆ ಯಶಸ್ವಿಯಾಗದೇ ಇರುವುದು, ಭಾರತದ ಉತ್ಪನ್ನಗಳ ಮೇಲೆ ಅಮೆರಿಕ ಶೇ 50ರಷ್ಟು ಸುಂಕ ಹೇರಿರುವುದು.. ಇವೇ ಮುಂತಾದ ಕಾರಣಗಳಿಂದ ಭಾರತ ಮತ್ತು ಅಮೆರಿಕ ಸಂಬಂಧ ಹಳಸಿದೆ. ಇದೇ ವೇಳೆ ಪಾಕ್ ಅಮೆರಿಕಕ್ಕೆ ಹೆಚ್ಚು ಹತ್ತಿರವಾಗಿದ್ದು, ತನ್ನ ಅದ್ಭುತ ಪಾಲುದಾರ ಎಂದು ಪಾಕ್ ಅನ್ನು ಅಮೆರಿಕ ಬಣ್ಣಿಸಿದೆ. ಪಾಕಿಸ್ತಾನದಂಥ ದುರ್ಬಲ ಹಾಗೂ ಅಸ್ಥಿರ ರಾಜಕೀಯ ಪರಿಸ್ಥಿತಿಯ ದೇಶವನ್ನು ಅಮೆರಿಕ ತನ್ನ ಕೈಗೊಂಬೆಯಂತೆ ಮಾಡಿಕೊಳ್ಳಲು ಯತ್ನಿಸುತ್ತಿದೆ. ಆಸಿಮ್ ಮುನೀರ್ ಅವರ ಹೇಳಿಕೆಯನ್ನು ಈ ನೆಲೆಯಲ್ಲಿಯೂ ಅರ್ಥೈಸಲಾಗುತ್ತಿದೆ.


ಎರಡು ರಾಷ್ಟ್ರಗಳ ನಡುವಿನ ವಿಚಾರಗಳನ್ನು ಚರ್ಚಿಸಲು ನಿರ್ದಿಷ್ಟ ಸ್ಥಳ, ಸಂದರ್ಭ, ವೇದಿಕೆಗಳಿರುತ್ತವೆ; ರಾಜತಾಂತ್ರಿಕ ರೀತಿ–ರಿವಾಜುಗಳು ಇರುತ್ತವೆ; ಮಾತುಕತೆಗೆ ಅದರದ್ದೇ ಆದ ಪರಿಭಾಷೆಯೂ ಇರುತ್ತದೆ. ಈ ಎಲ್ಲವನ್ನೂ ಮೀರಿ, ಮೂರನೇ ರಾಷ್ಟ್ರದಿಂದ ಯುದ್ಧದ ಸಂದೇಶ ಬಿತ್ತರಿಸುವುದು, ದಾಳಿಯ ಪರಿಭಾಷೆಯಲ್ಲಿ ಮಾತನಾಡುವುದು, ಕೆಣಕುವುದು ಎರಡೂ ರಾಷ್ಟ್ರಗಳ ನಡುವಿನ ಸಂಬಂಧಕ್ಕೆ ಮತ್ತಷ್ಟು ಹಾನಿಯುಂಟು-ಮಾಡುತ್ತದೆ. ಮುನೀರ್ ಹೇಳಿಕೆಗೆ ಭಾರತ ನೀಡಿರುವ ತೀಕ್ಷ್ಣ ಪ್ರತಿಕ್ರಿಯೆ ಇದಕ್ಕೆ ಪುಷ್ಟಿನೀಡುವಂತಿದೆ.

ಆಧಾರ: ಪಿಟಿಐ, ಬಿಬಿಸಿ, 'ಸಿಪ್ರಿ', ಮಾಧ್ಯಮ ವರದಿಗಳು

## ಚೀನಾ ನೆರವು, ಉತ್ತರ ಕೊರಿಯಾದೊಂದಿಗೂ ಸ್ನೇಹ

ಸರ್ವಾಧಿಕಾರದ ದೇಶವೆನಿಸಿರುವ ಚೀನಾ ಮತ್ತು ಉತ್ತರ ಕೊರಿಯಾವೂ ಅಣ್ವಸ್ತ್ರಗಳನ್ನು ಹೊಂದಿವೆ. 'ಸಿಪ್ರಿ' ವರದಿ ಪ್ರಕಾರ ಚೀನಾದ ಬಳಿ 600 ಅಣ್ವಸ್ತ್ರ ಸಿಡಿತಲೆಗಳಿವೆ. ಈ ಪೈಕಿ 24 ಪರಮಾಣು ಬಾಂಬ್‌ಗಳನ್ನು ಅದು ಸನ್ನದ್ಧ ಸ್ಥಿತಿಯಲ್ಲಿ ಇರಿಸಿದೆ. ಚೀನಾ ಆಗಾಗ ಯಾವುದೇ ದೇಶದ ವಿರುದ್ಧ ಅಣ್ವಸ್ತ್ರ ದಾಳಿಯ ಬೆದರಿಕೆ ಒಡ್ಡಿಲ್ಲ. ಆದರೆ, ಪಾಕಿಸ್ತಾನಕ್ಕೆ ಅಣ್ವಸ್ತ್ರ ಹಾಗೂ ಸೇನಾ ಅಭಿವೃದ್ಧಿಗೆ ಸಕಲ ನೆರವನ್ನೂ ನೀಡುತ್ತಿದೆ.

ಅಮೆರಿಕ ಸೇರಿದಂತೆ ಜಗತ್ತಿನ ಹಲವು ರಾಷ್ಟ್ರಗಳ ವಿರೋಧದ ನಡುವೆಯೂ ಅಣ್ವಸ್ತ್ರವನ್ನು ಪರೀಕ್ಷೆಗೆ ಒಳಪಡಿಸಿರುವ ರಾಷ್ಟ್ರ ಉತ್ತರ ಕೊರಿಯಾ. 'ಸಿಪ್ರಿ' ಪ್ರಕಾರ ಅದರ ಬಳಿ 50 ಅಣ್ವಸ್ತ್ರ ಸಿಡಿತಲೆಗಳಿವೆ. ಪಾಕಿಸ್ತಾನವು ಉತ್ತರ ಕೊರಿಯಾಕ್ಕೆ ಅಣ್ವಸ್ತ್ರ ತಂತ್ರಜ್ಞಾನವನ್ನು ನೀಡಿದೆ ಎಂದು ಹೇಳಲಾಗುತ್ತಿದೆ. 1970ರ ದಶಕದಿಂದಲೂ ಪಾಕ್–ಉತ್ತರ ಕೊರಿಯಾ ಉತ್ತಮ ಬಾಂಧವ್ಯ ಹೊಂದಿವೆ. 1971ರಲ್ಲಿ ವಿದೇಶಾಂಗ ಸಚಿವರಾಗಿದ್ದ ಝುಲ್ಫಿಕರ್ ಅಲಿ ಭುಟ್ಟೋ ಅವರು ಉತ್ತರ ಕೊರಿಯಾಕ್ಕೆ ಭೇಟಿ ನೀಡಿ, ಸೇನೆಯನ್ನು ಬಲಪಡಿಸಲು ನೆರವು ಕೇಳಿದ್ದರು. 1976ರಲ್ಲಿ ಪ್ರಧಾನಿಯಾಗಿ ಮತ್ತೆ ಭೇಟಿ ನೀಡಿದ್ದರು. 1993ರಲ್ಲಿ ಅವರ ಮಗಳು, ಪ್ರಧಾನಿ ಬೆನಜೀರ್ ಭುಟ್ಟೋ ಅವರು ಉತ್ತರ ಕೊರಿಯಾಕ್ಕೆ ಭೇಟಿ ನೀಡಿದ್ದರು. ಪಾಕಿಸ್ತಾನದ ಪರಮಾಣು ವಿಜ್ಞಾನಿ ಎ.ಕ್ಯು.ಖಾನ್ ಅವರು 13 ಬಾರಿ ಉತ್ತರ ಕೊರಿಯಾಕ್ಕೆ ಭೇಟಿ ನೀಡಿದ್ದರು. ಅಷ್ಟೇ ಅಲ್ಲದೇ, 1989–2000ದ ನಡುವೆ ಉತ್ತರ ಕೊರಿಯಾಕ್ಕೆ ಪರಮಾಣು ತಂತ್ರಜ್ಞಾನವನ್ನು ಹಸ್ತಾಂತರಿಸಿರುವ ಕುರಿತು 2004ರಲ್ಲಿ ಸಾರ್ವಜನಿಕವಾಗಿ ತಪ್ಪೊಪ್ಪಿ-ಕೊಂಡಿದ್ದರು. ನಂತರ ಪರ್ವೇಜ್ ಮುಷರಫ್ ಅವರಿಗೆ ಕ್ಷಮಾದಾನವನ್ನೂ ನೀಡಿದ್ದರು.




**ಪಾಕ್ ಬಳಿ ಇರುವ ಅಣ್ವಸ್ತ್ರ ಸಾಮರ್ಥ್ಯದ ಕ್ಷಿಪಣಿಗಳು**

| ಕ್ಷಿಪಣಿ | ದಾಳಿ ವ್ಯಾಪ್ತಿ (ಕಿ.ಮೀಗಳಲ್ಲಿ) |
|---|---|
| ಅಬ್ದಾಲಿ (ಹಾಟ್ಫ್–2) | 200 |
| ಘಜ್ನವಿ (ಹಾಟ್ಫ್–3) | 300 |
| ಶಾಹೀನ್–I/1ಎ (ಹಾಟ್ಫ್–4) | 750/900 |
| ಶಾಹೀನ್–II (ಹಾಟ್ಫ್–6) | 2,000 |
| ಶಾಹೀನ್–III | 2,750 |
| ಘೋರಿ (ಹಾಟ್ಫ್–5) | 1,250 |
| ನಾಸರ್ (ಹಾಟ್ಫ್–9) | 70 |
| ಅಬಾಬೀಲ್ | 2,200 |
| ಬಾಬರ್/–1ಎ ಜಿಎಲ್‌ಸಿಎಂ (ಹಾಟ್ಫ್–7) | 350/450 |
| ಬಾಬರ್–2/1ಬಿ ಜಿಎಲ್‌ಸಿಎಂ | 900 |

## ಭಾರತದ ನೀತಿ ಏನು?

ಭಾರತವು 2003ರಲ್ಲಿ ಅಣ್ವಸ್ತ್ರ ಬಳಕೆಗೆ ಸಂಬಂಧಿಸಿದಂತೆ ತನ್ನ ನೀತಿಯನ್ನು ಪ್ರಕಟಿಸಿದೆ.

ಯಾವುದೇ ಸಂದರ್ಭದಲ್ಲೂ ವೈರಿಯ ವಿರುದ್ಧ ಅಣ್ವಸ್ತ್ರವನ್ನು ಮೊದಲು ಬಳಸುವುದಿಲ್ಲ ಎಂಬುದು ಭಾರತದ ಸಿದ್ಧಾಂತ. ಒಂದು ವೇಳೆ ವೈರಿ ರಾಷ್ಟ್ರವು ತನ್ನ ಮೇಲೆ ಅಣ್ವಸ್ತ್ರದಿಂದ ದಾಳಿ ನಡೆಸಿದರೆ, ಅದಕ್ಕೆ ಪ್ರತೀಕಾರವಾಗಿ ಪರಮಾಣು ದಾಳಿ ನಡೆಸಲಾಗುವುದು. ತನ್ನ ನೆಲದ ಮೇಲೆ ದಾಳಿ ನಡೆಸಿದರೆ ಅಥವಾ ವಿದೇಶಿ ನೆಲದಲ್ಲಿರುವ ತನ್ನ ಪಡೆಗಳ ಮೇಲೆ ದಾಳಿ ನಡೆಸಿದರೆ ಅದಕ್ಕೆ ಪ್ರತಿಯಾಗಿ ಅಣ್ವಸ್ತ್ರವನ್ನು ಬಳಸಲಾಗುವುದು. ಅಣ್ವಸ್ತ್ರ ಹೊಂದಿರದ ರಾಷ್ಟ್ರದ ವಿರುದ್ಧ ಪರಮಾಣು ಬಾಂಬ್ ದಾಳಿ ನಡೆಸುವುದಿಲ್ಲ ಎಂದೂ ಭಾರತದ ನೀತಿ ಹೇಳುತ್ತದೆ. ಒಂದು ವೇಳೆ, ಯಾವುದೇ ರಾಷ್ಟ್ರವು ದೇಶದ/ ಸೇನೆಯ ಮೇಲೆ ಜೈವಿಕ ಅಥವಾ ರಾಸಾಯನಿಕ ಅಸ್ತ್ರಗಳಿಂದ ದಾಳಿ ನಡೆಸಿದರೆ, ಅಂತಹ ರಾಷ್ಟ್ರದ ಮೇಲೆ ಅಣ್ವಸ್ತ್ರ ದಾಳಿ ನಡೆಸಲಿದೆ ಎಂದು ನೀತಿಯಲ್ಲಿ ಹೇಳಲಾಗಿದೆ.

2016ರಲ್ಲಿ ಅಂದಿನ ರಕ್ಷಣಾ ಸಚಿವ ಮನೋಹರ್ ಪರಿಕ್ಕರ್ ಅವರು, ಭಾರತ ಈ ನೀತಿಗೆ ಬದ್ಧವಾಗಿರಬೇಕು ಎಂದೇನಿಲ್ಲ ಎಂದು ಹೇಳಿದ್ದು ಭಾರಿ ಸದ್ದು ಮಾಡಿತ್ತು. ನಂತರ ಪರಿಕ್ಕರ್ ಅವರು, ಅದು ತಮ್ಮ ವೈಯಕ್ತಿಕ ಅಭಿಪ್ರಾಯ ಎಂದು ಸ್ಪಷ್ಟನೆ ನೀಡಿದ್ದರು.

ಭಾರತಕ್ಕೆ ಹೋಲಿಸಿದರೆ, ಅಣ್ವಸ್ತ್ರ ಬಳಕೆಗೆ ಸಂಬಂಧಿಸಿದಂತೆ ಪಾಕಿಸ್ತಾನವು ಇಂತಹ ನೀತಿಯನ್ನು ಹೊಂದಿಲ್ಲ. ಪಾಕ್‌ನ ನ್ಯಾಷನಲ್ ಕಮಾಂಡ್ ಅಥಾರಿಟಿಯ (ಎನ್‌ಸಿಎ) ಕಾರ್ಯತಂತ್ರ ಯೋಜನೆಗಳ ವಿಭಾಗದ ಮುಖ್ಯಸ್ಥರಾಗಿದ್ದ ಖಾಲಿದ್ ಕಿದ್ವಾಯಿ ಅವರು 2001ರಲ್ಲಿ 'ದೇಶವು ಭಾರಿ ಪ್ರಮಾಣದಲ್ಲಿ ಭೂಪ್ರದೇಶ ಕಳೆದುಕೊಂಡಾಗ, ಪ್ರಮುಖ ಸೇನಾ ಆಸ್ತಿಗಳಿಗೆ ಧ್ವಂಸವಾದಾಗ, ಆರ್ಥಿಕವಾಗಿ ದೊಡ್ಡ ಹೊಡೆತ ನೀಡಿದಾಗ ಅಥವಾ ರಾಜಕೀಯ ಅಸ್ಥಿರತೆ ಉಂಟುಮಾಡಿದ ಸಂದರ್ಭಗಳಲ್ಲಿ ಅಣ್ವಸ್ತ್ರಗಳನ್ನು ಬಳಸಬಹುದು' ಎಂದು ಹೇಳಿದ್ದರು.

## ರಾಷ್ಟ್ರೀಯ

### 'ಅತ್ಯಾಚಾರ: ಬಾಲಕಿಯರಷ್ಟೇ ಬಾಲಕರೂ ಸಂತ್ರಸ್ತರು'



ನವದೆಹಲಿ (ಪಿಟಿಐ): ಬಾಲಕನ ಮೇಲೆ ಅತ್ಯಾಚಾರ ಎಸಗಿದ ವ್ಯಕ್ತಿಗೆ ದೆಹಲಿ ನ್ಯಾಯಾಲಯವೊಂದು 15 ವರ್ಷ ಕಠಿಣ ಜೈಲು ಶಿಕ್ಷೆ ವಿಧಿಸಿದ್ದು, ಬಾಲಕಿಯರು ಮಾತ್ರವೇ ಇಂಥ ಹೀನ ಅಪರಾಧಗಳಿಗೆ ಒಳಗಾಗುತ್ತಾರೆ ಎಂಬುದು 'ಕಟ್ಟುಕತೆ' ಎಂದು ಅಭಿಪ್ರಾಯಪಟ್ಟಿದೆ.

ಘಟನೆಯು 2019ರಲ್ಲಿ ನಡೆದಿತ್ತು. ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಅನು ಅಗರ್‌ವಾಲ್ ಅವರು ಪ್ರಕರಣದ ವಿಚಾರಣೆ ನಡೆಸಿದರು. ಪೋಕ್ಸೊ ಕಾಯ್ದೆಯ ಸೆಕ್ಷನ್ 6 (ಬಲವಂತದ ಲೈಂಗಿಕ ಸಂಪರ್ಕ) ಮತ್ತು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 377ರ (ಅಸ್ವಾಭಾವಿಕ ಅಪರಾಧ) ಅಡಿಯಲ್ಲಿ ಶಿಕ್ಷೆ ವಿಧಿಸಲಾಗಿದೆ. ಒಂದು ತಿಂಗಳಲ್ಲಿ ₹2 ಲಕ್ಷ ಪರಿಹಾರ ನೀಡುವಂತೆಯೂ ಸೂಚಿಸಲಾಗಿದೆ.

'ಈ ಸಮಾಜವು ತೋಳ್ಬಲವನ್ನು ಭಾವನಾತ್ಮಕ ಶಕ್ತಿ ಎಂದು ತಪ್ಪಾಗಿ ಅರ್ಥೈಸಿದೆ. ಈ ಕಾರಣದಿಂದ ಇಂಥ ಅಪರಾಧ ಕೃತ್ಯಗಳಲ್ಲಿ ಸಂತ್ರಸ್ತರಾಗುವ ಬಾಲಕರು ಹೆಚ್ಚಿನ ಮಾನಸಿಕ ತುಮುಲಕ್ಕೆ ಒಳಗಾಗುತ್ತಾರೆ. ನಮಗೆ ಶಕ್ತಿಯಿಲ್ಲ ಎಂದುಕೊಳ್ಳುತ್ತಾರೆ. ನಾಚಿಕೆ ಪಟ್ಟು ಕೊಳ್ಳುತ್ತಾರೆ' ಎಂದು ನ್ಯಾಯಾಲಯ ತನ್ನ ತೀರ್ಪಿನಲ್ಲಿ ಹೇಳಿದೆ.

'ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದಂಥ ಪ್ರಕರಣಗಳಲ್ಲಿ ಶೇ 54.68ರಷ್ಟು ಸಂತ್ರಸ್ತರು ಬಾಲಕರೇ ಆಗಿದ್ದಾರೆ' ಎನ್ನುವ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ನೀಡಿದ ಮಾಹಿತಿಯನ್ನು ವಿಚಾರಣೆ ವೇಳೆ, ಪಬ್ಲಿಕ್ ಪ್ರಾಸಿಕ್ಯೂಟರ್ ಅರುಣ್ ಕೆ.ವಿ. ನ್ಯಾಯಾಲಯದ ಮುಂದಿಟ್ಟಿದ್ದರು.

### ಆಂಧ್ರ ಪ್ರದೇಶ: ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ



ಅಮರಾವತಿ (ಪಿಟಿಐ): ಆಂಧ್ರ ಪ್ರದೇಶದಲ್ಲಿ ನೆಲಸಿರುವ ಎಲ್ಲ ಹೆಣ್ಣುಮಕ್ಕಳು, ಮಹಿಳೆಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರು 'ಸ್ತ್ರೀ ಶಕ್ತಿ' ಯೋಜನೆಯಡಿ ಉಚಿತ ಬಸ್ ಪ್ರಯಾಣಕ್ಕೆ ಅರ್ಹರಾಗಿರುತ್ತಾರೆ ಎಂದು ಸಾರಿಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಕಾಂತಿಲಾಲ್ ದಂಡೆ ತಿಳಿಸಿದ್ದಾರೆ.

ಯೋಜನೆಯು ಆಗಸ್ಟ್ 15ರಿಂದ ಆರಂಭವಾಗಲಿದ್ದು, ಫಲಾನುಭವಿಗಳು ಮಾನ್ಯತೆ ಇರುವ ಗುರುತಿನ ಚೀಟಿ ತೋರಿಸುವ ಮೂಲಕ ಉಚಿತವಾಗಿ ಪ್ರಯಾಣ ಮಾಡಬಹುದು ಎಂದು ದಂಡೆ ಸೋಮವಾರ ತಿಳಿಸಿದರು.

ಆಂಧ್ರ ಪ್ರದೇಶ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಲಭ್ಯವಿರುವ ಬಸ್‌ಗಳನ್ನೇ ಬಳಸಿಕೊಂಡು ಈ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗುವುದು. ಬೇಡಿಕೆ ಆಧರಿಸಿ ಹೆಚ್ಚುವರಿ ಬಸ್‌ಗಳನ್ನು ಖರೀದಿಸಲಾಗುವುದು ಎಂದು ಅವರು ತಿಳಿಸಿದರು.

ಎನ್‌ಡಿಎ ನೇತೃತ್ವದ ಸರ್ಕಾರವು 2024ರ ಚುನಾವಣೆಯ ವೇಳೆ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಕಲ್ಪಿಸುವ ಭರವಸೆಯನ್ನು ನೀಡಿತ್ತು.

### ನೋಟಿಸ್‌ಗೆ ಉತ್ತರಿಸುವೆ: ಸಿನ್ಹಾ

ಪಟ್ನಾ (ಪಿಟಿಐ): 'ರಾಹುಲ್ ಗಾಂಧಿ ಹಾಗೂ ತೇಜಸ್ವಿ ಯಾದವ್ ಅವರಂತೆ ನಾನಲ್ಲ; ಚುನಾವಣಾ ಆಯೋಗದ ನೋಟಿಸ್‌ಗೆ ಉತ್ತರಿಸುವೆ' ಎಂದು ಬಿಹಾರ ಉಪಮುಖ್ಯಮಂತ್ರಿ ವಿಜಯ್‌ಕುಮಾರ್ ಸಿನ್ಹಾ ಅವರು ಸೋಮವಾರ ಇಲ್ಲಿ ತಿಳಿಸಿದರು.



ವಿಜಯ್‌ಕುಮಾರ್ ಸಿನ್ಹಾ

ತಾವು ಮತದಾರರ ಎರಡು ಗುರುತಿನ ಚೀಟಿ ಹೊಂದಿರುವುದಕ್ಕೆ ಆಯೋಗವು ನೀಡಿರುವ ನೋಟಿಸ್‌ಗೆ ಸಂಬಂಧಿಸಿದಂತೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಸಿನ್ಹಾ, 'ಸಂವಿಧಾನ ಮತ್ತು ಸಾಂವಿಧಾನಿಕ ಸಂಸ್ಥೆಗಳನ್ನು ನಾನು ಗೌರವಿಸುತ್ತೇನೆ' ಎಂದು ಹೇಳಿದರು.

ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಸಿದ ಆಯೋಗವು ಕರಡು ಪಟ್ಟಿಯನ್ನು ಪ್ರಕಟಿಸಿದ್ದು, ಪರಿಷ್ಕರಣೆಯ ನಂತರವೂ ಉಪಮುಖ್ಯಮಂತ್ರಿ ವಿಜಯ್‌ಕುಮಾರ್ ಸಿನ್ಹಾ ಅವರು ಎರಡು ವಿಧಾನಸಭಾ ಕ್ಷೇತ್ರಗಳ ಮತದಾರರಾಗಿದ್ದಾರೆ ಎಂದು ರಾಷ್ಟ್ರೀಯ ಜನತಾದಳದ (ಆರ್‌ಜೆಡಿ) ತೇಜಸ್ವಿ ಯಾದವ್ ದೂರಿದ್ದರು.

ಇದು ವಿವಾದಕ್ಕೆ ಎಡೆಮಾಡಿ ಕೊಡುತ್ತಿದ್ದಂತೆ ಮಾಧ್ಯಮಗಳಿಗೆ ಸ್ಪಷ್ಟನೆ ನೀಡಿದ್ದ ಉಪಮುಖ್ಯಮಂತ್ರಿ, 'ನನ್ನ ಬಳಿ ಸೂಕ್ತ ದಾಖಲೆಗಳಿವೆ' ಎಂದೂ ಹೇಳಿಕೊಂಡಿದ್ದರು.

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಉತ್ತರಾಖಂಡದ ಉತ್ತರಕಾಶಿಯ ಧಾರಾಲಿಯಲ್ಲಿ ಇತ್ತೀಚೆಗೆ ಸಂಭವಿಸಿದ ಮೇಘಸ್ಫೋಟ ದುರಂತದ ನಂತರ ಆ ಘಟನೆಗೆ ಸಂಬಂಧಿಸಿದ್ದು ಎಂದು ಹೇಳಲಾದ ಚಿತ್ರ ಒಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಕಣಿವೆಯಲ್ಲಿ ನದಿ ಹರಿಯುತ್ತಿದ್ದು, ಅದರ ಎರಡೂ ಬದಿಗಳಲ್ಲಿ ಮಣ್ಣು, ಕಟ್ಟಡ ಕುಸಿದಿರುವುದು, ಮನೆಗಳು, ಕಟ್ಟಡಗಳ ಅವಶೇಷಗಳು ನೀರಿನಲ್ಲಿ ಸಿಲುಕಿರುವುದು ಚಿತ್ರದಲ್ಲಿ ಕಾಣಿಸುತ್ತಿದೆ. ಆದರೆ, ಇದು ಸುಳ್ಳು, ನೈಜ ಚಿತ್ರವಲ್ಲ.




ಚಿತ್ರವನ್ನು ರಿವರ್ಸ್ ಇಮೇಜ್ ವಿಧಾನದ ಮೂಲಕ ಗೂಗಲ್‌ಲೆನ್ಸ್‌ನಲ್ಲಿ ಹಾಕಿದಾಗ, ಹಲವರು ಇದೇ ಚಿತ್ರವನ್ನು ಹಂಚಿಕೊಂಡಿರುವುದು ತಿಳಿದು ಬಂತು. ಚಿತ್ರವನ್ನು ಕೂಲಂಕಷವಾಗಿ ಪರಿಶೀಲನೆಗೆ ಒಳಪಡಿಸಿದಾಗ, ಅದರಲ್ಲಿ ಎಐ ಎಂಬ ವಾಟರ್ ಮಾರ್ಕ್ ಇರುವುದು ಕಂಡಿತು. ಇದರ ಆಧಾರದಲ್ಲಿ ಎಐ ಚಿತ್ರ ಪತ್ತೆ ಟೂಲ್ ಹೈವ್ ಮಾಡರೇಷನ್‌ನಲ್ಲಿ ಚಿತ್ರವನ್ನು ಹಾಕಿದಾಗ, ಅದು ಎಐ ಚಿತ್ರ ಎಂಬುದು ದೃಢಪಟ್ಟಿತು. ಮತ್ತೊಂದು ಎಐ ಪತ್ತೆ ಟೂಲ್ 'ವಾಸ್‌ಇಟ್‌ಎಐ'ನಲ್ಲಿ ಚಿತ್ರವನ್ನು ಹಾಕಿದಾಗಲೂ ಅದು ಎಐ ಚಿತ್ರ ಎಂಬುದನ್ನು ಖಚಿತಪಡಿಸಿತು. ಉತ್ತರಕಾಶಿಯಲ್ಲಿ ಮೇಘಸ್ಫೋಟಗೊಂಡ ನಂತರ ಧಾರಾಲಿ ಊರಿಗೆ ಹಾನಿಯಾದ ಚಿತ್ರಗಳನ್ನು ಉತ್ತರಾಖಂಡ ಪೊಲೀಸರು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದರು. ಈಗ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿರುವ ಚಿತ್ರವನ್ನು ಹೋಲುವ ಯಾವ ಚಿತ್ರವೂ ಅದರಲ್ಲಿಲ್ಲ. ಹಾಗಾಗಿ, ಎಐ ಚಿತ್ರವನ್ನು ಉತ್ತರಕಾಶಿಯಲ್ಲಿ ಸಂಭವಿಸಿದ ಮೇಘಸ್ಫೋಟಕ್ಕೆ ತಪ್ಪಾಗಿ ತಳುಕು ಹಾಕಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

## ಕರ್ನಾಟಕದ ಸಿಂಹ

ನುಡಿ ಬೆಳಗು — ದೀಪಾ ಹಿರೇಗುತ್ತಿ



ಸ್ವಾತಂತ್ರ್ಯಕ್ಕಾಗಿನ ಚಳವಳಿ ತೀವ್ರವಾಗುತ್ತಿದ್ದ ಕಾಲ. ಗಂಗಾಧರ್ ರಾವ್ ಎಂಬ ತರುಣ ಆಗ ತಾನೇ ಪುಣೆಯಲ್ಲಿ ಬಿಎ, ಎಲ್‌ಎಲ್‌ಬಿ ಪಾಸು ಮಾಡಿದ್ದ. ಸ್ವತಃ ವಕೀಲರಾಗಿದ್ದ ಆತನ ತಂದೆಗೋ ಮಗ ಇಡೀ ಬೆಳಗಾವಿಗೇ ದೊಡ್ಡ ವಕೀಲನಾಗುತ್ತಾನೆಂಬ ಆಸೆ. ಆದರೆ ಗಂಗಾಧರನಿಗೆ ದೇಶಸೇವೆಯ ಸೆಳೆತ. ಆತ ಲೋಕಮಾನ್ಯ ಬಾಲಗಂಗಾಧರ ತಿಲಕರ ಅನುಯಾಯಿಯಾಗಿದ್ದ. ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ. ತಂದೆಯ ಮಾತನ್ನು ಕೇಳುತ್ತಿರಲಿಲ್ಲ. ಆಗ ಗಂಗಾಧರನ ತಂದೆ ಭಾವೂ ಸಾಹೇಬರು ಪುಣೆಯಲ್ಲಿ ತಿಲಕರನ್ನು ಭೇಟಿಯಾಗಿ, 'ಮಾನ್ಯರೇ, ದೇಶಕ್ಕೆ ಸ್ವಾತಂತ್ರ್ಯ ತರುವ ನಿಮ್ಮ ಕೆಲಸ ಶ್ರೇಷ್ಠವಾದದ್ದು. ಆದರೆ, ನನ್ನ ಮಗನನ್ನು ದಯವಿಟ್ಟು ಇದರಲ್ಲಿ ಎಳೆಯಬೇಡಿ. ನಮ್ಮದು ಶ್ರೀಮಂತ ಕುಟುಂಬ, ನನಗೆ ಇವನೊಬ್ಬನೇ ಮಗ. ಮೇಲಾಗಿ ಎಲ್‌ಎಲ್‌ಬಿ ಪಾಸಾಗಿದ್ದಾನೆ. ಬುದ್ಧಿವಂತ. ಬೇಕಾದಷ್ಟು ದಡ್ಡ ಹುಡುಗರು, ಬಡವರ ಮಕ್ಕಳೂ ಇರುವಾಗ ನನ್ನ ಮಗನನ್ನು ಏಕೆ ಕರೆದೊಯ್ಯುತ್ತೀರಿ' ಎಂದರು. ಆಗ ತಿಲಕರು, 'ಬಡವರು ಹೊಟ್ಟೆ ಹೊರೆಯಲು ಉದ್ಯೋಗ ಮಾಡಬೇಕಾಗುತ್ತದೆ. ಆದರೆ ನೀವು ಶ್ರೀಮಂತರು. ಮತ್ತು ನನ್ನ ಕೆಲಸಕ್ಕೆ ಬುದ್ಧಿವಂತರೇ ಬೇಕು. ಎಲ್ಲವೂ ಇದ್ದ ನೀವೇ ನಿಮ್ಮ ಮಗನನ್ನು ನನಗೆ ಕೊಡಲಿಲ್ಲ ಎಂದರೆ ಬಡವರು ಹೇಗೆ ತಮ್ಮ ಮಕ್ಕಳನ್ನು ಚಳವಳಿಗೆ ಅರ್ಪಿಸಬಲ್ಲರು' ಎಂದು ಕೇಳಿದರು. ಆಗ ಭಾವು ಸಾಹೇಬರು ಒಂದು ಕ್ಷಣ ಮೌನವಾದರು. ಮತ್ತೆ ಚೇತರಿಸಿಕೊಂಡು, 'ಆಗಲಿ ಇವತ್ತಿನಿಂದ ನನ್ನ ಮಗನನ್ನು ದೇಶಕ್ಕಾಗಿ ಅರ್ಪಿಸಿದ್ದೇನೆ' ಎಂದರು.

ಹೀಗೆ ತಂದೆಯಿಂದ ದೇಶಕ್ಕಾಗಿ ಸಮರ್ಪಿಸಲ್ಪಟ್ಟ ಯುವಕನೇ ಗಂಗಾಧರ ರಾವ್ ದೇಶಪಾಂಡೆ. ತಮ್ಮ ಅಸಾಧಾರಣ ಧೈರ್ಯ, ನಾಯಕತ್ವದ ಗುಣಗಳಿಂದ 'ಕರ್ನಾಟಕ ಸಿಂಹ' ಎಂದೇ ಹೆಸರಾದ ಕೆಚ್ಚೆದೆಯ ಕಲಿ ಅವರು. ಗಂಗಾಧರರ ಭಾಷಣ ಹೇಗಿರುತ್ತಿತ್ತು ಎಂದರೆ, ಭಾಷಣ ಕೇಳುತ್ತಿದ್ದಾಗಲೇ ಸಭೆಯಲ್ಲಿ ಇದ್ದ ಜನರು ತಮ್ಮ ಹಣ ಬಂಗಾರದ ಒಡವೆಗಳನ್ನು ಸ್ವಯಂ ಸೇವಕರಿಗೆ ಕೊಟ್ಟುಬಿಡುತ್ತಿದ್ದರು. ಅಸ್ಪೃಶ್ಯತಾ ನಿವಾರಣೆಯಲ್ಲಿ ಸಕ್ರಿಯ ಪಾತ್ರ ವಹಿಸಿದರು. ಖಾದಿಧಾರಿಯಾದರು. ಹುದಲಿಯಲ್ಲಿ ಖಾದಿ ಕೇಂದ್ರ ಸ್ಥಾಪಿಸಿ ಕರ್ನಾಟಕದ ಖಾದಿ ಭಗೀರಥ ಎನಿಸಿಕೊಂಡರು. ರಾಷ್ಟ್ರೀಯ ಶಾಲೆ ಆರಂಭಿಸಿದರು. ಸಂಯುಕ್ತ ಕರ್ನಾಟಕವೂ ಸೇರಿದಂತೆ ಅನೇಕ ಪತ್ರಿಕೆಗಳ ಹುಟ್ಟು, ಮುನ್ನಡೆಯುವಿಕೆಗೆ ಕಾರಣರಾದರು. ಸ್ವಾತಂತ್ರ್ಯಾನಂತರವೂ ಪಕ್ಷ ಸಂಘಟನೆ ಮಾಡಿದರೇ ಹೊರತು ಮಂತ್ರಿಮಂಡಲ ಸೇರಲು ನಿರಾಕರಿಸಿ ಅಧಿಕಾರದಿಂದ ದೂರ ಉಳಿದರು.


ವಕೀಲಿ ವೃತ್ತಿ ನಡೆಸಿ ಕೈತುಂಬಾ ಹಣ ಸಂಪಾದಿಸುತ್ತ, ಸಿರಿವಂತ ಕುಟುಂಬದ ಆಸ್ತಿ, ಅಧಿಕಾರವನ್ನು ಅನುಭವಿಸುವುದರ ಬದಲು ತಮ್ಮೆಲ್ಲ ವೈಯಕ್ತಿಕ ಆಸೆ ಆಕಾಂಕ್ಷೆಗಳನ್ನು ಮೂಲೆಗೆ ತಳ್ಳಿ ಭಾರತದ ಸ್ವಾತಂತ್ರ್ಯ, ಭಾರತೀಯರ ಏಳಿಗೆ ಇವೆರಡನ್ನೇ ಧ್ಯಾನಿಸುತ್ತ ಹಗಲಿರುಳೂ ದುಡಿದ ಇಂತಹ ಮಹಾನ್ ನಾಯಕರನ್ನು ಆಗಾಗ ನೆನಪಿಸಿ-ಕೊಳ್ಳದಿದ್ದರೆ ನಮ್ಮಂತಹ ಕೃತಘ್ನರು ಮತ್ಯಾರೂ ಇಲ್ಲ.

## ಗುಂಡಣ್ಣ




## ಪದಬಂಧ 6132

ವಿದ್ಯಾ ವಿನಯ್



**ಎಡದಿಂದ ಬಲಕ್ಕೆ**

1.ನೇರವಾಗಿರುವ ಗುಣ (3)
3.ಬೆರಳುಗಳ ಮೇಲ್ಭಾಗದ ತುದಿಯ ಗಟ್ಟಿ ಹೊದಿಕೆ (3)
5.ಸಮಯ ಸೂಚಕ ಯಂತ್ರ (4)
7.ಕನ್ನಡಿಗನು ಮಾಡಿಕೊಂಡಿರುವ ಎಕ್ಸ್‌ಚೇಂಜ್! (4)
9.ಮಣ್ಣು ಮಿಶ್ರಿತ ನೀರು (3)
12.ಈತ ವಯಸ್ಸಾದವನು (3)
14.ಶ್ರೇಷ್ಠವಾದ ನೆಲೆಯಿದು (4)
18.ತಟದಲ್ಲಿದ್ದವನು ಮಾಡಿರುವ ಮೋಸ (4)
19.ಗಿಲಿ ಗಿಲಿ ಸದ್ದು ಮಾಡುವ ಮಕ್ಕಳ ಆಟಿಕೆ (3)
20.ಗಾದೆಯಂತೆ ಅಂಗೈ ಹುಣ್ಣಿಗೆ ಈ ದರ್ಪಣ ಬೇಕೇ? (3)

**ಮೇಲಿಂದ ಕೆಳಕ್ಕೆ**

1.ಯಜ್ಞ ಪುರೋಹಿತನಿವನು (3)
2.ಗಳಿಕೆಯಿದ್ದರೂ ನಿಂದೆ! (4)
4.ಮಲಗುವಾಗ ಕಾಣಿಸಿದ ಆಳು (3)
6.ವಿರಮಿಸುತ್ತಿದ್ದಾಗ ಮೂಡಿದ ಸೂರ್ಯ (2)
8.ಈತ ಗ್ರೀಸ್ ದೇಶದವನು (3)
10.ಕೊಡತಕ್ಕ ಹಣ (3)
11.ತಾಪವಿರುವಾಗ ತೋಡಿಕೊಂಡ ಬೇಗುದಿ (3)
13.ಕನ್ನಡಿಗರ ಹೆಮ್ಮೆಯ ನಾಡು (4)
15.ರಂಗನ್ನು ತುಂಬಿ ಬರೆದ ಹಸೆ (3)
16.ಮಡಿವಂತ ನೀಡಿರುವ ಓಟು (2)
17.ದಡಿಯನ ಬಳಿಯಿರುವ ಬಿಡಿಗಾಸು (3)

**6131ನೇ ಪದಬಂಧದ ಉತ್ತರ**

ಎಡದಿಂದ ಬಲಕ್ಕೆ: 1.ದೂರದರ್ಶಕ 4.ಸರಾಫ 5.ಮಾತುಲ 6.ಗಮಾರ 8.ಸಾಂದ್ರತೆ 9.ಸಮಿತಿ 12.ಹಂತಕ 15.ಕಪೋಲ 16.ಮಾರ್ದವ 17.ಗರಡಿಮನೆ

ಮೇಲಿಂದ ಕೆಳಕ್ಕೆ: 1.ದೂತಾವಾಸ 2.ದಟ್ಟದರಿದ್ರ 3.ಕಮಾನು 4.ಸಲಗ 7.ಮಾರುತಿ 8.ಸಾಂಪ್ರತ 10.ಮಿಟಕಲಾಡಿ 11.ಸೆರೆಮನೆ 13.ಕಕವ 14.ಓಲಗ

## ಸುಡೊಕು 6516

**ಆಡುವುದು ಹೀಗೆ:** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

| | | | | | | | | |
|---|---|---|---|---|---|---|---|---|
| 1 | | | | 2 | | | 8 | 4 |
| | 6 | 7 | | | 9 | | 5 | 2 |
| | 8 | | | 4 | | | | |
| 2 | | | | | | | 6 | |
| | | 4 | | 3 | | | | 1 |
| 5 | | | | | | | | 3 |
| | | 5 | | 9 | | | 7 | 6 |
| 7 | | | 2 | | 6 | 8 | | |
| 9 | 4 | | | 7 | | | | 5 |

**6515 ಸುಡೊಕು**

| | | | | | | | | |
|---|---|---|---|---|---|---|---|---|
| 9 | 4 | 1 | 5 | 6 | 7 | 2 | 3 | 8 |
| 6 | 7 | 8 | 2 | 3 | 9 | 1 | 4 | 5 |
| 5 | 3 | 2 | 4 | 1 | 8 | 9 | 6 | 7 |
| 2 | 8 | 5 | 1 | 9 | 6 | 4 | 7 | 3 |
| 1 | 6 | 4 | 7 | 5 | 3 | 8 | 2 | 9 |
| 3 | 9 | 7 | 8 | 2 | 4 | 6 | 5 | 1 |
| 4 | 1 | 3 | 9 | 7 | 2 | 5 | 8 | 6 |
| 8 | 5 | 6 | 3 | 4 | 1 | 7 | 9 | 2 |
| 7 | 2 | 9 | 6 | 8 | 5 | 3 | 1 | 4 |

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

12 ಆಗಸ್ಟ್ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು **ತಿಥಿ:** ಶ್ರಾವಣ ಕೃಷ್ಣತೃತೀಯ ಗಂ. 8-41 **ನಕ್ಷತ್ರ:** ಪೂರ್ವಾಭಾದ್ರ ಗಂ. 11-52 **ಯೋಗ:** ಸುಕರ್ಮಾ ಗಂ. 18-54 **ಕರಣ:** ವಿಷ್ಟಿ ಗಂ. 8-41 ಕರ್ಕಾಟಕ ಮಾಸದ 27 ನೇ ದಿನ. **ಮಳೆ ನಕ್ಷತ್ರ :** ಆಶ್ಲೇಷ 3 ನೇ ಪಾದ. **ರಾಹುಕಾಲ :** ಮಧ್ಯಾಹ್ನ 03-00 04-30 , **ಸೂರ್ಯೋದಯ :** 06-21 **ಸೂರ್ಯಾಸ್ತ :** 06-50, **ಮುಸ್ಲಿಂ ದಿನಾಂಕ :** 17 ಸಫರ್, **ದಿನ ವಿಶೇಷ :** ಸಂಕಷ್ಟಹರ ಚತುರ್ಥಿ, ತೀಜ್ರಿ (ಸಿಂಧಿ), ಗಾಥಾ ಗಹಂಬರ (ಪಾರ್ಸಿ), **ಅದೃಷ್ಟ ಸಂಖ್ಯೆ :** 7, 12

**ಮೇಷ:** ನಿರಂತರ ಕೆಲಸ ಕಾರ್ಯಗಳ ಮಧ್ಯೆ ಸ್ವಲ್ಪಮಟ್ಟಿನ ಬಿಡುವು ಆರಾಮ-ವೆನಿಸುವುದು. ಕಚೇರಿಯಲ್ಲಿ ಎಲ್ಲರೊಂದಿಗೆ ಸಂತೋಷವಾಗಿರಿ. ರಚನಾತ್ಮಕ ಕೆಲಸಗಳಿಗೆ ಪ್ರಾಶಸ್ತ್ಯ ಕೊಡುವುದರಿಂದ ಸಂತಸ.

**ವೃಷಭ:** ಅನಿವಾರ್ಯವಾಗಿ ನಿಲುವುಗಳನ್ನು ಬದಲಾಯಿಸಿಕೊಳ್ಳಬೇಕೆಂದು ತೀರ್ಮಾನಿಸಿದ್ದರೂ ಸುಲಭವಾಗಿ ನಡೆಯುವುದಿಲ್ಲ. ಮೊದಲ ಆದ್ಯತೆ ವೃತ್ತಿಪರ ಕೆಲಸಗಳ ಬಗೆಗೆ ಮಾತ್ರ ಇರಲಿ.

**ಮಿಥುನ:** ಲಾಭದಾಯಕ ಎನಿಸುವ ಕೆಲಸ ಅಥವಾ ವ್ಯಕ್ತಿಗಳೊಂದಿಗೆ ಮಾತ್ರ ವ್ಯವಹರಿಸಿದ ಪರಿಣಾಮ ಪಶ್ಚಾತಾಪ ಪಡುವಂತಾಗುವುದು. ಅಸಹಕಾರ, ಏಕಾಂಗಿತನ ಕಾಡಬಹುದು. ಶ್ರೀರಾಮನ ಆರಾಧನೆ ಮಂಗಳಕರ.

**ಕರ್ಕಾಟಕ:** ಹಣದ ಮುಗ್ಗಟ್ಟು ತೀವ್ರವಾಗುವುದು. ಅಧಿಕಾರಸ್ಥರು ಹಿರಿಯ ನೌಕರರ ಜತೆ ಸ್ನೇಹ ಸಂಬಂಧ ಹೆಚ್ಚಾಗಿ ಬೆಳೆದು ವೃತ್ತಿಯಲ್ಲಿ ನವ ಉಲ್ಲಾಸ ಮೂಡಲಿದೆ. ಕುಲದೇವರ ಪ್ರಾರ್ಥನೆಯು ಶುಭತರುವುದು.

**ಸಿಂಹ:** ಮಾತಿನ ಚತುರತೆಯಿಂದ ಎಲ್ಲಾ ಕೆಲಸಗಳು ಸರಾಗವಾಗಿ ನೆರವೇರಲಿವೆ. ಪದವೀಧರರಿಗೆ ಉನ್ನತ ಶಿಕ್ಷಣಕ್ಕಾಗಿ ಉತ್ತಮ ಸ್ಥಳ ಲಭಿಸಲಿದೆ. ಅಧ್ಯಯನಕ್ಕೆ ಪ್ರೋತ್ಸಾಹ ದೊರೆಯಲಿದೆ. ಶ್ರೀ ದುರ್ಗಾದೇವಿಯನ್ನು ಭಜಿಸಿ.

**ಕನ್ಯಾ:** ವಂಶಪಾರಂಪರ್ಯವಾಗಿ ಬಂದ ಉದ್ಯೋಗದಲ್ಲಿ ಏಳಿಗೆ ಕಾಣುವಿರಿ. ಉನ್ನತ ಪೊಲೀಸ್ ಅಧಿಕಾರಿಗಳಿಗೆ ಸಂತಸದ ಸುದ್ದಿ ಇರುವುದು. ಸ್ವಪ್ರಯತ್ನ-ದಿಂದ ಕೆಲಸಗಳನ್ನು ಸಾಧಿಸಿಕೊಂಡ ಸಂತಸ ಇರಲಿದೆ.

**ತುಲಾ:** ದೈಹಿಕವಾಗಿ ಬಲಾಢ್ಯರಾಗಿರುವ ನಿಮಗೆ ಮಾನಸಿಕವಾಗಿ ಬಹಳ ದೊಡ್ಡ ಹೊಡೆತ ಬೀಳುವ ಸಂಭವವಿದೆ. ವಾಣಿಜ್ಯ ಅಥವಾ ಆರ್ಥಿಕ ಒಪ್ಪಂದಗಳು ಏರ್ಪಡಲಿವೆ. ರಾಜಕೀಯ ವ್ಯಕ್ತಿಗಳಿಂದ ಕಾರ್ಯ ಸಾಧಿಸಿಕೊಳ್ಳುವುದು ಕಷ್ಟ.

**ವೃಶ್ಚಿಕ:** ಜೀವನದ ಶೈಲಿಯಲ್ಲಿ ಬದಲಾವಣೆಯ ಗಾಳಿ ಬೀಸಲು ಆರಂಭಿಸಲಿದೆ. ತೆಗೆದುಕೊಳ್ಳುವ ನಿರ್ಧಾರ ಸರಿಯಾಗಿಯೇ ಇರುತ್ತದೆ. ಯಾವುದೇ ಸಂಶಯಬೇಡ. ಇಂದಿನ ಎಲ್ಲಾ ಘಟನೆಗಳು ಶುಭಕರ.

**ಧನು:** ಅನಾರೋಗ್ಯದಿಂದ ಬಳಲಿದ ನೀವು ಇಂದಿನಿಂದ ಚೇತರಿಕೆ ಕಾಣುವಿರಿ, ಮತ್ತೊಬ್ಬರ ಮೇಲೆ ಅವಲಂಬನೆ ಬೇಡವೆನಿಸುತ್ತದೆ. ಕೆಲಸ ಮಾಡುತ್ತಿರುವ ಜಾಗದಲ್ಲಿ ತೊಂದರೆ ಕಾಣಿಸಿಕೊಳ್ಳಲಿದೆ. ಕೂಡಲೇ ಬಗೆಹರಿಸಿಕೊಳ್ಳಿರಿ.

**ಮಕರ:** ಸಾಧ್ಯವಾದಷ್ಟು ಶಾಂತಿಯಿಂದ ಕೆಲಸವನ್ನು ಸಾಧಿಸಿ. ಕುಟುಂಬ ಸದಸ್ಯರ ಅಭಿಪ್ರಾಯಗಳ ಬಗ್ಗೆ ಚಿಂತಿಸಿ ನಂತರ ಮನ್ನಣೆ ನೀಡಿ. ವೈಜ್ಞಾನಿಕ ಸಂಶೋಧನೆಯಲ್ಲಿ ತೊಡಗಿರುವವರಿಗೆ ಫಲಿತಾಂಶ ದೊರೆಯಲಿದೆ.


**ಕುಂಭ:** ಸೋಲು ನಿಮ್ಮನ್ನು ಬಾಧಿಸುತ್ತಿದ್ದರೂ ಅಂಜದೆ ಮುನ್ನುಗ್ಗಿದರೆ ಮಾತ್ರ ಜಯದ ದಾರಿ ಕಾಣುವುದು. ಪ್ರಯತ್ನದಲ್ಲಿ ಕೊರತೆ ಬೇಡ. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಗಮನಹರಿಸಬೇಕು.

**ಮೀನ:** ನಿರುದ್ಯೋಗಿಗಳು ಬಂದ ಅವಕಾಶವನ್ನು ಒಪ್ಪಿಕೊಳ್ಳುವುದು ಸದ್ಯದ ಪರಿಸ್ಥಿತಿಗೆ ಉತ್ತಮವಾಗಿ ಕಾಣುತ್ತದೆ. ಕೊಡು ಕೊಳ್ಳುವಿಕೆ ವ್ಯವಹಾರಗಳು ಹೆಚ್ಚಲಿವೆ. ಷೇರು ವ್ಯವಹಾರಗಳಲ್ಲಿ ಹೆಚ್ಚು ಹಣ ತೊಡಗಿಸಬಹುದು.

| ಮುಂಬೈ ಧಾರಣೆ (ಶೇಂಗಾ) | |
|---|---|
| 11-08-2025 | |
| ಜಾವಾ 70/80(ಹೊಸ) | 10700-10800 |
| ಜಾವಾ 80/90(ಹೊಸ) | 10000-10100 |
| ದಪ್ಪ ಮಧ್ಯಪ್ರದೇಶ (ಹೊಸ) | 7400-7500 |
| ದಪ್ಪ ಗುಜರಾತ್ (ಹೊಸ) | 8400-8500 |
| **ಶೇಂಗಾ ಎಣ್ಣೆ (10 ಕೆಜಿಗೆ)** | |
| ಕಚ್ಚಾ (ತೆರಿಗೆ ಬಿಟ್ಟು) | 1390 (–) |
| ಒಂದು ವಾರದ ಡೆಲಿವರಿ | 1385 (–) |
| ಪಾಮ್ ವಾರದ ಡೆಲಿವರಿ | 1218 (–) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1305 (–) |
| **ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)** | |
| ಅಪರಂಜಿ ಚಿನ್ನ 10 ಗ್ರಾಂ | 99,500 (–) |
| ಬೆಳ್ಳಿ ಕೆ.ಜಿಗೆ | 1,13,550 (–) |

ಹಿಂದಿನ ವಹಿವಾಟಿನ ಧಾರಣೆ ಲಭ್ಯವಿಲ್ಲ

ಷೇರುಪೇಟೆ ವಹಿವಾಟು




ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 24,363
ಇಂದಿನ ಅಂತ್ಯ: 24,585
ದಿನದ ಕನಿಷ್ಠ: 24,347
▲ 221

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹520
12 ಕ್ಕೆ ₹70
ಮೈಸೂರು: 100 ಕ್ಕೆ ₹530

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹256-568
ದ್ವಿತಳಿ (ಬಿ.ವಿ) ₹300-811

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹200
ಆರ್‌ಎಸ್‌ಎಸ್-5 ₹194
ಗುಡ್ ಲಾಟ್ ₹178

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹22000-24200
ತಿಪಟೂರು ₹23306-25500

ಈರುಳ್ಳಿ ಧಾರಣೆ
ಬೆಂಗಳೂರು (ಕ್ವಿಂಟಲ್‌ಗೆ)
ದೊಡ್ಡ ₹1400-1800
ಮಧ್ಯಮ ₹1000-1400
ಸಣ್ಣ ₹500-1000

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1380 (–)
ಸೋಯಾ (ರಿಫೈನ್ಡ್) ₹1260 (–)
ಸೂರ್ಯಕಾಂತಿ (ರಿಫೈನ್ಡ್) ₹1370 (–)
ಪಾಮೋಲಿನ್ ₹1220 (–)

## ಎಂಟು ಮಸೂದೆಗಳಿಗೆ ಅನುಮೋದನೆ

ನವದೆಹಲಿ(ಪಿಟಿಐ): ವಿರೋಧ ಪಕ್ಷಗಳ ಭಾಗವಹಿಸುವಿಕೆ ಇಲ್ಲದೆಯೇ ಎಂಟು ಮಸೂದೆಗಳನ್ನು ಸೋಮವಾರ ಲೋಕಸಭೆಯಲ್ಲಿ ಅಂಗೀಕರಿಸಲಾಯಿತು.

ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ವಿರೋಧ ಪಕ್ಷಗಳ ಪ್ರತಿಭಟನೆಯ ನಡುವೆಯೂ ಲೋಕಸಭೆಯು ರಾಷ್ಟ್ರೀಯ ಕ್ರೀಡಾ ಮಸೂದೆ–2025, ರಾಷ್ಟ್ರೀಯ ಉದ್ದೀಪನ ಮದ್ದುಸೇವನೆ ತಡೆ (ತಿದ್ದುಪಡಿ) ಮಸೂದೆಗಳನ್ನು ಅಂಗೀಕರಿಸಿತು.

ರಾಜ್ಯಸಭೆಯು ಗೋವಾ ವಿಧಾನಸಭೆ ಚುನಾವಣೆಯಲ್ಲಿ ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಮೀಸಲಾತಿ ಕಲ್ಪಿಸುವ ಮಸೂದೆ ಮತ್ತು ಭಾರತೀಯ ವಾಣಿಜ್ಯ ಹಡಗು ಮಸೂದೆಯನ್ನು ಅಂಗೀಕರಿಸಿತು. ಲೋಕಸಭೆಯು ಈಗಾಗಲೇ ಅಂಗೀಕರಿಸಿದ್ದ ಮಣಿಪುರ ಧನ ವಿನಿಯೋಗ ಮಸೂದೆ ಮತ್ತು ಮಣಿಪುರ ಸರಕು ಮತ್ತು ಸೇವಾ ತೆರಿಗೆ (ತಿದ್ದುಪಡಿ) ಮಸೂದೆಯನ್ನು ಹಿಂದಿರುಗಿಸಿತು.



# ಹೊಸ ಐ.ಟಿ. ಮಸೂದೆಗೆ ಒಪ್ಪಿಗೆ

## ಗಡುವು ಮುಗಿದ ನಂತರವೂ ಟಿಡಿಎಸ್ ಕ್ಲೇಮ್ ಸಲ್ಲಿಸಲು ಅವಕಾಶ

ನವದೆಹಲಿ (ಪಿಟಿಐ): ನಿಗದಿತ ದಿನಾಂಕಕ್ಕೆ ಮೊದಲು ಆದಾಯ ತೆರಿಗೆ (ಐ.ಟಿ) ವಿವರ ಸಲ್ಲಿಸಲು ಸಾಧ್ಯವಾಗದೆ ಇದ್ದರೂ, ಆದಾಯ ತೆರಿಗೆಯ ರೂಪದಲ್ಲಿ ಕಡಿತವಾದ ಮೊತ್ತವನ್ನು ದಂಡ ಪಾವತಿಸದೆಯೂ ಮರಳಿ ಪಡೆಯಲು ಅವಕಾಶ ಕಲ್ಪಿಸುವ ಮಸೂದೆಗೆ ಲೋಕಸಭೆಯು ಸೋಮವಾರ ಅಂಗೀಕಾರ ನೀಡಿದೆ.


ನಿರ್ಮಲಾ

ಆದಾಯ ತೆರಿಗೆ (ಸಂಖ್ಯೆ 2) ಮಸೂದೆಯನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಯಲ್ಲಿ ಮಂಡಿಸಿದರು. ಈ ಮಸೂದೆಯು 2026ರ ಏಪ್ರಿಲ್ 1ರಿಂದ ಅನ್ವಯವಾಗುವಂತೆ ಆದಾಯ ತೆರಿಗೆ ಕಾಯ್ದೆ – 1961ರ ಬದಲು ಜಾರಿಗೆ ಬರಲಿದೆ. ಹೊಸ ಮಸೂದೆಯನ್ನು ಲೋಕಸಭೆಯು ಗದ್ದಲದ ನಡುವೆ ಚರ್ಚೆ ಇಲ್ಲದೆ ಅಂಗೀಕರಿಸಿತು.

ವ್ಯಕ್ತಿಗಳ ಹಾಗೂ ಕಂಪನಿಗಳ ಆದಾಯಕ್ಕೆ ವಿಧಿಸುವ ತೆರಿಗೆಗೆ ಸಂಬಂಧಿಸಿದ, 63 ವರ್ಷಗಳಷ್ಟು ಹಳೆಯದಾದ ಕಾಯ್ದೆಯ ಬದಲಿಗೆ ಜಾರಿಗೆ ತರಲು ಉದ್ದೇಶಿಸಲಾಗಿರುವ ಮಸೂದೆಗೆ ಲೋಕಸಭೆಯು ಮೂರು ನಿಮಿಷಗಳಲ್ಲಿ ಅಂಗೀಕಾರ ನೀಡಿದೆ.

ಆದಾಯ ತೆರಿಗೆ ಕಾಯ್ದೆಗೆ ಹೋಲಿಸಿದರೆ, ಈ ಮಸೂದೆಯು ಪದಗಳನ್ನು ಹಾಗೂ ಸಂಕೀರ್ಣತೆಯನ್ನು ಕಡಿಮೆ ಮಾಡಿದೆ ಎನ್ನಲಾಗಿದೆ. ಮಸೂದೆಯಲ್ಲಿ ಇರುವ ವಿವರಗಳು ಸುಲಭವಾಗಿ ಅರ್ಥವಾಗುವ ಬಗೆಯಲ್ಲಿ ಇವೆ. 'ತೆರಿಗೆ ನಿರ್ಧರಿಸುವ ವರ್ಷ', 'ಹಿಂದಿನ ವರ್ಷ' ಎಂಬ ಗೊಂದಲ ಮೂಡಿಸುವ ಪದಗಳ ಬಳಕೆಯನ್ನು ಕೈಬಿಟ್ಟಿರುವ ಈ ಮಸೂದೆಯು 'ತೆರಿಗೆ ವರ್ಷ' ಎಂಬ ಪದಗಳನ್ನು ಬಳಸಿದೆ.

ಮಸೂದೆಗೆ ರಾಜ್ಯಸಭೆಯ ಒಪ್ಪಿಗೆ ಸಿಗಬೇಕಿದೆ. ಅದು ದೊರೆತ ನಂತರ ರಾಷ್ಟ್ರಪತಿಯವರ ಅಂಕಿತ ಬೇಕಾಗುತ್ತದೆ. ನಂತರದಲ್ಲಿ ಈ ಮಸೂದೆಯು ಕಾಯ್ದೆಯಾಗಿ ಜಾರಿಗೆ ಬರುತ್ತದೆ.

ಫೆಬ್ರುವರಿಯಲ್ಲಿ ಮಂಡಿಸಲಾಗಿದ್ದ 'ಆದಾಯ ತೆರಿಗೆ ಮಸೂದೆ – 2025'ಅನ್ನು ನಿರ್ಮಲಾ ಅವರು ಶುಕ್ರವಾರ ಹಿಂದಕ್ಕೆ ಪಡೆದಿದ್ದರು. ಪರಿಷ್ಕೃತ ಮಸೂದೆಯನ್ನು ಸೋಮವಾರ ಮಂಡಿಸಿದರು. ಪರಿಷ್ಕೃತ ಮಸೂದೆಯು ಸಂಸತ್ತಿನ ಪರಿಶೀಲನಾ ಸಮಿತಿಯು ನೀಡಿದ್ದ ಬಹುತೇಕ ಎಲ್ಲ ಶಿಫಾರಸುಗಳನ್ನು ಒಳಗೊಂಡಿದೆ. ಈ ಸಮಿತಿಯು ಮೂಲ ಮಸೂದೆಯನ್ನು ಪರಿಶೀಲಿಸಿ, ಶಿಫಾರಸುಗಳನ್ನು ನೀಡಿತ್ತು.

ನಿಗದಿತ ದಿನಾಂಕಕ್ಕೆ ಮೊದಲು ಐ.ಟಿ. ವಿವರ ಸಲ್ಲಿಸದೆ ಇರುವವರ 'ಮೂಲದಲ್ಲೇ ತೆರಿಗೆ ಕಡಿತ'ದ ಕ್ಲೇಮ್‌ಗೆ ಸಂಬಂಧಿಸಿದ ಕಾನೂನಿನ ಅಂಶಗಳನ್ನು ಬದಲಾಯಿಸಬೇಕು ಎಂದು ಪರಿಶೀಲನಾ ಸಮಿತಿಯು ಹೇಳಿತ್ತು.

ಪರಿಷ್ಕೃತ ಮಸೂದೆಯ ಪ್ರಕಾರ, ಗಡುವಿನ ನಂತರ ಐ.ಟಿ. ವಿವರ ಸಲ್ಲಿಸುವವರು ಕೂಡ ತಮ್ಮ ಟಿಡಿಎಸ್‌ಗೆ ದಂಡಶುಲ್ಕ ಇಲ್ಲದೆ ಮರುಪಾವತಿ ಕ್ಲೇಮ್ ಸಲ್ಲಿಸಲು ಅವಕಾಶ ಇರುತ್ತದೆ.

ಹಣಕಾಸು ಸಚಿವಾಲಯವು ಈಗ ಜಾರಿಯಲ್ಲಿ ಇರುವ ಆದಾಯ ತೆರಿಗೆ ಕಾಯ್ದೆಯ ಅಂಶಗಳನ್ನು ಹೊಸ ಮಸೂದೆಯಲ್ಲಿ ಸೇರಿಸಿಕೊಂಡಿದೆ.

### ತೆರಿಗೆ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರ

ಹೊಸ ಮೂದೆಯು 2026ರ ಏಪ್ರಿಲ್ 1ರಿಂದ ಜಾರಿಗೆ ಬಂದ ನಂತರ, ತೆರಿಗೆ ವಂಚನೆಯ ಅನುಮಾನ ಬಂದರೆ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ವ್ಯಕ್ತಿಗಳ ಡಿಜಿಟಲ್ ಖಾತೆಗಳಾದ ಇ–ಮೇಲ್, ಸಾಮಾಜಿಕ ಜಾಲತಾಣ ಖಾತೆಗಳು, ಬ್ಯಾಂಕ್ ಖಾತೆಗಳು, ಷೇರು ಟ್ರೇಡಿಂಗ್ ವೇದಿಕೆಗಳು, ಆನ್‌ಲೈನ್ ಮೂಲಕ ಮಾಡಿರುವ ಹೂಡಿಕೆಗಳನ್ನು ಪರಿಶೀಲಿಸಲು ಅಧಿಕಾರ ಪಡೆಯುತ್ತಾರೆ ಎಂದು ತಜ್ಞರು ಹೇಳಿದ್ದಾರೆ.

ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಕೀಲಿಕೈ ಸಿಗದೆ ಇದ್ದರೆ ಯಾವುದೇ ಬಾಗಿಲು, ಪೆಟ್ಟಿಗೆ, ಲಾಕರ್, ಕಪಾಟಿನ ಬೀಗವನ್ನು ಮುರಿಯುವ ಅಧಿಕಾರವನ್ನು ಹೊಂದಿರುತ್ತಾರೆ ಎಂದು ಹೊಸ ಮಸೂದೆಯಲ್ಲಿ ಹೇಳಲಾಗಿದೆ. ಕಂಪ್ಯೂಟರ್ ವ್ಯವಸ್ಥೆಯನ್ನು ಪರಿಶೀಲಿಸಲು ಅವರಿಗೆ ಪಾಸ್‌ವರ್ಡ್ ಸಿಗದೆ ಇದ್ದರೆ, ಅದನ್ನು ಮೀರಿ ಆ ವ್ಯವಸ್ಥೆಯನ್ನು ಪರಿಶೀಲಿಸುವ ಅಧಿಕಾರವು ಅವರಿಗೆ ಇರುತ್ತದೆ.



## ಜುಲೈ: ₹42 ಸಾವಿರ ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಿಗೆ ಹಣದ ಹರಿವು ಜುಲೈ ತಿಂಗಳಲ್ಲಿ ಶೇಕಡ 81ರಷ್ಟು ಹೆಚ್ಚಳ ಕಂಡಿದೆ ಎಂದು ಎಎಂಎಫ್‌ಐ ಸೋಮವಾರ ಹೇಳಿದೆ.

ಜುಲೈನಲ್ಲಿ ಈಕ್ವಿಟಿ ಆಧಾರಿತ ಮ್ಯೂಚುವಲ್ ಫಂಡ್‌ಗಳಲ್ಲಿ ₹42,702 ಕೋಟಿ ತೊಡಗಿಸಲಾಗಿದೆ. ಇದು ಜೂನ್ ತಿಂಗಳಲ್ಲಿ ₹23,587 ಕೋಟಿ ಆಗಿತ್ತು.

### ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಹೇಳಿಕೆ

## 'ಕನಿಷ್ಠ ಮೊತ್ತ ಬ್ಯಾಂಕ್‌ಗಳ ವಿವೇಚನೆ'

ಗೊಜಾರಿಯಾ (ಗುಜರಾತ್) (ಪಿಟಿಐ): ಉಳಿತಾಯ ಖಾತೆಯಲ್ಲಿ ಗ್ರಾಹಕರು ಇರಿಸಬೇಕಿರುವ ಕನಿಷ್ಠ ಮೊತ್ತ ಎಷ್ಟು ಎಂಬುದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಬ್ಯಾಂಕ್‌ಗಳು ಸ್ವಾತಂತ್ರ್ಯ ಹೊಂದಿವೆ ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಸೋಮವಾರ ಹೇಳಿದ್ದಾರೆ.


ಸಂಜಯ್

ಉಳಿತಾಯ ಖಾತೆಯಲ್ಲಿ ಕನಿಷ್ಠ ಎಷ್ಟು ಮೊತ್ತ ಇರಿಸಿಕೊಳ್ಳಬೇಕು ಎಂಬುದು ಆರ್‌ಬಿಐನ ನಿಯಂತ್ರಣ ವ್ಯಾಪ್ತಿಗೆ ಬರುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಕಾರ್ಯಕ್ರಮವೊಂದರಲ್ಲಿ ಭಾಗಿಯಾದ ನಂತರ ಅವರು ಸುದ್ದಿಗಾರರ ಜೊತೆ ಮಾತನಾಡುವಾಗ ಈ ಮಾತು ಹೇಳಿದ್ದಾರೆ.

ಉಳಿತಾಯ ಖಾತೆಯಲ್ಲಿ ಇರಿಸಬೇಕಿರುವ ಕನಿಷ್ಠ ಮೊತ್ತವನ್ನು ಖಾಸಗಿ ಬ್ಯಾಂಕೊಂದು ಹೆಚ್ಚು ಮಾಡಿರುವ ಬಗ್ಗೆ ಪ್ರಶ್ನಿಸಿದಾಗ ಮಲ್ಹೋತ್ರಾ ಈ ಉತ್ತರ ನೀಡಿದ್ದಾರೆ. 'ಕನಿಷ್ಠ ಮೊತ್ತ ಎಷ್ಟಿರಬೇಕು ಎಂಬುದನ್ನು ನಿಗದಿ ಮಾಡುವ ಸ್ವಾತಂತ್ರ್ಯವನ್ನು ಆಯಾ ಬ್ಯಾಂಕ್‌ಗಳಿಗೆ ನೀಡಲಾಗಿದೆ. ಕೆಲವು ಬ್ಯಾಂಕ್‌ಗಳು ₹10 ಸಾವಿರ, ಇನ್ನು ಕೆಲವು ಬ್ಯಾಂಕ್‌ಗಳು ₹2,000 ಕನಿಷ್ಠ ಮೊತ್ತ ನಿಗದಿ ಮಾಡಿವೆ. ಕೆಲವು ಬ್ಯಾಂಕ್‌ಗಳು ಕನಿಷ್ಠ ಮೊತ್ತ ಕಾಯ್ದುಕೊಳ್ಳುವ ಅಗತ್ಯವೇ ಇಲ್ಲ ಎಂದು ಹೇಳಿವೆ' ಎಂದಿದ್ದಾರೆ.

ಐಸಿಐಸಿಐ ಬ್ಯಾಂಕ್ ನಗರ ಹಾಗೂ ಮಹಾನಗರ ಪ್ರದೇಶಗಳ ತನ್ನ ಗ್ರಾಹಕರು ಆಗಸ್ಟ್ 1ರ ನಂತರ ತೆರೆದ ಉಳಿತಾಯ ಖಾತೆಗಳಲ್ಲಿ ಮಾಸಿಕ ಸರಾಸರಿ ಕನಿಷ್ಠ ಮೊತ್ತವಾಗಿ ₹50 ಸಾವಿರ ಇರಿಸಬೇಕು ಎಂದು ಹೇಳಿದೆ. ಆದರೆ ದೇಶದ ಅತಿದೊಡ್ಡ ಬ್ಯಾಂಕ್ ಆಗಿರುವ ಎಸ್‌ಬಿಐ, ಉಳಿತಾಯ ಖಾತೆಯಲ್ಲಿ ಕನಿಷ್ಠ ಮೊತ್ತ ಕಾಯ್ದುಕೊಳ್ಳುವ ಅಗತ್ಯ ಇಲ್ಲ ಎಂದು ತನ್ನ ಗ್ರಾಹಕರಿಗೆ ಹೇಳಿದೆ.

ಕಾರ್ಯಕ್ರಮದಲ್ಲಿ ಮಾತನಾಡಿದ ಮಲ್ಹೋತ್ರಾ ಅವರು, 'ಕೈಗೊಳ್ಳುವ ಯಾವುದೇ ತೀರ್ಮಾನದ ಪ್ರಯೋಜನವು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪುವುದನ್ನು ಖಾತರಿಪಡಿಸಬೇಕು' ಎಂದು ಹೇಳಿದರು.



## ರಫ್ತು ಹೆಚ್ಚಿಸಲು 50 ದೇಶಗಳ ಕಡೆ ಗಮನ

ನವದೆಹಲಿ (ಪಿಟಿಐ): ಭಾರತದ ಸರಕುಗಳಿಗೆ ಅಮೆರಿವು ಭಾರಿ ಪ್ರಮಾಣದಲ್ಲಿ ಸುಂಕ ವಿಧಿಸಿರುವ ಸಂದರ್ಭದಲ್ಲಿ, ಭಾರತದಿಂದ ರಫ್ತು ಹೆಚ್ಚಿಸಲು ಕೇಂದ್ರ ಸರ್ಕಾರವು ಕೆಲವು ಕ್ರಮಗಳನ್ನು ಕೈಗೊಳ್ಳಲು ಮುಂದಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.




ಪಶ್ಚಿಮ ಏಷ್ಯಾ ಹಾಗೂ ಆಫ್ರಿಕಾದ ದೇಶಗಳು ಸೇರಿ ಒಟ್ಟು 50 ದೇಶಗಳನ್ನು ಗುರಿಯಾಗಿಸಿಕೊಂಡು ರಫ್ತು ಹೆಚ್ಚು ಮಾಡುವುದು ಕೂಡ ಕೇಂದ್ರದ ಕ್ರಮಗಳ ಭಾಗವಾಗಿದೆ ಎಂದು ಅವರು ಹೇಳಿದ್ದಾರೆ. ಈ ದೇಶಗಳು ಭಾರತದ ಒಟ್ಟು ರಫ್ತಿನ ಶೇ 90ರಷ್ಟು ಪಾಲನ್ನು ಹೊಂದಿವೆ.

ಕೇಂದ್ರ ವಾಣಿಜ್ಯ ಸಚಿವಾಲಯವು 20 ದೇಶಗಳನ್ನು ಕೇಂದ್ರೀಕರಿಸಿಕೊಂಡು ಆದಾಗಲೇ ಕ್ರಮಗಳನ್ನು ಕೈಗೊಂಡಿತ್ತು. ಆದರೆ ಈಗ ಹೆಚ್ಚುವರಿಯಾಗಿ 30 ದೇಶಗಳನ್ನು ಈ ಪಟ್ಟಿಗೆ ಸೇರಿಸಲಾಗಿದೆ ಎಂದು ಗೊತ್ತಾಗಿದೆ.

**ಹೊಸ ಮಾರುಕಟ್ಟೆ ಅರಸಲು ಸಲಹೆ:** ಸಾಗರೋತ್ಪನ್ನಗಳ ರಫ್ತುದಾರರು ಅಮೆರಿಕ ವಿಧಿಸಿರುವ ಭಾರಿ ಸುಂಕದ ಸವಾಲನ್ನು ಧೈರ್ಯದಿಂದ ಎದುರಿಸಬೇಕು, ಸಿಗಡಿ ಹಾಗೂ ಇತರ ಉತ್ಪನ್ನಗಳನ್ನು ರಫ್ತು ಮಾಡಲು ಪರ್ಯಾಯ ಮಾರುಕಟ್ಟೆಗಳನ್ನು ಅರಸಬೇಕು ಎಂದು ಕೇಂದ್ರ ಹೇಳಿದೆ.

'ಭಾರತದ ಸಾಗರೋತ್ಪನ್ನಗಳ ರಫ್ತಿಗೆ ಪರ್ಯಾಯ ಮಾರುಕಟ್ಟೆ ಲಭ್ಯವಿವೆ' ಎಂದು ಕೇಂದ್ರ ಮೀನುಗಾರಿಕಾ ಸಚಿವ ರಾಜೀವ್ ರಂಜನ್ ಸಿಂಗ್ ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.

'ಐರೋಪ್ಯ ಒಕ್ಕೂಟ, ಜಪಾನ್, ದಕ್ಷಿಣ ಕೊರಿಯಾ, ಬ್ರಿಟನ್, ರಷ್ಯಾ, ಆಸ್ಟ್ರೇಲಿಯಾ, ಪಶ್ಚಿಮ ಏಷ್ಯಾದ ದೇಶಗಳಿಗೆ ರಫ್ತು ಮಾಡಲು ಅವಕಾಶ ಇದೆ' ಎಂದು ಅವರು ಹೇಳಿದ್ದಾರೆ.

## 'ಚೀನಾ ಮೇಲೆ ಸುಂಕ: ಟ್ರಂಪ್ ನಿರ್ಧಾರ ಅಂತಿಮವಾಗಿಲ್ಲ'

ನ್ಯೂಯಾರ್ಕ್ (ಪಿಟಿಐ): 'ರಷ್ಯಾದಿಂದ ತೈಲ ಖರೀದಿಸುತ್ತಿರುವ ಚೀನಾದಿಂದ ಆಮದು ಮಾಡಿಕೊಳ್ಳುವ ಉತ್ಪನ್ನಗಳ ಮೇಲೆ ಸುಂಕ ಹೇರುವ ಬಗ್ಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇದುವರೆಗೂ ತೀರ್ಮಾನ ಕೈಗೊಂಡಿಲ್ಲ' ಎಂದು ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಹೇಳಿದರು.


ಜೆ.ಡಿ. ವ್ಯಾನ್ಸ್

'ಟ್ರಂಪ್ ಅವರು ಯೋಚಿಸುತ್ತಿದ್ದು, ಇದುವರೆಗೂ ನಿರ್ಧಾರ ತೆಗೆದುಕೊಂಡಿಲ್ಲ. ಆದರೆ, ಚೀನಾ ಮತ್ತು ಅಮೆರಿಕದ ಸಂಬಂಧವು ಹಲವು ಸ್ತರಗಳಲ್ಲಿ ಇವೆ. ರಷ್ಯಾಕ್ಕೆ ಸಂಬಂಧಿಸಿದ ವಿಚಾರಗಳಿಂತ ಮಹತ್ವದ ವಿಚಾರಗಳಲ್ಲಿ ನಮ್ಮ ಎರಡು ದೇಶಗಳ ಸಂಬಂಧವು ಏರ್ಪಟ್ಟಿದೆ' ಎಂದರು.

'ರಷ್ಯಾದಿಂದ ತೈಲ ಖರೀದಿಸುತ್ತಿರುವ ಭಾರತದ ಮೇಲೆ ಸುಂಕ ವಿಧಿಸಲಾಗಿದೆ. ಚೀನಾ ಕೂಡ ರಷ್ಯಾದಿಂದ ತೈಲ ಖರೀದಿಸುತ್ತಿದೆ. ಆದರೆ, ಚೀನಾ ಮೇಲೆ ಯಾಕೆ ಸುಂಕ ವಿಧಿಸಿಲ್ಲ' ಎಂದು ಪತ್ರಕರ್ತರು ಕೇಳಿದ ಪ್ರಶ್ನೆಗೆ ವ್ಯಾನ್ಸ್ ಉತ್ತರಿಸಿದರು.

# ₹39,577 ಕೋಟಿ ಜಿಎಸ್‌ಟಿ ವಂಚನೆ

## ಸಣ್ಣ ವರ್ತಕರಿಗೆ ಕೇಂದ್ರ ಜಿಎಸ್‌ಟಿ ಅಧಿಕಾರಿಗಳು ನೋಟಿಸ್ ನೀಡಿಲ್ಲ: ಸಚಿವೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ 2024-25ನೇ ಆರ್ಥಿಕ ವರ್ಷದಲ್ಲಿ 1,254 ಪ್ರಕರಣಗಳಲ್ಲಿ ₹39,577 ಕೋಟಿ ಮೊತ್ತದ ಜಿಎಸ್‌ಟಿ ವಂಚನೆ ಪತ್ತೆ ಹಚ್ಚಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು.

**ಜಿಎಸ್‌ಟಿ ವಂಚನೆ ಪ್ರಕರಣಗಳು**

| ವರ್ಷ | ಒಟ್ಟು ಪ್ರಕರಣಗಳು | ವಶ (₹ಕೋಟಿಗಳಲ್ಲಿ) | ಸ್ವಯಂಪ್ರೇರಿತ ಮರುಪಾವತಿ (₹ಕೋಟಿಗಳಲ್ಲಿ) | ಬಂಧನ |
|---|---|---|---|---|
| 2022-23 | 959 | 25,839 | 1,705 | 2 |
| 2023-24 | 925 | 7,202 | 1,197 | 2 |
| 2024-25 | 1,254 | 39,577 | 1,623 | 9 |

ಬಿಜೆಪಿ ಸಂಸದರಾದ ಡಾ.ಕೆ. ಸುಧಾಕರ್ ಹಾಗೂ ತೇಜಸ್ವಿ ಸೂರ್ಯ ಪ್ರಶ್ನೆಗೆ ಲೋಕಸಭೆಯಲ್ಲಿ ಸೋಮವಾರ ಪ್ರಶ್ನೋತ್ತರ ಅವಧಿಯಲ್ಲಿ ಉತ್ತರಿಸಿದ ಅವರು, 'ಈ ಪ್ರಕರಣಗಳಲ್ಲಿ ಒಂಬತ್ತು ಆರೋಪಿಗಳನ್ನು ಬಂಧಿಸಲಾಗಿದೆ. ಪ್ರಕರಣ ದಾಖಲಿಸಿದ ಬಳಿಕ ₹1,623 ಕೋಟಿ ಮೊತ್ತ ಸ್ವಯಂಪ್ರೇರಿತವಾಗಿ ಪಾವತಿ ಆಗಿದೆ' ಎಂದರು. ಹಿಂದಿನ ವರ್ಷಕ್ಕೆ ಹೋಲಿಸಿದರೆ ಜಿಎಸ್‌ಟಿ ವಂಚನೆ ಪ್ರಮಾಣ ಐದು ಪಟ್ಟು ಹೆಚ್ಚಾಗಿದೆ.

**ಸಣ್ಣ ವರ್ತಕರಿಗಿಲ್ಲ ನೋಟಿಸ್:** ಯುಪಿಐ ವಹಿವಾಟುಗಳ ಆಧಾರದಲ್ಲಿ ಕರ್ನಾಟಕ ಸೇರಿದಂತೆ ದೇಶದ ಸಣ್ಣ ವರ್ತಕರು ಮತ್ತು ಬೀದಿಬದಿ ವ್ಯಾಪಾರಿಗಳಿಗೆ ಕೇಂದ್ರ ಜಿಎಸ್‌ಟಿ ಅಧಿಕಾರಿಗಳು ಯಾವುದೇ ನೋಟಿಸ್ ನೀಡಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಯುಪಿಐ ಮೂಲಕ ವಾರ್ಷಿಕ ₹40 ಲಕ್ಷಕ್ಕಿಂತ ಹೆಚ್ಚಿನ ವಹಿವಾಟು ನಡೆಸಿದ್ದ ಬೇಕರಿ, ಹೋಟೆಲ್, ಬೀಡಾ ಅಂಗಡಿ ಮತ್ತು ಟೀ ಅಂಗಡಿ ಮಾಲೀಕರಿಗೆ ಕರ್ನಾಟಕದ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ನೋಟಿಸ್ ನೀಡಿದ್ದರು. ನೋಂದಣಿ ಮಾಡಿಸಿ ಮತ್ತು ಜಿಎಸ್‌ಟಿ ಪಾವತಿಸಿ ಎಂದು ಸೂಚಿಸಿದ್ದರು. ಈ ಕ್ರಮಕ್ಕೆ ಆಕ್ಷೇಪ ಎದುರಾಗಿತ್ತು. ನೋಟಿಸ್ ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿ ವರ್ತಕರು ಪ್ರತಿಭಟನೆ ನಡೆಸಿದ್ದರು. ಜಿಎಸ್‌ಟಿ ಕೇಂದ್ರದ್ದು ಎಂದು ಕಾಂಗ್ರೆಸ್ ದೂರಿದ್ದರೆ, ಕರ್ನಾಟಕದಲ್ಲಿ ಮಾತ್ರ ಈ ರೀತಿ ವಸೂಲು ಮಾಡಲಾಗುತ್ತಿದೆ ಎಂದು ಬಿಜೆಪಿ ನಾಯಕರು ಆಪಾದಿಸಿದ್ದರು. ಇದು ರಾಜಕೀಯ ವಾಗ್ವಾದಕ್ಕೂ ಕಾರಣವಾಗಿತ್ತು.

ಆ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಸಭೆ ನಡೆಸಿ ವಾಣಿಜ್ಯ ತೆರಿಗೆ ಇಲಾಖೆ ನೋಟಿಸ್ ನೀಡಿದ್ದ 9,000 ಸಣ್ಣ ವರ್ತಕರು ಇಲ್ಲಿಯವರೆಗೂ ಪಾವತಿಸಬೇಕಿದ್ದ ಜಿಎಸ್‌ಟಿ ಮನ್ನಾ ಮಾಡಲು ಸಮ್ಮತಿಸಿದ್ದರು.

ಸರಕುಗಳ ವಾರ್ಷಿಕ ವಹಿವಾಟು ಮಿತಿಯನ್ನು ₹40 ಲಕ್ಷಕ್ಕೆ ಹಾಗೂ ಸೇವಾ ವಹಿವಾಟು ಮಿತಿಯನ್ನು ₹20 ಲಕ್ಷಕ್ಕೆ ಸರ್ಕಾರ ನಿಗದಿಪಡಿಸಿದೆ.

ಈ ಮಿತಿ ದಾಟಿದವರು ಜಿಎಸ್‌ಟಿ ನೋಂದಣಿ ಮಾಡಿಸುವುದು ಹಾಗೂ ನಿಯಮದಂತೆ ತೆರಿಗೆ ಪಾವತಿಸುವುದು ಕಡ್ಡಾಯ.

## ವಾಷಿಂಗ್ಟನ್: ಪೊಲೀಸ್ ಬದಲು ಭದ್ರತಾ ಪಡೆ

ವಾಷಿಂಗ್ಟನ್ (ಎಪಿ): ರಾಷ್ಟ್ರ ರಾಜಧಾನಿಯಲ್ಲಿ ಅಪರಾಧ ಪ್ರಕರಣ ತಗ್ಗಿಸಲು ನಗರದ ಪೊಲೀಸ್ ವ್ಯವಸ್ಥೆಯನ್ನು ಅಮೆರಿಕ ಸರ್ಕಾರದ ಅಡಿಗೆ ತಂದು, ರಾಷ್ಟ್ರೀಯ ಭದ್ರತಾ ಪಡೆಯನ್ನು ನಿಯೋಜನೆ ಮಾಡಲಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ತಿಳಿಸಿದ್ದಾರೆ.

ಇರಾಕ್, ಬ್ರೆಜಿಲ್ ಮತ್ತು ಕೊಲಂಬಿಯಾ ನಗರಗಳಿಗೆ ಹೋಲಿಸಿದರೂ ವಾಷಿಂಗ್ಟನ್‌ನಲ್ಲಿ ಕಳಪೆ ಸ್ಥಿತಿ ಇದೆ ಎಂದು ಹೇಳಿದ್ದಾರೆ.

**ಅಡಿಕೆ ಧಾರಣೆ**

| ಕುಮಟಾ | | ಸಿದ್ದಾಪುರ | | ಯಲ್ಲಾಪುರ | |
|---|---|---|---|---|---|
| ಚಾಲಿ | 39869-43000 | ಬಿಳಿಗೋಟು | 24899-30700 | ಅಪಿ | 61179-61179 |
| ಚಿಪ್ಪು | 25029-31999 | ಚಾಲಿ | 35399-42099 | ಬಿಳಿಗೋಟು | 18899-31809 |
| ಕೋಕ | 7089-22229 | ಕೋಕ | 16599-23589 | ಚಾಲಿ | 33400-42839 |
| ಫ್ಯಾಕ್ಟರಿ | 6029-30339 | ಕೆಂಪುಗೋಟು | 20319-23099 | ಕೋಕ | 13299-20710 |
| ಹೊಸಚಾಲಿ | 35869-42899 | ರಾಶಿ | 43699-49899 | ಕೆಂಪುಗೋಟು | 23200-25542 |
| **ಪುತ್ತೂರು** | | ತಟ್ಟಿಬೆಟ್ಟೆ | 30199-34319 | ರಾಶಿ | 42605-57099 |
| ಕೋಕ | 20000-28000 | **ಶಿರಸಿ** | | ತಟ್ಟಿಬೆಟ್ಟೆ | 32101-37201 |
| ಹೊಸತು | 26000-48500 | ಬೆಟ್ಟೆ | 25699-45350 | **ಸಾಗರ** | |
| **ಶಿವಮೊಗ್ಗ** | | ಬಿಳಿಗೋಟು | 23709-34278 | ಬಿಳಿಗೋಟು | 8100-27535 |
| ಬೆಟ್ಟೆ | 53219-62752 | ಚಾಲಿ | 38399-43639 | ಚಾಲಿ | 24349-38599 |
| ಗೊರಬಲು | 15009-34609 | ಕೆಂಪುಗೋಟು | 22699-26409 | ಕೋಕ | 14199-24100 |
| ರಾಶಿ | 46158-59599 | ರಾಶಿ | 45499-48500 | ಕೆಂಪುಗೋಟು | 24199-32099 |
| ಸರಕು | 68889-93340 | | | ರಾಶಿ | 34599-59670 |
| | | | | ಸಿಪ್ಪೆಗೋಟು | 8500-19899 |

## ಗಾಜಾ: 'ಅಲ್ ಜಜೀರಾ' ಪತ್ರಕರ್ತ ಸಾವು

ಜೆರುಸಲೇಂ (ಎಪಿ): 'ನಮ್ಮ ಪತ್ರಕರ್ತ ಅನಾಸ್–ಅಲ್–ಶರೀಫ್ ಅವರನ್ನು ಗಾಜಾದಲ್ಲಿ ಹತ್ಯೆ ಮಾಡಲಾಗಿದೆ' ಎಂದು ಅಲ್ ಜಜೀರಾ ಸುದ್ದಿ ವಾಹಿನಿ ತಿಳಿಸಿದೆ.

ಅನಾಸ್ ಹಾಗೂ ಇತರ ಪತ್ರಕರ್ತರು ತಮ್ಮ ಸಿಬ್ಬಂದಿಯೊಂದಿಗೆ ಗಾಜಾದಲ್ಲಿ ಡೇರೆಯೊಂದರಲ್ಲಿದ್ದರು. ಅಲ್ಲಿ ಅವರೆಲ್ಲರನ್ನೂ ಹತ್ಯೆ ಮಾಡಲಾಗಿದೆ ಎಂದು ಗಾಜಾದ ಶಿಫಾ ಆಸ್ಪತ್ರೆಯ ಮಾಹಿತಿಯನ್ನು ಉಲ್ಲೇಖಿಸಿ 'ಅಲ್ ಜಜೀರಾ' ತಿಳಿಸಿದೆ. ಅನಾಸ್ ಅವರ ಸಾವನ್ನು ಇಸ್ರೇಲ್ ಸೇನೆಯು ಖಚಿತಪಡಿಸಿದೆ ಎಂದೂ ಹೇಳಿದೆ.

## ಅಣ್ವಸ್ತ್ರ ಬೆದರಿಕೆಗೆ ಭಾರತ ಎದಿರೇಟು

ಒಂದನೇ ಪುಟದಿಂದ...

'ಪಾಕಿಸ್ತಾನ ಸೇನಾ ಮುಖ್ಯಸ್ಥರ ಹೇಳಿಕೆ ಪಾಕಿಸ್ತಾನವು ಅನುಸರಿಸಿಕೊಂಡು ಬರುತ್ತಿರುವ ತಂತ್ರಗಾರಿಕೆಯ ಒಂದು ಭಾಗವಾಗಿದೆ. ಅಮೆರಿಕವು ಪಾಕಿಸ್ತಾನ ಸೇನೆಯನ್ನು ಬೆಂಬಲಿಸಿದಾಗಲೆಲ್ಲಾ ಅವರು ತಮ್ಮ ನೈಜ ಬಣ್ಣವನ್ನು ಹೊರಹಾಕುತ್ತಾರೆ' ಎಂದೂ ಭಾರತ ಪ್ರತಿಕ್ರಿಯಿಸಿದೆ.

ಭಾರತವು ಅಣ್ವಸ್ತ್ರ ಬೆದರಿಕೆಗೆ ಮಣಿಯುವುದಿಲ್ಲ. ರಾಷ್ಟ್ರೀಯ ಭದ್ರತೆ ಕಾಪಾಡಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದನ್ನು ಮುಂದುವರಿಸುತ್ತದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ಹೇಳಿಕೆಯಲ್ಲಿ ತಿಳಿಸಿದೆ.

ಭಾರತದ ಗೆಳೆಯನಾಗಿರುವ ರಾಷ್ಟ್ರವೊಂದರ ನೆಲದಿಂದ ಇಂತಹ ಹೇಳಿಕೆ ನೀಡಲಾಗಿದೆ ಎಂಬುದು ವಿಷಾದಕರ ಸಂಗತಿ ಎಂದು ಅಮೆರಿಕಕ್ಕೆ ಸ್ಪಷ್ಟ ಸಂದೇಶದಲ್ಲಿ ತಿಳಿಸಿದೆ.



## ರಷ್ಯಾ ಸಂಘರ್ಷ–ಶಾಂತಿಯುತ ಪರಿಹಾರಕ್ಕೆ ಸಲಹೆ

ನವದೆಹಲಿ (ಪಿಟಿಐ): 'ರಷ್ಯಾ ಜೊತೆಗಿನ ಸಂಘರ್ಷ ಕೊನೆಗಾಣಿಸಲು ಶಾಂತಿಯುತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಉಕ್ರೇನ್‌ಗೆ ಎಲ್ಲ ರೀತಿಯ ನೆರವು ನೀಡಲು ಭಾರತ ಬದ್ಧವಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿಗೆ ಭರವಸೆ ನೀಡಿದ್ದಾರೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ರಷ್ಯಾ ಅಧ್ಯಕ್ಷ ವ್ಲಾದಿಮರ್ ಪುಟಿನ್ ನಡುವೆ ಸಭೆ ನಿಗದಿಯಾಗಿರುವ ಬೆನ್ನಲ್ಲೇ, ಉಭಯ ದೇಶಗಳ ನಾಯಕರು ಫೋನ್‌ನ ಮೂಲಕ ಸಂಭಾಷಣೆ ನಡೆಸಿದ್ದಾರೆ.

'ಸಂಘರ್ಷದ ಆರಂಭದಿಂದಲೂ ಶಾಂತಿಯುತ ತ್ವರಿತ ಪರಿಹಾರಕ್ಕಾಗಿ ಭಾರತವು ಸತತ ಬೆಂಬಲಿಸುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸಾಮಾಜಿಕ ಜಾಲತಾಣದ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

**ಧನ್ಯವಾದ ಸಲ್ಲಿಕೆ:** 'ಪ್ರಧಾನಿ ನರೇಂದ್ರ ಮೋದಿ ಜೊತೆಗೆ ದ್ವಿಪಕ್ಷೀಯ ಸಹಕಾರ ಸೇರಿದಂತೆ ಸಮಗ್ರ ರಾಜತಾಂತ್ರಿಕ ಸ್ಥಿತಿಗತಿಯ ಕುರಿತಂತೆ ಚರ್ಚಿಸಲಾಯಿತು. ಅದರಲ್ಲೂ, ದೇಶದ ಜನರಿಗೆ ಬೆಂಬಲ ಸೂಚಿಸಿ ಪ್ರಧಾನಿ ಮೋದಿಯವರ ಮಾತುಗಳಿಗೆ ಆಭಾರಿಯಾಗಿದ್ದೇನೆ' ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿಗೆ ತಿಳಿಸಿದ್ದಾರೆ.

'ಅದೇ ರೀತಿ ರಷ್ಯಾದಿಂದ ಭಾರತವು ಆಮದು ಮಾಡಿಕೊಳ್ಳುತ್ತಿರುವ ತೈಲ ಖರೀದಿಗೆ ಕಡಿವಾಣ ಹಾಕುವ ಅಗತ್ಯವಿದೆ. ಇದರಿಂದ ಯುದ್ಧದ ಮುಂದುವರಿಕೆಗೆ ಹರಿದುಬರುತ್ತಿರುವ ಹಣಕಾಸನ್ನು ಕಡಿಮೆ ಮಾಡಬಹುದು' ಎಂದು ಹೇಳಿದ್ದಾರೆ.


## ದೆಹಲಿ– ವಾಷಿಂಗ್ಟನ್ 'ಏರ್ ಇಂಡಿಯಾ' ಸೇವೆ ಸ್ಥಗಿತ

ಮುಂಬೈ: ದೆಹಲಿ ಮತ್ತು ವಾಷಿಂಗ್ಟನ್ ಡಿ.ಸಿ. ನಡುವಿನ ಸೇವೆಗಳನ್ನು ಸೆಪ್ಟೆಂಬರ್ 1ರಿಂದ ಸ್ಥಗಿತಗೊಳಿಸುವುದಾಗಿ ಏರ್ ಇಂಡಿಯಾ ಸೋಮವಾರ ಘೋಷಿಸಿದೆ.

ವಿಮಾನಯಾನದ ಒಟ್ಟಾರೆ ಮಾರ್ಗಗಳ ಭದ್ರತೆಯನ್ನು ಖಾತರಿಪಡಿಸುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಿದೆ.

ಏರ್ ಇಂಡಿಯಾ ತನ್ನ 26 ಬೋಯಿಂಗ್ 787-8 ವಿಮಾನಗಳನ್ನು ಗ್ರಾಹಕರ ಅನುಭವ ಸುಧಾರಣೆಗಾಗಿ ನವೀಕರಣ (ರಿಟ್ರೊಫಿಟ್) ಮಾಡುತ್ತಿದೆ. ಇದರಿಂದ 2026ರ ಅಂತ್ಯದವರೆಗೆ ಹಲವು ವಿಮಾನಗಳು ಲಭ್ಯವಿರುವುದಿಲ್ಲ ಎಂದು ಏರ್ ಇಂಡಿಯಾ ವಕ್ತಾರರು ತಿಳಿಸಿದ್ದಾರೆ.

# ದುಬಾರಿ ಕೂಲಿ



ತಮಿಳು ಹಾಗೂ ತೆಲುಗು ಭಾಷೆಯ ಬಿಗ್ ಬಜೆಟ್ ಸಿನಿಮಾಗಳು ಕರ್ನಾಟಕದಲ್ಲಿ ತೆರೆಕಂಡಾಗ ಅವುಗಳ ಟಿಕೆಟ್ ದರ ದುಬಾರಿಯಾಗಿರುವುದು ಹೊಸದೇನಲ್ಲ. ರಜನಿಕಾಂತ್ ನಟನೆಯ, ಲೋಕೇಶ್ ಕನಗರಾಜ್ ನಿರ್ದೇಶನದ 'ಕೂಲಿ' ಸಿನಿಮಾ ಆ.14ರಂದು ತೆರೆಕಾಣುತ್ತಿದ್ದು, ಬೆಂಗಳೂರಿನಲ್ಲಿ ಈ ಸಿನಿಮಾದ ಟಿಕೆಟ್ ದರ ಗರಿಷ್ಠ ₹2 ಸಾವಿರ ತಲುಪಿದೆ.

ರಾಜ್ಯದ ಎಲ್ಲಾ ಏಕಪರದೆ ಹಾಗೂ ಮಲ್ಟಿಪ್ಲೆಕ್ಸ್‌ಗಳಲ್ಲಿ ಟಿಕೆಟ್ ದರವನ್ನು ಗರಿಷ್ಠ ₹200ಕ್ಕೆ ನಿಗದಿಗೊಳಿಸಿ ಸರ್ಕಾರ ಕರಡು ಆದೇಶ ಹೊರಡಿಸಿದೆ. ಇದಾದ ಬಳಿಕ ಬರುತ್ತಿರುವ ಮೊದಲ ಬಿಗ್ ಬಜೆಟ್ ಸಿನಿಮಾ ಇದಾಗಿದೆ. ರಾಜಧಾನಿಯಲ್ಲೇ ಸುಮಾರು 63 ಏಕಪರದೆ ಹಾಗೂ ಮಲ್ಟಿಪ್ಲೆಕ್ಸ್‌ಗಳಲ್ಲಿ ಈ ಸಿನಿಮಾ ತೆರೆ ಕಾಣುತ್ತಿದ್ದು, ಬಹುತೇಕ ಚಿತ್ರಮಂದಿರಗಳಲ್ಲಿ ಬೆಳಗ್ಗೆ 6.30ರಿಂದಲೇ ಶೋಗಳು ಆರಂಭವಾಗುತ್ತಿವೆ. ಮಲ್ಟಿಪ್ಲೆಕ್ಸ್‌ಗಳಲ್ಲಿ 10 ರಿಂದ 16 ಶೋಗಳನ್ನು 'ಕೂಲಿ'ಗೆ ನೀಡಲಾಗಿದೆ. ಇವುಗಳಲ್ಲಿ ಕನಿಷ್ಠ ₹400 ರಿಂದ ₹1000ರವರೆಗೆ ಟಿಕೆಟ್ ದರವಿದೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರಾದ ನರಸಿಂಹಲು ಎಂ. ಅವರ ಚಿತ್ರಮಂದಿರದಲ್ಲಿ ಮೊದಲ ಶೋನ ಗರಿಷ್ಠ ಬೆಲೆ ₹800 ನಿಗದಿಯಾಗಿದೆ. ಹಲವು ಥಿಯೇಟರ್‌ಗಳಲ್ಲಿ ಟಿಕೆಟ್‌ಗಳು ಸೋಲ್ಡ್ ಔಟ್ ಆಗಿವೆ. ಕೇವಲ ಎಂಟು ಚಿತ್ರಮಂದಿರಗಳಲ್ಲಿ ಕನ್ನಡದಲ್ಲಿ ಡಬ್ ಆದ ಸಿನಿಮಾದ 18 ಪ್ರದರ್ಶನವಿದೆ. ನಾಲ್ಕು ಚಿತ್ರಮಂದಿರಗಳಲ್ಲಿ ತೆಲುಗಿನಲ್ಲಿ ಡಬ್ ಆದ ಸಿನಿಮಾ ಪ್ರದರ್ಶನ ಕಾಣುತ್ತಿದೆ.

'ಕೂಲಿ'ಯ ಆಗಮನದ ನಡುವೆಯೂ ಕನ್ನಡದ 'ಸು ಫ್ರಮ್ ಸೋ' ಮೂರನೇ ವಾರದ ಬಳಿಕವೂ ಸುಮಾರು 20 ಚಿತ್ರಮಂದಿರಗಳನ್ನು ಉಳಿಸಿಕೊಂಡಿದೆ. ಆ.9–10ರಂದು 'ಸು ಫ್ರಮ್ ಸೋ'ನ 1.56 ಲಕ್ಷ ಟಿಕೆಟ್‌ಗಳು ಮಾರಾಟವಾಗಿವೆ. ಕರ್ನಾಟಕದಲ್ಲೇ ಸುಮಾರು ₹50 ಕೋಟಿ ಕಲೆಕ್ಷನ್ ಮಾಡಿರುವ ಈ ಸಿನಿಮಾ ಮಲಯಾಳ, ತೆಲುಗಿನಲ್ಲೂ ಬಿಡುಗಡೆಯಾಗಿದೆ. ಹೀಗಾಗಿ ಬಾಕ್ಸ್ ಆಫೀಸ್‌ನಲ್ಲಿ ಸಿನಿಮಾ ಹೊಸ ದಾಖಲೆ ನಿರ್ಮಿಸುವುದಕ್ಕೂ ಸಜ್ಜಾಗಿದೆ. ❖

## ಟಿಕೆಟ್ ಕಾಯ್ದಿರಿಸುವಿಕೆ ಮೊತ್ತ ₹65 ಕೋಟಿ

**ನಟ** ರಜನಿಕಾಂತ್ ನಟನೆಯ 'ಕೂಲಿ' ಸಿನಿಮಾವು ಬಿಡುಗಡೆಗೂ ಮೊದಲೇ ದಾಖಲೆ ಬರೆಯುತ್ತಿದೆ. ಮುಂಗಡ ಟಿಕೆಟ್ ಕಾಯ್ದಿರಿಸಿದ ಮೊತ್ತವು ಕೇವಲ ಎರಡು ದಿನಗಳಲ್ಲಿಯೇ ₹65 ಕೋಟಿಯಷ್ಟಾಗಿದೆ. ಆಗಸ್ಟ್ 14ರಂದು ಬಿಡುಗಡೆ ಆಗಲಿರುವ ಈ ಸಿನಿಮಾದ ಮೊದಲ ನಾಲ್ಕು ದಿನಗಳವರೆಗೆ ಟಿಕೆಟ್ ಪೂರ್ತಿ ಬಿಕರಿಯಾಗಿದೆ.

ರಜನಿಕಾಂತ್ ಅವರ ಮೊದಲ ಸಿನಿಮಾ 'ಅಪೂರ್ವ ರಾಗಂಗಳ್' 1975ರ ಆಗಸ್ಟ್ 14ರಂದೇ ಬಿಡುಗಡೆ ಆಗಿತ್ತು. ರಜನಿಕಾಂತ್ ಅವರ ಸಿನಿಮಾ ಪಯಣ ಈಗ 50 ವರ್ಷ ಪೂರೈಸಿದೆ. ಈ ಕಾರಣಕ್ಕಾಗಿ ನಟನ ಅಭಿಮಾನಿಗಳು 'ಕೂಲಿ' ಸಿನಿಮಾದ ಬಿಡುಗಡೆ ದಿನವನ್ನು ಹಬ್ಬದ ರೀತಿಯಲ್ಲಿ ಆಚರಿಸಲು ಮುಂದಾಗಿದ್ದಾರೆ. ಹಲವು ಕಂಪನಿಗಳು ಆ.14ರಂದು ರಜೆ ಘೋಷಿಸಿವೆ.

ಬಾಲಿವುಡ್ ನಟ ಅಮೀರ್ ಖಾನ್, ತೆಲುಗು ನಟ ನಾಗಾರ್ಜುನ, ಕನ್ನಡದ ನಟ ಉಪೇಂದ್ರ ಸೇರಿದಂತೆ ಹಲವು ಪ್ರಮುಖ ನಟರು ಸಿನಿಮಾದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಇದರಿಂದಲೂ ಸಿನಿಮಾದ ಮೇಲಿನ ನಿರೀಕ್ಷೆ ಹೆಚ್ಚಿದೆ. 'ಕೂಲಿ' ನಿರ್ದೇಶಕ ಲೋಕೇಶ್ ಕನಗರಾಜ್ ಮೇಲೆಯೂ ನಿರೀಕ್ಷೆ ಹೆಚ್ಚಿದೆ. ಇವರದ್ದೇ ನಿರ್ದೇಶನದ ಕಮಲ್ ಹಾಸನ್ ಮತ್ತು ವಿಜಯ್ ಅಭಿನಯದ 'ವಿಕ್ರಮ್' ಸೇರಿದಂತೆ ಅವರ ಇತ್ತೀಚಿನ ಹಲವು ಚಿತ್ರಗಳು ಯಶಸ್ಸು ಗಳಿಸಿದ್ದವು.

ಸುಮಾರು ₹300 ಕೋಟಿ ವೆಚ್ಚದಲ್ಲಿ ಚಿತ್ರವನ್ನು ನಿರ್ಮಿಸಲಾಗಿದೆ. ಭಾರತ, ಶ್ರೀಲಂಕಾ, ಸಿಂಗಪುರ, ಅಮೆರಿಕ ಸೇರಿ 100 ದೇಶಗಳಲ್ಲಿ ಸುಮಾರು 4,500ರಿಂದ 5,000 ಪರದೆಗಳಲ್ಲಿ ಚಿತ್ರ ಬಿಡುಗಡೆ ಆಗಲಿದೆ. ತಮಿಳುನಾಡಿನಲ್ಲಿಯೇ ಸುಮಾರು 980 ಪರದೆ ಮೇಲೆ 'ಕೂಲಿ' ಬಿಡಗಡೆಯಾಗಲಿದೆ.

## ಆ.22ಕ್ಕೆ 'ಹಚ್ಚೆ' ತೆರೆಗೆ



ಆದ್ಯಾ ಪ್ರಿಯಾ
ಅಭಿಮನ್ಯು

**ಅಶ್ವ** ಫಿಲಂಸ್ ಲಾಂಛನದಲ್ಲಿ ಯಶೋಧರ ಅವರು ಕಥೆ, ಚಿತ್ರಕಥೆ ಸಂಭಾಷಣೆ ಬರೆದು ನಿರ್ದೇಶಿಸಿರುವ 'ಹಚ್ಚೆ' ಸಿನಿಮಾ ಆ.22ರಂದು ತೆರೆಕಾಣಲಿದೆ.

ಮೈಸೂರಿನ ರಂಗನಟ ಅಭಿಮನ್ಯು ಈ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಹೆಜ್ಜೆ ಇಡುತ್ತಿದ್ದಾರೆ. ಈ ಸಿನಿಮಾದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಗಿದ್ದು, ನಾಯಕಿಯಾಗಿ ಆದ್ಯಾ ಪ್ರಿಯಾ ನಟಿಸಿದ್ದಾರೆ. ಅನುಪ್ರೇಮ, ಗುರುರಾಜ್ ಹೊಸಕೋಟೆ, ದುಷ್ಯಂತ್, ಶ್ರೀಮಂತ್ ಸುರೇಶ್, ಚಂದ್ರು ಬಂಡೆ ಮುಂತಾದವರು ತಾರಾಬಳಗದಲ್ಲಿದ್ದಾರೆ. ಚಿತ್ರಕ್ಕೆ ಇತಿಹಾಸದ ಶಕ್ತಿ ಎಂಬ ಅಡಿಬರಹವಿದ್ದು, ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರವನ್ನು ಸಿನಿಮಾ ಹೊಂದಿದೆ. ವಿವೇಕ್ ಚಕ್ರವರ್ತಿ ಸಂಗೀತ ನಿರ್ದೇಶನ, ಸುರೇಶ್ ಆರ್ಮುಗಂ ಸಂಕಲನ ಹಾಗೂ ಯಾಸಿನ್ ಛಾಯಾಚಿತ್ರಗ್ರಹಣ ಈ ಚಿತ್ರಕ್ಕಿದೆ. ಈಗಾಗಲೇ ಚಿತ್ರದ 'ವಿಶ್ವೇಶ್ವರಾಯ...' ಎಂಬ ಹಾಡು ಬಿಡುಗಡೆಯಾಗಿದೆ. ❖

## 'ಏಳುಮಲೆ'ಯ ಮತ್ತೊಂದು ಹಾಡು ಬಿಡುಗಡೆ



ರಾಣಾ
ಪ್ರಿಯಾಂಕಾ

**'ಕಾಟೇರ'** ಚಿತ್ರದ ನಿರ್ದೇಶಕ ತರುಣ್ ಕಿಶೋರ್ ಸುಧೀರ್ ನಿರ್ಮಾಣದ, ಪುನೀತ್ ರಂಗಸ್ವಾಮಿ ನಿರ್ದೇಶನದ 'ಏಳುಮಲೆ' ಸಿನಿಮಾದ ಎರಡನೇ ಹಾಡು 'ಕಾಪಾಡೋ ದ್ಯಾವ್ರೇ..' ಬಿಡುಗಡೆಯಾಗಿದೆ.

ಸಿನಿಮಾದಲ್ಲಿ 'ಏಕ್ ಲವ್ ಯಾ' ಮೂಲಕ ಚಂದನವನ ಪ್ರವೇಶಿಸಿದ್ದ ನಟ ರಾಣಾ, 'ಮಹಾನಟಿ' ರಿಯಾಲಿಟಿ ಶೋ ವಿಜೇತೆ ಪ್ರಿಯಾಂಕಾ ಆಚಾರ್ ಮುಖ್ಯಭೂಮಿಕೆಯಲ್ಲಿದ್ದಾರೆ. ನಟಿಯರಾದ ಶ್ರುತಿ, ಸುಧಾರಾಣಿ ಹಾಗೂ ತಾರಾ ಅನುರಾಧ ಎರಡನೇ ಹಾಡನ್ನು ಬಿಡುಗಡೆ ಮಾಡಿದರು.

'ಸಿನಿಮಾ ನೋಡಿ ಪ್ರೇಕ್ಷಕರು ಹೊರಗೆ ಬಂದಾಗ ರಾಣಾ ಸಖತ್ ಆಗಿ ನಟನೆ ಮಾಡಿದ್ದಾರೆ ಎಂದು ಖಂಡಿತವಾಗಿಯೂ ಹೇಳುತ್ತಾರೆ. ಒಬ್ಬ ಕಲಾವಿದನಾಗಿ ಹೆಸರು ಮಾಡುವ ಅವಕಾಶ ಈ ಚಿತ್ರದಲ್ಲಿ ರಾಣಾಗೆ ದೊರಕಿದೆ. ಪ್ರಿಯಾಂಕಾ ಅವರ ನಟನೆಯೂ ಚೆನ್ನಾಗಿದೆ' ಎಂದರು ನಟಿ ಶ್ರುತಿ.

'ಕಾಪಾಡೋ ದ್ಯಾವ್ರೇ..' ಹಾಡು ಕನ್ನಡ, ತಮಿಳು ಹಾಗೂ ತೆಲುಗು ಭಾಷೆಗಳಲ್ಲಿ ಬಿಡುಗಡೆಯಾಗಿದೆ. ಕರ್ನಾಟಕ-ತಮಿಳುನಾಡು ನಡುವಿನ ಗಡಿಭಾಗದ ಪ್ರೇಮಕಥೆಯಾಗಿರುವ 'ಏಳುಮಲೆ'ಯಲ್ಲಿ ಜಗಪತಿ ಬಾಬು, ಟಿ.ಎಸ್.ನಾಗಾಭರಣ, ಕಿಶೋರ್ ಕುಮಾರ್, ಸರ್ದಾರ್ ಸತ್ಯ, ಜಗ್ಗಪ್ಪ ತಾರಾಬಳಗದಲ್ಲಿದ್ದಾರೆ. ಅದ್ವೈತ್ ಗುರುಮೂರ್ತಿ ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ, ನಾಗಾರ್ಜುನ್ ಶರ್ಮಾ ಹಾಗೂ ಪುನೀತ್ ರಂಗಸ್ವಾಮಿ ಸಂಭಾಷಣೆ ಚಿತ್ರಕ್ಕಿದೆ. ❖

## ಮನೋರಂಜನ್‌ಗೆ ಬೃಂದಾ ಜೋಡಿ

**ನಟ** ಮನೋರಂಜನ್ ರವಿಚಂದ್ರನ್ ನಟನೆಯ ಹೊಸ ಸಿನಿಮಾ ಸೆಟ್ಟೇರಿದೆ. ಇತ್ತೀಚೆಗೆ ಚಿತ್ರದ ಮುಹೂರ್ತ ನಡೆದಿದ್ದು, ಮನೋರಂಜನ್‌ಗೆ ಜೋಡಿಯಾಗಿ 'ಪ್ರೇಮಂ ಪೂಜ್ಯಂ', 'ಕೌಸಲ್ಯ ಸುಪ್ರಜಾ ರಾಮ' ಸಿನಿಮಾ ಖ್ಯಾತಿಯ ನಟಿ ಬೃಂದಾ ಆಚಾರ್ಯ ನಟಿಸಲಿದ್ದಾರೆ.

'ಸಾಹೇಬ', ಮುಗಿಲ್‌ಪೇಟೆ' ಸಿನಿಮಾಗಳಲ್ಲಿ ನಟಿಸಿದ ಮನೋರಂಜನ್ ಅವರ ಐದನೇ ಸಿನಿಮಾ ಇದಾಗಿದೆ. ಮನೋರಂಜನ್ ಹೊಸ ಹೆಜ್ಜೆಗೆ ಸಹೋದರ ವಿಕ್ರಮ್ ರವಿಚಂದ್ರನ್ ಸಾಥ್ ಕೊಟ್ಟಿದ್ದು, ಸಿನಿಮಾಗೆ ಕ್ಲ್ಯಾಪ್ ಮಾಡಿ ಚಿತ್ರೀಕರಣಕ್ಕೆ ಚಾಲನೆ ನೀಡಿದರು. ರುದ್ರೇಶ್ ನಿರ್ದೇಶನದ ಈ ಸಿನಿಮಾದಲ್ಲಿ ನಟಿ ಅನುಷಾ ರೈ ವಿಶೇಷ ಪಾತ್ರದಲ್ಲಿ ಇರಲಿದ್ದಾರೆ. ಒಂದೊಳ್ಳೆಯ ಕಾಂಟೆಂಟ್ ಇರುವ ಕಮರ್ಷಿಯಲ್ ಸಿನಿಮಾ ಇದಾಗಿದೆ ಎಂದು ಚಿತ್ರತಂಡ ತಿಳಿಸಿದೆ.

ವೈಎಸ್ ಪ್ರೊಡಕ್ಷನ್‌ನಡಿ ಶ್ರೀನಿವಾಸ್ ಈ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಜೆಸ್ಸಿ ಗಿಫ್ಟ್ ಸಂಗೀತ, ಸೆಲ್ವಂ ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ ಸಿನಿಮಾಗಿರಲಿದೆ. ಮುಂದಿನ ವಾರದಿಂದ ಚಿತ್ರೀಕರಣ ಆರಂಭವಾಗಲಿದ್ದು, ಮೊದಲ ಹಂತದ ಶೂಟಿಂಗ್ ಬೆಂಗಳೂರಿನಲ್ಲಿ ನಡೆಯಲಿದೆ. ಬಳಿಕ ಬಾದಾಮಿಯತ್ತ ತಂಡ ಹೊರಡಲಿದೆ. ❖



ಮನೋರಂಜನ್, ಬೃಂದಾ ಆಚಾರ್ಯ

# 'ಮತ ಕಳವು' ವಿರುದ್ಧ 'ಇಂಡಿಯಾ' ಕಿಚ್ಚು

ಒಂದನೇ ಪುಟದಿಂದ...

ಬೆಳಿಗ್ಗೆ 11.30ಕ್ಕೆ ಸಂಸತ್ತಿನ ಮಕರ ದ್ವಾರದಿಂದ ಸಂಸದರು ವಿವಿಧ ಭಾಷೆಗಳಲ್ಲಿ ಮತ ಕಳ್ಳತನದ ಪೋಸ್ಟರ್‌ಗಳನ್ನು ಹಿಡಿದು ಮೆರವಣಿಗೆ ಪ್ರಾರಂಭಿಸಿದರು. 'ಮತದಾರರ ಪಟ್ಟಿ ಪರಿಷ್ಕರಣೆ ರದ್ದು ಮಾಡಿ', 'ಮತಕಳವು ನಿಲ್ಲಿಸಿ', 'ಎಸ್‌ಐಆರ್ + ಮತ ಕಳ್ಳತನ = ಪ್ರಜಾಪ್ರಭುತ್ವದ ಕೊಲೆ' ಮತ್ತಿತರ ಫಲಕಗಳನ್ನು ಹಿಡಿದು ಘೋಷಣೆಗಳನ್ನು ಕೂಗಿದರು. ಪ್ರತಿಭಟನೆಯ ಸಂದರ್ಭದಲ್ಲಿ ಮಹುವಾ ಮೊಯಿತ್ರಾ ಮತ್ತು ಮಿತಾಲಿ ಬಾಗ್ ಮೂರ್ಛೆ ಹೋದರು. ಅವರನ್ನು ಕರೆದೊಯ್ಯಲು ರಾಹುಲ್ ಸಹಾಯ ಮಾಡಿದರು.

ಪ್ರಿಯಾಂಕಾ ಗಾಂಧಿ, ಅಖಿಲೇಶ್ ಯಾದವ್, ಕೆ.ಸಿ. ವೇಣುಗೋಪಾಲ್, ತಿರುಚ್ಚಿ ಶಿವ, ಡೆರೆಕ್ ಒಬ್ರಯಾನ್, ಮನೋಜ್ ಕೆ. ಝಾ, ಮಾಣಿಕ್ಕಂ ಟ್ಯಾಗೋರ್, ಸುಪ್ರಿಯಾ ಸುಳೆ ಮತ್ತು ಕನಿಮೊಳಿ ಸೇರಿದಂತೆ ಇತರ ಸಂಸದರು ಚುನಾವಣಾ ಆಯೋಗದ ಕಚೇರಿಗೆ ತೆರಳಲು ಯತ್ನಿಸಿದರು. ಆಯೋಗದ ಕಚೇರಿಯಿಂದ ಅರ್ಧ ಕಿಲೋಮೀಟರ್ ದೂರದಲ್ಲಿ ಭಾರಿ ಪೊಲೀಸ್ ಪಡೆಯು ಅವರನ್ನು ತಡೆಯಿತು. ಕಾಂಗ್ರೆಸ್ ಜತೆಗೆ ಮುನಿಸಿಕೊಂಡು 'ಇಂಡಿಯಾ' ಮೈತ್ರಿಕೂಟದಿಂದ ಹೊರ ನಡೆದಿದ್ದ ಆಮ್ ಆದ್ಮಿ ಪಕ್ಷವೂ ಸೋಮವಾರದ ಪ್ರತಿಭಟನೆಯಲ್ಲಿ ಭಾಗಿಯಾಯಿತು.

ಪ್ರತಿಭಟನೆನಿರತರನ್ನು ವಶಕ್ಕೆ ಪಡೆದ ಸಂದರ್ಭದಲ್ಲಿ ರಾಹುಲ್ ಗಾಂಧಿ, 'ಚುನಾವಣಾ ಆಯೋಗದವರನ್ನು ಭೇಟಿ ಮಾಡಲು ಹೋಗುತ್ತಿದ್ದಾಗ, ಎಲ್ಲ ಸಂಸದರನ್ನು ತಡೆದು ವಶಕ್ಕೆ ತೆಗೆದುಕೊಳ್ಳಲಾಯಿತು. ಮತ ಕಳ್ಳತನದ ಸತ್ಯ ಈಗ ದೇಶದ ಮುಂದಿದೆ. ಇದು ರಾಜಕೀಯ ಹೋರಾಟ ಅಲ್ಲ- ಇದು ಪ್ರಜಾಪ್ರಭುತ್ವ, ಸಂವಿಧಾನ ಮತ್ತು 'ಒಬ್ಬ ವ್ಯಕ್ತಿ, ಒಂದು ಮತ'ದ ಹಕ್ಕನ್ನು ರಕ್ಷಿಸುವ ಹೋರಾಟ' ಎಂದು ಸ್ಪಷ್ಟಪಡಿಸಿದರು.

'ಶುದ್ಧ ಹಾಗೂ ಪಾರದರ್ಶಕ ಪಟ್ಟಿ ಸಿದ್ಧವಾಗಬೇಕು ಎಂದು ವಿರೋಧ ಪಕ್ಷ ಮತ್ತು ದೇಶದ ಪ್ರತಿಯೊಬ್ಬರೂ ಒತ್ತಾಯಿಸುತ್ತಾರೆ. ನಾವು ಇದನ್ನು ಎಂತಹ ಬೆಲೆ ತೆತ್ತಾದರೂ ಪಡೆದುಕೊಳ್ಳುತ್ತೇವೆ' ಎಂದರು. ಪ್ರತಿಭಟನೆನಿರತ ಸಂಸದರನ್ನು ಪಾರ್ಲಿಮೆಂಟ್ ಸ್ಟ್ರೀಟ್ ಪೊಲೀಸ್ ಠಾಣೆಗೆ ಕರೆದೊಯ್ಯಲಾಯಿತು. ಮಧ್ಯಾಹ್ನ 2 ಗಂಟೆಯ ನಂತರ ಅವರನ್ನು ಬಿಡುಗಡೆ ಮಾಡಲಾಯಿತು. ಖರ್ಗೆ ಮಾತನಾಡಿ, 'ಈ ಪ್ರತಿಭಟನೆಯು ಮತದಾನದ ಹಕ್ಕನ್ನು ರಕ್ಷಿಸುವ ಹೋರಾಟ' ಎಂದರು.

## ರಾಹುಲ್‌ಗೆ ಡಿಎಂಕೆ ಬೆಂಬಲ

ರಾಹುಲ್ ಗಾಂಧಿ ಅವರಿಗೆ ಡಿಎಂಕೆ ಅಧ್ಯಕ್ಷ ಮತ್ತು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಸೋಮವಾರ ಬೆಂಬಲ ಘೋಷಿಸಿದ್ದಾರೆ.

'ದೇಶದ ಪ್ರಜಾಪ್ರಭುತ್ವವನ್ನು ಬಿಜೆಪಿ ಹಾಡಹಗಲೇ ಹಾಳುಮಾಡುತ್ತಿರುವುದನ್ನು ಮೌನವಾಗಿ ನೋಡಿಕೊಂಡಿರಲು ಸಾಧ್ಯವಿಲ್ಲ. ಆಯೋಗವನ್ನು ಬಿಜೆಪಿ ಚುನಾವಣಾ ಅಕ್ರಮದ ಅಂಗವಾಗಿ ಬಳಸಿಕೊಂಡಿದೆ. ಬೆಂಗಳೂರಿನ ಮಹದೇವಪುರದಲ್ಲಿ ಆಗಿದ್ದು ಆಡಳಿತಾತ್ಮಕ ಲೋಪವಲ್ಲ. ಜನರ ತೀರ್ಪನ್ನು ಕಳವು ಮಾಡುವ ವ್ಯವಸ್ಥಿತ ಪಿತೂರಿ' ಎಂದಿದ್ದಾರೆ.

'ನನ್ನ ಸೋದರ ರಾಹುಲ್ ಅವರು ದೊಡ್ಡ ಪ್ರಮಾಣದ ಮತಕಳ್ಳತನವನ್ನು ಬಹಿರಂಗಪಡಿಸಿದ್ದಾರೆ. ಮತದಾರರನ್ನು ಪಟ್ಟಿಯಿಂದ ಮತದಾರರ ಹೆಸರು ಅಳಿಸಿ ಹಾಕುವ ರಾಜಕೀಯ ಪಿತೂರಿಗೆ ಅಂತ್ಯ ಹಾಡಲು ಎಲ್ಲ ರಾಜ್ಯಗಳ ಡಿಜಿಟಲ್ ರೂಪದ ಮತದಾರರ ಪಟ್ಟಿಗಳನ್ನು ತಕ್ಷಣವೇ ಬಿಡುಗಡೆ ಮಾಡಬೇಕು. ರಾಹುಲ್ ಆರೋಪದ ಬಗ್ಗೆ ತನಿಖೆ ನಡೆಸಬೇಕು' ಎಂದಿದ್ದಾರೆ.

## ಸದಸ್ಯರ ಮಿತಿ: ಭೇಟಿಗೆ 'ಇಂಡಿಯಾ' ನಿರಾಕರಣೆ

ಪ್ರತಿಭಟನೆಯ ಬಳಿಕ ಎಲ್ಲ ಸಂಸದರ ಜತೆಗೆ ಆಯೋಗಕ್ಕೆ ಮನವಿ ಪತ್ರ ಸಲ್ಲಿಸಲು 'ಇಂಡಿಯಾ' ಕೂಟ ಬಯಸಿತ್ತು. ಮೂವತ್ತು ಸಂಸದರು ಇರುವ ನಿಯೋಗವನ್ನಷ್ಟೇ ಭೇಟಿ ಮಾಡುತ್ತೇವೆ ಎಂದು ಆಯೋಗ ಸ್ಪಷ್ಟಪಡಿಸಿತ್ತು. ಸಂಖ್ಯೆಗೆ ಮಿತಿ ಹೇರಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಮೈತ್ರಿಕೂಟದ ನಾಯಕರು ಚುನಾವಣಾ ಆಯೋಗದ ಪ್ರಮುಖರ ಭೇಟಿಗೆ ನಿರಾಕರಿಸಿದರು.

30 ಸದಸ್ಯರ ನಿಯೋಗ ಬರಲು ವಿಪಕ್ಷ ಕೂಟ ಒಪ್ಪಿಕೊಂಡಿತ್ತು. ಆ ಬಳಿಕ ತನ್ನ ಮಾತಿನಿಂದ ಹಿಂದಕ್ಕೆ ಸರಿಯಿತು ಎಂದು ಆಯೋಗದ ಮೂಲಗಳು ತಿಳಿಸಿವೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್, ಆಯುಕ್ತರಾದ ಸುಖ್ಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಅವರಿಗೆ ಭಾನುವಾರ ಪತ್ರ ಬರೆದು ಶಾಂತಿಯುತ ಮೆರವಣಿಗೆಯ ಬಳಿಕ ಸಂಸದರು ತಮ್ಮನ್ನು ಭೇಟಿ ಮಾಡಿ ಮನವಿ ಸಲ್ಲಿಸಲಿದ್ದಾರೆ ಎಂದು ತಿಳಿಸಿದ್ದರು.

ಬಳಿಕ ಪ್ರತಿಕ್ರಿಯಿಸಿದ್ದ ಆಯೋಗವು, ಮುಖ್ಯ ಚುನಾವಣಾ ಆಯುಕ್ತರನ್ನು ಸೋಮವಾರ ಮಧ್ಯಾಹ್ನ 12 ಗಂಟೆಗೆ ಭೇಟಿ ಮಾಡಬಹುದು. ಆದರೆ, ಸ್ಥಳಾವಕಾಶದ ಮಿತಿಯಿಂದಾಗಿ 30 ಜನರ ಹೆಸರು ಮತ್ತು ವಾಹನ ಸಂಖ್ಯೆಗಳನ್ನು ಒದಗಿಸುವಂತೆ ರಮೇಶ್ ಅವರನ್ನು ಕೇಳಿತ್ತು.

### 'ನಾನ್ಯಾಕೆ ಸಹಿ ಹಾಕಲಿ'

ರಾಹುಲ್ ಗಾಂಧಿ ಅವರು 'ಮತ ಕಳವು' ಹೇಳಿಕೆಯ ಪ್ರಮಾಣಪತ್ರಕ್ಕೆ ಸಹಿ ಹಾಕಬೇಕು ಎಂದು ಚುನಾವಣಾ ಆಯೋಗವು ಪುನರುಚ್ಚರಿಸಿದ ಬೆನ್ನಲ್ಲೇ, ಲೋಕಸಭೆಯ ವಿರೋಧ ಪಕ್ಷದ ನಾಯಕ, 'ಇದು ವಿಷಯಾಂತರದ ಪ್ರಯತ್ನ. ಚುನಾವಣಾ ಆಯೋಗವೇ ನೀಡಿದ ದತ್ತಾಂಶಕ್ಕೆ ನಾನೇಕೆ ಸಹಿ ಹಾಕಲಿ' ಎಂದು ಅವರು ಪ್ರಶ್ನಿಸಿದ್ದಾರೆ.

'ನಾನು ಎತ್ತಿರುವ ವಿಷಯ ಬೆಂಗಳೂರಿನ ಕೇಂದ್ರ ಲೋಕಸಭಾ ಕ್ಷೇತ್ರಕ್ಕೆ ಸೀಮಿತ ಅಲ್ಲ, ಅದು ದೇಶದ ಅನೇಕ ಲೋಕಸಭಾ ಕ್ಷೇತ್ರಗಳಿಗೆ ವಿಸ್ತರಣೆ ಆಗಲಿದೆ' ಎಂದರು.

### 'ನೋಟಿಸ್ ನೀಡಲು ಅವರು ಯಾರು?'

ಬೆಂಗಳೂರು: ಮತ ಕಳವು ವಿಚಾರದಲ್ಲಿ ಪಕ್ಷಗಳ ನಾಯಕರಿಗೆ ನೋಟಿಸ್ ನೀಡಲು ಅವರು ಯಾರು? ಪ್ರಜಾಪ್ರಭುತ್ವದಲ್ಲಿ ಜನರ ದನಿಯಾಗಿ ನಾವು ಕೆಲಸ ಮಾಡುತ್ತೇವೆ. ಮತದ ಹಕ್ಕು ದುರುಪಯೋಗವಾಗಬಾರದು ಎನ್ನುವ ಕಾರಣಕ್ಕೆ ರಾಜಕೀಯ ಪಕ್ಷವಾಗಿ ನಾವು ಪ್ರಸ್ತಾಪಿಸಿದ್ದೇವೆ. ಇದಕ್ಕೆ ನೋಟಿಸ್ ನೀಡಿದರೆ ಹೇಗೆ? ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೇಳಿದರು.

ರಾಹುಲ್ ಗಾಂಧಿ ಅವರಿಗೆ ರಾಜ್ಯದ ಮುಖ್ಯ ಚುನಾವಣಾಧಿಕಾರಿ ನೋಟಿಸ್ ನೀಡಿರುವ ಬಗ್ಗೆ ಪ್ರಸ್ತಾಪಿಸಿದ ಅವರು, 'ಯಾರೇ ನೋಟಿಸ್ ನೀಡಿದರೂ ನಾವು ಹೆದರುವುದಿಲ್ಲ. ತಪ್ಪಾಗಿದ್ದರೆ ಕ್ರಮ ತೆಗೆದುಕೊಳ್ಳುವುದನ್ನು ಬಿಟ್ಟು ನಮಗೆ ನೋಟಿಸ್ ನೀಡಿರುವುದನ್ನು ಒಪ್ಪುವುದಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.




ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಸೇರಿದಂತೆ ಹಲವು ಸಂಸದರು ಪ್ರತಿಭಟಿಸಿದರು – ಪಿಟಿಐ ಚಿತ್ರ

# ಮಂಗಳೂರು ಡ್ರ್ಯಾಗನ್ಸ್ ಶುಭಾರಂಭ

## ಮಹಾರಾಜ ಟ್ರೋಫಿ ಕ್ರಿಕೆಟ್: ಮೆಕ್ನೀಲ್ ನೊರೊನಾ ಆಲ್‌ರೌಂಡ್ ಆಟ • ಶ್ರೇಯಸ್‌ಗೆ ಮೂರು ವಿಕೆಟ್

• ಆರ್. ಜಿತೇಂದ್ರ



ಮಂಗಳೂರು ಡ್ರ್ಯಾಗನ್ಸ್ ತಂಡದ ಮೆಕ್ನೀಲ್ ನೊರೊನಾ ಬ್ಯಾಟಿಂಗ್ ವೈಖರಿ ಪ್ರಜಾವಾಣಿ ಚಿತ್ರಗಳು: ಅನೂಪ್ ರಾಘ.ಟಿ.

ಮೈಸೂರು: ಆಲ್‌ರೌಂಡರ್ ಮೆಕ್ನೀಲ್ ನೊರೊನಾ (53 ರನ್, 10ಕ್ಕೆ 1 ವಿಕೆಟ್) ಅವರ ಉಪಯುಕ್ತ ಆಟದ ನೆರವಿನಿಂದ ಮಂಗಳೂರು ಡ್ರ್ಯಾಗನ್ಸ್ ತಂಡವು ಶ್ರೀರಾಮ್ ಗ್ರೂಪ್ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ಸೋಮವಾರ ಗುಲ್ಬರ್ಗ ಮಿಸ್ಟಿಕ್ಸ್ ಎದುರು 33 ರನ್‌ಗಳಿಂದ ಗೆದ್ದು ಶುಭಾರಂಭ ಮಾಡಿತು.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆದ ಟೂರ್ನಿಯ ಈ ಪಂದ್ಯದಲ್ಲಿ ಡ್ರ್ಯಾಗನ್ಸ್ ನೀಡಿದ 181 ರನ್‌ಗಳ ಸ್ಪರ್ಧಾತ್ಮಕ ಮೊತ್ತವನ್ನು ಬೆನ್ನತ್ತಲು ಮಿಸ್ಟಿಕ್ಸ್ ಬ್ಯಾಟರ್‌ಗಳು ತಿಣುಕಾಡಿದರು. ಸಂಜೆಯ ಚಳಿ, ಹೊನಲು ಬೆಳಕಿನ ನಡುವೆ ಕ್ರೀಸ್‌ನಲ್ಲಿ ನಿಲ್ಲಲು ಪರದಾಡಿದ ತಂಡವು 147 ರನ್‌ಗೆ ಆಲೌಟ್ ಆಯಿತು.

ಗುರಿ ಬೆನ್ನತ್ತಿದ ಗುಲ್ಬರ್ಗ ಪರ ಆರಂಭಿಕರಾದ ಲವನೀತ್ ಸಿಸೋಡಿಯಾ ಹಾಗೂ ನಿಕಿನ್ ಜೋಸ್ ಮೊದಲ ಓವರ್‌ನಿಂದಲೇ ಆಕ್ರಮಣಕಾರಿ ಆಟಕ್ಕೆ ಇಳಿದರು. ಆದರೆ ನಾಲ್ಕನೇ ಓವರ್‌ನಲ್ಲಿ ಮಂಗಳೂರು ತಂಡದ ನಾಯಕ ಶ್ರೇಯಸ್ ಗೋಪಾಲ್ ಈ ಜೊತೆಯಾಟ ಮುರಿದರು. ಆ ಓವರ್‌ನ ಎರಡನೇ ಎಸೆತದಲ್ಲಿ ಲವನೀತ್, ಲೋಚನ್ ಗೌಡಗೆ ಕ್ಯಾಚಿತ್ತು ನಿರ್ಗಮಿಸಿದರೆ, ಐದನೇ ಎಸೆತದಲ್ಲಿ ನಿಕಿನ್ ಜೋಸ್ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು.

ಮಧ್ಯಮ ಕ್ರಮಾಂಕದಲ್ಲಿ ಗುಲ್ಬರ್ಗಕ್ಕೆ ಆಸರೆಯಾಗಿದ್ದ ಪ್ರಜ್ವಲ್ ಪವನ್ (25) ರನೌಟ್ ಆದರು. ಉಳಿದ ಆಟಗಾರರು ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ. ವಿಜೇತ ತಂಡದ ಪರ ನಾಯಕ ಶ್ರೇಯಸ್ ಗೋಪಾಲ್ ಮೂರು ವಿಕೆಟ್ ಉರುಳಿಸಿ ಯಶಸ್ವಿಯೆನಿಸಿದರು. ಮಧ್ಯಮ ವೇಗಿ ಕ್ರಾಂತಿಕುಮಾರ್ ಸಹ 3 ವಿಕೆಟ್ ಪಡೆದರು.

**ಮೆಕ್ನೀಲ್ ಅಬ್ಬರ:** ಇದಕ್ಕೂ ಮುನ್ನ ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಮಂಗಳೂರು ಡ್ರ್ಯಾಗನ್ಸ್‌ಗೆ ಆರಂಭಿಕರಾದ ಲೋಚನ್ ಗೌಡ (27) ಹಾಗೂ ಬಿ.ಆರ್. ಶರತ್ (16) ಅವರು 54 ರನ್ ಜೊತೆಯಾಟದ ಆರಂಭ ಒದಗಿಸಿದರು. ಇನ್ನಿಂಗ್ಸ್‌ನ ಆರನೇ ಓವರ್‌ನಲ್ಲಿ ಎಡಗೈ ಸ್ಪಿನ್ನರ್ ಪೃಥ್ವಿರಾಜ್ ಶೇಖಾವತ್, ಶರತ್ ವಿಕೆಟ್ ಮೂಲಕ ಈ ಜೋಡಿಯನ್ನು ಬೇರ್ಪಡಿಸಿದರು. ಮರು ಎಸೆತದಲ್ಲೇ ಲೋಚನ್, ಶಶಿಕುಮಾರ್ ಕಾಂಬ್ಳೆ ಅವರ ಚುರುಕಾದ ಥ್ರೋಗೆ ರನೌಟ್ ಆಗಿ ನಿರಾಸೆ ಅನುಭವಿಸಿದರು.


ಮಧ್ಯಮ ಕ್ರಮಾಂಕದಲ್ಲಿ ಅಬ್ಬರಿಸಿದ ಮೆಕ್ನೀಲ್ ನೊರೊನಾ ಕೇವಲ 28 ಎಸೆತದಲ್ಲಿ 3 ಬೌಂಡರಿ ಹಾಗೂ 4 ಸಿಕ್ಸರ್ ಸಹಿತ 53 ರನ್ ಗಳಿಸಿ ಪೃಥ್ವಿರಾಜ್‌ಗೆ ವಿಕೆಟ್ ಒಪ್ಪಿಸಿದರು. ಶ್ರೇಯಸ್ ಗೋಪಾಲ್ (20) ಅಜೇಯರಾಗಿ ಉಳಿದು ತಂಡವನ್ನು ಸ್ಪರ್ಧಾತ್ಮಕ ಮೊತ್ತದತ್ತ ಒಯ್ದರು.

**ಹೊಸ ನಿಯಮ:** ಇದೇ ಮೊದಲ ಬಾರಿಗೆ ದೇಶಿಯ ಟೂರ್ನಿಯೊಂದರಲ್ಲಿ ನೆಟ್ ರನ್‌ರೇಟ್ ಬದಲು ನೆಟ್ ರಿಲೇಟಿವ್ ರನ್ ರೇಷಿಯೊ (ಎನ್‌ಆರ್‌ಆರ್‌ಆರ್) ನಿಯಮ ಜಾರಿಗೆ ತರಲಾಗಿದೆ. ಇಲ್ಲಿ ತಂಡವೊಂದು ಗಳಿಸಿದ ರನ್ ಜೊತೆಗೆ ಆಡಿದ ಒಟ್ಟು ಓವರ್, ಕಳೆದುಕೊಂಡ ವಿಕೆಟ್ ಎಲ್ಲವನ್ನೂ ಪರಿಗಣಿಸಿ ರನ್‌ರೇಟ್ ಅನ್ನು ಅಳೆಯಲಾಗುತ್ತದೆ. ಅಂಪೈರ್‌ಗಳಾದ ಕೇಶವ್ ಕೊಲ್ಲೆ, ವಿ. ಜಯದೇವನ್ ಈ ನಿಯಮವನ್ನು ರೂಪಿಸಿದ್ದಾರೆ.

**ಸಂಕ್ಷಿಪ್ತ ಸ್ಕೋರ್:** ಮಂಗಳೂರು ಡ್ರ್ಯಾಗನ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 180 (ಮೆಕ್ನಿಲ್ ನೊರೊನಾ 53, ಲೋಚನ್ ಗೌಡ 27, ಶ್ರೇಯಸ್ ಗೋಪಾಲ್ ಔಟಾಗದೆ 20. ಪೃಥ್ವಿರಾಜ್ ಶೇಖಾವತ್ 21ಕ್ಕೆ 3, ವೈಶಾಖ್ ವಿಜಯ್‌ಕುಮಾರ್ 28ಕ್ಕೆ2). **ಗುಲ್ಬರ್ಗ ಮಿಸ್ಟಿಕ್ಸ್:** 19.5 ಓವರ್‌ಗಳಲ್ಲಿ 147 (ಲವನೀತ್ ಸಿಸೋಡಿಯಾ 26, ಪ್ರಜ್ವಲ್ ಪವನ್ 25. ಶ್ರೇಯಸ್ ಗೋಪಾಲ್ 30ಕ್ಕೆ 3, ಕ್ರಾಂತಿಕುಮಾರ್ 36ಕ್ಕೆ 3) **ಪಂದ್ಯದ ಆಟಗಾರ:** ಮೆಕ್ನೀಲ್ ನೊರೊನಾ.

**ಮೈಸೂರು ವಾರಿಯರ್ಸ್:** 20 ಓವರ್‌ಗಳಲ್ಲಿ 5 ವಿಕೆಟ್‌ಗೆ 180 (ಮನೀಷ್ ಪಾಂಡೆ ಔಟಾಗದೆ 58, ಸುಮಿತ್‌ಕುಮಾರ್ ಔಟಾಗದೆ 44, ಹರ್ಷಿಲ್ ಧರ್ಮಾನಿ 38. ಶುಭಾಂಗ್ ಹೆಗ್ಡೆ 23ಕ್ಕೆ 3). **ಬೆಂಗಳೂರು ಬ್ಲಾಸ್ಟರ್ಸ್:** 19.2 ಓವರ್‌ಗಳಲ್ಲಿ 141 (ಮಯಂಕ್ ಅಗರವಾಲ್ 66, ವಿದ್ಯಾಧರ ಪಾಟೀಲ 16, ಎಲ್. ಆರ್. ಕುಮಾರ್ 27ಕ್ಕೆ 3, ಕೆ. ಗೌತಮ್ 28ಕ್ಕೆ 2). **ಪಂದ್ಯದ ಆಟಗಾರ:** ಮನೀಷ್ ಪಾಂಡೆ

### ವಾರಿಯರ್ಸ್‌ಗೆ ಜಯ



ಮೈಸೂರು ವಾರಿಯರ್ಸ್ ತಂಡದ ಮನೀಷ್ ಪಾಂಡೆ ಬ್ಯಾಟಿಂಗ್

ಮೈಸೂರು: ನಾಯಕ ಮನೀಷ್ ಪಾಂಡೆ ಅಬ್ಬರದ ಬ್ಯಾಟಿಂಗ್ (ಔಟಾಗದೇ 58) ನೆರವಿನಿಂದ ಮೈಸೂರು ವಾರಿಯರ್ಸ್ ತನ್ನ ಮೊದಲ ಪಂದ್ಯದಲ್ಲಿ ಬೆಂಗಳೂರು ಬ್ಲಾಸ್ಟರ್ಸ್ ತಂಡವನ್ನು 39 ರನ್ ಅಂತರದಿಂದ ಮಣಿಸಿತು.

ಟಾಸ್ ಗೆದ್ದು ಬ್ಯಾಟಿಂಗ್ ಆರಂಭಿಸಿದ ವಾರಿಯರ್ಸ್ ಆರಂಭಿಕ ಆಘಾತ ಅನುಭವಿಸಿದ್ದು, ಮನೀಷ್ ಹಾಗೂ ವಿಕೆಟ್ ಕೀಪರ್ ಸುಮಿತ್ ಕುಮಾರ್ (ಔಟಾಗದೇ 44) ಆಸರೆ ಆದರು. ಈ ಜೋಡಿ ಆರನೇ ವಿಕೆಟ್‌ಗೆ 48 ಎಸೆತಗಳಲ್ಲಿ 86 ರನ್ ಕಲೆ ಅಜೇಯರಾಗಿ ಉಳಿಯಿತು. ಎಡಗೈ ಸ್ಪಿನ್ನರ್ ಶುಭಾಂಗ್ ಹೆಗ್ಡೆ 4 ವಿಕೆಟ್ ಉರುಳಿಸಿದರು. 181 ರನ್‌ಗಳ ಗುರಿ ಬೆನ್ನತ್ತಿದ ಬೆಂಗಳೂರು ತಂಡ ಸಹ ಆರಂಭದಲ್ಲೇ ಆಘಾತ ಅನುಭವಿಸಿತು. ನಾಯಕ ಮಯಂಕ್ ಅಗರವಾಲ್ ಅರ್ಧಶತಕ ಗಳಿಸಿ (66) ಏಕಾಂಗಿಯಾಗಿ ಪ್ರತಿರೋಧ ತೋರಿದರು.

**ಇಂದಿನ ಪಂದ್ಯಗಳು**
ಹುಬ್ಬಳ್ಳಿ ಟೈಗರ್ಸ್- ನಮ್ಮ ಶಿವಮೊಗ್ಗ. ಮಧ್ಯಾಹ್ನ 3.15:
ಮೈಸೂರು ವಾರಿಯರ್ಸ್ – ಗುಲ್ಬರ್ಗ ಮಿಸ್ಟಿಕ್ಸ್. ರಾತ್ರಿ 7.15



ಐಸಿಸಿ ಅಧ್ಯಕ್ಷ ಜಯ್ ಶಾ ಅವರು ಮುಂಬೈನಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಮಹಿಳಾ ಏಕದಿನ ವಿಶ್ವಕಪ್ ಅನ್ನು ಅನಾವರಣ ಮಾಡಿದರು. (ಎಡದಿಂದ) ಐಸಿಸಿ ಸಿಇಒ ಸಂಜೋಗ್ ಗುಪ್ತಾ, ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ, ಭಾರತ ತಂಡದ ಮಾಜಿ ಆಟಗಾರ್ತಿ ಮಿಥಾಲಿ ರಾಜ್, ದಿಗ್ಗಜ ಆಲ್‌ರೌಂಡರ್ ಯುವರಾಜ್ ಸಿಂಗ್, ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್, ಸ್ಮೃತಿ ಮಂದಾನ ಹಾಗೂ ಜೆಮಿಮಾ ರಾಡ್ರಿಗಸ್ ಉಪಸ್ಥಿತರಿದ್ದರು

## ಮುಂಬೈ: ಮಹಿಳಾ ಏಕದಿನ ವಿಶ್ವಕಪ್ ಟ್ರೋಫಿ ಅನಾವರಣ

# ‘ಈ ಸಲ ಐಸಿಸಿ ಪ್ರಶಸ್ತಿ ಗೆದ್ದೇ ಗೆಲ್ಲುವೆವು’

ಮುಂಬೈ (ಎಎಫ್‌ಪಿ): ಈ ಹಿಂದೆ ಎರಡು ಸಲ ‘ಅಂತಿಮ ಹಂತ’ದಲ್ಲಿ ಕೈತಪ್ಪಿದ ಐಸಿಸಿ ಮಹಿಳಾ ವಿಶ್ವಕಪ್ ಕ್ರಿಕೆಟ್ ಪ್ರಶಸ್ತಿಯನ್ನು ಈ ಬಾರಿ ಗೆದ್ದೇಗೆಲ್ಲುವ ದೃಢನಿರ್ಧಾರವನ್ನು ಭಾರತ ತಂಡ ಹೊಂದಿದೆ ಎಂದು ನಾಯಕಿ ಹರ್ಮನ್‌ಪ್ರೀತ್ ಕೌರ್ ಸೋಮವಾರ ಇಲ್ಲಿ ವಿಶ್ವಾಸ ವ್ಯಕ್ತಪಡಿಸಿದರು.

ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿ ಸೆಪ್ಟೆಂಬರ್ 30ರಂದು ಬೆಂಗಳೂರಿನಲ್ಲಿ ಆರಂಭವಾಗಲಿದೆ.

ಭಾರತ ವನಿತೆಯರು ಎರಡು ಬಾರಿ ವಿಶ್ವಕಪ್ ಫೈನಲ್‌ನಲ್ಲಿ ಸೋಲನುಭವಿಸಿದ್ದಾರೆ. ಕೊನೆಯ ಬಾರಿ– 2017ರಲ್ಲಿ ಆಸ್ಟ್ರೇಲಿಯಾ ಎದುರು 9 ರನ್‌ಗಳಿಂದ ಸೋಲನುಭವಿಸಿತ್ತು. ಆ ಬಾರಿ ಲಾರ್ಡ್ಸ್‌ನಲ್ಲಿ ಹರ್ಮನ್‌ಪ್ರೀತ್ ಅವರ ವೀರೋಚಿತ 51 ರನ್‌ಗಳ ಆಟ ಫಲ ನೀಡಿರಲಿಲ್ಲ. ಈ ಬಾರಿ ಅವರು ತಂಡವನ್ನು ಮುನ್ನಡೆಸಲಿದ್ದಾರೆ.

‘ತವರಿನ ಪ್ರೇಕ್ಷಕರೆದುರು ಆಡುವುದು ಯಾವತ್ತೂ ವಿಶೇಷ ಅನುಭವ. ಈ ಬಾರಿ ನೂರಕ್ಕೆ ನೂರರಷ್ಟು ಉತ್ತಮ ಆಟ ನೀಡುತ್ತೇವೆ. ಕೊನೆಗೂ ಭಾರತೀಯರೆಲ್ಲರೂ ಕಾಯುತ್ತಿರುವ ಆ ಪ್ರಶಸ್ತಿ ಗೆಲ್ಲುವೆವೆಂಬ ವಿಶ್ವಾಸವಿದೆ’ ಎಂದು ಕೌರ್ ಅವರು ಮಹಿಳಾ ವಿಶ್ವಕಪ್ ಅನಾವರಣ ಸಂದರ್ಭದಲ್ಲಿ ತಿಳಿಸಿದರು.

ಕೌರ್ ನಾಯಕತ್ವದ ತಂಡ ಇತ್ತೀಚಿನ ಇಂಗ್ಲೆಂಡ್ ಪ್ರವಾಸದ ವೇಳೆ 3–2 ರಿಂದ ಟಿ20 ಸರಣಿಯನ್ನು ಮತ್ತು 2–1 ರಿಂದ ಏಕದಿನ ಪಂದ್ಯಗಳ ಸರಣಿ ಗೆದ್ದುಕೊಂಡು ಉತ್ಸಾಹದಲ್ಲಿದೆ.

ಪಾಕಿಸ್ತಾನವು ತನ್ನ ಪಂದ್ಯಗಳನ್ನು ಕೊಲಂಬೊದಲ್ಲಿ ಆಡಲಿದೆ. ಬಹುರಾಷ್ಟ್ರಗಳ ಟೂರ್ನಿಯಲ್ಲಿ ಭಾರತ, ಪಾಕಿಸ್ತಾನ ತಂಡಗಳು ತಟಸ್ಥ ತಾಣದಲ್ಲಿ ಆಡುವ ಕುರಿತಂತೆ ಆದ ಒಪ್ಪಂದದ ಅನುಸಾರ ಈ ಏರ್ಪಾಡು ಮಾಡಲಾಗಿದೆ.

ಫೈನಲ್ ಪಂದ್ಯ ನವೆಂಬರ್ 2ರಂದು ನಡೆಯಲಿದೆ.

### ಬೆಂಗಳೂರು ಪಂದ್ಯಗಳ ಸ್ಥಳಾಂತರ ಸಾಧ್ಯತೆ

ಬೆಂಗಳೂರು: ಮಹಿಳೆಯರ ವಿಶ್ವಕಪ್ ಏಕದಿನ ಟೂರ್ನಿ ಆರಂಭವಾಗಲು ಇನ್ನು ಐವತ್ತು ದಿನಗಳಷ್ಟೇ ಉಳಿದಿವೆ. ಆದರೆ ಟೂರ್ನಿಯ ಉದ್ಘಾಟನೆ ಪಂದ್ಯವು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಕುರಿತ ಗೊಂದಲ ಇನ್ನೂ ಪರಿಹಾರವಾಗಿಲ್ಲ. ರಾಜ್ಯ ಸರ್ಕಾರದಿಂದ ಇನ್ನೂ ಅನುಮತಿ ದೊರೆಯದೇ ಇರುವುದೇ ಇದಕ್ಕೆ ಕಾರಣವೆನ್ನಲಾಗಿದೆ.

ಸೋಮವಾರದಿಂದ ಇಲ್ಲಿ ನಡೆಯಬೇಕಿದ್ದ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯು ಸರ್ಕಾರದ ಅನುಮತಿ ಸಿಗದ ಕಾರಣ ಮೈಸೂರಿಗೆ ಸ್ಥಳಾಂತರವಾಗಿತ್ತು. ಇದೀಗ ಮುಂದಿನ ತಿಂಗಳ ಕೊನೆಯಲ್ಲಿ ಆರಂಭವಾಗುವ ಮಹಿಳಾ ವಿಶ್ವಕಪ್ ಟೂರ್ನಿಯ ಪಂದ್ಯಗಳ ಆಯೋಜನೆಗೂ ಅನುಮತಿ ಲಭಿಸಿಲ್ಲ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಮೂಲಗಳು ತಿಳಿಸಿವೆ.

ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಮತ್ತು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಈ ಹಿಂದೆ ನಿರ್ಧರಿಸಿದ್ದ ವೇಳಾಪಟ್ಟಿಯ ಪ್ರಕಾರ ಟೂರ್ನಿಯು ಸೆ.30 ರಿಂದ ನವೆಂಬರ್ 2ರವರೆಗೆ ನಡೆಯಲಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೆ. 30ರಂದು ಉದ್ಘಾಟನೆ ಪಂದ್ಯ ನಡೆಯಲಿದ್ದು ಭಾರತ ಮತ್ತು ಶ್ರೀಲಂಕಾ ಮುಖಾಮುಖಿಯಾಗಲಿವೆ. ನಂತರ ಅಕ್ಟೋಬರ್ 3 ಮತ್ತು 6ರ ಪಂದ್ಯಗಳು, ಅ.30ರಂದು ಸೆಮಿಫೈನಲ್ ಪಂದ್ಯಗಳು ಕೂಡ ಇಲ್ಲಿಯೇ ನಿಗದಿಯಾಗಿವೆ.

ಆದರೆ, ಜೂನ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಐಪಿಎಲ್ ಟ್ರೋಫಿ ಗೆದ್ದ ವಿಜಯೋತ್ಸವ ಆಚರಿಸುತ್ತಿದ್ದ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣ ಬಳಿ ಕಾಲ್ತುಳಿತ ಸಂಭವಿಸಿತ್ತು. 11 ಜನರು ಸಾವಿಗೀಡಾಗಿದ್ದರು. ಈ ಹಿನ್ನೆಲೆಯಲ್ಲಿ ಕೆಎಸ್‌ಸಿಎ ಕಾರ್ಯದರ್ಶಿ ಸೇರಿದಂತೆ ಕೆಲವು ಪದಾಧಿಕಾರಿಗಳು ರಾಜೀನಾಮೆ ನೀಡಿದ್ದರು. ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆಯುತ್ತಿದೆ.

ಇನ್ನೊಂದೆಡೆ ವಿಶ್ವಕಪ್ ಟೂರ್ನಿಯಲ್ಲಿ ಆಡಲಿರುವ ಕೆಲವು ತಂಡಗಳ ಆಟಗಾರ್ತಿಯರು ಈಗಾಗಲೇ ಭಾರತಕ್ಕೆ ಬಂದಿಳಿದಿದ್ದಾರೆ. ನ್ಯೂಜಿಲೆಂಡ್ ಆಟಗಾರ್ತಿಯರು ಚೆನ್ನೈನಲ್ಲಿ ಅಭ್ಯಾಸ ಕೂಡ ಆರಂಭಿಸಿದ್ದಾರೆ. ಉದ್ಘಾಟನೆ ಪಂದ್ಯದ ಆಯೋಜನೆಗಾಗಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಿದ್ಧತೆಗಳು ಆರಂಭವಾಗಬೇಕಿವೆ. ಆದರೆ ಅನುಮತಿ ಸಿಗುವ ಕುರಿತು ಯಾವುದೇ ಖಚಿತ ಮಾಹಿತಿ ಇರದ ಕಾರಣ ಕೆಎಸ್‌ಸಿಎ ಕೂಡ ಗೊಂದಲದಲ್ಲಿದೆ. ಈ ಕುರಿತು ಸೋಮವಾರ ಐಸಿಸಿ, ಬಿಸಿಸಿಐ ಪದಾಧಿಕಾರಿಗಳು ಚರ್ಚೆ ನಡೆಸಿದ್ದಾರೆಂದೂ ಹೇಳಲಾಗಿದೆ.

## ಚಿಟಿಕೆ ಸುದ್ದಿ

### ವಿಜಯನಗರ: 21ರಿಂದ ಟೇಬಲ್ ಟೆನಿಸ್



ಹೊಸಪೇಟೆ: ವಿಜಯನಗರ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆಯ ಆಶ್ರಯದಲ್ಲಿ ಇದೇ 21ರಿಂದ 24ರವರೆಗೆ ರಾಜ್ಯ ರ‍್ಯಾಂಕಿಂಗ್ ಟೂರ್ನಿಯನ್ನು ಆಯೋಜಿಸಲಿದೆ.

ತುಂಗಭದ್ರಾ ಬೋರ್ಡ್ ಸ್ಪೋರ್ಟ್ಸ್ ಸೆಂಟರ್‌ನಲ್ಲಿ 11, 13, 15, 17, 19 ವರ್ಷದೊಳಗಿನವರ, ಪುರುಷ ಮತ್ತು ಮಹಿಳೆಯರ ಸಿಂಗಲ್ಸ್ ಹಾಗೂ ತಂಡ ವಿಭಾಗದಲ್ಲಿ ಸ್ಪರ್ಧೆ ನಡೆಯಲಿದೆ.

ನೋಂದಣಿಗೆ ಅ.15 ಕೊನೆಯ ದಿನವಾಗಿದೆ. https://karnatakatabletennis ವೆಬ್‌ಸೈಟ್‌ನಲ್ಲಿ ಹೆಸರು ನೋಂದಾಯಿಸಬಹುದಾಗಿದೆ. ಮಾಹಿತಿಗೆ ಮೊಬೈಲ್: 94481 27447.

### ಕರ್ನಾಟಕ ತಂಡಕ್ಕೆ ಧ್ರುವ ನಾಯಕತ್ವ

ಬೆಂಗಳೂರು: ಧ್ರುವ ಬಿ.ಎಸ್. 15ನೇ ಹಾಕಿ ಇಂಡಿಯಾ ಜೂನಿಯರ್ ಪುರುಷರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ತಂಡವನ್ನು ಮುನ್ನಡೆಸಲಿದ್ದಾರೆ.

‘ಹಾಕಿ ಕರ್ನಾಟಕ’ ಈ ಟೂರ್ನಿಗೆ ತಂಡವನ್ನು ಪ್ರಕಟಿಸಿದೆ. ಪಂಜಾಬ್‌ನ ಜಲಂಧರ್‌ನಲ್ಲಿ ಮಂಗಳವಾರ ಆರಂಭವಾಗಲಿರುವ ಟೂರ್ನಿಯಲ್ಲಿ 30 ತಂಡಗಳು ಭಾಗವಹಿಸಲಿವೆ.

**ತಂಡ ಇಂತಿದೆ:** ಬೋಪಣ್ಣ ಬಿ.ಎನ್., ವಚನ್ ಕಾಳಪ್ಪ ಕೆ.ಎ., ವಿಶ್ವಜಿತ್ ಕೆ.ವಿ., ಹರ್ಷಿತ್ ಕುಮಾರ್ ಎಂ., ತನೀಷ್ ಆರ್. ಹುಲಕುಂದ, ರಾಜು ಎಂ. ಗಾಯಕವಾಡ, ಸಂಪನ್ ಗಣಪತಿ ಬಿ.ಪಿ., ಮಂಜೀತ್, ಕಿರಣ್ ರೆಡ್ಡಿ, ಪ್ರೇಮ್‌ಕುಮಾರ್ ಎಸ್.ಎಸ್., ಆಕರ್ಷ್ ಬಿದ್ದಪ್ಪ ಸಿ.ಜಿ., ಹರಪಾಲ್, ಪೂಜಿತ್ ಕೆ.ಆರ್., ಧ್ರುವ ಬಿ.ಎಸ್., ಹೃತಿಕ್ ಅಯ್ಯಪ್ಪ ಕೆ.ಡಿ., ನಿತೇಶ್ ಶರ್ಮಾ, ಕುಶಲ್ ಬೋಪಯ್ಯ ಸಿ.ಬಿ. ಹಾಗೂ ಎಂ.ಎಂ. ಅಚ್ಚಯ್ಯ.

### ಏಷ್ಯನ್ ಬಾಕ್ಸಿಂಗ್: ರಿತಿಕಾಗೆ ಚಿನ್ನದ ಪದಕ

ಬ್ಯಾಂಕಾಕ್ (ಪಿಟಿಐ): ಭಾರತದ ಬಾಕ್ಸರ್‌ಗಳು ಇಲ್ಲಿ ನಡೆದ 19 ಮತ್ತು 22 ವರ್ಷದೊಳಗಿನ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಉತ್ತಮ ಸಾಧನೆ ಮಾಡಿದರು. 19 ವರ್ಷದೊಳಗಿನವರ ಭಾರತ ತಂಡವು 14 ಪದಕಗಳೊಂದಿಗೆ ಟೂರ್ನಿಯ ಪದಕಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದರೆ, 22 ವರ್ಷದೊಳಗಿನವರ ತಂಡವು ನಾಲ್ಕನೇ ಸ್ಥಾನ (13 ಪದಕ) ಗಳಿಸಿತು.

ಟೂರ್ನಿಯ ಅಂತಿಮ ದಿನವಾದ ಸೋಮವಾರ, ರಿತಿಕಾ 22 ವರ್ಷದೊಳಗಿನ ಮಹಿಳೆಯರ ವಿಭಾಗದ 80 + ಕೆ.ಜಿ. ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದು ಬೀಗಿದರು. ಫೈನಲ್ ಪಂದ್ಯದಲ್ಲಿ ಅವರು 4:1ರಿಂದ ಕಜಕಸ್ತಾನದ ಆ್ಯಸಲ್ ಟಾಕ್ಸಿನ್ ಅವರನ್ನು ಮಣಿಸಿದರು.

ಇದಕ್ಕೂ ಮೊದಲು ನಡೆದ ಮಹಿಳೆಯರ 57 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಯಾತ್ರಿ ಪಟೇಲ್ ಅವರು ಉಜ್ಬೇಕಿಸ್ತಾನದ ಖುಮೊರಾಬೊನು ಮಮಜೋನಾವಾ ಎದುರು ಪರಾಭವಗೊಂಡರು. ಪ್ರಿಯಾ ಅವರು 60 ಕೆ.ಜಿ. ವಿಭಾಗದಲ್ಲಿ ಚೀನಾದ ಯು ಟಿಯಾನ್ ವಿರುದ್ಧ ಹೋರಾಡಿ ಸೋತು, ಬೆಳ್ಳಿ ಪದಕ ಪಡೆದರು.

## ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್: ಎರಡನೇ ಸ್ಥಾನದಲ್ಲಿ ಅರ್ಜುನ್

# ಅಗ್ರಸ್ಥಾನ ಉಳಿಸಿಕೊಂಡ ವಿನ್ಸೆಂಟ್ ಕೀಮರ್




ವಿದಿತ್ ಗುಜರಾತಿ ಮತ್ತು ವಿನ್ಸೆಂಟ್ ಕೀಮರ್ (ಬಲ)

ಚೆನ್ನೈ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ವಿದಿತ್ ಗುಜರಾತಿ ಜೊತೆ ಡ್ರಾ ಮಾಡಿಕೊಂಡ ಜರ್ಮನಿಯ ವಿನ್ಸೆಂಟ್ ಕೀಮರ್ ಅವರು ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್ ಟೂರ್ನಿಯ ಐದನೇ ಸುತ್ತಿನ ನಂತರವೂ ಅಗ್ರಸ್ಥಾನ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಒಂಬತ್ತು ಸುತ್ತುಗಳ ಈ ಟೂರ್ನಿಯ ಅರ್ಧಭಾಗ ಮುಗಿದಿದ್ದು ಕೀಮರ್ ನಾಲ್ಕು ಪಾಯಿಂಟ್ಸ್ ಸಂಗ್ರಹಿಸಿದ್ದಾರೆ.

ಅಗ್ರ ಶ್ರೇಯಾಂಕದ ಅರ್ಜುನ್ ಇರಿಗೇಶಿ ಕೂಡ ಸೋಮವಾರ ನಡೆದ ಐದನೇ ಸುತ್ತಿನ ಪಂದ್ಯ ಡ್ರಾ ಮಾಡಿಕೊಂಡಿದ್ದು ಮೂರು ಪಾಯಿಂಟ್‌ಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ. ಅವರು ಸ್ವದೇಶದ ವಿ.ಪ್ರಣವ್ (2) ಜೊತೆ ಪಾಯಿಂಟ್ ಹಂಚಿಕೊಂಡರು. ಆರನೇ ಸುತ್ತಿನಲ್ಲಿ ಅರ್ಜುನ್ ಮತ್ತು ಕೀಮರ್ ಮುಖಾಮುಖಿಯಾಗಲಿದ್ದಾರೆ. ಈ ಮಹತ್ವದ ಪಂದ್ಯದಲ್ಲಿ ಜರ್ಮನಿಯ ಆಟಗಾರ ಬಿಳಿ ಕಾಯಿಗಳಲ್ಲಿ ಆಡಲಿದ್ದಾರೆ.

ನೆದರ್ಲೆಂಡ್ಸ್‌ನ ಜೋರ್ಡನ್ ವಾನ್ ಫೊರೀಸ್ಟ್ (2), ಅಮೆರಿಕದ ರೇ ರಾಬ್ಸನ್ (2) ಅವರನ್ನು ಸೋಲಿಸಿದ್ದು ಮಾತ್ರ ದಿನದ ನಿರ್ಣಾಯಕ ಫಲಿತಾಂಶ ಎನಿಸಿತು. ಉಳಿದ ನಾಲ್ಕು ಪಂದ್ಯಗಳು ಡ್ರಾ ಆದವು. ಲಿಯಾಂಗ್ ಅವೊಂಡರ್ (2.5), ಭಾರತದ ನಿಹಾಲ್ ಸರಿನ್(2) ಜೊತೆ; ಅನಿಶ್ ಗಿರಿ (2.5), ಭಾರತದ ಮುರಳಿ ಕಾರ್ತಿಕೇಯನ್ (2.5) ಜೊತೆ ಡ್ರಾ ಮಾಡಿಕೊಂಡರು. ವಿದಿತ್ ಖಾತೆಯಲ್ಲೂ 2.5 ಪಾಯಿಂಟ್ಸ್ ಇದೆ.

**ಚಾಲೆಂಜರ್ಸ್ ವಿಭಾಗ:** ಅಭಿಮನ್ಯು ಪುರಾಣಿಕ್ (4.5) ಅವರು ಐದನೇ ಸುತ್ತಿನಲ್ಲಿ ದ್ರೋಣವಲ್ಲಿ ಹಾರಿಕಾ (0.5) ಅವರನ್ನು ಸೋಲಿಸಿ ಅಗ್ರಸ್ಥಾನವನ್ನು ಬಲಪಡಿಸಿಕೊಂಡರು. ವೈಶಾಲಿ ಆರ್ (1), ಇನ್ನೊಂದು ಪಂದ್ಯದಲ್ಲಿ ಜಿ.ಬಿ. ಹರ್ಷವರ್ಧನ್ (1.5) ಅವರಿಗೆ ಮಣಿದರು. ಈ ವಿಭಾಗದ ಇತರ ಮೂರು ಪಂದ್ಯಗಳು ಡ್ರಾ ಆದವು.

## ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿ

# ಕ್ವಾರ್ಟರ್ ಪ್ರವೇಶಿಸಲು ಆರ್ಮಿ ವಿಫಲ



ಇಂಡಿಯನ್ ಆರ್ಮಿ ಎಫ್‌ಟಿ (ಕೆಂಪು) ಮತ್ತು ಲಡಾಕ್ ಎಫ್‌ಸಿ ತಂಡಗಳ ಆಟಗಾರರ ನಡುವೆ ಚೆಂಡಿಗಾಗಿ ಪೈಪೋಟಿ

ಜಮ್‌ಶೆಡ್‌ಪುರ (ಪಿಟಿಐ): ಇಂಡಿಯನ್ ಆರ್ಮಿ ತಂಡವು ಇಲ್ಲಿ ಸೋಮವಾರ ನಡೆದ 134ನೇ ಆವೃತ್ತಿಯ ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ 4–2 ಗೋಲುಗಳಿಂದ ಲಡಾಕ್ ಎಫ್‌ಸಿ ವಿರುದ್ಧ ಗೆಲುವು ಸಾಧಿಸಿದರೂ ಕ್ವಾರ್ಟರ್ ಫೈನಲ್‌ಗೆ ಸ್ಥಾನ ಪಡೆಯಲು ವಿಫಲವಾಯಿತು.

ಎರಡು ಗೋಲುಗಳ ಹಿನ್ನಡೆಯಿಂದ ಅಮೋಘವಾಗಿ ಚೇತರಿಸಿಕೊಂಡ ಆರ್ಮಿ ತಂಡವು ಸಿ ಗುಂಪಿನ ಕೊನೆಯ ಪಂದ್ಯದಲ್ಲಿ ಅಧಿಕಾರಯುತ ಜಯ ಗಳಿಸಿತು. ಆಡಿದ ಮೂರು ಪಂದ್ಯಗಳಲ್ಲಿ ಎರಡನ್ನು ಗೆದ್ದು, ಆರು ಅಂಕ ಗಳಿಸಿದ ಆರ್ಮಿ ತಂಡದ ಅಭಿಯಾನಕ್ಕೆ ತೆರೆಬಿತ್ತು.

ಲಡಾಕ್ ತಂಡದ ಪರ ಪಿ. ಕಮಲೇಶ್ (23ನೇ) ಮತ್ತು ವಿಘ್ನೇಶ್ ವೇಲನ್ (37ನೇ) ಚೆಂಡನ್ನು ಗುರಿ ಸೇರಿಸಿದರು. ಆರ್ಮಿ ತಂಡದ ಪರ ಸಾಮ (41ನೇ ನಿ), ಅಭಿಷೇಕ್ ಶಂಕರ್ (45ನೇ), ಕ್ರಿಸ್ಟೋಫರ್ ಕಮ್ಮೆ (51ನೇ) ಮತ್ತು ಅಪ್ಪು (55ನೇ) ಗೋಲು ಗಳಿಸಿದರು.

ಆರ್ಮಿ ತಂಡವು ಮೊದಲ ಪಂದ್ಯದಲ್ಲಿ 0–1ರಿಂದ ಜಮ್‌ಶೆಡ್‌ಪುರ ಎಫ್‌ಸಿ ವಿರುದ್ಧ ಸೋಲು ಅನುಭವಿಸಿತ್ತು. ನಂತರದಲ್ಲಿ 1–0ಯಿಂದ ತ್ರಿಭುವನ್ ಆರ್ಮಿ ಎಫ್‌ಸಿ ವಿರುದ್ಧ ಗೆಲುವು ಸಾಧಿಸಿತ್ತು. ಮೂರೂ ಪಂದ್ಯಗಳನ್ನು ಗೆದ್ದು 9 ಅಂಕ ಗಳಿಸಿದ ಜಮ್‌ಶೆಡ್‌ಪುರ ತಂಡ ಸಿ ಗುಂಪಿನಲ್ಲಿ ಅಗ್ರಸ್ಥಾನ ಪಡೆದು ಕ್ವಾರ್ಟರ್ ಫೈನಲ್‌ಗೆ ಮುನ್ನಡೆಯಿತು.

ದಿನದ ಮತ್ತೊಂದು ಪಂದ್ಯದಲ್ಲಿ ನಾರ್ತ್ ಈಸ್ಟ್ ಎಫ್‌ಸಿ ತಂಡವು 2–2 ಗೋಲುಗಳಿಂದ ರಂಗ್‌ದಜೀದ್ ಯುನೈಟೆಡ್ ಎಫ್‌ಸಿ ತಂಡದೊಂದಿಗೆ ಡ್ರಾ ಸಾಧಿಸಿತು. ಇ ಗುಂಪಿನಲ್ಲಿ ಅಗ್ರಸ್ಥಾನ ಪಡೆದ ನಾರ್ತ್ ಈಸ್ಟ್ ತಂಡ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

### ಸೂರಜ್ ಸಾರಥ್ಯದ ಏಷ್ಯಾ ತಂಡಕ್ಕೆ ಶೇರ್ಗರ್ ಕಪ್




ಸೂರಜ್

ನವದೆಹಲಿ: ಭಾರತದ ಜಾಕಿ ಸೂರಜ್ ನರೇಡು ನಾಯಕತ್ವದ ಏಷ್ಯಾ ತಂಡವು ಬ್ರಿಟನ್‌ನ ಆಸ್ಕಾಟ್ ರೇಸ್ ಕೋರ್ಸ್‌ನಲ್ಲಿ ನಡೆದ 2025ರ ‘ಶೇರ್ಗರ್ ಕಪ್’ ಟ್ರೋಫಿಯನ್ನು ಗೆದ್ದುಕೊಂಡಿತು.

40 ವರ್ಷ ವಯಸ್ಸಿನ ಸೂರಜ್ ಅವರು ಜಪಾನ್‌ನ ಜಾಕಿಗಳಾದ ಯುಗಸೆ ಸಕೈ ಮತ್ತು ಮಿರೈ ಇವಾಟಾ ಅವರ ಜೊತೆಗೂಡಿ ಆರು ರೇಸ್‌ಗಳಲ್ಲಿ ಎರಡನ್ನು ಗೆದ್ದರು.

ಒಟ್ಟು 68 ಅಂಕ ಗಳಿಸಿದ ಏಷ್ಯಾ ತಂಡವು ಅಗ್ರಸ್ಥಾನ ಪಡೆಯಿತು. ಯುರೋಪ್ ತಂಡ (67) ಎರಡನೇ ಸ್ಥಾನ ಪಡೆದರೆ, 62 ಅಂಕ ಪಡೆದ ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್ ತಂಡ ಮೂರನೇ ಸ್ಥಾನ ಗಳಿಸಿತು.

# ಏಷ್ಯಾ ಕಪ್ ಟೂರ್ನಿ: ಗಿಲ್ ಉಪನಾಯಕ?



ಶುಭಮನ್

ನವದೆಹಲಿ (ಪಿಟಿಐ): ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಬ್ಯಾಟರ್ ಮತ್ತು ನಾಯಕನಾಗಿ ಯಶಸ್ಸು ಕಂಡಿರುವ ಶುಭಮನ್ ಗಿಲ್ ಅವರು ಮುಂಬರುವ ಏಷ್ಯಾ ಕಪ್ ಟೂರ್ನಿಗೆ ಉಪನಾಯಕರಾಗುವ ಸಾಧ್ಯತೆಯಿದೆ. ಅವರಿಗೆ ಆ ಸ್ಥಾನಕ್ಕೆ ಅಕ್ಷರ್ ಪಟೇಲ್ ಅವರಿಂದ ಪೈಪೋಟಿ ಎದುರಾಗುವ ನಿರೀಕ್ಷೆಯಿದೆ.

ಸೆ.9ರಂದು ಯುಎಇನಲ್ಲಿ ಟೂರ್ನಿ ಆರಂಭವಾಗಲಿದೆ. ವೇಗಿ ಜಸ್‌ಪ್ರೀತ್ ಬೂಮ್ರಾ ಟೂರ್ನಿಯಲ್ಲಿ ಆಡಲಿದ್ದು, ಅಕ್ಟೋಬರ್ ಆರಂಭದಲ್ಲಿ ವೆಸ್ಟ್ ಇಂಡೀಸ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯಕ್ಕೆ ಅವರು ವಿಶ್ರಾಂತಿ ಪಡೆಯುವ ಸಾಧ್ಯತೆ ಇದೆ.

ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಈಗಾಗಲೇ ಬೆಂಗಳೂರಿನಲ್ಲಿ ಅಭ್ಯಾಸ ಆರಂಭಿಸಿದ್ದಾರೆ. ಸೆಂಟರ್ ಆಫ್ ಎಕ್ಸಲೆನ್ಸ್ ಸ್ಪೋರ್ಟ್ಸ್ ಸೈನ್ಸ್ ತಂಡ ನೀಡಲಿರುವ ಆಟಗಾರರ ಫಿಟ್‌ನೆಸ್ ಪ್ರಮಾಣಪತ್ರದ ಆಧಾರದ ಮೇಲೆ ಅಜಿತ್ ಅಗರ್ಕರ್ ನೇತೃತ್ವದ ಆಯ್ಕೆ ಸಮಿತಿ ಇದೇ 19 ಅಥವಾ 20 ರಂದು ಏಷ್ಯಾ ಕಪ್‌ಗೆ ತಂಡವನ್ನು ಆಯ್ಕೆ ಮಾಡುವ ನಿರೀಕ್ಷೆಯಿದೆ.


ಕಳೆದ ವರ್ಷ ಶ್ರೀಲಂಕಾ ಪ್ರವಾಸದ ವೇಳೆ ಸೂರ್ಯಕುಮಾರ್ ಅವರನ್ನು ಮೊದಲ ಬಾರಿಗೆ ಟಿ20 ತಂಡದ ಪೂರ್ಣಾವಧಿ ನಾಯಕರನ್ನಾಗಿ ನೇಮಿಸಿದಾಗ ಗಿಲ್ ಉಪನಾಯಕರಾಗಿದ್ದರು. ಆದರೆ, ತವರಿನಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಸರಣಿಯಲ್ಲಿ ಅಕ್ಷರ್ ಹಂಗಾಮಿ ಉಪ ನಾಯಕರಾಗಿದ್ದರು.

ಸಂಜು ಸ್ಯಾಮ್ಸನ್ ಮೊದಲ ಕೀಪರ್ ಆಗುವುದು ಬಹುತೇಕ ಖಚಿತವಾದರೂ, ಎರಡನೇ ಕೀಪರ್ ಸ್ಥಾನಕ್ಕೆ ಜಿತೇಶ್ ಶರ್ಮಾ ಅಥವಾ ಧ್ರುವ ಜುರೇಲ್ ಆಯ್ಕೆಯಾಗುವ ಸಾಧ್ಯತೆಯಿದೆ.

**ಸಂಭಾವ್ಯ ತಂಡ:** ಸೂರ್ಯಕುಮಾರ್ ಯಾದವ್ (ನಾಯಕ), ಶುಭಮನ್ ಗಿಲ್, ಅಭಿಷೇಕ್ ಶರ್ಮಾ, ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್) ತಿಲಕ್ ವರ್ಮಾ, ಶಿವಂ ದುಬೆ, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ವರುಣ್ ಚಕ್ರವರ್ತಿ, ಕುಲದೀಪ್ ಯಾದವ್, ಜಸ್‌ಪ್ರೀತ್ ಬೂಮ್ರಾ, ಅರ್ಷದೀಪ್ ಸಿಂಗ್, ಹಾರ್ದಿಕ್ ಪಾಂಡ್ಯ, ಹರ್ಷಿತ್ ರಾಣಾ/ ಪ್ರಸಿದ್ಧ ಕೃಷ್ಣ, ಜಿತೇಶ್ ಶರ್ಮಾ/ಧ್ರುವ ಜುರೇಲ್

## ಕ್ರೀಡಾಕ್ಷೇತ್ರದ ಅತಿದೊಡ್ಡ ಸುಧಾರಣೆ- ಸಚಿವ ಮಾಂಡವೀಯ ಬಣ್ಣನೆ

# ಲೋಕಸಭೆ: ಕ್ರೀಡಾ ಮಸೂದೆ ಅಂಗೀಕಾರ



ಲೋಕಸಭೆಯಲ್ಲಿ ಕ್ರೀಡಾ ಮಸೂದೆ ಕುರಿತು ಮಾತನಾಡಿದ ಸಚಿವ ಮನ್ಸುಖ್ ಮಾಂಡವೀಯ

ನವದೆಹಲಿ (ಪಿಟಿಐ): ಬಹುನಿರೀಕ್ಷಿತ ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆಯು ಲೋಕಸಭೆಯಲ್ಲಿ ಸೋಮವಾರ ಅಂಗೀಕಾರ ಪಡೆಯಿತು. ಸ್ವಾತಂತ್ರ್ಯಾನಂತರ ಭಾರತದ ಕ್ರೀಡಾಕ್ಷೇತ್ರದಲ್ಲಿ ಆದ ಅತಿದೊಡ್ಡ ಸುಧಾರಣೆ ಇದು ಎಂದು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರು ಬಣ್ಣಿಸಿದರು.

ಬಿಹಾರದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆಗೆ ಸಂಬಂಧಿಸಿ ವಿರೋಧ ಪಕ್ಷಗಳ ಪ್ರತಿಭಟನೆಯ–ಗದ್ದಲದ ನಡುವೆಯೇ ಮಸೂದೆಗೆ ಒಪ್ಪಿಗೆ ಪಡೆಯಲಾಯಿತು. ಗದ್ದಲದ ನಂತರ ಮಧ್ಯಾಹ್ನ 2 ಗಂಟೆಗೆ ಲೋಕಸಭೆ ಕಲಾಪ ಪುನರಾರಂಭವಾದಾಗ ರಾಷ್ಟ್ರೀಯ ಉದ್ದೀಪನ ಮದ್ದುಸೇವನೆ ತಡೆ (ತಿದ್ದುಪಡಿ) ಮಸೂದೆಯನ್ನೂ ಅಂಗೀಕರಿಸಲಾಯಿತು.

‘ಈ ಮಸೂದೆಯ ಉತ್ತರದಾಯಿತ್ವ, ನ್ಯಾಯದ ಖಾತರಿ, ಕ್ರೀಡಾ ಫೆಡರೇಷನ್‌ಗಳಲ್ಲಿ ಉತ್ತಮ ಆಡಳಿತವನ್ನು ಖಾತರಿಪಡಿಸಲಿದೆ’ ಎಂದು ಮಾಂಡವೀಯ ವಿರೋಧ ಪಕ್ಷಗಳ ಘೋಷಣೆಗಳ ನಡುವೆ ಹೇಳಿದರು.

‘ಭಾರತದ ಕ್ರೀಡಾ ವ್ಯವಸ್ಥೆಯಲ್ಲಿ ಅತಿ ಮಹತ್ವದ ಮಸೂದೆಯಿದು. ಇಂಥ ಮಸೂದೆಯ ಅಂಗೀಕಾರದ ವೇಳೆ ವಿರೋಧ ಪಕ್ಷಗಳು ಭಾಗಿಯಾಗದೇ ಇರುವುದು ದುರದೃಷ್ಟಕರ’ ಎಂದು ಮಾಂಡವೀಯ ಅಸಮಾಧಾನ ವ್ಯಕ್ತಪಡಿಸಿದರು.

ಮಸೂದೆಗಳನ್ನು ಮಂಡಿಸುವಾಗ ಮತ್ತು ಅಂಗೀಕರಿಸುವಾಗ ವಿರೋಧ ಪಕ್ಷದ ನಾಯಕರು ಸದನದಲ್ಲಿ ಇರಲಿಲ್ಲ. ಚುನಾವಣಾ ಆಯೋಗದ ಕೇಂದ್ರ ಕಚೇರಿಗೆ ಮೆರವಣಿಗೆಯಲ್ಲಿ ತೆರಳುವ ವೇಳೆ ಹೆಚ್ಚಿನ ನಾಯಕರನ್ನು ಪೊಲೀಸರು ವಶಕ್ಕೆ ಪಡೆದಿದ್ದರು.

ಇದಕ್ಕೆ ಮೊದಲು, ಕ್ರೀಡೆಯ ಮೇಲಿನ ಸಂಸದೀಯ ಸಮಿತಿಯ ಅಧ್ಯಕ್ಷ ದಿಗ್ವಿಜಯ ಸಿಂಗ್ ಅವರು, ಕ್ರೀಡಾ ಆಡಳಿತ ಮಸೂದೆಯನ್ನು ಸಮಿತಿಯ ಪರಿಶೀಲನೆಗೆ ಒಪ್ಪಿಸುವಂತೆ ಸಭಾಧ್ಯಕ್ಷ ಓಂ ಬಿರ್ಲಾ ಅವರಿಗೆ ಮನವಿ ಮಾಡಿದ್ದರು. ಸಂಸತ್ತಿನಲ್ಲಿ ಮಂಡಿಸುವ ಮೊದಲು ಇದರ ಬಗ್ಗೆ ಸಮಗ್ರ ಚರ್ಚೆ ಮತ್ತು ಪರಿಶೀಲನೆ ನಡೆಸುವ ಅಗತ್ಯವಿದೆ ಎಂದಿದ್ದರು.

2036ರ ಒಲಿಂಪಿಕ್ಸ್ ಆತಿಥ್ಯದ ಬಿಡ್‌ಗೆ ಭಾರತ ಯತ್ನಿಸುತ್ತಿದ್ದು, ಇಂಥ ಸಂದರ್ಭದಲ್ಲಿ ಪಾರದರ್ಶಕ, ಉತ್ತರದಾಯಿತ್ವ ಮತ್ತು ವಿಶ್ವ ದರ್ಜೆಯ ಕ್ರೀಡಾ ವ್ಯವಸ್ಥೆ ನಿರ್ಮಿಸುವ ಆಶಯಕ್ಕೆ ಅಗತ್ಯವಿರುವ ಸುಧಾರಣಾ ಕ್ರಮಗಳನ್ನು ಈ ಮಸೂದೆ ಹೊಂದಿದೆ ಎಂದು ಮಾಂಡವೀಯ ಹೇಳಿದರು.

ರಾಷ್ಟ್ರೀಯ ಉದ್ದೀಪನ ಮದ್ದುಸೇವನೆ ತಡೆ (ತಿದ್ದುಪಡಿ) ಮಸೂದೆಯು, ರಾಷ್ಟ್ರೀಯ ಉದ್ದೀಪನ ಮದ್ದುಸೇವನೆ ತಡೆ ಘಟಕದ (ನಾಡಾ) ಕಾರ್ಯನಿರ್ವಹಣೆಯಲ್ಲಿ ಸರ್ಕಾರದ ಹಸ್ತಕ್ಷೇಪಕ್ಕೆ ದಾರಿಯಾಗಲಿದೆ ಎಂದು ವಿಶ್ವ ಉದ್ದೀಪನ ಮದ್ದುಸೇವನೆ ತಡೆ ಘಟಕ (ವಾಡಾ) ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಕೆಲವು ಬದಲಾವಣೆಗಳನ್ನು ಇದರಲ್ಲಿ ತರಲಾಗಿದೆ.

2022ರಲ್ಲಿ ಈ ಮಸೂದೆ ಸಿದ್ಧಗೊಂಡಿದ್ದರೂ, ವಾಡಾ ಆಕ್ಷೇಪದ ಕಾರಣ ತಡೆಹಿಡಿಯಲಾಗಿತ್ತು. ರಾಷ್ಟ್ರೀಯ ಉದ್ದೀಪನ ಮದ್ದು ಸೇವನೆ ತಡೆ ಮಂಡಳಿ ರಚಿಸುವ ಉದ್ದೇಶವನ್ನು ಮೂಲ ಮಸೂದೆ ಹೊಂದಿದ್ದು, ಇದನ್ನು ವಾಡಾ ವಿರೋಧಿಸಿತ್ತು. ಈಗಿನ ಮಸೂದೆಯಲ್ಲಿ ಮಂಡಳಿಯನ್ನು ಉಳಿಸಿಕೊಂಡಿದ್ದರೂ, ಅದು ‘ನಾಡಾ’ ಕಾರ್ಯನಿರ್ವಹಣೆಯ ಅಧಿಕಾರದಲ್ಲಿ ಅಡ್ಡಿಬರದು.